"ಪ್ರೌಢ ಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು"

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು
ಇಂದುಮತಿ ಮಹಾದೇವಪ್ಪ

ಮಾರ್ಗದರ್ಶಕರು
ಡಾ. ಅಶೋಕಕುಮಾರ ರಂಜೇರೆ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೭

“ಪ್ರೌಢ ಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು”

(ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಇಂದುಮತಿ ಮಹಾದೇವಪ್ಪ

ಮಾರ್ಗದರ್ಶಕರು

ಡಾ. ಅಶೋಕಕುಮಾರ ರಂಜೇರೆ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೧೭

ಸಂಶೋಧಕರ ಪ್ರಮಾಣ ಪತ್ರ

"ಪ್ರೌಢ ಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು" ಎಂಬ ಮಹಾಪ್ರಬಂಧವನ್ನು ಪ್ರಾಧ್ಯಾಪಕರಾದ **ಡಾ. ಅಶೋಕಕುಮಾರ ರಂಜೇರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಇಂದುಮತಿ ಮಹಾದೇವಪ್ಪ
ಸಂಶೋಧಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 2/8/17

ಮಾರ್ಗದರ್ಶಕರ ಪ್ರಮಾಣ ಪತ್ರ

ಇಂದುಮತಿ ಮಹಾದೇವಪ್ಪ ಅವರು **"ಪ್ರೌಢ ಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. **ಪಿಎಚ್.ಡಿ.,** ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಅಶೋಕಕುಮಾರ ರಂಜೇರೆ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

ಭಾರತದ ನಾಗರಿಕತೆಗೆ ಎಷ್ಟು ವರ್ಷಗಳ ಇತಿಹಾಸ ಪರಂಪರೆ ಇದೆಯೋ ಅಷ್ಟೇ ವರ್ಷಗಳ ಇತಿಹಾಸ ಬೋಧನೆಗೂ ಇದೆ. ಹಿರಿಯರು ಕಿರಿಯರಿಗೆ ಬೋಧಿಸುವುದು, ಗುರುಗಳು ಶಿಷ್ಯರಿಗೆ ಬೋಧಿಸುವುದು ಹೀಗೆ ವಿವಿಧ ನೆಲೆಗಳಲ್ಲಿ ಬೋಧನಾ ಮಾಧರಿಗಳನ್ನು ಗುರುತಿಸಬಹುದು. ಆದರೆ ಕಾಲದಿಂದ ಕಾಲಕ್ಕೆ ಬೋಧನಾ ಪದ್ಧತಿಯೂ ಬದಲಾಗುತ್ತಾ ಬಂದಿದೆ. ಉದಾಹರಣೆಗೆ ೧೨ನೇ ಶತಮಾನದ ಅಲ್ಲಮಪ್ರಭುಗಳ ಒಂದು ವಚನದಲ್ಲಿ ಬೋಧನಾ ಬದಲಾವಣೆ ಕುರಿತು ಈ ಕೆಳಗಿನಂತೆ ಹೇಳಿದ್ದಾರೆ.

"ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ,
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ,
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಜಂಕಿಸಿ ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ,
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು."[೧]

ಈ ವಚನದಿಂದ ತಿಳಿಯುವುದೇನೆಂದರೆ ಕಾಲದಿಂದ ಕಾಲಕ್ಕೆ ಬೋಧಿಸುವ ಕ್ರಮವನ್ನು ಬದಲಾವಣೆ ಯಾಗಿರುವುದು ಕಂಡುಬರುತ್ತದೆ. ಶಿಕ್ಷಣದಲ್ಲಿ ಬೋಧಿಸುವ ಕ್ರಮ ನೋಡುವುದಾದರೆ, ವೇದಗಳ ಕಾಲದಲ್ಲಿ ಕೇವಲ ಮೇಲ್ವರ್ಗದವರಿಗೆ ಮಾತ್ರ ಶಿಕ್ಷಣ ಸಿಗುವುದರೊಂದಿಗೆ ಕೆಳವರ್ಗದವರನ್ನು ಕಡೆಗಣಿಸಲಾಗಿತ್ತು. ಅಂದಿನ ದಿನಗಳಲ್ಲಿ ಮೌಖಿಕ ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು. ಪಠ್ಯಪುಸ್ತಕಗಳ ಅಧ್ಯಯನ ಅಲ್ಲಿರಲಿಲ್ಲ. ಕೇವಲ ವೇದ, ಪುರಾಣ, ಮಹಾಕಾವ್ಯಗಳನ್ನು ಮಾತ್ರ ಕಲಿಸುತ್ತಿದ್ದರು.

ಕರ್ನಾಟಕ ಅಥವಾ ಪ್ರಾಚೀನ ಭಾರತದ ಇತಿಹಾಸದ ಪುಟಗಳನ್ನು ಒಮ್ಮೆ ತಿರುವಿ ಹಾಕಿದಾಗ ಅಂದಿನ ಬೋಧನಾ ಪದ್ಧತಿ ಮತ್ತು ಕಲಿಸುವಿಕೆಯ ರೀತಿ ನೀತಿಗಳು ತಿಳಿಯುತ್ತದೆ. ವೇದಗಳ ಕಾಲದಲ್ಲಿನ ಬೋಧನಾ ಪದ್ಧತಿ, ಬೌದ್ಧರ ಕಾಲದಲ್ಲಿನ ಬೋಧನಾ ಪದ್ಧತಿ, ಬ್ರಿಟೀಶರ ಆಳ್ವಿಕೆಯಲ್ಲಿನ ಬೋಧನಾ ಪದ್ಧತಿಗಳು ಹೇಗೆ ತಮ್ಮ ಕಲಿಕೆಯ ಕಾರ್ಯವನ್ನು ನಿರ್ವಹಿಸುತ್ತಿದ್ದವು ಎಂಬುದನ್ನು ತಿಳಿಯಬೇಕಾದರೆ ಬೋಧನೆಯ ಇತಿಹಾಸವನ್ನು ಒಮ್ಮೆ ಅಧ್ಯಯನ ಮಾಡಬೇಕಾಗುತ್ತದೆ. ಭಾರತ ವಿಶ್ವದಲ್ಲಿಯೇ ಅತ್ಯಂತ ಪ್ರಾಚೀನ ಸಂಸ್ಕೃತಿ, ನಾಗರಿಕತೆಯ ಭವ್ಯ ಪರಂಪರೆ ಹೊಂದಿದ ರಾಷ್ಟ್ರ. ಪ್ರಾಚೀನ ಭಾರತವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳಿಗಿಂತ ಧಾರ್ಮಿಕ ವಿಚಾರಗಳಿಂದ ಹೆಚ್ಚು ಪ್ರಭಾವಿತವಾಗಿತ್ತು. ಎಲ್ಲಾ ರೀತಿಯ ಸಂಸ್ಕೃತಿಯನ್ನು ಒಪ್ಪಿಕೊಂಡು ಸಮರಸತೆಯಿಂದ ಬೆಳೆದು ಬಂದಿದೆ. ಶೈಕ್ಷಣಿಕ ದೃಷ್ಟಿಯಿಂದಲೂ ಅತ್ಯಂತ ಉನ್ನತ ಸ್ಥಾನದಲ್ಲಿದ್ದು, ಪ್ರಾಚೀನ ಕಾಲದಿಂದಲೂ ಗುಣಾತ್ಮಕ ಶಿಕ್ಷಣ ನೀಡುತ್ತಾ ಬಂದಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಪ್ರಾಚೀನ ಭಾರತೀಯರು ವಿದ್ಯೆಯನ್ನು ವಿಶ್ವದಲ್ಲಿಯೇ ಒಂದು ಅಖಂಡ ಶಕ್ತಿ ಎಂದು ನಂಬಿದ್ದರು. ವಿದ್ಯೆಯೇ ಮೋಕ್ಷಕ್ಕೆ ದಾರಿ ಹಾಗೂ ಮಾನವನ ಸರ್ವತೋಮುಖ ಅಭಿವೃದ್ಧಿಗೆ ಕಾರಣ ಎಂದು ತಿಳಿದಿದ್ದರು.

ಪ್ರಾಚೀನ ಭಾರತೀಯ ಶಿಕ್ಷಣವನ್ನು ಕುರಿತಂತೆ ಎಫ್.ಡಬ್ಲ್ಯೂ.ಥಾಮಸ್ ರವರು ಹೀಗೆ ಅಭಿಪ್ರಾಯ ಪಡುತ್ತಾರೆ. "ಪ್ರಾಚೀನ ಭಾರತದಲ್ಲಿದ್ದಂತಹ ಕಲಿಕಾ ಪ್ರೇಮದ ಪ್ರಾಚೀನತೆ ಪ್ರಾಯಶಃ ಬೇರಾವ ರಾಷ್ಟ್ರದಲ್ಲೂ ಇಲ್ಲ. ಇಡೀ ಜಗತ್ತು ಬದುಕಿನ ಅ.ಆ.ಇ.ಈ ಕಲಿಯುತ್ತಿದ್ದಾಗ ಅತ್ಯಂತ ಸಮೃದ್ಧ ತಂತ್ರಜ್ಞಾನವನ್ನು ಅಧ್ಯಯನ ಮಾಡುತ್ತಿದ್ದ ಹೆಗ್ಗಳಿಕೆ ಭಾರತದ್ದು" ಎಂದು ಹೇಳಿದ್ದಾರೆ.

*** ವೇದಗಳ ಕಾಲದ ಬೋಧನಾ ಪದ್ಧತಿ**

ಭಾರತದ ಧಾರ್ಮಿಕ-ದಾರ್ಶನಿಕ ಸಾಹಿತ್ಯದಲ್ಲಿ ವೇದಗಳ ಪ್ರಾಮುಖ್ಯತೆ ಅದ್ವಿತೀಯ-ವಾದದ್ದು. ಪ್ರಾಚೀನ ಭಾರತೀಯರ ಧಾರ್ಮಿಕ ನಂಬಿಕೆಗಳು, ಕಲ್ಪನೆಗಳು ಹಾಗೂ ಆದರ್ಶಗಳೆಲ್ಲವೂ ವೇದಗಳಿಂದಲೇ ಉತ್ಪನ್ನವಾದವುಗಳು. 'ವೇದ' ಎಂಬ ಪದವು 'ವಿದ' ಎಂಬ ಧಾತುವಿನಿಂದ ಬಂದಿದೆ. ಅದು 'ಜ್ಞಾನ' ಎಂಬ ಅರ್ಥ ಹೊಂದಿದೆ. ವೇದ ಎಂದರೆ ಜ್ಞಾನ. ಮಾನವನ ಬದುಕಿನ ಸಕ್ಷಾತ್ಕಾರಕ್ಕಾಗಿ ಸತ್ಯವನ್ನರಿತು ನಡೆಯಲು ಸಹಾಯಕವಾಗುವ ಮಾರ್ಗಗಳೇ ವೇದಗಳು. ವೇದಗಳ ಕಾಲದ ಬಗ್ಗೆ ನಿಖರವಾದ ಮಾಹಿತಿ ಇರದಿದ್ದರೂ ಸುಮಾರು ಕ್ರಿ.ಪೂ ೬೦೦ ರಿಂದ ಕ್ರಿ.ಪೂ ೩೦೦ ರವರೆಗೆ ಆರಂಭ ಹಾಗೂ ಅಂತ್ಯ ಎಂದು ಗುರುತಿಸಲಾಗಿದೆ. ವೇದಗಳ ಕಾಲದ ಭಾರತೀಯರಿಗೆ ಜ್ಞಾನವೇ ಬೆಳಕು. ಅಜ್ಞಾನವೇ ಅಂಧಕಾರ ಎಂಬ ಕಲ್ಪನೆಯಿದ್ದು, ಶಿಕ್ಷಣ ವ್ಯಕ್ತಿಯನ್ನು ಅಂಧಕಾರದಿಂದ ಬೆಳಕಿನೆಡೆಗೆ ಅಂದರೆ ಅಜ್ಞಾನದಿಂದ ಜ್ಞಾನದ ಕಡೆಗೆ ಕೊಂಡೊಯ್ಯುವ ಸಾಧನ ಎಂದು ತಿಳಿಯಲಾಗಿತ್ತು. ಅಂದು ಬೋಧನೆಯು ಗುರುಕುಲಗಳಲ್ಲಿ ನಡೆಯುತ್ತಿದ್ದವು. ಕೇವಲ ಸೈದ್ಧಾಂತಿಕ ಮಹತ್ವ ಹೊಂದಿರದೆ ಪ್ರಾಯೋಗಿಕ ಕಲಿಕೆಗೂ ಅವಕಾಶವಿತ್ತು. ಗುರು-ಶಿಷ್ಯರ ಸಂಬಂಧ ಅತ್ಯಂತ ನಿಕಟವಾಗಿದ್ದು ಗುರು

ದೈವೀಸಂಭೂತನಾಗಿದ್ದು ಆದರಣೀಯ, ಅನುಕರಣೀಯ ಹಾಗೂ ಪೂಜನೀಯ ವ್ಯಕ್ತಿಯಾಗಿದ್ದನು. ಅಂದಿನ ಶಿಕ್ಷಣದ ಕಾರ್ಯ ವ್ಯಕ್ತಿ ಹಾಗೂ ಸಮಾಜ ಎರಡನ್ನೂ ಉದ್ಧರಿಸುವುದಾಗಿತ್ತು.

ಆರು ವರ್ಷ ತುಂಬಿದ ಮಗುವಿಗೆ ಉಪನಯನ ಕಾರ್ಯಕ್ರಮದೊಂದಿಗೆ ಕಲಿಕೆಯು ಪ್ರಾರಂಭವಾಗುತ್ತಿತ್ತು. ಗುರುವಿನ ಮನೆಯೇ ಆಶ್ರಯವಾಗಿದ್ದು, ಗುರುವೇ ಪೋಷಕನಾಗಿದ್ದ. ಇಲ್ಲಿನ ಶಿಕ್ಷಣ ಪದ್ಧತಿಯು ಗುರುಕುಲ ಪದ್ಧತಿಯಾಗಿತ್ತು. ಗುರುಕುಲಗಳು ಪ್ರಶಾಂತ ಪರಿಸರದಲ್ಲಿ ಊರಿನಿಂದ ದೂರ ತಪೋವನಗಳಲ್ಲಿದ್ದವು. ಕಲಿಕಾರ್ಥಿಗಳು ಕಡ್ಡಾಯವಾಗಿ ಬ್ರಹ್ಮಚರ್ಯ ಪಾಲಿಸಬೇಕಾಗಿತ್ತು. ಗುರುಸೇವೆ ಪವಿತ್ರ ಕಾರ್ಯವಾಗಿತ್ತು. ವೇದಗಳ ಕಾಲದ ಕಲಿಕೆಯು ಧರ್ಮಪ್ರಧಾನವಾಗಿದ್ದು ವೇದಗಳು ಅಧ್ಯಯನದ ವಿಷಯಗಳಾಗಿದ್ದವು.

ಶಿಕ್ಷಣವು ಜೀವನದ ಪರಮೋಚ್ಚ ಸಾಧನೆಗಾಗಿ ಆತ್ಮದ ಅರಿವು ಮೂಡಿಸಿ ಮೋಕ್ಷಕ್ಕೆ ದಾರಿ ತೋರುವುದಾಗಿದೆ. ವ್ಯಕ್ತಿಯನ್ನು ಸುಜ್ಞಾನಿಯಾಗಿ ಮಾಡುವ ಉದ್ದೇಶದಿಂದ ಬೌದ್ಧಿಕ ವಿಕಾಸಕ್ಕೆ ಆದ್ಯತೆಯಿತ್ತು. 'ವಿದ್ಯಾಹೀನ ಪಶುಃ' ಅರ್ಥಾತ್ ವಿದ್ಯೆಯಿಲ್ಲದವನು ಪಶುಗೆ ಸಮಾನ ಎಂದು ತಿಳಿಸುವುದು. ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಹಾಗೂ ಧಾರ್ಮಿಕ, ಆಧ್ಯಾತ್ಮಿಕ, ರೀತಿನೀತಿ, ಪರಂಪರೆ, ಆಚಾರ-ವಿಚಾರಗಳನ್ನು ಬೆಳೆಸುವುದರ ಜೊತೆಗೆ ಕಲಿಕಾರ್ಥಿಗಳಲ್ಲಿ ಪೌರಪ್ರಜ್ಞೆ ಮೂಡಿಸಿ ಅವರ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿಸಿ ಸಾಮಾಜಿಕ ಮೌಲ್ಯಗಳನ್ನು ರೂಢಿಸುವುದು ವೇದಗಳ ಕಾಲದ ಕಲಿಕೆಯ ಪ್ರಮುಖ ಗುರಿಯಾಗಿತ್ತು.

ವೇದಕಾಲದ ಶಿಕ್ಷಣದಲ್ಲಿ ವೈವಿಧ್ಯಪೂರ್ಣ ವಿಷಯಗಳ ಅಧ್ಯಯನಕ್ಕೆ ಅವಕಾಶವಿತ್ತು. ಸಂಸ್ಕೃತ ಭಾಷೆ ಶಿಕ್ಷಣದ ಮಾಧ್ಯಮವಾಗಿತ್ತು. ಧಾರ್ಮಿಕ ಶಿಕ್ಷಣದೊಂದಿಗೆ ವೇದಗಳ ಹಾಗೂ ಉಪನಿಷತ್ತುಗಳ ಕಲಿಕೆಗೆ ಪ್ರಮುಖ ಸ್ಥಾನವಿತ್ತು. ಖಗೋಳಶಾಸ್ತ್ರ, ಭೂಗೋಳ, ಕಾವ್ಯಸಂಹಿತೆ, ತರ್ಕಶಾಸ್ತ್ರ, ವ್ಯಾಕರಣ ಮುಂತಾದ ವಿಷಯಗಳು ಪಠ್ಯಕ್ರಮದ ವಿಷಯವಸ್ತುಗಳಾಗಿದ್ದವು. ಒಟ್ಟಾರೆಯಾಗಿ ಕಲಿಕಾರ್ಥಿಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಸಂಗತಿಗಳನ್ನು ಪ್ರತಿನಿಧಿಸುವ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಸಂಗತಿಗಳನ್ನು ಪ್ರತಿನಿಧಿಸುವ ವಿಷಯಗಳೆರಡರ ಸಮ್ಮಿಲನದಿಂದ ಪಠ್ಯಕ್ರಮ ರಚನೆಯಾಗಿತ್ತು.

ಬೋಧನೆಯು ವೈಯಕ್ತಿಕ ಹಾಗೂ ಸಾಮೂಹಿಕ ಎರಡು ರೀತಿಯ ಕ್ರಮದಲ್ಲಿ ವ್ಯವಸ್ಥೆ ಮಾಡಲ್ಪಟ್ಟಿತ್ತು. ಅಂದಿನ ಬೋಧನಾಕ್ರಮ ಬಹಳ ಮಟ್ಟಿಗೆ ಮೌಖಿಕವಾಗಿತ್ತು. ಬಾಯಿಪಾಠಕ್ಕೆ ಆದ್ಯತೆಯಿತ್ತು. ವಿದ್ಯಾರ್ಥಿಗಳು ಮಂತ್ರಗಳನ್ನು ಕಂಠಪಾಠ ಮಾಡುತ್ತಿದ್ದು ಅದರ ಉದ್ದೇಶ ಮಂತ್ರಗಳು ಅವರ ಮನಸ್ಸಿನಲ್ಲಿ ಯಥಾವತ್ತಾಗಿ ಉಳಿಯುವಂತೆ ಮಾಡುವುದಾಗಿತ್ತು. ಮೌಖಿಕವಾಗಿ ಬೋಧಕರು ಹೇಳುವುದನ್ನು ಕಲಿಕಾರ್ಥಿಗಳು ಯಥಾವತ್ತಾಗಿ ಉಚ್ಚರಿಸಿ ಕಲಿಯುವ ಅನುಕರಣಾ ವಿಧಾನವೇ ಮುಖ್ಯವಾದುದಾಗಿತ್ತು. ಬರವಣಿಗೆಕಲೆ ಅಭಿವೃದ್ಧಿಯಾಗಿರಲಿಲ್ಲವಾಗಿದ್ದರೂ ಸಂದರ್ಭಾನುಸಾರ ಉಪನ್ಯಾಸ, ಚರ್ಚೆಗಳು ಜರುಗುತ್ತಿದ್ದವು. ಪ್ರಶ್ನೋತ್ತರ ಪದ್ಧತಿ, ಚರ್ಚೆಗಳಿಗೆ ಅವಕಾಶವಿತ್ತು. ಸ್ವಅಧ್ಯಯನಕ್ಕೆ ವಿಶೇಷ

ಗಮನ ನೀಡಲಾಗಿತ್ತು. ಬೋಧನಾಕ್ರಮ ವಿದ್ಯಾರ್ಥಿಗಳ ಆಸಕ್ತಿ ಹಾಗೂ ಸಾಮರ್ಥ್ಯಕ್ಕನುಸಾರವಾಗಿ ಸಾಗುತ್ತಿತ್ತು. ಅರಣ್ಯಕದಲ್ಲಿ ತಿಳಿಸಿದಂತೆ ಕಲಿಕೆ ಮೂರು ಹಂತಗಳಲ್ಲಿ ನಡೆಯುತ್ತಿತ್ತು.

ಶ್ರವಣ – ಕಲಿಕಾರ್ಥಿಯು ಬೋಧಕರು ಹೇಳುತ್ತಿದ್ದುದನ್ನು ಏಕಾಗ್ರಚಿತ್ತದಿಂದ ಆಲಿಸುವುದು.

ಮನನ – ಆಲಿಸಿದ ಭಾಗವನ್ನು ಅರ್ಥೈಸಿಕೊಳ್ಳುವ ಪ್ರಯತ್ನ.

ಧ್ಯಾಸ – ಮನನ ಮಾಡಿಕೊಂಡಿದ್ದನ್ನು ಧ್ಯಾನಿಸಿ ಬೌದ್ಧಿಕ ವಿಕಾಸ ಮಾಡಿಕೊಳ್ಳಲಾಗುತಿತ್ತು.

ವೇದ ಹೇಳುವ ಕ್ರಮ ಕಲೆಯಾದ್ದರಿಂದ ಸ್ಪಷ್ಟ ಉಚ್ಚರಣೆಗೆ ಗಮನ ನೀಡಲಾಗಿದ್ದು. ಉಚ್ಚರಣೆಯಲ್ಲಿ ಉಂಟಾದ ದೋಷದಿಂದ ಕೆಡುಕಾಗುತ್ತದೆಂಬ ಭಾವನೆಯಿತ್ತು. ಈ ರೀತಿಯಾಗಿ ವೇದಗಳ ಕಾಲದ ಬೋಧನಾ ಪದ್ಧತಿಯಾಗಿತ್ತು.

*** ಬೌದ್ಧರ ಕಾಲದ ಬೋಧನಾ ಪದ್ಧತಿ**

ಬೌದ್ಧರ ಕಾಲವನ್ನು ಕ್ರಿ.ಪೂ.ಸು ೫೬೩–೪೮೩ ರವರೆಗೆ ಎಂದು ಗುರುತಿಸಲಾಗಿದೆ. ಬೌದ್ಧಕಾಲದ ಕಲಿಕಾ ಪದ್ಧತಿಯು ಎರಡು ಹಂತದಲ್ಲಿ ನೀಡಲಾಗುತಿತ್ತು. ಒಂದು ಪ್ರಾಥಮಿಕ ಹಂತ, ಮತ್ತೊಂದು ಉನ್ನತ ಶಿಕ್ಷಣ ಹಂತ. ವೇದಗಳ ಕಾಲದಲ್ಲಿನ ಉಪನಯನದಂತೆ. ಬೌದ್ಧರ ಕಾಲದಲ್ಲಿ ಬೌದ್ಧವಿಹಾರಕ್ಕೆ ಪ್ರವೇಶಿಸಲು 'ಪಬ್ಬಜ' ದೀಕ್ಷೆ ಪಡೆಯಬೇಕಿತ್ತು. 'ಪಬ್ಬಜ' ಎಂದರೆ 'ಹೊರಹೋಗು' ಎಂದರ್ಥ. ಈ ಅರ್ಹತೆಯೊಂದಿಗೆ ಮಕ್ಕಳು ವಿಹಾರಗಳಿಗೆ ತೆರಳಿ ಓರ್ವ ಸನ್ಯಾಸಿ ಬಳಿ ಶಿಷ್ಯರಾಗಿ ಶಿಕ್ಷಣ ಪಡೆಯುತ್ತಿದ್ದರು. ಕಲಿಕಾರ್ಥಿಯು ಜೀವನದಲ್ಲಿ ಸತ್ಯ, ಶಾಂತಿ, ಸಹಕಾರ, ಸನ್ನಡತೆ ಮುಂತಾದ ಮಾನವೀಯ ಮೌಲ್ಯಗಳನ್ನು ಬೆಳೆಸುವುದು, ಧಾರ್ಮಿಕತೆಗಿಂತ ನೈತಿಕತೆ ಬೆಳೆಸುವುದು ಶಿಕ್ಷಣದ ಮೂಲ ಉದ್ದೇಶವಾಗಿತ್ತು. ಬೌದ್ಧ ತತ್ವ ಪ್ರಚಾರ ಹಾಗೂ ಬೋಧನೆ ಕಲಿಕೆಯ ಪ್ರಮುಖ ಗುರಿಯಾಗಿತ್ತು.

ಬೌದ್ಧರ ಕಾಲದ ಶಿಕ್ಷಣದ ಪಠ್ಯಕ್ರಮ ಮುಕ್ತಿಯನ್ನು ಪಡೆಯುವಂತಹ ಆದರ್ಶ ಗುರಿಯನ್ನು ಪೂರೈಸುವಂತಹ ವಿಷಯಗಳಿಂದ ರಚಿಸಲ್ಪಟ್ಟಿತ್ತು. ಹೀಗಾಗಿ ಬೌದ್ಧಭಿಕ್ಷುಗಳು ಧಾರ್ಮಿಕ ಗ್ರಂಥಗಳನ್ನು ಆಧ್ಯಯನ ಮಾಡಬೇಕಾಗಿತ್ತು. ತ್ರಿಪಿಟಕಗಳಾದ 'ಸೂತ್ರ' 'ವಿನಯ' 'ಅಭಿಧರ್ಮ ಪಿಟಕಗಳೆಂಬ' ಮುಖ್ಯಗ್ರಂಥಗಳಾಗಿದ್ದವು. ಸುಲ್ತಾನ, ವಿನಜ ಮತ್ತು ಧಮ್ಮ– ಇವು ಪ್ರಮುಖ ವಿಷಯಗಳಾಗಿದ್ದವು. ಶೈಕ್ಷಣಿಕ, ಧಾರ್ಮಿಕ, ಹಾಗೂ ತಾಂತ್ರಿಕ ವಿಷಯಗಳ ಜೊತೆಗೆ ಪಠ್ಯಕ್ರಮದಲ್ಲಿ ಸಾಹಿತ್ಯ, ಕಲೆ, ತತ್ವಶಾಸ್ತ್ರ, ವಾಣಿಜ್ಯ ಹಾಗೂ ಭಾಷಾ ವಿಷಯಗಳಾದ ಪಾಲಿ ಮತ್ತು ಸಂಸ್ಕೃತ ವಿಷಯಗಳನ್ನು ಅಧ್ಯಯನಕ್ಕೆ ಅಳವಡಿಸಲಾಗಿತ್ತು.

ಬೌದ್ಧರ ಕಾಲದ ಬೊಧನಾ ಪದ್ಧತಿಯಲ್ಲಿ ಮೌಖಿಕ ಪದ್ಧತಿ, ಉಪನ್ಯಾಸ, ಚರ್ಚೆ, ವಿಚಾರ ಸಂಕೀರ್ಣ ಸಭೆ, ಪ್ರಾಯೋಗಿಕ, ಹಾಗೂ ಪ್ರವಾಸ ಪದ್ಧತಿ ಆಧರಿಸಿ ಬೋಧನೆ ಸಾಗಿತ್ತು. ವೇದಗಳ ಕಾಲದಂತೆ ಬರವಣಿಗೆ ಕಲೆ ಇನ್ನೂ ಬೆಳೆದಿರಲಿಲ್ಲವಾದ್ದರಿಂದ ಮೌಖಿಕ ರೀತಿಯ ಬೋಧನೆಗೆ ವಿಶೇಷ ಸ್ಥಾನವಿತ್ತು. ಬೋಧನಾ ಮಾಧ್ಯಮ ಪಾಲಿ ಭಾಷೆಯಾಗಿತ್ತು. ಬೋಧಕರು ನೇರ ಬೋಧನಾಕ್ರಮ

ಬಳಸಿದ್ದರು. ಸಿದ್ಧಿ, ವಿಹಾರಗಳು, ವ್ಯಾಕರಣ ನಿಯಮಗಳನ್ನು ಕಂಠಪಾಠ ಮಾಡಿ ಕಲಿಯುತ್ತಿದ್ದರು. ಚರ್ಚಾಕ್ರಮದಲ್ಲಿ ಎಂಟು ಕ್ರಮಗಳಿದ್ದವು. ೧) ಕಾರಣ ೨) ಸಿದ್ಧಾಂತ ೩) ಉದಾಹರಣೆ ೪) ಸಾಮನ್ಯೀಕರಣ ೫) ನಿರೋದೋಕ್ತಿ ೬) ದೃಷ್ಟಾಂತ ೭) ವಾದಮಂಡನೆ ೮) ಅನುಗಮನ. ಬದುಕಿನ ಅನೇಕ ಸಮಸ್ಯೆಗಳನ್ನು ಚರ್ಚೆ ಮೂಲಕ ಪರಿಹರಿಸಲಾಗುತ್ತಿತ್ತು. ಮತ್ತು ಪ್ರವಾಸದ ಮೂಲಕ ಬೋಧಿಸುವುದು ಬೌದ್ಧರ ಕಾಲದ ವೈಶಿಷ್ಟ್ಯತೆಯಾಗಿದ್ದು. ಬೌದ್ಧ ಭೀಕ್ಷುಗಳು ತಮ್ಮ ಶಿಕ್ಷಣದ ನಂತರ ಪ್ರವಾಸ ಕೈಗೊಂಡು ಜ್ಞಾನ ಪ್ರಸಾರ ಮಾಡುತ್ತಿದ್ದರು. ಕಲಿಕಾರ್ಥಿಗಳು ಸಹ ವಿದ್ಯಾರ್ಥಿ ಜೀವನದ ಕೊನೆಯಲ್ಲಿ ಪ್ರವಾಸ ಕೈಗೊಂಡು ತಾವು ಕಲಿತ ವಿಷಯಗಳನ್ನು ಪ್ರಯೋಗಿಕವಾಗಿ ಅಧ್ಯಯನ ಮಾಡುತ್ತಿದ್ದರು. ಪುರುಷರಂತೆ ಸ್ತ್ರೀಯರಿಗೂ ವೇದಾಂತ, ಆಯುರ್ವೆದ ಸಾಹಿತ್ಯ ಕಲಿಯಲು ಅವಕಾಶವಿತ್ತು. ಆದರೆ ಇವೆಲ್ಲವು ಉನ್ನತ ವರ್ಗದ ಸ್ತ್ರೀಗೆ ಮೀಸಲಾಗಿತ್ತು ಎನ್ನುವ ವಿಚಾರ ಮಾತ್ರ ವಿಷಾದನಿಯ. ಸಾಮಾನ್ಯ ಸ್ತ್ರೀ. ಇಂತಹ ಶಿಕ್ಷಣದಿಂದ ವಂಚಿತಳಾಗಿದ್ದಳು.

*** ಮುಸ್ಲಿಂ ಕಾಲದ ಬೋಧನಾ ಪದ್ಧತಿ**

ಬೌದ್ಧಧರ್ಮ ಭಾರತದಲ್ಲಿ ಕ್ಷೀಣಿಸುತ್ತಾ ಬಂದಂತೆ ಮುಸ್ಲಿಂರ ದಾಳಿ ಆರಂಭವಾಯಿತ್ತು. ಕ್ರಿ.ಶ ಎಂಟನೇಯ ಶತಮಾನದಲ್ಲಿ ಭಾರತದ ಮೇಲೆ ಮಹಮ್ಮದೀಯರ ದಾಳಿ ಪ್ರಾರಂಭವಾಯಿತು. ನಮ್ಮ ಸಂಪತ್ತಿನ ಆಸೆಯಿಂದ ಇಲ್ಲೆ ತಮ್ಮ ಸಾಮ್ರಾಜ್ಯವನ್ನೇ ಸ್ಥಾಪಿಸಿದರು. ಇಸ್ಲಾಂ ಪವಿತ್ರ ಗ್ರಂಥ "ಕುರ್-ಆನ್" ನಲ್ಲಿ ಜ್ಞಾನ ಹಾಗೂ ಅದರ ಪ್ರಸಾರಕ್ಕೆ ವಿಶೇಷ ಮಹತ್ವ ನೀಡಿ ಶಿಕ್ಷಣವನ್ನು ಕರ್ತವ್ಯವೆಂದು ತಿಳಿಸಿದ್ದರಿಂದ ಮುಸ್ಲಿಂ ರಾಜರು ಇಸ್ಲಾಂ ಧರ್ಮಕ್ಕನುಗುಣವಾಗಿ ಹೊಸ ಶಿಕ್ಷಣ ಕ್ರಮವನ್ನು ಹುಟ್ಟು ಹಾಕಿದರು.

ಇಸ್ಲಾಂ ಧರ್ಮದ ಅನುಯಾಯಿಗಳಲ್ಲಿ ಜ್ಞಾನದ ಬೆಳಕನ್ನು ಹರಡುವುದು ಇಸ್ಲಾಂ ಶಿಕ್ಷಣದ ಪರಮ ಧ್ಯೆಯವಾಗಿತ್ತು. ಜ್ಞಾನದಿಂದ ಒಳ್ಳೆಯದು, ಕೆಟ್ಟದ್ದು ಎಂಬುವುದರ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಾಧ್ಯ ಎಂದು ನಂಬಿ ಜ್ಞಾನವೇ ಶಿಕ್ಷಣದ ಪ್ರಮುಖ ಉದ್ದೇಶ ಎಂದರು. ಅನಕ್ಷರತೆ ನಿರ್ಮೂಲನೆ ಹಾಗೂ ಜೀವನಕ್ಕೆ ವ್ಯಕ್ತಿಯನ್ನು ಸಿದ್ದಗೊಳಿಸುವುದು ಇವರ ಬೋಧನೆಯ ಪ್ರಮುಖ ಗುರಿಯಾಗಿತ್ತು.

ಇವರ ಕಾಲದಲ್ಲಿ ಪ್ರಾಥಮಿಕ ಹಂತದಲ್ಲಿ ಓದು, ಬರಹ ಹಾಗೂ ಗಣಿತಕ್ಕೆ ಆದ್ಯತೆ ಇತ್ತು. ಪರ್ಶಿಯನ್ ಗ್ರಂಥಗಳ ಅಧ್ಯಯನಕ್ಕೆ ಅವಕಾಶ ನೀಡಲಾಯಿತು. ನಾಲ್ಕು ವರ್ಷಗಳ ಅಧ್ಯಯನಕ್ಕೆ ಪ್ರಾಥಮಿಕ ಹಂತ ಸೀಮಿತವಾಗಿತ್ತು. ಉನ್ನತ ಹಂತದ ಪಠ್ಯಕ್ರಮ ಗುಣಾತ್ಮಕವಾದ ರೀತಿಯಲ್ಲಿ ರೂಪಿಸಲಾಗಿತ್ತು. ಇಲ್ಲಿ ಅರಸರಿಗೆ ಪ್ರತ್ಯೇಕ ವಿಷಯಗಳ ಅಧ್ಯಯನಕ್ಕೆ ಅವಕಾಶ ಮಾಡಲಾಗಿತ್ತು. ಅವರು ಆಡಳಿತದಲ್ಲಿ ತರಬೇತಿ ಪಡೆಯಬೇಕಾದ್ದರಿಂದ, ಯುದ್ಧದ ಕೌಶಲ್ಯ ಬೆಳೆಸಿಕೊಳ್ಳಬೇಕಾದ್ದರಿಂದ ಅವರಿಗೆ ಮಿಲಿಟರಿ ಶಿಕ್ಷಣ ಮತ್ತು ಆಡಳಿತ ಕಲೆ ಕಲಿಸುವ ವಿಷಯಗಳನ್ನು ಕಡ್ಡಾಯವಾಗಿ

ಬೋಧನೆಗೆ ಅಳವಡಿಸಲಾಗಿತ್ತು. ಉನ್ನತ ಶಿಕ್ಷಣ ಹಂತದಲ್ಲಿ ಅರೇಬಿಕ್, ವ್ಯಾಕರಣ, ಸಾಹಿತ್ಯ, ತರ್ಕ, ತತ್ವಶಾಸ್ತ್ರ, ಇತಿಹಾಸ, ಭೂಗೋಳ, ವ್ಯವಸಾಯ ಮುಂತಾದ ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿತ್ತು. ಧಾರ್ಮಿಕ ಶಿಕ್ಷಣದಲ್ಲಿ ಕುರಾನ್, ಇಸ್ಲಾಂ ಕಾನೂನು ಹಾಗೂ ಮಹಮ್ಮದ್ ಪೈಗಂಬರ್ ಅವರ ವಿಚಾರಗಳನ್ನು ಕುರಿತಾದ ಅಧ್ಯಯನ ವ್ಯವಸ್ಥೆ ಮಾಡಲಾಗಿತ್ತು. ಕಲಿಸುವ ಮಾಧ್ಯಮ ಅರೇಬಿಕ್ ಆಗಿತ್ತು. ನಂತರ ನೈತಿಕತೆ, ಅಂಕಗಣಿತ, ಜೋತಿಷ್ಯ, ತರ್ಕಶಾಸ್ತ್ರ, ಚರಿತ್ರೆ ವಿಷಯಗಳನ್ನು ಕಲಿಸಲಾಗುತ್ತಿತ್ತು. ಸಂಸ್ಕೃತದಲ್ಲಿ ವ್ಯಾಕರಣ, ನ್ಯಾಯ, ವೇದಾಂತ ಮತ್ತು ಪತಂಜಲಿ ಮುಂತಾದ ವಿಷಯಗಳನ್ನು ಸಹ ಸೇರಿಸಲಾಯಿತ್ತು. ಯುನಾನಿ ವೈದ್ಯ ಮತ್ತು ಕಾನೂನುಗಳು ಪಠ್ಯಕ್ರಮದ ಮಹತ್ವದ ವಿಷಯಗಳಾಗಿದ್ದವು.

ಬೋಧನಾ ಕ್ರಮವು ಮೌಖಿಕ ರೀತಿಯದ್ದಾಗಿತ್ತು. ಪ್ರಾಥಮಿಕ ಹಂತದಲ್ಲಿ ಬೋಧನಾಕ್ರಮ ಸರಳ ರೀತಿಯದ್ದಾಗಿತ್ತು. ಪವಿತ್ರ ಕುರಾನ್ ಕಲಿಸುವ ಮೂಲಕ ಕಲಿಕೆಯು ಪ್ರಾರಂಭವಾಗುತ್ತಿತ್ತು. ಬಾಯಿಪಾಠದ ಕ್ರಮಕ್ಕೆ ಆದ್ಯತೆ ಇತ್ತು. ಸ್ಮರಣೆ ಹಾಗೂ ಯಾಂತ್ರಿಕ ಉಚ್ಚರಣೆಗೆ ಪ್ರಾಶಸ್ತ್ಯವಿತ್ತು. ಐನಿ ಅಕ್ಬರಿಯಲ್ಲಿ ತಿಳಿಸಿರುವಂತೆ 'ಸ್ವರ ವ್ಯಂಜನಗಳನ್ನು ಕಲಿಯುವುದರಲ್ಲಿಯೇ ಮಗುವಿನ ಸಮಯ ಹಾಳಾಗುತ್ತಿತ್ತು. ಆದ್ದರಿಂದ ಮಗು ಮೊದಲು ವರ್ಣಮಾಲೆ ಬರೆಯುವುದನ್ನು, ಪದ ರಚನೆಯನ್ನು ಕಲಿಯಬೇಕು ಎಂಬ ಪ್ರಸ್ತಾಪವಿದೆ. ಅಕ್ಬರನು ಇದಕ್ಕಾಗಿ ಹೊಸ ಪದ್ಧತಿ ಜಾರಿಗೊಳಿಸಿ ಬೋಧಿಸುವ ವ್ಯವಸ್ಥೆ ಮಾಡಿದನು. ಸ್ವಯಂ ಅಧ್ಯಯನ ಕ್ರಮ ಮುಸ್ಲಿಂ ಶಿಕ್ಷಣದ ಬೋಧನಾ ಕ್ರಮದಲ್ಲಿ ಅತ್ಯಂತ ವಿಶೇಷವಾಗಿತ್ತು.

ಉನ್ನತ ಶಿಕ್ಷಣ ಹಂತದಲ್ಲಿ ಸಹ ಕಲಿಕೆ ಮೌಖಿಕವಾಗಿತ್ತು. ಮುಖ್ಯವಾಗಿ ಮದರಸಗಳಲ್ಲಿ ಉಪನ್ಯಾಸ ಪದ್ಧತಿ ಜಾರಿಯಲ್ಲಿತ್ತು. ಔಷಧ ಶಾಸ್ತ್ರ ಹಾಗೂ ಆಧ್ಯಾತ್ಮಿಕ ಜ್ಞಾನವನ್ನು ಪ್ರಾಯೋಗಿಕ ಕ್ರಮಗಳ ಮೂಲಕ ಕಲಿಸುವ ವ್ಯವಸ್ಥೆ ಇತ್ತು. ರಾಜನೀತಿ, ತತ್ವಶಾಸ್ತ್ರ ಇವುಗಳನ್ನು ವಿಶ್ಲೇಷಣಾತ್ಮಕ ಹಾಗೂ ಅನುಗಮನ ಕ್ರಮದಿಂದ ಕಲಿಸಲಾಗುತ್ತಿತ್ತು. ಬೋಧನೆಯಲ್ಲಿ ಹಿರೇಮಣಿ ಕ್ರಮ ಕೂಡ ಅನುಸರಿಸಲಾಗಿತ್ತು.

*** ಬ್ರಿಟೀಷ್ ಕಾಲದ ಬೋಧನಾ ಪದ್ಧತಿ**

ಇದನ್ನು ಆಧುನಿಕ ಭಾರತದ ಕಲಿಕಾಪದ್ಧತಿ ಎಂತಲೂ ಕರೆಯುತ್ತಾರೆ. ಈ ಶಿಕ್ಷಣ ಪದ್ಧತಿಯು ಬ್ರಿಟೀಷರ ಆಳ್ವಿಕೆಯಿಂದ ಪ್ರಾರಂಭವಾಯಿತು. ಎರಡು ನೂರಾಐವತ್ತು ವರ್ಷಗಳವರೆಗೆ ಭಾರತವನ್ನು ಆಳಿದ ಆಂಗ್ಲರು ತಮ್ಮ ಶಿಕ್ಷಣ ಪದ್ಧತಿಯ ಮೂಲಕ ಈ ದೇಶದ ದಿಕ್ಕುದೆಸೆಗಳನ್ನು ಬದಲಾಯಿಸುತ್ತಾ ಬಂದರು. ಕ್ರಿ.ಶ ೧೬೦೦ ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದರು. ಕೇವಲ ವ್ಯಾಪಾರದ ಉದ್ದೇಶ ಹೊಂದಿದ್ದ ಈ ಕಂಪನಿ ಕಾಲಕ್ರಮೇಣ ಧರ್ಮ ಪ್ರಸಾರದ ಗುರಿ ಸಾಧನೆಗೆ ಮತ್ತು ಶಿಕ್ಷಣ ಪ್ರಸಾರಕ್ಕೆಂದೇ ಹಲವು ಭಾರತೀಯರಿಗೆ ಮಿಷನರಿ ತರಬೇತಿಗಾಗಿ ೧೬೧೪ರಲ್ಲಿ ಇಂಗ್ಲೇಂಡಿಗೆ

ಕಳಿಸಲಾಯಿತು. ಬಾಂಬೆ ಹಾಗೂ ಕೋಲ್ಕೊತ್ತಾದಲ್ಲಿ ಶಾಲೆಗಳನ್ನು ತೆರೆಯಲಾಯಿತ್ತು. ಶಿಕ್ಷಣದಲ್ಲಿ ಪ್ರಗತಿ ಸಾಧಿಸಲು ೧೮೧೩ರಲ್ಲಿ ಚಾರ್ಟರ್ ಆ್ಯಕ್ಟ್‌ನ್ನು ಜಾರಿಗೆ ತಂದರು.

ಈ ಆಕ್ಟ್‌ನ ೪೩ನೇ ವಿಭಾಗವು "ಭಾರತೀಯ ಶಿಕ್ಷಣ ಕ್ಷೇತ್ರಕ್ಕೆ ಪ್ರತಿ ವರ್ಷ ಒಂದು ಲಕ್ಷ ರೂಪಾಯಿಯನ್ನು ಅಲ್ಲಿನ ಸಾಹಿತ್ಯದ ಅಭಿವೃದ್ಧಿ ಹಾಗೂ ಸ್ಥಳಿಯ ವಿದ್ವಾಂಸರನ್ನು ಪ್ರೋತ್ಸಾಹಿಸಲು ಬಳಸಬೇಕು" ಎಂದು ಸಾರಿತು. ನಂತರ ಭಾರತೀಯರಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡಬೇಕೆಂದು ಪಾಶ್ಚತ್ಯರ ವಾದವಾಗಿದ್ದರೆ, ಪೌರಾತ್ಯಪರವಾದಿಗಳ ಪ್ರಕಾರ ಸಂಸ್ಕೃತ, ಅರೇಬಿಕ ಹಾಗೂ ಪರ್ಶಿಯನ್ ಭಾಷೆಯ ಮೂಲಕ ಭಾರತೀಯ ಶಿಕ್ಷಣ ಪ್ರಗತಿಯಾಗಬೇಕೆಂಬುದಾಗಿತ್ತು. ಇಂತಹ ಒಂದು ಮಹತ್ವದ ವಿಚಾರವನ್ನು ತೀರ್ಮಾನ ತೆಗೆದುಕೊಂಡು ಅಧ್ಯಯನಿಸಿದವರು ಲಾರ್ಡ್ ಮೆಕ್ಯಾಲೆಯವರು.

ಮೆಕ್ಯಾಲೆ ವರದಿ ಪ್ರಕಾರ ದೇಶಿಯ ಶಿಕ್ಷಣ ಸಂಸ್ಥೆಗಳ ಪೋಷಣೆ ಅಪಾಯಕಾರಿಯಾಗಿದ್ದು ಅವುಗಳಿಂದ ಪ್ರಯೋಜನವಿಲ್ಲ. ಸ್ಥಳಿಯ ಭಾಷೆ, ಸಾಹಿತ್ಯ, ವಿಜ್ಞಾನ ನಿಷ್ಪ್ರಯೋಜಕ ಎನ್ನುವ ವಿಚಾರಗಳು ಮೂಡಿಬಂದವು. ಇದಕ್ಕೆ ಸಾಕ್ಷ್ಯಾಧಾರಗಳನ್ನು ನಿಡುತ್ತಾ ಅರೆಬಿಕ್ ಮತ್ತು ಸಂಸ್ಕೃತ ಭಾಷೆಗಳ ಪುಸ್ತಕಗಳು ಖರ್ಚಾಗದೆ ಇಂಗ್ಲಿಷ್ ಪುಸ್ತಕಗಳ ಅಧಿಕ ಮಾರಾಟದ ಪರಿಸ್ಥಿತಿ ತಿಳಿಸಿದನು. ಹೀಗಾಗಿ ಪೌರಾತ್ಯ ಭಾಷೆಯಲ್ಲಿ ಪುಸ್ತಕ ತರುವುದು ಉಪಯೋಗವಿಲ್ಲ ಎಂದನು.

ಈ ಮೆಕ್ಯಾಲೆ ವರದಿಯನ್ನು ಅಭ್ಯಸಿಸಿದ ಅಂದಿನ ಭಾರತದ ಗೌವರ್ನರ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಭಾರತೀಯ ಶಿಕ್ಷಣ ಕುರಿತಂತೆ ಗೊತ್ತುವಳಿ ರೂಪಿಸಿದ. ಕ್ರಿ.ಶ ೧೮೩೫ ಮಾರ್ಚ್ ೭ ರಂದು ಶೈಕ್ಷಣಿಕ ಗೊತ್ತುವಳಿಗಳನ್ನು ಪಾಸು ಮಾಡಲಾಯಿತು. ಅದರ ಪ್ರಕರ ಭಾರತದಲ್ಲಿ ಯುರೋಪಿಯನ್ ಸಾಹಿತ್ಯ ಮತ್ತು ವಿಜ್ಞಾನ ಅಭಿವೃದ್ಧಿ ಬ್ರಿಟೀಷ್ ಸರ್ಕಾರದ ಮುಖ್ಯ ಧ್ಯೇಯವಾಗಿತ್ತು. ಹೀಗಾಗಿ ಶಿಕ್ಷಣದ ಸಂಪೂರ್ಣ ಹಣ ಇಂಗ್ಲಿಷ್ ಶಿಕ್ಷಣಕ್ಕೆ ಖರ್ಚಾಗಬೇಕು. ಪೌರಾತ್ಯ ಶಿಕ್ಷಣ ಸಂಸ್ಥೆ ಮುಚ್ಚಕೂಡದು. ಶಿಕ್ಷಕರ ಸಂಬಳ ಹಾಗೂ ವಿದ್ಯಾರ್ಥಿ ವೇತನ ಮೊದಲಿನಂತೆ ನೀಡಬೇಕು. ಇನ್ನೂ ಮುಂದೆ ಭಾರತೀಯ ಭಾಷೆಗಳ ಪುಸ್ತಕ ಪ್ರಕಟಣೆಗೆ ಹಣ ಖರ್ಚು ಮಾಡುವಂತಿಲ್ಲ ಎಂದರು.

ಈ ಮೆಕ್ಯಾಲೆ ವರದಿಯ ಪ್ರಭಾವದಿಂದ ಭಾರತೀಯರು ಪಾಶ್ಚಾತ್ಯ ಕಲೆ, ಸಾಹಿತ್ಯ, ವಿಜ್ಞಾನದ ಬಗ್ಗೆ ತಿಳುವಳಿಕೆ ಹೊಂದಲು ಸಾಧ್ಯವಾಗಿ ತಮ್ಮ ಸಂಸ್ಕೃತಿಯ ಬಗ್ಗೆಯೂ ಜಾಗೃತರಾಗಲೂ ಸಾಧ್ಯವಾಯಿತು.

ಮೆಕ್ಯಾಲೆಯ ವರದಿಯ ನಂತರ ಬಂದದ್ದು ವುಡ್ಸ್‌ವರದಿ. ೧೮೫೩ರಲ್ಲಿ ಚಾರ್ಟರ್ ಕಾಯಿದೆಯನ್ನು ಇಪ್ಪತ್ತು ವರ್ಷಗಳಿಗೊಮ್ಮೆ ಪರಿಷ್ಕರಿಸುವ ನಿಯಮದ ಮೆರೆಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಯಿತ್ತು. ಚಾರ್ಲ್ಸ್‌ವುಡ್ ನೇತೃತ್ವದಲ್ಲಿ ಸಮಿತಿ ರಚನೆಯಾಯಿತು. ವುಡ್ಸ್ ವರದಿಯು ಇಂಗ್ಲಿಷ್ ಭಾಷೆ ಮತ್ತು ಭಾರತೀಯ ಭಾಷೆಗಳೆರಡರಲ್ಲೂ ಕಲಿಕೆಯ ಅವಶ್ಯಕತೆ ಇದೆ ಎಂದು

[illegible]

ತಿಳಿಸಿತು. ಪಠ್ಯಕ್ರಮದ ಅಧ್ಯಯನ ವಿಷಯಗಳನ್ನು ಕುರಿತು ವರದಿ ಅರೇಬಿಕ್, ಸಂಸ್ಕೃತ, ಪರ್ಶಿಯನ್ ಭಾಷೆಗಳ ಅಧ್ಯಯನಕ್ಕೆ ಶಿಫಾರಸ್ಸು ಮಾಡಿತು. ಕಲೆ, ವಿಜ್ಞಾನ, ತತ್ತ್ವಶಾಸ್ತ್ರ ಹಾಗೂ ಯೂರೋಪಿನ ಸಾಹಿತ್ಯದ ಹರಡುವಿಕೆಯ ಬಗ್ಗೆ ಒತ್ತು ನೀಡಿತ್ತು. ಪ್ರತಿಯೊಂದು ಪ್ರಾಂತದಲ್ಲಿ ಒಂದು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ಮಾಣವಾಗಬೇಕು, ಶಿಕ್ಷಕರ ತರಬೇತಿಗಾಗಿ ತರಬೇತಿ ಶಾಲೆ ಮತ್ತು ಕಾಲೇಜುಗಳನ್ನು ತೆರೆಯಬೇಕು. ತಾಂತ್ರಿಕ, ವೈದ್ಯಕೀಯ, ಕಾಯ್ದೆ ಹಾಗೂ ಔದ್ಯೋಗಿಕ ತರಬೇತಿಗಾಗಿ ಕೇಂದ್ರಗಳಿರಬೇಕು ಎಂದು ಶಿಫಾರಸ್ಸು ಮಾಡಿತು. ಹೀಗೆ ಭಾರತೀಯ ಪ್ರಚಲಿತ ಶಿಕ್ಷಣಕ್ಕೆ ಒಂದು ಹೊಸ ತಿರುವನ್ನು ಕೊಟ್ಟು ಗಣನೀಯವಾದ ಪ್ರಗತಿಯನ್ನು ಹಾಗೂ ಬದಲಾವಣೆಯನ್ನು ತರುವಲ್ಲಿ ಯಶಸ್ವಿಯಾಯಿತು.

ವುಡ್ಸ್‌ನ ವರದಿಯ ನಂತರ ಭಾರತ ಸರ್ಕಾರದ ಕಾಯಿದೆ ೧೯೩೫ರ ಅಡಿಯಲ್ಲಿ ಶಿಕ್ಷಣ ಪದ್ಧತಿಯು ಜಾರಿಯಾಯಿತು. ಅದರ ಪ್ರಕಾರ ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳನ್ನು ಬಿಟ್ಟು ಶಿಕ್ಷಣಕ್ಕೆ ಸಂಬಂಧಿಸಿದ ಉಳಿದೆಲ್ಲ ವಿಷಯಗಳನ್ನು ರಾಜ್ಯ ವಿಷಯಗಳೆಂದು ಪರಿಗಣಿಸಿದರು. ಇದರ ಪ್ರಕಾರ ಈ ಕೆಳಕಂಡವುಗಳನ್ನು ಬೋಧನಾ ಹಂತಗಳನ್ನಾಗಿ ವಿಂಗಡಿಸಿದರು.

ಪ್ರಾಥಮಿಕ ಶಿಕ್ಷಣ :- ಇದರಲ್ಲಿ ೬ ರಿಂದ ೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡಬೇಕು.

ಮಾಧ್ಯಮಿಕ ಶಿಕ್ಷಣ :- ಮಾಧ್ಯಮಿಕ ಹಂತದಲ್ಲಿ ವೃತ್ತಿ ಶಿಕ್ಷಣಕ್ಕೆ ಸ್ವಲ್ಪ ಮಟ್ಟಿಗೆ ಗಮನಹರಿಸಲಾಗಿತ್ತು. ಅನೇಕ ಪ್ರಾಂತೀಯ ಸರಕಾರಗಳು ತಾಂತ್ರಿಕ, ವಾಣಿಜ್ಯ ಮತ್ತು ಕೃಷಿ ಮಾಧ್ಯಮಿಕ ಶಾಲೆಗಳನ್ನಾಗಿ ಪ್ರಾರಂಭಿಸಿ ನಾಲ್ಕು ಗೋಡೆಗಳ ಮಧ್ಯ ಬೋಧಿಸುತ್ತಿದ್ದರು.

ಉನ್ನತ ಶಿಕ್ಷಣ :- ೧೯೩೫ರ ಕಾಯಿದೆಯ ಪ್ರಕಾರ ಈ ಅವಧಿಯಲ್ಲಿ ವಿಶ್ವವಿದ್ಯಾಲಯ ಶಿಕ್ಷಣದ ವಿಸ್ತೀರ್ಣ ಕಾರ್ಯ ಪ್ರಾರಂಭವಾಯಿತಲ್ಲದೆ, ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡಿತು. ಗಣನೀಯ ಪ್ರಮಾಣದಲ್ಲಾದ ಮಾಧ್ಯಮಿಕ ಶಿಕ್ಷಣದ ವಿಸ್ತರಣೆಯು ಉನ್ನತ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಿತು. ಈ ರೀತಿಯಾಗಿ ೧೯೩೫ರ ಕಾಯ್ದೆಯ ಪ್ರಕಾರ ಮೂರು ರೀತಿಯಲ್ಲಿ ಭಾರತದಲ್ಲಿ ಬೋಧನಾ ಪದ್ಧತಿಯೂ ಜಾರಿಯಾಯಿತು.

ಕರ್ನಾಟಕದಲ್ಲಿನ ಶಿಕ್ಷಣ ಪದ್ಧತಿ ಮತ್ತು ಬೋಧನಾ ಪದ್ಧತಿ ಗಮನಿಸಿದರೆ, ಕನ್ನಡ ನಾಡಿನಲ್ಲಿರುವ ಬೋಧನೆ ಮತ್ತು ಕಲಿಕೆಗೆ ಸುಮಾರು ವರ್ಷಗಳ ಇತಿಹಾಸವಿದೆ. ಕರ್ನಾಟಕದ ಮೊದಲ ರಾಜಮನೆತನವಾದ 'ಕದಂಬ' ವಂಶದ ಅರಸನಾದ ಶಿವಚಿತ್ತನ ರಾಣಿ ಕಮಲಾದೇವಿ ಬೆಳಗಾಂವಿ ಜಿಲ್ಲೆಯ ಡಿಗ್ಗಾಂವಿಯಲ್ಲಿ ಒಂದು ಅಗ್ರಹಾರವನ್ನು ಸ್ಥಾಪಿಸಿ ಅಲ್ಲಿಗೆ ಭಾರತದ ಬೇರೆ ಬೇರೆ ಭಾಗಗಳಿಂದ ವಿದ್ವಾಂಸರನ್ನು ಕರೆಸಿ ಅವರ ಸಂರಕ್ಷಣೆಗಾಗಿ ದತ್ತಿಯನ್ನು ಹಾಕಿಸಿಕೊಟ್ಟಳು. ಅಲ್ಲಿ ವೇದ, ವೇದಾಂಗ, ನ್ಯಾಯ, ಮೀಮಾಂಸೆ, ಸಾಂಖ್ಯ, ಯೋಗ, ವೇದಾಂತ ಸ್ಮೃತಿ, ಇತಿಹಾಸ, ಪುರಾಣ, ಖಗೋಳ ಶಾಸ್ತ್ರಗಳ ಬೋಧನೆಗೆ ಅವಕಾಶ ಕಲ್ಪಿಸಲಾಗಿತ್ತು. ಹೀಗೆ ಕರ್ನಾಟಕದ ಕೆಲವು

ರಾಜಮನೆತನಗಳು ಮಾತ್ರ ಶಿಕ್ಷಣಕ್ಕೆ ಹೆಚ್ಚು ಅವಕಾಶ ಕಲ್ಪಿಸಿದವು. ಕಂಠಪಾಠದ ಬೋಧನಾ ಪದ್ಧತಿಯಿರುವುದರಿಂದ ಇಲ್ಲಿನ ಶಿಕ್ಷಣದಲ್ಲಿ ಕಲಿಕೆಯ ಸಮಸ್ಯೆಗಳ ಮಾಹಿತಿ ನಮಗೆ ಸಿಗುವುದಿಲ್ಲ. ಮತ್ತು ಸೀಮಿತ ವರ್ಗದ ಜನರು ಮಾತ್ರ ಶಿಕ್ಷಣವನ್ನು ಪಡೆಯುತ್ತಿದ್ದರು.

ಆದರೆ ಇಂದಿನ ಶಿಕ್ಷಣ ಪದ್ಧತಿಯನ್ನು ಗಮನಿಸಿದಾಗ ಬೋಧಕ ಮತ್ತು ಕಲಿಕಾರ್ಥಿಗಳ ಮಧ್ಯ ಪಠ್ಯಪುಸ್ತಕ ಮಾರ್ಗದರ್ಶಕನಂತೆ ಕಾರ್ಯವಹಿಸುತ್ತದೆ. ಇಂತಹ ಪಠ್ಯಪುಸ್ತಕಗಳು ೨೦೦೫ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ರಚಿತಗೊಂಡಿವೆ. ೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

* ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
* ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
* ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಮುಕ್ತಗೊಳಿಸುವುದು.
* ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
* ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
* ವಿಷಯಗಳ ಮೇರೆಯನ್ನು ಮುರಿದು ಅವುಗಳ ಸಮಗ್ರ ದೃಷ್ಟಿ ಬೋಧನೆಯನ್ನು ಅಳವಡಿಸುವುದು.
* ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
* ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು.[೩]

ಈ ಅಂಶಗಳ ಆಧಾರಿತವಾಗಿ ರಚನೆಗೊಂಡ ಪಠ್ಯಪುಸ್ತಕವನ್ನು ಬೋಧಿಸುವುದಕ್ಕೆ ಪ್ರೌಢ ಶಾಲೆಗಳಲ್ಲಿ ಬಿ.ಇಡಿ. ತರಬೇತಿ ಪಡೆದ ಬೋಧಕರನ್ನು ನೇಮಿಸಿಕೊಳ್ಳಲಾಗುತ್ತಿದೆ. ತರಬೇತಿಯ ಹಂತದಲ್ಲಿ ಇವರಿಗೆ ಕನ್ನಡ ಭಾಷೆಯ ಪರಿಚಯ ಮತ್ತು ಬೋಧನಾ ವಿಧಾನಗಳನ್ನು ಪ್ರಾಯೋಗಿಕ ಪಾಠಗಳ ಮೂಲಕ ಕಲಿಸಲಾಗುತ್ತದೆ. ಇದು ಪ್ರಚಲಿತ ಶಿಕ್ಷಣ ವ್ಯವಸ್ಥೆಯನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ. ಆದರೆ ರಾಷ್ಟ್ರೀಯ ಪಠ್ಯಕ್ರಮದ ಅಂಶಗಳ ಪ್ರಕಾರ ಕನ್ನಡ ಭಾಷಾ ಕಲಿಕೆ ಮತ್ತು ಬೋಧನೆಯಲ್ಲಿರುವ ಸಮಸ್ಯೆ ಮತ್ತು ಸವಾಲುಗಳನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ.

ಪ್ರಾದೇಶಿಕ ಭಾಷಾ ಭಿನ್ನತೆಯಿರುವ ಬೋಧಕರನ್ನು ನೇರ ನೇಮಕಾತಿಯ ಮೂಲಕ ಕರ್ನಾಟಕದಾದ್ಯಂತ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಕಲಬುರಗಿಯ ಕಡೆಯವರು ಬೆಂಗಳೂರಿನಲ್ಲಿ, ಮಂಡ್ಯದ ಕಡೆಯ ಬೋಧಕರು ಕಲಬುರಗಿಯ ಕಡೆ ಬಂದು ಬೋಧಿಸುವಾಗ ಕನ್ನಡ ಭಾಷಾ ಸಮಸ್ಯೆಯು ಅವರಿಗೆ ಸವಾಲಾಗಿ ಎದುರಿಸಬೇಕಾಗುತ್ತದೆ. ಪಠ್ಯಪುಸ್ತಕದ ಭಾಷೆಯು ಗ್ರಂಥಸ್ಥ ಭಾಷೆಯಾಗಿರುವುದರಿಂದ ಎಲ್ಲರಿಗೂ ಅರ್ಥವಾಗುತ್ತದೆ. ಆದರೆ ಪ್ರಾದೇಶಿಕ ಭಾಷಾ ಭಿನ್ನತೆಯಿರುವ ಬೋಧಕರು ತಾವು ಬೋಧಿಸುತ್ತಿರುವ ಪರಿಸರದಲ್ಲಿನ ಭಾಷೆಯನ್ನು ಬೋಧಿಸಬೇಕು. ಆಗ ಕನ್ನಡ ಭಾಷಾ ಕಲಿಕಾರ್ಥಿಗಳು ಭಾಷಾ ಕಲಿಕೆಯ ಸಮಸ್ಯೆಯನ್ನು ಎದುರಿಸುವುದಿಲ್ಲ. ಕನ್ನಡ ಭಾಷಾ

ಕಲಿಕಾರ್ಥಿಗಳಲ್ಲಿ ಪೂರ್ವ ನಿರ್ಧಾರಿತವಾದ ಪರಿಸರದ ಭಾಷೆಯ ಪ್ರಭಾವದಿಂದಾಗಿ ಪಠ್ಯಪುಸ್ತಕದ ಗದ್ಯ ಮತ್ತು ಪದ್ಯಗಳ ಭಾಷೆಯ ಕಲಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಾರೆ. ಈ ಸಮಸ್ಯೆಯಿಂದ ಪರಿಹಾರ ಕಂಡುಕೊಳ್ಳುವುದೇ ಕಲಿಕಾರ್ಥಿಗಳಿಗೆ ಸವಾಲೆನಿಸುತ್ತದೆ.

೧.೨. ಅಧ್ಯಯನದ ಉದ್ದೇಶ

ಕರ್ನಾಟಕದ ಭೌಗೋಳಿಕ ಪರಿಸರವನ್ನು ಗಮನಿಸಿದಾಗ ಕರ್ನಾಟಕದ ಮೇಲೆ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳನಾಡು, ಕೇರಳ ರಾಜ್ಯಗಳ ಪ್ರಭಾವ ಪಸರಿಸಿರುವುದು ತಿಳಿದುಬರುತ್ತದೆ. ನೆರೆ ರಾಜ್ಯಗಳ ಪ್ರಭಾವವು ಕರ್ನಾಟಕದ ನೆಲ, ಜಲ, ಸಂಸ್ಕೃತಿಯ ಮೇಲೆ ಅಷ್ಟೆ ಅಲ್ಲದೆ ಕನ್ನಡ ಭಾಷೆಯ ಮೇಲೂ ಪ್ರಭಾವ ಬೀರಿದೆ. ಕನ್ನಡಿಗರ ಮಾತೃಭಾಷೆ ಕನ್ನಡ ಎಂದು ಹೇಳುವ ಎಷ್ಟು ಕನ್ನಡಿಗರು ತಮ್ಮ ಮನೆಯಲ್ಲಿ ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದಾರೆಯೇ? ಕರ್ನಾಟದ ಗಡಿಭಾಗದಲ್ಲಿ ವಾಸಿಸುವ ಎಷ್ಟೋ ಕನ್ನಡಿಗರಿಗೆ ನೆರೆ ರಾಜ್ಯದ ಭಾಷೆಯ ಪ್ರಭಾವದಿಂದಾಗಿ ಕನ್ನಡ ಭಾಷೆಯ ಜೊತೆಗೆ ಬೇರೊಂದು ಭಾಷೆಯನ್ನು ಬಲ್ಲವರಾಗಿರುತ್ತಾರೆ.

ಇಂತವರನ್ನು ದ್ವಿಭಾಷಿಕರು ಎಂದು ಕರೆದರೆ ಕನ್ನಡ ಒಂದೇ ಭಾಷೆಯನ್ನು ಮಾತನಾಡುವವರಿಗೆ ಏಕಭಾಷಿಕರು ಎಂದು ಕರೆಯುತ್ತೇವೆ. ಹೀಗಾಗಿ ಭೌಗೋಳಿಕ ಭಾಷಾ ಹಿನ್ನೆಲೆಯಾಗಿ ಮೈಸೂರು ಕನ್ನಡ, ಧಾರವಾಡ ಕನ್ನಡ, ಕಲಬುರಗಿ ಕನ್ನಡ, ಮಂಗಳೂರು ಕನ್ನಡಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಇಂತಹ ಕನ್ನಡ ಭಾಷಿಕ ಹಿನ್ನೆಲೆಯುಳ್ಳ ಕರ್ನಾಟಕದಲ್ಲಿ ಏಕಕಾಲದಲ್ಲಿಯೇ ಪ್ರಾದೇಶಿಕ ಭಾಷಾ ಭಿನ್ನತೆಯುಳ್ಳ ಭಾಷೆಗಳು ಬಳಕೆಯಾಗುತ್ತಿವೆ. ಈ ಭಾಷಿಕ ಹಿನ್ನೆಲೆಯಿಂದ ನೋಡುವುದಾದರೆ ಪ್ರೌಢಶಾಲೆಯಲ್ಲಿ ಕನ್ನಡ ಭಾಷೆಯನ್ನು ಕಲಿಯುತ್ತಿರುವ ಕಲಿಕಾರ್ಥಿಗಳನ್ನು ಗಮನಿಸಿದರೆ ಕಲಿಕಾರ್ಥಿಗಳಲ್ಲಿ ಕನ್ನಡ ಭಾಷಾ ಸಮಸ್ಯೆ ಇದೆ ಎಂಬ ಕೂಗು ಕೇಳುತ್ತಿದ್ದೇವೆ. ಕಲಿಕಾರ್ಥಿಯ ಮನೆ ಮಾತು ಮತ್ತು ಪರಿಸರದ ಭಾಷೆ ಕನ್ನಡವಾಗಿದ್ದರೂ ಸಹ ಪ್ರೌಢ ಶಾಲೆಯಲ್ಲಿ ಕನ್ನಡ ಭಾಷೆ ಕಲಿಯುವಾಗ ಸಮಸ್ಯೆ ಎದುರಿಸುತ್ತಿದ್ದಾರೆ ಇದಕ್ಕೆ ಕಾರಣಗಳೇನು? ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ.

೨೦೦೫ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ಕನ್ನಡ ಭಾಷಾ ಪಠ್ಯಪುಸ್ತಕಗಳು ರಚನೆಗೊಂಡಿವೆ. ಈ ಪಠ್ಯಕ್ರಮವು ಪ್ರಾದೇಶಿಕ ಭಾಷಾ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ರಚಿಸಲಾಗಿದೆ. ಆದರೂ ಭಾಷಾ ಕಲಿಕೆಯಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರತಿ ವರ್ಷ ಕಲಿಕೆ ಮತ್ತು ಬೋಧನೆಯಲ್ಲಿನ ಸಮಸ್ಯೆಗಳ ಪರಿಹಾರಕ್ಕೆಂದೆ ಸರಕಾರವು ರಚನಾ I, ರಚನಾ II, ಸಾಧನಾ, ಸಾಧನಾ ಪುಷ್ಟಿ, ವಿಷಯ ಸಂಪದೀಕರಣದಂತಹ ಹಲವಾರು ತರಬೇತಿಗಳನ್ನು ನೀಡುತ್ತಿದೆ. ಆದರೂ ಬೋಧನೆ ಮತ್ತು ಕಲಿಕೆಯಲ್ಲಿನ ಸಮಸ್ಯೆಗಳಿಗೆ ಮುಕ್ತಿ ಸಿಗಲಿಲ್ಲ. ಬೋಧನೆ ಮತ್ತು ಪಠ್ಯಕೂ ಒಂದು ಪರಸ್ಪರ ಅವಿನಾಭಾವ ಸಂಬಂಧವಿರುತ್ತದೆ. ದ್ವಿತೀಯ ಭಾಷೆ ಮತ್ತು ತೃತೀಯ ಭಾಷೆಯನ್ನು ಬೋಧಿಸುವುದಕ್ಕೆ

ಬಳಸುವ ವಿಧಾನವೆ ಪ್ರಥಮ ಭಾಷೆ ಬೋಧಿಸುವುದಕ್ಕೂ ಬಳಸುತ್ತಿರುವುದು ಸಮಸ್ಯೆಗೆ ಕಾರಣವಾಗಿದೆ. ಪ್ರೌಢ ಶಾಲೆಯ ಹಂತಕ್ಕೆ ಬರುವಷ್ಟರಲ್ಲಿ ಕನ್ನಡ ಭಾಷಾ ಕಲಿಕಾರ್ಥಿಯು ತನ್ನ ಮನೆಯ ಪರಿಸರದಲ್ಲಿ ಕನ್ನಡ ಭಾಷೆಯನ್ನು ಕಲಿತಿರುತ್ತಾರೆ. ಹಾಗೂ ಪ್ರಾಥಮಿಕ ಶಾಲಾ ಕಲಿಕೆಯಲ್ಲಿ ಬರವಣಿಗೆಯ ಕಾರ್ಯದಲ್ಲಿ ಅಕ್ಷರ ಮಾಲೆಯನ್ನು ಅಲ್ಪ ಸ್ವಲ್ಪ ಬರವಣಿಗೆಯನ್ನು ಕಲಿತ್ತಿರುತ್ತಾರೆ. ಪ್ರೌಢ ಶಾಲೆಯಲ್ಲಿ ಕಲಿಕಾರ್ಥಿಗಳಿಗೆ ಸ್ಪಷ್ಟವಾದ ಬರವಣಿಗೆ ಮತ್ತು ಪಠ್ಯದ ಭಾಷೆಯನ್ನು ಮಾತ್ರ ಕಲಿಸಬೇಕಾಗಿದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಅಂತಸ್ತುಗಳು ಬೇರೆ ಬೇರೆಯಾಗಿರುವ ಮಕ್ಕಳಿಗೆ ಒಂದೇ ರೀತಿಯ ಬೋಧನಾ ವಿಧಾನದಿಂದ ಬೋಧಿಸುತ್ತಿರುವುದು ಬೋಧನೆಗೆ ಮತ್ತೊಂದು ತೊಡಕಾಗಿದೆ. ಆದರೆ ಶಾಲಾ ಪ್ರಾರಂಭದಲ್ಲಿ ಜೂನ್ ತಿಂಗಳಿನಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಮುಂದೆ ತರುವುದಕ್ಕಾಗಿಯೆ ಒಟ್ಟು ೧೮ ಅವಧಿಗಳನ್ನು ಮಿಸಲಾಗಿಟ್ಟಿರುತ್ತಾರೆ. ಈ ೧೮ ಅವಧಿಗಳಲ್ಲಿ ಕಲಿಕಾರ್ಥಿಯಲ್ಲಿ ಯಾವ ಕಲಿಕಾ ಸಾಮರ್ಥ್ಯದ ಸಮಸ್ಯೆ (ಬರವಣಿಗೆ, ಓದುಗಾರಿಕೆ, ಗುಣಿತಾಕ್ಷರ, ಸಂಯುಕ್ತಾಕ್ಷರ) ಇದೆ ಎಂದು ಗುರುತಿಸಿ ಅವರಿಗೆ ತರಬೇತಿಯನ್ನು ನೀಡಿ ಕಲಿಕೆಗೆ ಸಿದ್ದಪಡಿಸುವಂತಹ ತರಬೇತಿಯೇ ಸೇತುಬಂಧ ಕಾರ್ಯಕ್ರಮವಾಗಿರುತ್ತದೆ. ಆದರೆ ಈ ಹಂತದಲ್ಲಿ ಮಕ್ಕಳು ಶಾಲೆಗೆ ಬರುವುದೇ ಇಲ್ಲ ಆದ್ದರಿಂದ ಈ ಸೇತುಬಂಧ ಕಾರ್ಯಕ್ರಮ ಕೇವಲ ಕಡತಕ್ಕೆ ಮಾತ್ರ ಸೀಮಿತವಾಗಿ ಬೀಡುತ್ತದೆ. ಜೂನ್ ಅಂತ್ಯದಲ್ಲಿ ಎಲ್ಲಾ ಮಕ್ಕಳು ಶಾಲೆಗೆ ಬಂದಾಗ ಕಲಿಕೆಯಲ್ಲಿ ಹಿಂದುಳಿದ ಮತ್ತು ಮುಂದುವರೆದ ಮಕ್ಕಳನ್ನು ಒಂದೇ ಸೂರಿನ ಕೆಳಗೆ ಬೋಧಿಸಲಾಗುತ್ತದೆ. ಆದ್ದರಿಂದ ಸೇತುಬಂಧ ಕಾರ್ಯಕ್ರಮದ ವಿಫಲತೆಯಿಂದಾಗಿ ಕಲಿಕೆ ಮತ್ತು ಬೋಧನೆ ಎರಡಕ್ಕೂ ಮುಂದಿನ ಹಂತದಲ್ಲಿ ಸಮಸ್ಯೆಯಾಗುತ್ತದೆ. ಪರಿಸರದ ಭಾಷೆ ಮತ್ತು ಪಠ್ಯದ ಭಾಷೆಯ ನಡುವಿನ ವ್ಯತ್ಯಾಸವನ್ನು ಕಲಿಕಾರ್ಥಿಯು ಗಮನಿಸದೆ ಕಲಿಯುತ್ತಿರುವುದರಿಂದಲೋ ಅಥವಾ ಬೋಧಕರು ಅವೇರಡರ ವ್ಯತ್ಯಾಸವನ್ನು ಬೋಧಿಸುವಾಗ ಕಲಿಕಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಹೇಳದೆ ಇರುವುದರಿಂದಲೋ ಕನ್ನಡ ಭಾಷಾ ಕಲಿಕಾರ್ಥಿಗಳು ಅಲ್ಪಪ್ರಾಣ, ಮಹಾಪ್ರಾಣ, ದ್ವಿತ್ವಾಕ್ಷರ, ಅರ್ಕಾವತ್ತು ಶ, ಷ, ಸ ಗಳು ಇತ್ಯಾದಿ ಅಂಶಗಳನ್ನು ಬರೆಯುವಾಗ ಮತ್ತು ಓದುವಾಗ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಗೆ ಕಾರಣ ಶಿಕ್ಷಣ ಇಲಾಖೆಯೋ? ಬೋಧಕರೋ? ಪಠ್ಯಮಸ್ತಕವೋ? ಅಥವಾ ಕಲಿಕಾರ್ಥಿಗಳೋ? ಎಂದು ಗಮನಿಸಬೇಕಾಗಿದೆ. ಯಾವ ಮಾದರಿಯಲ್ಲಿ ಬೋಧಿಸುತ್ತಿದ್ದಾರೆ, ಅವರ ಬೋಧನಾ ವಿಧಾನ ಹೇಗಿರಬೇಕೆಂದು ಸರಕಾರ ನಿರ್ದೇಶಿಸಿದೆ, ಇಲಾಖೆಯು ನೀಡುತ್ತಿರಯವಂತಹ ಬೋಧನಾ ವಿಧಾನಗಳು ಸರಿಯಾಗಿವೆಯೇ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸುತ್ತಿದ್ದೆನೆ. ಹಾಗೆ ಪಠ್ಯದ ಭಾಷೆಯು ಏಕರೂಪವಾಗಿರಬೇಕು ಎಲ್ಲರಿಗೂ ಅರ್ಥವಾಗುವಂತಿರಬೇಕು ಎನ್ನುವ ದೃಷ್ಟಿಯಿಂದ ರಚನೆಗೊಂಡರೂ ಸಹ ಪಠ್ಯ ಮಸ್ತಕದ ಭಾಷೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅದೇ ರೀತಿಯಾಗಿ ಕಲಿಕಾರ್ಥಿಗಳಲ್ಲಿಯ ಬರವಣಿಗೆ ಮತ್ತು

[illegible]

ಓದುಗಾರಿಕೆಯಲ್ಲಿ ಆಡು ಭಾಷೆಯ ಬಳಕೆಯಿಂದ ಸಮಸ್ಯೆ ಎದುರಿಸುತ್ತಿರುವುದು ಭಾಷಾ ವೈಜ್ಞಾನಿಕ ಹಿನ್ನೆಲೆಯಾಗಿ ಇದು ಒಂದು ಸಮಸ್ಯೆಯೋ? ಇಲ್ಲವೋ? ಎಂದು ಚರ್ಚಿಸಲಾಗಿದೆ.

ಈ ಎಲ್ಲಾ ಅಂಶಗಳಿಗೆ ಪೂರಕವಾಗಿ ಡಿ.ಎನ್.ಶಂಕರಭಟ್ಟ, ಕೆ.ವಿ.ನಾರಾಯಣ, ಆರ್.ಛಲಪತಿಯವರ ಆಲೋಚನೆಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಇವರ ಆಲೋಚನೆಗಳಿಗೆ ಪೂರಕವಾಗಿ ನನ್ನ ಸಮರ್ಥನೆಯಿದ್ದರೂ ನನ್ನ ಅಧ್ಯಯನದ ಸಂದರ್ಭದಲ್ಲಿ ಅದನ್ನು ಹೆಚ್ಚು ಪರಿಗಣಿಸದೆ ಶಿಕ್ಷಣ ವ್ಯವಸ್ಥೆಯ ಒಳಗಡೆ ಜಾರಿಯಲ್ಲಿರುವ ಸರಿ ತಪ್ಪುಗಳ ಹಿನ್ನೆಲೆಯಲ್ಲಿ ಮಾತ್ರ ವಿಶ್ಲೇಷಣೆ ಕೈಗೊಂಡಿದ್ದೇನೆ. ಈ ಹಿನ್ನಲೆಯಲ್ಲಿ ಮಾತೃಭಾಷೆ ಕನ್ನಡ ಹಾಗೂ ಮನೆಯಲ್ಲಿ ಮಾತನಾಡುವ ಭಾಷೆ ಕನ್ನಡವೇ ಆಗಿದ್ದರೂ ಕಲಿಕೆಯಲ್ಲಿ ಮಕ್ಕಳ ಸಮಸ್ಯೆ ಎದುರಿಸುತ್ತಿರುವದರಿಂದ ಇದು ಬೋಧಕರಿಗೂ ಮತ್ತು ಮಕ್ಕಳಿಗೂ ಸಮಸ್ಯೆ ಮತ್ತು ಸವಾಲಾಗಿದೆ. ಇಂತಹ ಸಮಸ್ಯೆ ಮತ್ತು ಸವಾಲನ್ನು ಸಂಪೂರ್ಣವಾಗಿ ಗ್ರಹಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಕ್ಷೇತ್ರ ಕಾರ್ಯ ಅಧ್ಯಯನವಾದ್ದರಿಂದ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕಲಬುರಗಿ ಜಿಲ್ಲೆಯನ್ನೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಪ್ರಮುಖ ಕಾರಣವೆಂದರೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿಯೂ ಅತ್ಯಂತ ಹಿಂದುಳಿದ ಪ್ರದೇಶವಾದ್ದರಿಂದ ಈ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹೈದರಾಬಾದ ಕರ್ನಾಟಕದ ಪ್ರಮುಖ ಕೇಂದ್ರಬಿಂದು ಎಂದರೆ ಈ ಕಲಬುರಗಿ ಜಿಲ್ಲೆ ಆದ್ದರಿಂದ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕನ್ನು ಅಧ್ಯಯನಕ್ಕಾಗಿ ಗುರುತಿಸಿಕೊಳ್ಳಲಾಗಿದೆ. ಪ್ರೌಢ ಶಾಲೆಯಲ್ಲಿ ಈಗಾಗಲೇ ಭಾಷಾ ಬೋಧನೆ ಮತ್ತು ಕಲಿಕೆ ಕುರಿತಂತೆ ಕೆಲವು ಅಧ್ಯಯನಗಳು ನಡೆದಿವೆ. ಆ ಎಲ್ಲಾ ಅಧ್ಯಯನಗಳು ಉರ್ದು ಭಾಷಿಕ ಮಕ್ಕಳನ್ನು ಅನುಲಕ್ಷಿಸಿ, ಲಂಬಾಣಿ ಮಕ್ಕಳನ್ನು ಅನುಲಕ್ಷಿಸಿ ಹಾಗೂ ಕಲಿಕಾರ್ಥಿಗಳಲ್ಲಿರುವ ಓದುಗಾರಿಕೆ ಮತ್ತು ಬರವಣಿಗೆಯಲ್ಲಿರುವ ಸಮಸ್ಯೆಯನ್ನು ಮಾತ್ರ ಗುರುತಿಸುವಲ್ಲಿ ಶಕ್ತವಾಗಿವೆ. ಆದರೆ ಈ ಅಧ್ಯಯನವು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಕನ್ನಡ ಮಾತೃಭಾಷೆ ಮಕ್ಕಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದ್ದು ಯಾವ ವರ್ಗದ ಮಕ್ಕಳಲ್ಲಿ ಹೆಚ್ಚಿನ ಸಮಸ್ಯೆ ಇದೆ ಎನ್ನುವುದನ್ನು ಈ ಅಧ್ಯಯನ ತಿಳಿಸುತ್ತದೆ. ಹಾಗಾಗಿ ಹಿಂದಿನ ಅಧ್ಯಯನಗಳಿಂದ ಈ ಅಧ್ಯಯನ ಭಿನ್ನವಾಗಿದೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಸಮಕಾಲೀನ ಮತ್ತು ಹಿಂದಿನ ಕರ್ನಾಟಕ ಸರಕಾರದಿಂದ ಮುದ್ರಣಗೊಂಡ ೮, ೯, ೧೦ನೇ ತರಗತಿಯ ಕನ್ನಡ ಭಾಷಾ ಪಠ್ಯ ಪುಸ್ತಕಗಳನ್ನು (ಪ್ರಥಮ ಭಾಷೆ), ಕ್ಷೇತ್ರ ಕಾರ್ಯ ಅಧ್ಯಯನದ ಮಾಹಿತಿಯನ್ನು, ಕನ್ನಡ ಭಾಷಾ ಬೋಧಕರನ್ನು ಮತ್ತು ಭಾಷಾ ಬೋಧಕರಿಗಾಗಿ ಶಿಕ್ಷಣ ಇಲಾಖೆ ಕೈಗೊಂಡ ತರಬೇತಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಕನ್ನಡ ಭಾಷಾ ಬೋಧಕರಿಗಾಗಿ

ನೀಡುತ್ತಿರುವಂತ ಬೋಧನಾ ತರಬೇತಿಗಳಲ್ಲಿ ಸರಿಯಾದ ರೂಪ ಯಾವುದು ಎಂದು ಗುರುತಿಸುವುದು ಅಧ್ಯನದ ಒಂದು ಮಿತಿಯೂ ಆಗಿದೆ. ಏಕೆಂದರೆ ಈ ಅಧ್ಯಯನವು ಸಂಶೋಧನಾ ಮಹಾ ಪ್ರಬಂಧವಾಗಿರುವುದರಿಂದ ಇದು ಅಧ್ಯಯನದ ಮಿತಿಯೂ ಹೌದು ವ್ಯಾಪ್ತಿಯೂ ಹೌದು.

ಜೇವರ್ಗಿ ತಾಲೂಕಿನ ಸರಕಾರಿ ಪ್ರೌಢ ಶಾಲೆಗಳ ಮಾಹಿತಿ

ಕ್ರ.ಸಂ.	ಶಾಲೆಯ ಹೆಸರು	ಸ್ಥಳ
೧.	ಸ.ಪ್ರೌಢ ಶಾಲೆ (ಬಾಲಕರ)	ಜೇವರ್ಗಿ
೨.	ಸ.ಕನ್ಯಾ ಪ್ರೌಢಶಾಲೆ	ಜೇವರ್ಗಿ
೩.	ಸ.ಪ್ರೌ.ಶಾಲೆ	ಜೇವರ್ಗಿ
೪.	ಸ.ಪ್ರೌ.ಶಾಲೆ	ಆಂದೋಲಾ
೫.	ಸ.ಪ್ರೌ.ಶಾಲೆ	ಅಂಕಲಗಾ
೬.	ಸ.ಪ್ರೌ.ಶಾಲೆ	ಬಿರಾಳ (ಬಿ)
೭.	ಸ.ಪ್ರೌ.ಶಾಲೆ	ಬಿಳವಾರ
೮.	ಸ.ಪ್ರೌ.ಶಾಲೆ	ಹಿಪ್ಪರಗಾ
೯.	ಸ.ಪ್ರೌ.ಶಾಲೆ	ಇಜೇರಿ
೧೦.	ಸ.ಪ್ರೌ.ಶಾಲೆ	ಮಾಗಣಗೇರಾ
೧೧.	ಸ.ಪ್ರೌ.ಶಾಲೆ	ಮಂದೇವಾಲ
೧೨.	ಸ.ಪ್ರೌ.ಶಾಲೆ	ನೆಲೋಗಿ
೧೩.	ಸ.ಪ್ರೌ.ಶಾಲೆ	ನರಿಬೋಳ
೧೪.	ಸ.ಪ್ರೌ.ಶಾಲೆ	ಅರಳಗುಂಡಗಿ
೧೫.	ಸ.ಪ್ರೌ.ಶಾಲೆ	ಕೋಳಕೂರು
೧೬.	ಸ.ಪ್ರೌ.ಶಾಲೆ	ಮಳ್ಳಿ
೧೭.	ಸ.ಪ್ರೌ.ಶಾಲೆ	ಆಲೂರು
೧೮.	ಸ.ಪ್ರೌ.ಶಾಲೆ	ಹರವಾಳ
೧೯.	ಸ.ಪ್ರೌ.ಶಾಲೆ	ಯಲಗೋಡ
೨೦.	ಸ.ಪ್ರೌ.ಶಾಲೆ	ಬಳಬಟ್ಟಿ
೨೧.	ಸ.ಪ್ರೌ.ಶಾಲೆ ಕನ್ಯಾ	ಯಡ್ರಾಮಿ
೨೨.	ಸ.ಪ.ಪೂ. ಕಾಲೇಜು	ಯಡ್ರಾಮಿ

[illegible]

೨೩. ಸ.ಪ್ರೌ.ಶಾಲೆ	ಗವನಳ್ಳಿ
೨೪. ಸ.ಪ್ರೌ.ಶಾಲೆ	ಕೂಡಿದರ್ಗಾ
೨೫. ಸ.ಪ್ರೌ.ಶಾಲೆ	ಯಡ್ರಾಮಿ
೨೬. ಸ.ಪ್ರೌ.ಶಾಲೆ	ಹರನೂರ
೨೭. ಸ.ಪ್ರೌ.ಶಾಲೆ	ಕಣಮೇಶ್ವರ
೨೮. ಸ.ಪ್ರೌ.ಶಾಲೆ	ಇಟಗಾ
೨೯. ಸ.ಪ್ರೌ.ಶಾಲೆ	ಕೊಂಡಗೂಳಿ
೩೦. ಸ.ಪ್ರೌ.ಶಾಲೆ	ಗುಡೂರು ಎಸ್.ಎ.
೩೧. ಸ.ಪ್ರೌ.ಶಾಲೆ	ಕಲ್ಲೂರ ಕೆ
೩೨. ಸ.ಪ್ರೌ.ಶಾಲೆ	ಬಳುಂಡಗಿ
೩೩. ಸ.ಪ್ರೌ.ಶಾಲೆ	ಕಡಕೋಳ
೩೪. ಸ.ಪ್ರೌ.ಶಾಲೆ	ಇಜೇರಿ
೩೫. ಸ.ಪ್ರೌ.ಶಾಲೆ	ಕಾಸರಭೋಸಗಾ
೩೬. ಸ.ಪ್ರೌ.ಶಾಲೆ	ಕುರಳಗೇರಾ

ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳ ವಿವರ


೧. ಅಮರೇಶ್ವರ ಪ್ರೌಢಶಾಲೆ	ವಡಗೇರಾ
೨. ಡಾ.ಬಿ.ಆರ್. ಅಂಬೇಡ್ಕರ್ ಪ್ರೌಢಶಾಲೆ	ಜೇವರ್ಗಿ
೩. ಷಣ್ಮುಕ ಶಿವಯೋಗಿ ಪ್ರೌಢಶಾಲೆ	ಜೇವರ್ಗಿ
೪. ಕೂಡಲಸಂಗಮ ಪ್ರೌಢಶಾಲೆ	ಜೇವರ್ಗಿ
೫. ಶ್ರೀ ಶಿವಯೋಗಿ ಶಿವಾನಂದ ಪ್ರೌಢಶಾಲೆ	ಸೊನ್ನ
೬. ಜೆ.ಟಿ.ವಿ.ಪಿ. ಪ್ರೌಢಶಾಲೆ	ಜೇವರ್ಗಿ
೭. ಮಹಾಲಕ್ಷ್ಮಿ ಪ್ರೌಢಶಾಲೆ	ಜೇವರ್ಗಿ
೮. ಶಾಂತಿನಿಕೇತನ ಪ್ರೌಢಶಾಲೆ	ಜೇವರ್ಗಿ
೯. ಶಾಂತಿನಿಕೇತನ ಪ್ರೌಢಶಾಲೆ	ಮಂದೇವಾಲ
೧೦. ಕಡಕೋಳ ಮಡಿವಾಳೇಶ್ವರ ಪ್ರೌಢಶಾಲೆ	ಜೇವರ್ಗಿ
೧೧. ನೂರಂದೇಶ್ವರ ಪ್ರೌಢಶಾಲೆ	ಜೇವರ್ಗಿ
೧೨. ವಿಶ್ವಗುರು ಸಿದ್ಧಾರ್ಥ ಪ್ರೌಢಶಾಲೆ	ಕಲ್ಲೂರು(ಕೆ)

೧೩. ಸಿಸ್ಟರ್ ನಿವೇದಿತಾ ಪ್ರೌಢಶಾಲೆ ಜೇವರ್ಗಿ

೧೪. ವಿಜಯ ವಿದ್ಯಾಲಯ ಪ್ರೌಢಶಾಲೆ ಜೇವರ್ಗಿ

೧೫. ಶ್ರೀ ಸಂಗನಬಸಯ್ಯ ಪ್ರೌಢಶಾಲೆ ಜೇವರ್ಗಿ

ಜೇವರ್ಗಿ ತಾಲೂಕು



೧.೪. ಅಧ್ಯಯನದ ವಿಧಾನ

ಪ್ರಸ್ತುತ ಪ್ರೌಢಶಾಲೆಯಲ್ಲಿ ಬೋಧಿಸುತ್ತಿರುವ ಕನ್ನಡ ಭಾಷಾ ಬೋಧಕರು ಮತ್ತು ೮,೯,೧೦ನೇ ತರಗತಿಯಲ್ಲಿ ಮಾತೃಭಾಷೆ ಕನ್ನಡವನ್ನು ಕಲಿಯುತ್ತಿರುವ ಕಲಿಕಾರ್ಥಿಗಳನ್ನು ಅನುಲಕ್ಷಿಸಿ ಪ್ರಶ್ನಾವಳಿಗಳನ್ನು ರಚಿಸಿಕೊಂಡು ಕ್ಷೇತ್ರಕಾರ್ಯ ವಿಧಾನದ ಮೂಲಕ ಮಾಹಿತಿಯನ್ನು ಸಂಗ್ರಹಿಸಿಕೊಂಡು ಸಂಗ್ರಹಿಸಿದ ಮಾಹಿತಿಯನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಮಕ್ಕಳನ್ನು ಅನ್ವಯಿಸಿಕೊಂಡು ಅವರ ಸಾಮಾಜಿಕ ಭಾಷೆಯನ್ನು ಬರವಣಿಗೆಯ ಭಾಷೆಯಲ್ಲಿ ಮತ್ತು ಓದುಗಾರಿಕೆಯಲ್ಲಿ ಯಾವ ರೀತಿಯಾಗಿ ಬಳಕೆಯಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಆನ್ವಯಿಕ ಮತ್ತು ಸಮಾಜೋಭಾಷಿಕ ಅಧ್ಯಯನದ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಆನ್ವಯಿಕ ಅಧ್ಯಯನದ ಮೂಲಕ ಪ್ರಸ್ತುತ ಅಧ್ಯಯನವನ್ನು ಸಮಾಜೋಭಾಷಿಕ ಅಧ್ಯಯನದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು "ಪ್ರೌಢಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು" ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಮಾಡಲಾಗಿದೆ. ಭಾಷಾ ಕಲಿಕೆ ಮತ್ತು ಭಾಷಾ ಬೋಧನೆ ಎಂಬ ಪದಗಳು ವಿಶಾಲಾರ್ಥ ಹೊಂದಿದ್ದರು ಸಹ ಕನ್ನಡ ಭಾಷಾ ಕಲಿಕೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಬೋಧನೆ ಮತ್ತು ಕಲಿಕೆಯ ಸಂದರ್ಭದಲ್ಲಿ ಬೋಧಕ ಮತ್ತು ಕಲಿಕಾರ್ಥಿಗಳು ಎದುರಿಸುವ ಸಮಸ್ಯೆಗಳನ್ನು ಕೇವಲ ಭಾಷಿಕ ನೆಲೆಯಲ್ಲಿ ನೋಡದೆ ಸಮಾಜೋಭಾಷಿಕ ಹಿನ್ನೆಲೆಯಾಗಿ ನೋಡುವ ಪ್ರಯತ್ನ ಮಾಡಲಾಗಿದೆ.

ಈ ಅಧ್ಯಯನ ಒಟ್ಟು ಏಳು ಅಧ್ಯಾಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಅಧ್ಯಾಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕನ್ನಡ ಭಾಷಾ ಕಲಿಕೆ ಮತ್ತು ಬೋಧನೆಯ ಹಿನ್ನೆಲೆಯಲ್ಲಿ ಚರ್ಚಿಸಿ ಸಮಾಜೋಭಾಷಿಕ ಅಧ್ಯಯನದ ಮೂಲಕ ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಾಯ : ೧ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

ಈ ಅಧ್ಯಾಯದಲ್ಲಿ ಪ್ರಸ್ತಾವನೆಯ ಮೂಲಕ ಅಧ್ಯಯನದ ಉದ್ದೇಶವನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ನಂತರ ಅಧ್ಯಯನ ಕ್ಷೇತ್ರಕ್ಕೆ ಬಳಸಿಕೊಂಡ ವ್ಯಾಪ್ತಿ ಹಾಗೂ ಅಧ್ಯಯನದ ವಿಧಾನವನ್ನು ತಿಳಿಸಲಾಗಿದೆ. ಈ ರೀತಿಯಾಗಿ ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ : ೨. ಅಧ್ಯಯನದ ಸಮೀಕ್ಷೆ

ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಪಿಎಚ್.ಡಿ. ಮಹಾಪ್ರಬಂಧಗಳು, ಎಂ.ಫಿಲ್. ಸಂಪ್ರಬಂಧಗಳು, ಎಂ.ಇಡಿ ಸ್ನಾತಕೋತ್ತರ ಪದವಿಗಾಗಿ ಸಲ್ಲಿಸಿದ ಕಿರುಪ್ರಬಂಧಗಳು,

[illegible]

ಸಂಶೋಧನಾ ಲೇಖನಗಳು ಹಾಗೂ ಕೃತಿ ಮತ್ತು ನಿಯತಕಾಲಿಕೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಸಮೀಕ್ಷಿಸಲಾಗಿದೆ.

ಅಧ್ಯಾಯ : ೩. ಭಾಷಾ ಬೋಧನೆಯ ವೈಶಿಷ್ಟ್ಯಗಳು

ಈ ಅಧ್ಯಾಯದಲ್ಲಿ ಭಾಷಾ ಬೋಧನೆಯ ಅರ್ಥ ಮತ್ತು ವ್ಯಾಖ್ಯೆಗಳನ್ನು ಚರ್ಚಿಸಲಾಗಿದೆ. ಭಾಷಾ ಬೋಧನೆ (ಕನ್ನಡ) ಕುರಿತು ಸರಕಾರ ಕೈಗೊಂಡ ತರಬೇತಿಗಳು, ಭಾಷಾ ಬೋಧನಾ ಪದ್ಧತಿಯ ಪ್ರಕಾರಗಳು ಮತ್ತು ಬದಲಾಗುತ್ತಿರುವ ಭಾಷಾ ಬೋಧನಾ ಪದ್ಧತಿಯ ಅನುಕೂಲ ಮತ್ತು ಅನಾನುಕೂಲಗಳನ್ನು ಪ್ರಸ್ತುತ ಬೋಧನೆ ಮತ್ತು ಕನ್ನಡ ಭಾಷಾ ಕಲಿಕೆಗೆ ಸಂಬಂಧಿಸಿದಂತೆ ವಿಶ್ಲೇಷಿಸಿ ಚರ್ಚಿಸಲಾಗಿದೆ.

ಅಧ್ಯಾಯ-೪. ಭಾಷಾ ಬೋಧನೆಯಲ್ಲಿ ಬೋಧಕರು ಎದುರಿಸುವ ತೊಡಕುಗಳು

ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷಾ ಬೋಧಕರಿಂದ ಪ್ರಶ್ನಾವಳಿಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿಕೊಂಡು ಮತ್ತು ಉಕ್ತಲೇಖನ ಬರೆಸಿಕೊಳ್ಳಲಾಗಿದೆ. ಅವರು ಬೋಧಿಸುವಾಗ ನೇರವಾಗಿ ಮತ್ತು ಆಡಿಯೋ ಮೂಲಕ ಮಾಹಿತಿ ಸಂಗ್ರಹಿಸಿಕೊಂಡು ಬೋಧಕರು ಉಚ್ಚರಿಸುವಾಗಿನ ಸಮಸ್ಯೆ, ಬರವಣಿಗೆ ಸಮಸ್ಯೆ ಮತ್ತು ಕನ್ನಡ ಭಾಷಾ ಕಲಿಕಾರ್ಥಿ ಕೇಂದ್ರಿತ, ಬೋಧಕ ಕೇಂದ್ರಿತ ಹಾಗೂ ಬೋಧನಾ ಸಂಪನ್ಮೂಲದ ಸಮಸ್ಯೆಗಳನ್ನು ವಿಶ್ಲೇಷಿಸಿ ವಿವರಿಸಲಾಗಿದೆ.

ಅಧ್ಯಾಯ : ೫ ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳು

ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷಾ ಕಲಿಕೆಯಲ್ಲಿ ಓದುಗಾರಿಕೆ, ಬರವಣಿಗೆ ಮತ್ತು ಆಲಿಸುವಿಕೆಯಲ್ಲಿ ಕಲಿಕಾರ್ಥಿಗಳು ಎದುರಿಸುವ ಸಮಸ್ಯೆ ಮತ್ತು ಸವಾಲುಗಳನ್ನು ಕ್ಷೇತ್ರಕಾರ್ಯ ಅಧ್ಯಯನದ (ಪ್ರಶ್ನಾವಳಿಗಳು) ಮೂಲಕ ಮಾಹಿತಿ ಸಂಗ್ರಹಿಸಿ ಸಮಾಜೋಭಾಷಿಕ ಅಧ್ಯಯನದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ : ೬ ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಪಠ್ಯಗಳ ಪಾತ್ರ

ಈ ಅಧ್ಯಾಯದಲ್ಲಿ ಪಠ್ಯದ ಅರ್ಥ ಮತ್ತು ವ್ಯಾಖ್ಯೆಗಳು, ಪಠ್ಯಪುಸ್ತಕದ ಲಕ್ಷಣ ಮತ್ತು ಪ್ರಾಮುಖ್ಯತೆ, ವ್ಯಾಕರಣ ಕಲಿಕೆಯಿಂದ ಭಾಷಾ ಬೋಧನೆ, ಪ್ರಾದೇಶಿಕ ಭಾಷೆಗಳನ್ನು ಪರಿಚಯಿಸುವಲ್ಲಿ ಪಠ್ಯಗಳ ಪಾತ್ರ, ಪ್ರಸ್ತುತ ಪಠ್ಯಗಳ ಭಾಷೆಯ ಸ್ಥೂಲ ನೋಟ, ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆಯ ನಡುವಿನ ವ್ಯತ್ಯಾಸ, ಪಠ್ಯಪುಸ್ತಕ ರಚನೆಯಲ್ಲಿರುವ ಸಮಸ್ಯೆಗಳು ಈ ಎಲ್ಲಾ ಅಂಶಗಳನ್ನು ವಿಶ್ಲೇಷಿಸಿ ಚರ್ಚಿಸಲಾಗಿದೆ.

ಅಧ್ಯಾಯ : ೭ ಸಮಾರೋಪ

ಈ ಅಧ್ಯಾಯವು ಅಧ್ಯಯನದ ಕೊನೆಯ ಭಾಗವಾಗಿದ್ದು ಸಂಶೋಧನೆಯಲ್ಲಿ ಕಂಡುಕೊಂಡ ಒಳನೋಟಗಳನ್ನು ಸಂಕ್ಷಿಪ್ತವಾಗಿ ವಿವರಿಸಿದೆ. ಅಧ್ಯಯನದ ಫಲಿತಗಳು, ಸಾಧ್ಯತೆಗಳನ್ನು ಸಹ ಕೊಡಲಾಗಿದೆ.

ಟಿಪ್ಪಣಿಗಳು

೧. ಶ್ರೀ ಸಿದ್ದೇಶ್ವರ ಸ್ವಾಮಿ, ೨೦೦೧, ***ಅಲ್ಲಮಪ್ರಭುದೇವರ ವಚನ-ನಿರ್ವಚನ,*** ಪುಟ ಸಂಖ್ಯೆ: ೮೧

೨. ಭರತ್ ಭೂಷಣ, ೨೦೦೫, ***ಶಿಕ್ಷಣದ ಆಧಾರಗಳು,*** ಪುಟ ಸಂಖ್ಯೆ: ೨೨೨-೨೬೫

೩. ಸಿರಿ ಕನ್ನಡ ಪ್ರಥಮ ಭಾಷೆ ಪಠ್ಯ ಪುಸ್ತಕ ೮ನೇ ತರಗತಿ, ೨೦೧೨, ಪುಟ ಸಂಖ್ಯೆ: ೩

* * *

ಅಧ್ಯಾಯ : ಎರಡು

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೨.೧. ಪಿಎಚ್.ಡಿ ಮಹಾಪ್ರಬಂಧಗಳು

೨.೨. ಎಂ.ಇಡಿ. ಕಿರು ಪ್ರಬಂಧಗಳು

೨.೩. ಎಂ.ಫಿಲ್ ಸಂಪ್ರಬಂಧಗಳು

೨.೪. ಸಂಶೋಧನಾ ಕೃತಿಗಳು

೨.೫. ನಮ್ಮ ಕನ್ನಡ ಪತ್ರಿಕೆ ಸಂಚಿಕೆಗಳು

೨.೬. ಪತ್ರಿಕಾ ಲೇಖನಗಳು

ಅಧ್ಯಾಯ : ಎರಡು

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

"ಪ್ರೌಢ ಶಾಲಾ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು" ಈ ಶೀರ್ಷಿಕೆಗೆ ಸಂಬಂಧಿಸಿದಂತೆ ಪೂರಕ ಮಾಹಿತಿಗಳನ್ನು ಒದಗಿಸುವಂತಹ ಅಧ್ಯಯನಗಳು ಇದುವರೆಗೆ ನಡೆದಿರುವಂತಹ ಪಿಎಚ್.ಡಿ ಮಹಾಪ್ರಬಂಧಗಳು, ಎಂ.ಫಿಲ್ ಕಿರುಪ್ರಬಂಧಗಳು, ಎಂ.ಇಡಿ ಕಿರುಪ್ರಬಂಧಗಳು, ಸಂಶೋಧನಾ ಕೃತಿಗಳು, ಶಿಕ್ಷಣ ಇಲಾಖೆಯ ಪತ್ರಿಕೆಗಳು ಮತ್ತು ಪತ್ರಿಕಾ ಲೇಖನಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅತ್ಯಂತ ಪ್ರಮುಖವಾದುದ್ದಾಗಿದೆ. ಏಕೆಂದರೆ ಅಧ್ಯಯನ ಸಮೀಕ್ಷೆ ಮಾಡಿದಾಗ ಮಾತ್ರ ಪ್ರಸ್ತುತ ಅಧ್ಯಯನಕ್ಕೆ ಸಂಶೋಧಕರು ಹೊಸದಾಗಿ ತಾವೇನು ಗುರುತಿಸಬೇಕು ಎನ್ನುವುದನ್ನು ಕಂಡುಕೊಳ್ಳಲು ಅಧ್ಯಯನ ಸಮೀಕ್ಷೆಯು ಸಹಾಯಕವಾಗುತ್ತದೆ.

ಪ್ರಸ್ತುತ ಶೀರ್ಷಿಕೆಗೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಕುರಿತು ಹಲವಾರು ರೀತಿಯಲ್ಲಿ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಪಿಎಚ್.ಡಿ, ಎಂ.ಫಿಲ್, ಲೇಖನಗಳು, ಸಂಶೋಧನ ಕೃತಿಗಳು, ಎಂ.ಇಡಿ. ಕಿರುಪ್ರಬಂಧಗಳು, ಸಂಚಿಕೆಗಳು ಪ್ರಮುಖ ಪಾತ್ರವಹಿಸಿವೆ.

೨.೧. ಪಿಎಚ್.ಡಿ ಮಹಾಪ್ರಬಂಧಗಳು

ಎನ್.ಕೆ ಮಂಜುಳಾರವರು "ಮಕ್ಕಳಲ್ಲಿ ವಾಕ್ಯರಚನಾ ನಿಯಮಗಳ ಬೆಳವಣಿಗೆ"(ಕನ್ನಡ ಮಾತೃಭಾಷೆಯ ಮಕ್ಕಳನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಸಂಶೋಧನಾ ಮಹಾ ಪ್ರಬಂಧವನ್ನು ಕೆ.ವಿ.ನಾರಾಯಣರವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೬ರಲ್ಲಿ ಸಲ್ಲಿಸಿದ್ದಾರೆ. ಮೊದಲಿಗೆ ಮೆದುಳಿನ ರಚನೆ ಮತ್ತು ಭಾಷೆಯ ಜೊತೆ ಮೆದುಳಿನ ಸಂಬಂಧವನ್ನು ಕುರಿತು ವಿಶ್ಲೇಷಿಸಿದ್ದಾರೆ. ಮಕ್ಕಳು ಯಾವ ರೀತಿ ಭಾಷಾ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ ಎಂಬುದನ್ನು ವಿವರಿಸಿದ್ದಾರೆ. ವಾಕ್ಯರಚನೆಯು ಸಮಯ ಸಂದರ್ಭಗಳಿಗೆ ಅನುಸಾರವಾಗಿ ವ್ಯತ್ಯಾಸಗೊಳ್ಳುವ ಮನಸ್ಥಿತಿ ಭಾಷಿಕ ಅಂತಸ್ಥ ಸಾಮರ್ಥ್ಯಗಳು ಎಲ್ಲರಲ್ಲಿಯೂ ಒಂದೇ ರೀತಿಯಾಗಿರುತ್ತವೆ ಎಂದು

[illegible]

[illegible]

[illegible]

[illegible]

[illegible]

[illegible]

ಹೇಳುವ ಮೂಲಕ ವಾಕ್ಯರಚನಾ ನಿಯಮವನ್ನು ಚರ್ಚಿಸಿದ್ದಾರೆ. ಮಗುವಿನ ಪರಿಸರದ ಭಾಷೆಯ ಗ್ರಾಂಥಿಕ ರೂಪದಲ್ಲಿ ನಾಮಪದ, ಕ್ರಿಯಾಪದ, ಸರ್ವನಾಮ, ವಿಶೇಷಣಗಳಂತಹ ಪದಗಳನ್ನು ಮಕ್ಕಳು ವಯೋಮಾನಕ್ಕೆ ತಕ್ಕಂತೆ ಹೇಗೆ ಉಚ್ಚರಿಸುತ್ತಾರೆ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

ಭೀಮಣ್ಣ ಮೇಟಿಯವರು "ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು" (ಗುಲ್ಬರ್ಗಾ ಜಿಲ್ಲೆಯ ಉರ್ದು ಭಾಷಿಕ ಪ್ರೌಢ ಶಾಲಾ ಮಕ್ಕಳನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಪಿ.ಮಹಾದೇವಯ್ಯನವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಉರ್ದು ಮಾಧ್ಯಮ ಪ್ರೌಢ ಶಾಲೆಗಳಲ್ಲಿ ಕನ್ನಡ ಪಠ್ಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದಾರೆ. ಅಲ್ಪಸಂಖ್ಯಾತ ಮಕ್ಕಳ ವಯೋಮಾನಕ್ಕೆ ತಕ್ಕಂತೆ ಪಠ್ಯಗಳು ರಚನೆಯಾಗಬೇಕೆಂಬ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮತ್ತು ಮಕ್ಕಳಲ್ಲಿನ ಓದಿನ ಸಮಸ್ಯೆ, ಬರವಣಿಗೆಯ ಸಮಸ್ಯೆಗಳು, ಗುಣಿತಾಕ್ಷರ ಮತ್ತು ಒತ್ತಕ್ಷರಗಳಲ್ಲಿನ ತಪ್ಪುಗಳನ್ನು ಗುರುತಿಸಿದ್ದಾರೆ. ಪ್ರತಿ ತರಗತಿಯಲ್ಲಿ ಐದು ಗಂಡು ಮತ್ತು ಐದು ಹೆಣ್ಣು ಮಕ್ಕಳನ್ನು ಆಯ್ಕೆಮಾಡಿಕೊಂಡು ಪದಾದಿ, ಪದಮಧ್ಯೆ, ಸದಾಂತ್ಯಗಳಲ್ಲಿ ಇವರು ಮಾಡುವ ತಪ್ಪುಗಳನ್ನು ಅಂಕಿ ಅಂಶಗಳ ಮೂಲಕ ಮಾಹಿತಿ ನೀಡಿದ್ದಾರೆ. ಓದು ಮತ್ತು ಬರವಣಿಗೆಯಲ್ಲಿನ ವ್ಯಾಕರಣ ದೋಷವನ್ನು ಗುರುತಿಸಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಯನವು ಕಲಿಕಾ ಮಕ್ಕಳ ಮಯೋಮಾನ ಮತ್ತು ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಪಠ್ಯಗಳು ರಚನೆಯಾಗಬೇಕು ಎಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಇವರು ಕೇವಲ ಉರ್ದು ಶಾಲೆಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಳ್ಳದೆ ಉರ್ದು ಮಕ್ಕಳು ಅಭ್ಯಾಸ ಮಾಡುತ್ತಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ತೆಗೆದುಕೊಂಡಿದ್ದರೆ ಸಮಸ್ಯೆಯನ್ನು ತೌಲನಿಕವಾಗಿ ಅಧ್ಯಯನ ಮಾಡಲು ಸಹಾಯಕವಾಗುತ್ತಿತ್ತು.

ಆರ್. ಚಲಪತಿಯವರು "ಪಠ್ಯಪುಸ್ತಕಗಳು ಮತ್ತು ಸಾಮಾಜಿಕ ಹೊಣೆಗಾರಿಕೆಯ ತೊಡಕುಗಳು" ಎಂಬ ಪಿ.ಎಚ್.ಡಿ ಮಹಾಪ್ರಬಂಧವನ್ನು ಅಶೋಕಕುಮಾರ ರಂಜೇರೆಯವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಪಠ್ಯಪುಸ್ತಕಗಳು ಎಂಥಾ ಜ್ಞಾನ ಕೌಶಲಗಳನ್ನು ನೀಡುತ್ತಿವೆ, ಕನ್ನಡ ಭಾಷೆಯು ಎದುರಿಸುತ್ತಿರುವ ಆತಂಕಗಳು ಸಂದೇಹಗಳು ಸವಾಲುಗಳು ಯಾಕೆ ಹುಟ್ಟಿಕೊಂಡಿವೆ? ಕನ್ನಡ ಬೋಧಕರನ್ನು ಸಮಾಜ ಯಾವ ರೀತಿಯಾಗಿ ಹೊಣೆಯಾಗಿಸುತ್ತಿದೆ ಎನ್ನುವುದನ್ನು ಚರ್ಚಿಸಿದ್ದಾರೆ. ವಿದ್ಯಾರ್ಥಿ ಸಂಬಂಧಿತ, ಬೋಧಕ ಸಂಬಂಧಿತ ಮತ್ತು ಪಠ್ಯಸಂಬಂಧಿತ ಮಾಹಿತಿಗಳನ್ನು ಕ್ರೋಢೀಕರಿಸಿ ಪಠ್ಯಕ್ರಮದೊಂದಿಗಿಟ್ಟು ಪರಿಶಿಲಿಸುತ್ತಾ ಪಠ್ಯಬೋಧನೆ ಮತ್ತು ಕಲಿಕೆಯ ಸಂಬಂಧಗಳನ್ನು ವಿವರಿಸಿದ್ದಾರೆ. ಅಧ್ಯಯನದ ಬರವಣಿಗೆಯು ಬಹಳಷ್ಟು ವಿಮರ್ಶಾತ್ಮಕವಾಗಿದೆ. ಸಮೀಕ್ಷೆ, ವಿಶ್ಲೇಷಣೆ ಮತ್ತು ವಿಮರ್ಶೆಯ ಮೂಲಕ ಪಠ್ಯಗಳು ಮತ್ತು ಪಠ್ಯಕ್ಕೆ ಅಳವಡಿಸಿದ ಭಾಷೆ, ಸಾಹಿತ್ಯ, ಸಂಸ್ಕೃತಿ, ಪ್ರಸ್ತುತ ಪದವಿ ಪಠ್ಯಗಳಲ್ಲಿನ ಮಿತಿಗಳನ್ನು, ಪಠ್ಯಕ್ರಮಗಳ

[illegible]

ಸ್ವರೂಪವನ್ನು ಸಾಮಾಜಿಕ ಹೊಣೆಗಾರಿಕೆಯ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಪ್ರಸ್ತುತ ಶೈಕ್ಷಣಿಕ ಸಂದರ್ಭವನ್ನು ನಾಲ್ಕು ಹಂತಗಳಲ್ಲಿ ಗುರುತಿಸಿಕೊಂಡು ಮೂರು ಹಂತಗಳನ್ನು ವಿಶ್ಲೇಷಣೆಗೆ ಒಳಪಡಿಸಿ ನಾಲ್ಕನೆ ಹಂತದ ಸ್ನಾತಕ ಪದವಿಯಲ್ಲಿನ ಕನ್ನಡ ಸಾಹಿತ್ಯವನ್ನು ಅದರ ಪರಂಪರೆ ಮತ್ತು ಚಾರಿತ್ರಿಕ ಪ್ರಜ್ಞೆಯೊಂದಿಗೆ ಪರಿಚಯಿಸಿದ್ದಾರೆ. ಉನ್ನತ ಶಿಕ್ಷಣದ ಪಠ್ಯಗಳ ವಿಚಾರದಲ್ಲಿ ಅಧಿಕಾರದ ಸಂಬಂಧಗಳಾಗಿ ಜಾತಿಯ ಶ್ರೇಣೀಕೃತ ಮೌಲ್ಯಗಳನ್ನು ಹೇಗೆ ನಿರ್ವಹಿಸಿಕೊಳ್ಳುತ್ತದೆ ಎನ್ನುವ ಅಂಶವನ್ನು ಅಧ್ಯಯನವು ಸಾದರಪಡಿಸುತ್ತದೆ. ಅಧ್ಯಯನಕಾರರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಳವಾದ ಅಧ್ಯಯನವನ್ನು ಮಾಡಿ ಶಿಕ್ಷಣ ಕ್ಷೇತ್ರ ಮತ್ತು ಸಂಶೋಧನಾ ಕ್ಷೇತ್ರಕ್ಕೆ ಕಾಣಿಕೆಯಾಗಿದ್ದಲ್ಲದೆ ಪ್ರತಿಯೊಬ್ಬ ಸಂಶೋಧಕರು ಗಮನಿಸಬೇಕಾದ ಅಂಶಗಳನ್ನು ಒಳಗೊಂಡಿದೆ.

ವೀರಾಕ್ಷಿ ಎಲ್.ವಿವೇಕಿ ಯವರು "ಕರ್ನಾಟಕದಲ್ಲಿ ಭಾಷಾ ಶಿಕ್ಷಣ ಮತ್ತು ಮಾಧ್ಯಮದ ವಾಗ್ವಾದಗಳು" (ಪ್ರಾಥಮಿಕ ಶಿಕ್ಷಣದ ಕನ್ನಡ ಮಾಧ್ಯಮವನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಅಶೋಕಕುಮಾರ ರಂಜೇರೆಯವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಕಲಿಸುವುದು ಮತ್ತು ಭಾಷೆಯನ್ನು ಒಂದು ಮಾಧ್ಯಮವನ್ನಾಗಿ ಕಲಿಸುವ ಚರ್ಚೆಗಳು ಪ್ರಾಥಮಿಕ ಶಾಲೆಗಳಲ್ಲಿ ನಡೆದಿವೆ. ಭಾಷಾ ಮಾಧ್ಯಮವನ್ನು ಕುರಿತು ಚರ್ಚೆ ನಡೆಸುವ ಚಿಂತಕರು, ಶಿಕ್ಷಣ, ಶಿಕ್ಷಕರು, ಮತ್ತು ಕಲಿಯುವ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಚರ್ಚೆ ನಡೆಸುತ್ತಿಲ್ಲ. ಅವರವರ ಅನುಕೂಲಕ್ಕೆ ತಕ್ಕಂತೆ ಶಿಕ್ಷಣದ ಕುರಿತು ಚಿಂತನೆಯನ್ನು ತಜ್ಞರು ಮಾಡುತ್ತಿದ್ದಾರೆ. ಈ ರೀತಿಯಾಗಿ ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ರೀತಿಯ ವಾಗ್ವಾದಗಳು ನಡಿಯುತ್ತಲೇ ಬಂದಿವೆ. ಇವರ ಅಧ್ಯಯನದ ಪ್ರಮುಖ ಉದ್ದೇಶ ಬ್ರಿಟಿಷ್ ಕಾಲದಿಂದ ಇಂದಿನವರೆಗೆ ಭಾಷಾ ಮಾಧ್ಯಮದ ವಾಗ್ವಾದಗಳನ್ನು ಸಮಗ್ರವಾಗಿ ಕ್ರೋಡೀಕರಿಸಿ ಅಧ್ಯಯನ ಮಾಡುವುದಾಗಿದೆ.

ಇವರ ಅಧ್ಯಯನದ ಸ್ವರೂಪ ಭಾರತದಲ್ಲಿ ವೇದ, ಬೌದ್ಧ, ಹಾಗೂ ಮುಸ್ಲಿಮರ ಮತ್ತು ಬ್ರಿಟೀಷರ ಕಾಲಘಟ್ಟಗಳಲ್ಲಿದ್ದ ಶಿಕ್ಷಣ ಪದ್ಧತಿಯ ಸ್ವರೂಪವನ್ನು ಕುರಿತು ವಿಶ್ಲೇಷಿಸಿದ್ದಾರೆ. ಶಿಕ್ಷಣ ಪದ್ಧತಿಯಲ್ಲಿನ ಶಿಕ್ಷಣದ ಭಾಷೆ, ಬೋಧನಾ ಮಾಧ್ಯಮ, ಪಠ್ಯಕ್ರಮ ಇತ್ಯಾದಿ ಅಂಶಗಳ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ. ಭಾಷಾ ಮಾಧ್ಯಮದ ವಾಗ್ವಾದಗಳನ್ನು ಯಾವ ಯಾವ ಕ್ಷೇತ್ರಗಳಲ್ಲಿ ಚರ್ಚೆಯಾಗುತ್ತಿವೆ ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು (ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಆಡಳಿತಾತ್ಮಕ) ಅಧ್ಯಯನದ ವಿಧಾನವನ್ನು ರೂಪಿಸಿಕೊಂಡಿದ್ದಾರೆ.

ವಾಗೀಶ ಎಸ್.ಎಂ ಇವರು "ಪ್ರಾಥಮಿಕ ಹಂತದ ಕನ್ನಡ ಭಾಷಾ ಪಠ್ಯಪುಸ್ತಕಗಳ ಭಾಷಿಕ ಮತ್ತು ಶೈಕ್ಷಣಿಕ ಅಧ್ಯಯನ" ಕುರಿತು ಪಿಎಚ್.ಡಿ ಮಹಾಪ್ರಬಂಧವನ್ನು ಅಶೋಕಕುಮಾರ ರಂಜೇರೆಯವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯ರಲ್ಲಿ ಸಲ್ಲಿಸಿದ್ದಾರೆ. ಪ್ರಮುಖವಾಗಿ ಪಠ್ಯಗಳು

[illegible]

ಮತ್ತು ಗದ್ಯ ಪದ್ಯಗಳಲ್ಲಿರುವ ಅಭ್ಯಾಸ ಚಟುವಟಿಕೆಗಳಿಗೂ ಹೊಂದಾಣಿಕೆಯಿಲ್ಲದಿರುವುದನ್ನು ಗುರುತಿಸಿದ್ದಾರೆ. ಪಠ್ಯಗಳಲ್ಲಿ ಧ್ವನಿ, ಪದ, ವಾಕ್ಯಗಳ ಬಳಕೆ, ಬೋಧನೆ, ಶಿಕ್ಷಕ, ವಿದ್ಯಾರ್ಥಿ, ಇತ್ಯಾದಿ ಅಂಶಗಳು ಮಕ್ಕಳ ಸಾಮರ್ಥ್ಯದ ಅನುಸಾರ ಬಳಕೆಯಾಗಿದೆಯೋ ಇಲ್ಲವೋ? ಎಂಬುದನ್ನು ಗಮನಿಸಿದ್ದಾರೆ. ಪ್ರಸ್ತುತ ಪಠ್ಯಪುಸ್ತಕಗಳನ್ನು ಕೇಂದ್ರಿಕರಿಸಿ ಪ್ರಾಚೀನ ಪಠ್ಯಪುಸ್ತಕಗಳನ್ನು ಚಾರಿತ್ರಿಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಮಹಾಪ್ರಬಂಧವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯ ಏಳರಲ್ಲಿ ಪ್ರಚಲಿತ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಹೇಗಿದೆ ಎಂಬುದನ್ನು ವಿವರಿಸಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಬೋಧನೆ, ಶಿಕ್ಷಕ, ವಿದ್ಯಾರ್ಥಿ, ಪರೀಕ್ಷೆ, ಪ್ರಶ್ನಾವಳಿ, ಮೌಲ್ಯಮಾಪನ, ಪಾಠೋಪಕರಣಗಳು. ಲೇಖನ ಚಿಹ್ನೆಗಳ ಬಳಕೆ ಇತ್ಯಾದಿ ಅಂಶಗಳಲ್ಲಿ ಮೌಲ್ಯಮಾಪನ ಕ್ರೀಯೆ ಹೇಗೆ ನಡೆಯುತ್ತದೆ ಎಂಬುದನ್ನು ವಿವರಿಸಿದ್ದಾರೆ. ಅಂದರೆ ಮೌಲ್ಯಮಾಪನದ ಅರ್ಥ, ವ್ಯಾಖ್ಯಾನಗಳು, ಮೌಲ್ಯಮಾಪನದ ಹಂತಗಳನ್ನು ಚರ್ಚಿಸಿದ್ದಾರೆ.

ಸೋಮಕ್ಕ .ಎಮ್ ರವರು "ಲಂಬಾಣಿ ಮಕ್ಕಳ ಕನ್ನಡ ಕಲಿಕಾ ಸಮಸ್ಯೆಗಳು" (ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಪಿ.ಮಹಾದೇವಯ್ಯನವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೬ರಲ್ಲಿ ಸಲ್ಲಿಸಿದ್ದಾರೆ ಒಟ್ಟು ಏಳು ಅಧ್ಯಾಯಗಳನ್ನು ಮಾಡಿಕೊಂಡಿದ್ದಾರೆ. ಅಧ್ಯಾಯ ಎರಡರಲ್ಲಿ ಲಂಬಾಣಿಗರ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಿದ್ದಾರೆ. ಅಧ್ಯಾಯ ಮೂರು ನಾಲ್ಕು ಐದರಲ್ಲಿ ಓದು ಬರಹ ಗುಣಿತಾಕ್ಷರಕ್ಕೆ ಸಂಬಂದಿಸಿದಂತೆ ಲಂಬಾಣಿ ಮಕ್ಕಳು ಕನ್ನಡ ಭಾಷೆಯನ್ನು ಕಲಿಯುವಾಗ ಎದುರಿಸುವ ಸಮಸ್ಯೆಗಳನ್ನು ಕುರಿತು ವಿಶ್ಲೇಶಿಸಿದ್ದಾರೆ. ಇವರು ಓದುವಾಗ ಪದಾದಿ ಪದಮಧ್ಯ ಪದಾಂತ್ಯ ಪರಿಸರದಲ್ಲಿ ಸಮಸ್ಯೆ ಇರುವುದನ್ನು ಮತ್ತು ಅದೇ ರೀತಿಯಾಗಿ ಬರವಣಿಗೆಯಲ್ಲಿಯೂ ಸಮಸ್ಯೆ ಇರುವುದನ್ನು ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ವ್ಯಾಖ್ಯಾನಗಳ ಮೂಲಕ ಕಲಿಕಾ ನಿಯಮಗಳನ್ನು ವಿವರಿಸಿದ್ದಾರೆ. ಪ್ರಶ್ನಾವಳಿಗಳನ್ನು ರಚಿಸಿಕೊಂಡು ಪಠ್ಯಪುಸ್ತಕಗಳಲ್ಲಿನ ಹಾಗೂ ಪದಕೋಶಿಯಿಂದ ಪದಗಳನ್ನು, ಮೂಲಾಕ್ಷರಗಳನ್ನು, ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಪಟ್ಟಿ ಮಾಡಿ ಪ್ರತಿಯೊಂದು ಮಗುವಿಗೆ ಪ್ರತ್ಯೇಕವಾಗಿ ಓದಿಸಿ ಮಾಹಿತಿಯನ್ನು ಸಂಗ್ರಹಿಸಿ ಅಂಕಿ ಅಂಶಗಳ ಮೂಲಕ ಸಮಸ್ಯೆಗಳನ್ನು ಗುರುತಿಸಿದ್ದಾರೆ.

ಮಧುಸೂದನ ಜೋಶಿರವರು "Determinates of achievement in minimum levels of learning at primary stage" ಎಂಬ ಶೀರ್ಷಿಕೆಯಡಿಯಲ್ಲಿ ಪಿಎಚ್.ಡಿ ಮಹಾಪ್ರಬಂಧವನ್ನು ಆರ್.ಎಸ್. Yelli ರವರ ಮಾರ್ಗದರ್ಶನದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ೨೦೦೩ರಲ್ಲಿ ಸಲ್ಲಿಸಿದ್ದಾರೆ. ಸಮಾಜದಲ್ಲಿನ ಪ್ರಾಥಮಿಕ ಹಂತದ ಕನಿಷ್ಟ ಮಟ್ಟದ ಕಲಿಕೆಯಲ್ಲಿ ಜಾತಿ, ವರ್ಗ, ಸ್ಥಳ ಮತ್ತು ಲಿಂಗ ತಾರತಮ್ಯತೆ ಇರುವುದನ್ನು ಗುರುತಿಸಿದ್ದಾರೆ. ಪ್ರಾಥಮಿಕ ಹಂತದ ಕಲಿಕೆಯನ್ನು

ಪರಿಣಾಮಕಾರಿಯಾಗಿಸಲು ಹಲವಾರು ಯೋಜನೆಗಳನ್ನು ಹಾಕಿಕೊಂಡರೂ ಒಂದರಿಂದ ಐದನೇ ತರಗತಿಯವರೆಗಿನ ಕನಿಷ್ಟ ಮಟ್ಟದ ಕಲಿಕೆ ಸುಧಾರಣೆಯಾಗಿಲ್ಲ. ಕನಿಷ್ಟ ಮಟ್ಟದ ಕಲಿಕೆ ಎಂದರೆ ಪ್ರಾಥಮಿಕ ಹಂತದಲ್ಲಿಯೇ ಭಾಷಾ ಕೌಶಲ್ಯಗಳನ್ನು ಬೆಳೆಸುವುದು ಎಂದಿದ್ದಾರೆ. ಮಕ್ಕಳಿಗೆ ಬೋಧನಾ ಪದ್ದತಿಯಲ್ಲಿ ಬಾಯಿಪಾಠ ಮಾಡಿಸುವ ವಿಧಾನ ಕೈಬಿಡಬೇಕು. ಕನಿಷ್ಟ ಕಲಿಕಾ ಸಾಧನೆ ಎಂದರೆ ಕಲಿಕಾರ್ಥಿಗಳು ತಮ್ಮ ಜೀವನಕ್ಕೆ ಉಪಯುಕ್ತವಾಗುವಂತಾದರು ಕಲಿಕೆ ಸುಧಾರಿಸಬೇಕು. ನೀರಿಕ್ಷೆಯ ಮಟ್ಟದಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲಿ ಕಲಿಕೆಯಾಗುತ್ತಿಲ್ಲ ಎನ್ನುವುದನ್ನು ಅಧ್ಯಯನದ ಮೂಲಕ ಸ್ಪಷ್ಟಪಡಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಲಿಂಗತಾರತಮ್ಯತೆ ಹೆಚ್ಚಾಗಿರುವುದರಿಂದ ಮತ್ತು ಬಡತನ, ಆರ್ಥಿಕ ಅಸಮಾನತೆ, ಮನೆಯ ಪರಿಸರ ಈ ಎಲ್ಲಾ ಅಂಶಗಳಿಂದ ಕನಿಷ್ಟ ಮಟ್ಟದ ಕಲಿಕೆಯನ್ನು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಸಾಧಿಸದೆ ಇರುವುದನ್ನು ಗುರುತಿಸಿದ್ದಾರೆ.

ನಂದಾ. ಆರ್. ಇಟ್ಟೂರ್ ರವರು "Lexical study of primary text 5th standard text" (ಒಂದನೆಯ ತರಗತಿಯಿಂದ ಐದನೆಯ ತರಗತಿಯವರೆಗಿನ ಕನ್ನಡ ಪಠ್ಯಪುಸ್ತಕಗಳಲ್ಲಿನ ಪದಗಳ ಅಧ್ಯಯನ) ಎಂಬ ಪಿಎಚ್.ಡಿ. ಮಹಾಪ್ರಬಂಧವನ್ನು ಕೃ.ಅನ್ಬನ್ ರವರ ಮಾರ್ಗದರ್ಶನದಲ್ಲಿ ಧಾರವಾಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಪದಗಳ ರೂಪವನ್ನು ಪಟ್ಟಿಮಾಡಿದ್ದಾರೆ. ಅಲ್ಲದೇ ಒಂದು ಪದವನ್ನು ತೆಗೆದುಕೊಂಡು ಮೂಲ ಪದ ರೂಪಾಂತರ ಪದ ಎಂದು ವಿಂಗಡಿಸಿ ವಿಶ್ಲೇಷಣೆ ಮಾಡಿದ್ದಾರೆ. ಉದಾ: ಮೂಲ ಪದದಲ್ಲಿನ ಪದ ರಚನೆ ಹೇಳಿದ್ದಾರೆ. ಅಂಕ, ಅಂಕುಶ, ಅಂಗಡಿ ಎಂದಾಗಿದೆ ಎಂದು ಹೇಳುತ್ತಾರೆ. ಇದೇ ಪದ ರೂಪಾಂತರದಲ್ಲಿ ಅಂಗಡಿಗಳು ಅಂಗಡಿಗೆ ಎಂದು ರೂಪುಗೊಂಡಿದೆ ಎಂದು ವಿಶ್ಲೇಷಿಸಿದ್ದಾರೆ.

ಎಂ.ವಿ.ಗಿರಿಜಮ್ಮರವರು "ಮಕ್ಕಳಲ್ಲಿ ಕನ್ನಡ ಭಾಷಾ ಕಲಿಕೆ" ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಸಿ.ಎಸ್.ರಾಚಂದ್ರರವರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ೨೦೦೭ರಲ್ಲಿ ಸಲ್ಲಿಸಿದ್ದಾರೆ. ಒಂಬತ್ತು ತಿಂಗಳಿನಿಂದ ನಾಲ್ಕುವರೆ ವರ್ಷ ವಯಸ್ಸಿನ ಮಕ್ಕಳ ಧ್ವನಿ, ಪದ ಪದಪುಂಜ ಹಾಗೂ ವಾಕ್ಯಗಳ ಕಲಿಕೆ ಮತ್ತು ಬೆಳವಣಿಗೆಯನ್ನು ವಿವರಣಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ. ಜೊತೆಗೆ ಕಲಿಕೆಯ ಸಂದರ್ಭದಲ್ಲಿ ಮಗುವಿನ ಮೇಲಾಗುವ ಪರಿಸರದ ಹಾಗೂ ಭಾಷಿಕೇತರ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡಿದ್ದಾರೆ.

ಆಂಜನೇಯರವರು "ಮ್ಯಾಸಬೇಡರ ಕನ್ನಡ ಸಮಾಜೋಭಾಷಿಕ ಅಧ್ಯಯನ" (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ. ಮಹಾಪ್ರಬಂಧವನ್ನು ಅಶೋಕಕುಮಾರ ರಂಜೇರೆಯವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಮ್ಯಾಸಬೇಡರ ಸಾಂಸ್ಕೃತಿಕ ಅಧ್ಯಯನದೊಂದಿಗೆ ಅವರು ಬಳಸುವ ಕನ್ನಡ ಭಾಷೆಯನ್ನು ಸಮಾಜೋಭಾಷಿಕ ಅಧ್ಯನದ ಹಿನ್ನಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಕನ್ನಡ

[illegible]

[illegible]

[illegible]

[illegible]

[illegible]

ಭಾಷಾ ಕಲಿಕೆಯಲ್ಲಿ ಹಿಂದುಳಿದವರ ಶೇಕಡಾ ಪ್ರಮಾಣವನ್ನು ರೇಖಾ ಚಿತ್ರದ ಮೂಲಕ ಗುರುತಿಸಿದ್ದಾರೆ. ಏಕ ಭಾಷಿಕ ಮತ್ತು ದ್ವಿಭಾಷಿಕ ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಿ ಕನ್ನಡ ಭಾಷಾ ಕಲಿಕೆಯನ್ನು ಶೇಕಡಾ ಪ್ರಮಾಣದಲ್ಲಿ ಗುರುತಿಸಿದ್ದಾರೆ. ಪ್ರತಿಯೊಂದು ಮಾಹಿತಿಯನ್ನು ಅಂಕಿ ಅಂಶಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಈ ಎಲ್ಲಾ ಪಿಎಚ್.ಡಿ ಮಹಾಪ್ರಬಂಧಗಳನ್ನು ಗಮನಿಸಿದಾಗ ಎನ್.ಕೆ. ಮಂಜುಳಾರವರು ಮಕ್ಕಳಲ್ಲಿ ವಾಕ್ಯರಚನೆ ಹೇಗೆ ಬೆಳವಣಿಗೆ ಹೊಂದುತ್ತದೆ ಎಂದು ತಿಳಿಸಿದ್ದಾರೆ. ಭೀಮಣ್ಣ ಮೇಟಿ, ಸೋಮಕ್ಕ, ನಾಗರಾಜ ಚಿತ್ರಂಪಳ್ಳಿಯವರ ಸಂಶೋಧನಾ ಪ್ರಬಂಧಗಳು ಒಂದೇ ಮಾದರಿಯಲ್ಲಿವೆ ಎನಿಸುತ್ತದೆ. ಆದರೆ ಅಧ್ಯಯನಕ್ಕೆ ಒಳಪಟ್ಟ ಮಕ್ಕಳ ಮಾತೃಭಾಷೆ ಮಾತ್ರ ಉರ್ದು, ಲಂಬಾಣಿ, ಕನ್ನಡವುಳ್ಳವರಾಗಿದ್ದಾರೆ. ಈ ಅಧ್ಯಯನದಲ್ಲಿ ಇವರು ಅನ್ಯಭಾಷಿಕ ಪರಿಸರದಲ್ಲಿರುವ ಉರ್ದು ಮತ್ತು ಲಂಬಾಣಿ ಮಕ್ಕಳಲ್ಲಿಯೂ ಸಮಸ್ಯೆಗಳೂ ಇವೆಯೋ ಎಂಬುದನ್ನು ಗುರುತಿಸಬೇಕಿತ್ತು. ಒಟ್ಟಾರೆಯಾಗಿ ಈ ಅಧ್ಯಯಗಳು ನನ್ನ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತವೆ. ಮಧೂಸೂದನ ಜೋಶಿಯವರ ಅಧ್ಯಯನದಿಂದ ತಿಳಿದುಬರುವ ಅಂಶವೆಂದರೆ ಪ್ರಾಥಮಿಕ ಹಂತದಲ್ಲಿಯೆ ಕನಿಷ್ಟ ಕಲಿಕೆಯಾಗದಿರುವುದನ್ನು ಗುರುತಿಸಿದ್ದಾರೆ. ಹಾಗಾಗಿಯೇ ಪ್ರೌಢ ಶಾಲೆಯಲ್ಲಿಯ ಕಲಿಕಾರ್ಥಿಗಳ ಕಲಿಕಾ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಅಧ್ಯಯನವು ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ವಿವರಿಸುತ್ತದೆ ಇದರಿಂದ ಪ್ರೌಢ ಹಂತದಲ್ಲಿನ ಸಮಸ್ಯೆ ಗುರುತಿಸಿಕೊಳ್ಳಲು ಈ ಅಧ್ಯಯನಕ್ಕೆ ಸಹಾಯಕವಾಗಿದೆ.

ಅದೇ ರೀತಿಯಾಗಿ ಆರ್.ಛಲಪತಿ, ವಾಗೀಶ, ವಿರಾಕ್ಷಿ, ಗಿರಿಜಮ್ಮ, ಆಂಜನೇಯ ಇವರುಗಳು ಅಧ್ಯಯನಗಳು ಸಹ ಉತ್ತಮವಾಗಿದ್ದು ಈ ಅಧ್ಯಯನಕ್ಕೆ ಪಠ್ಯಪುಸ್ತಕ ರಚನೆ. ಮಕ್ಕಳಲ್ಲಿನ ಭಾಷಾ ಕಲಿಕೆ ಮತ್ತು ಸಮಾಜೋಭಾಷಿಕ ಅಧ್ಯಯನ ಕುರಿತು ತಿಳಿದುಕೊಳ್ಳಲು ಪೂರಕವಾದ ಮಾಹಿತಿಯನ್ನು ಒದಗಿಸಿವೆ.

೨.೨. ಎಂ.ಇಡಿ. ಕಿರು ಪ್ರಬಂಧಗಳು

ಬಸವರಾಜ ಹಿರೇಮಠ ರವರು "ಕನ್ನಡ ಭಾಷೆಯ ಓದುಗಾರಿಕೆಯಲ್ಲಿನ ದೋಷಗಳ ಕುರಿತು ಒಂದು ಅಧ್ಯಯನ" ೨೦೦೮ರಲ್ಲಿ ಕುವೆಂಪು ವಿಶ್ವವಿದ್ಯಾಲು ದೂರ ಶಿಕ್ಷಣಕ್ಕೆ ಸಲ್ಲಿಸಿದ್ದಾರೆ. ಕುಷ್ಟಗಿ ತಾಲೂಕಿನ ಹಿರೇಮನ್ನಾಪೂರ ಗ್ರಾಮದ ೫ನೇ ತರಗತಿ ವಿದ್ಯಾರ್ಥಿಗಳನ್ನು ಅನುಲಕ್ಷಿಸಿ ಈ ಅಧ್ಯಯನವನ್ನು ಕೈಗೊಂಡಿದ್ದಾರೆ. ವಿದ್ಯಾರ್ಥಿಗಳು ಓದುವಾಗ ಮಾಡುವ ದೋಷಗಳನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳನ್ನು ಬಳಸಿಕೊಂಡು ತಪ್ಪುಗಳನ್ನು ದಾಖಲಿಸಿದ್ದಾರೆ. ತಪ್ಪುಗಳಿಗೆ ಕಾರಣಗಳನ್ನು ಪರಿಶೀಲಿಸಿದ್ದಾರೆ. ಉದಾ. ಅಮ್ಮ ಹಸು ಹಾಲು ಕರೆಯಿತು ಎಂಬುವುದಕ್ಕೆ ವಿದ್ಯಾರ್ಥಿಗಳು ಅಸು ಆಲು ಕರೆಯಿತು ಎಂದು ತಪ್ಪಾಗಿ ಓದುತ್ತಾರೆ. ಅಂದರೆ ಇಲ್ಲಿ ಮಗುವಿಗೆ 'ಹ' ಕಾರಕ್ಕೂ ಮತ್ತು 'ಅ' ಕಾರಕ್ಕೂ ಸರಿಯಾದ ಸ್ಪಷ್ಟನೆಯಿಲ್ಲ ಎಂಬುವುದನ್ನು ತಿಳಿಸಿದ್ದಾರೆ. ಆದರೆ ಇಂತಹ ತಪ್ಪು

[illegible]

ಇಡಿ ತರಗತಿಯ ಮಕ್ಕಳೆಲ್ಲರು ಮಾಡುತ್ತಾರೆಯೇ? ಅಥವಾ ಕೆಲವು ಮಕ್ಕಳು ಮಾತ್ರ ಮಾಡುತ್ತಾರೆಯೇ? ಎಂಬುವುದು ಸ್ಪಷ್ಟಪಡಿಸಿಲ್ಲ. ಹಾಗೂ ತಪ್ಪು ಮಾಡುವಂತಹ ಮಕ್ಕಳು ಯಾವ ವರ್ಗಕ್ಕೆ ಸೇರಿದವರು ಎಂಬುವುದನ್ನು ಅಧ್ಯಯನದಲ್ಲಿ ಸ್ಪಷ್ಟಪಡಿಸಿದ್ದರೆ ಸೂಕ್ತವಾಗಿರುತ್ತಿತ್ತು.

ವಿಪ್ಲವಿಯವರು "ಕೊಪ್ಪಳ ಜಿಲ್ಲೆಯ ಪ್ರಾಥಮಿಕ ಶಾಲೆಯ ಮಕ್ಕಳ ನಿಧಾನಕಲಿಕೆಗೆ ಕಾರಣಗಳು ಕುರಿತು ಒಂದು ಅಧ್ಯಯನ" ಕುರಿತು ಕೆ. ನಾಗರಾಜರವರ ಮಾರ್ಗದರ್ಶನದಲ್ಲಿ ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣಕ್ಕೆ ಈ ಕಿರು ಪ್ರಬಂಧವನ್ನು ೨೦೦೮-೦೯ರಲ್ಲಿ ಸಲ್ಲಿಸಿದ್ದಾರೆ. ಅಧ್ಯಯನದಲ್ಲಿ ನಿಧಾನಗತಿ ಕಲಿಕೆಗೆ ಕಾರಣಗಳನ್ನು ಕಂಡುಕೊಂಡಿದ್ದಾರೆ. ಅಧ್ಯಯನಕಾರರು ವಾಕ್ಯಗಳ ಪ್ರಶ್ನಾವಳಿಗಳನ್ನು ರಚಿಸಿಕೊಂಡು ಮಕ್ಕಳಿಗೆ ಕೇಳಿ ಅವರಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ದತ್ತಾಂಶಗಳ ಮೂಲಕ ನಿಧಾನಗತಿಯ ಕಲಿಕೆಗೆ ಕಾರಣಗಳೇನು ಎಂಬುವುದನ್ನು ಗುರುತಿಸಿದ್ದಾರೆ. ಮಕ್ಕಳ ಬೌದ್ಧಿಕ ಮಟ್ಟ, ಬೆಳೆಯುತ್ತಿರುವ ಪರಿಸರವನ್ನು ಗ್ರಹಿಸಿಕೊಳ್ಳುವ ಶಕ್ತಿ, ಪೋಷಕರ ಪ್ರಚೋದನೆ ಇಲ್ಲದಿರುವುದು ಬೋಧಕರು ವಿಶೇಷವಾದ ಕಾಳಜಿ ತೋರದೆ ಇರುವುದು, ಶಾಲಾ ಸೌಲಭ್ಯಗಳ ಕೊರತೆ, ದೈಹಿಕ ಸಮಸ್ಯೆ ಇಂತಹ ಹಲವಾರು ಅಂಶಗಳು ಮಕ್ಕಳ ನಿಧಾನಗತಿಯ ಕಲಿಕೆಗೆ ಕಾರಣಗಳಾಗಿವೆ ಎಂಬುದನ್ನು ಗುರುತಿಸಿದ್ದಾರೆ. ಈ ಅಧ್ಯಯನವು ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಮಕ್ಕಳನ್ನು ಮಾತ್ರ ಒಳಗೊಂಡಿದೆ.

ಈರಮ್ಮ. ಎಚ್. ರವರು "ಪ್ರಾಥಮಿಕ ವಿಭಾಗದ ಆರನೇ ತರಗತಿಯ ವಿದ್ಯಾರ್ಥಿಗಳ ಕನ್ನಡ ಭಾಷಾ ಬರವಣಿಗೆಯಲ್ಲಿ ಉಕ್ತಲೇಖನ ಹಾಗೂ ವಿಕ್ಷಿತ ಲೇಖನದಲ್ಲಿ ಕಂಡು ಬರುವ ದೋಷಗಳ ವಿಶ್ಲೇಷಣೆ ಮತ್ತು ಪರಿಹಾರ ವಿಧಾನ ಕುರಿತು ಒಂದು ಅಧ್ಯಯನ" ಕುರಿತು ಎಂ. ಗೀತಾರವರ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಅಧ್ಯಯನದಲ್ಲಿ ಪ್ರಾಥಮಿಕ ಮಕ್ಕಳು ಕನ್ನಡ ಭಾಷಾ ಬರವಣಿಗೆಯಲ್ಲಿ ಮಾಡುವ ತಪ್ಪುಗಳನ್ನು ಗುರುತಿಸಲು ಉಕ್ತಲೇಖನ ಮತ್ತು ವಿಕ್ಷಿತ ಲೇಖನಗಳನ್ನು ಬರೆಯಿಸಿ ಅದರಲ್ಲಿರುವಂತಹ ತಪ್ಪುಗಳನ್ನು ಅಂಕಿ ಸಂಖ್ಯೆಗಳ ಮೂಲಕ ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಕು.ಸುಜಾತಾ ಎಲ್. ಜಾಲವಾದಿರವರು "ವಿಜಾಪೂರ ಜಿಲ್ಲೆಯ ಕಾಖಂಡಕಿ ಗ್ರಾಮದ ಪ್ರಾಥಮಿಕ ಶಾಲೆಯ ಆರನೇ ಮತ್ತು ಏಳನೇ ತರಗತಿಯ ಭಾಷಾ ಓದುಗಾರಿಕೆಯಲ್ಲಿ ಮಕ್ಕಳ ಸಾಮಾನ್ಯ ದೋಷಗಳು ಕುರಿತು ಒಂದು ಅಧ್ಯಯನ" ಕುರಿತು ಹೆಮಂತಕುಮಾರರವರ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ೨೦೦೮-೦೯ರಲ್ಲಿ ಎಂ.ಇಡಿ ಕಿರು ಪ್ರಬಂಧವನ್ನು ಸಲ್ಲಿಸಿದ್ದಾರೆ. ಈ ಅಧ್ಯನದಲ್ಲಿ ಭಾಷಾ ಕೌಶಲ್ಯಗಳಾದ ಓದುವುದು, ಬರೆಯುವುದು, ಮಾತನಾಡುವುದು ಮತ್ತು ಆಲಿಸುವುದು ಇವುಗಳಲ್ಲಿನ ದೋಷಗಳನ್ನು ಗುರುತಿಸಿ ಅಂಕಿ ಸಂಖ್ಯೆಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಬರವಣಿಗೆ ಮತ್ತು ಓದುಗಾರಿಕೆಯಲ್ಲಿನ ಸಮಸ್ಯೆಗಳನ್ನು ಕೋಷ್ಟಕಗಳ ಮೂಲಕ ಪ್ರತಿಶತವನ್ನು ಪಟ್ಟಿಮಾಡಿದ್ದಾರೆ.

ಸಂತೋಷಕುಮಾರಿ ಎಸ್. ಪಲ್ಲೇದ ರವರು "ಮಹಿಳಾ ಪ್ರೌಢಶಾಲಾ ಶಿಕ್ಷಕಿಯರ ಬೋಧನಾ ಪರಿಣಾಮಕಾರಿತ್ವ ಕುರಿತು ಒಂದು ಅಧ್ಯಯನ" ಕುರಿತು ವೆಂಕೋಬಾ ನಾರಾಯಣಪ್ಪರವರ ಮಾರ್ಗದರ್ಶನದಲ್ಲಿ ಎಂ.ಇಡಿ ಕಿರು ಪ್ರಬಂಧವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ೨೦೦೬-೦೭ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ವಿಜಾಪೂರ ಜಿಲ್ಲೆಯ ಪ್ರೌಢ ಶಾಲೆಯ ಅರವತ್ತನಾಲ್ಕು ಮಹಿಳಾ ಶಿಕ್ಷಕಿಯರನ್ನು ಆಯ್ಕೆಮಾಡಿಕೊಂಡಿದ್ದಾರೆ. ದತ್ತಾಂಶಗಳ ವಿಶ್ಲೇಷಣೆಗಾಗಿ ಸರಾಸರಿ ಮಾನಕ ವಿಚಲನೆ ಮತ್ತು 't' ಮೌಲ್ಯಾಂಕಗಳು ಮತ್ತು 'r' ಮೌಲ್ಯಾಂಕಗಳನ್ನು ಬಳಸಿದ್ದಾರೆ. ವೃತ್ತಿಯಲ್ಲಿ ದಕ್ಷತೆ, ವರ್ಗಕೋಣೆ, ಸಂಘಟನೆ, ವಿಷಯ ವಸ್ತುವಿನ ಪ್ರಭುತ್ವ, ಬೋಧನಾ ಕೌಶಲ್ಯ, ವಿದ್ಯಾರ್ಥಿಗಳೊಂದಿಗೆ ಸೌಹಾರ್ದಯುತ ಸಂಬಂಧ, ಶೈಕ್ಷಣಿಕ ಗುರಿಗಳನ್ನು ಸಾಧಿಸುವ ಜ್ಞಾನ ಮತ್ತು ಸಾಮರ್ಥ್ಯ, ಹಾಸ್ಯಮಯ ಪ್ರವೃತ್ತಿ ಮುಂತಾದ ಗುಣಗಳನ್ನು ಅಳವಡಿಸಿಕೊಂಡು ಮಾಡಿದ ಬೋಧನೆಯು ಪರಿಣಾಮಕಾರಿ ಬೋಧನೆಯಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಮಹಿಳಾ ಬೋಧಕಿಯರ ಬೊಧನೆಯ ಪರಿಣಾಮಕಾರಿತ್ವದ ಮೇಲೆ ಸ್ವತಂತ್ರ ಚಲಕಗಳಾದ ಸ್ಥಳ, ಸಂಸ್ಥೆ ವಿಷಯಗಳು ಪ್ರಭಾವ ಬೀರುವುದರಿಂದ ಪರಿಣಾಮಕಾರಿ ಬೋಧನೆಯಲ್ಲಿ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ.

ದೀಪಾ ಎಮ್. ದಾನಪ್ಪನವರು "ಪ್ರಶಿಕ್ಷಕರ ಬೋಧನಾ ಪರಿಣಾಮಕಾರತ್ವದ ಕುರಿತು ಒಂದು ಅಧ್ಯಯನ" ಕುರಿತು ವೆಂಕೋಬಾ ನಾರಾಯಣಪ್ಪ ಮಾರ್ಗದರ್ಶನದಲ್ಲಿ ಎಂ.ಇಡಿ ಕಿರು ಪ್ರಬಂಧವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ವಿಜಯಪುರ ೨೦೦೬-೦೭ರಲ್ಲಿ ಸಲ್ಲಿಸಿದ್ದಾರೆ. ಬೋಧನೆಯಲ್ಲಿ ಸೇವಾನಿರತ ಬೋಧಕರಿಗಿಂತ ಪ್ರಶಿಕ್ಷಣಾರ್ಥಿಗಳ ಬೋಧನೆಯು ಪರಿಣಾಮಕಾರಿ ಯಾಗಿರುತ್ತದೆ ಎಂದು ಅಧ್ಯಯನದ ಮೂಲಕ ಸ್ಪಷ್ಟಪಡಿಸಿದ್ದಾರೆ. ಪ್ರಶಿಕ್ಷಣಾರ್ಥಿಗಳು ಪಾಠಯೋಜನೆಯ ಹಂತಗಳನ್ನು ನಿರ್ಧಿಷ್ಟ ಅವಧಿಯಲ್ಲಿ ಪೂರೈಸುತ್ತಾರೆ. ಕಡಿಮೆ ಕಲಿಕಾ ಘಟಕವನ್ನು ತೆಗೆದುಕೊಂಡು ಹೆಚ್ಚಿನ ಅವಧಿಯಲ್ಲಿ ಬೋಧಿಸುವುದರಿಂದ ಬೊಧನೆಯು ಪರಿಣಾಮಕಾರಿಯಾಗುತ್ತದೆ ಎಂದು ಸರಾಸರಿ ಅಂಕಿ ಸಂಖ್ಯೆಗಳ ಮೂಲಕ ಕೊಷ್ಟಕದಲ್ಲಿ ಗುರುತಿಸಿದ್ದಾರೆ.

ರತ್ನಾಬಾಯಿ ಸಂಗಣಗೌಡ ರವರು "ಪ್ರೌಢಶಾಲಾ ಶಿಕ್ಷಕರ ಮೌಲ್ಯ" ಕುರಿತು ವೆಂಕೊಬಾ ನಾರಾಯಣಪ್ಪರವರ ಮಾರ್ಗದರ್ಶನದಲ್ಲಿ ಎಂ.ಇಡಿ ಕಿರು ಪ್ರಬಂಧವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಇವರು ಪ್ರಮುಖವಾಗಿ ವಿದ್ಯಾರ್ಥಿ ಮತ್ತು ಬೋಧಕರಿಬ್ಬರಲ್ಲಿಯು ಒಳ್ಳೆಯ ಮೌಲ್ಯಗಳು ಇರಬೇಕು. ಅಂದರೆ ತಾಳ್ಮೆ, ಆರೋಗ್ಯ, ಹವ್ಯಾಸ, ಸೃಜನಶೀಲತೆ ಇತ್ಯಾದಿ ಮೌಲ್ಯಗಳು ಇದ್ದಾಗ ಬೋಧನೆಯು ಪರಿಣಾಮಕಾರಿಯಾಗಲು ಸಾಧ್ಯ ಎಂಬುವುದನ್ನು ಸ್ಪಷ್ಟಪಡಿಸಿದ್ದಾರೆ.

ವಿಜಯಕುಮಾರ ಶಿವರಾಮರವರು "ಚಿತ್ತಾಪೂರ ತಾಲೂಕಿನ ಪ್ರೌಢಶಾಲೆಗಳ ೯ನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಅವರ ಕುಟುಂಬದ ಆರ್ಥಿಕ

ಮತ್ತು ಸಾಮಾಜಿಕ ಸ್ಥಿತಿಗತಿಗಳ ಪ್ರಭಾವ ಕುರಿತು ಒಂದು ಅಧ್ಯಯನ" ಟಿ.ಎನ್.ಲೊಕೇಶರವರ ಮಾರ್ಗದರ್ಶನದಲ್ಲಿ ಎಂ.ಇಡಿ ಕಿರು ಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ ಮೈಸೂರು ೨೦೧೦-೧೧ರಲ್ಲಿ ಸಲ್ಲಿಸಿದ್ದಾರೆ. ಈ ಅಧ್ಯಯನ ಗಮನಿಸಿದಾಗ ಕಲಿಕಾರ್ಥಿಗಳು ಕಲಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವದಕ್ಕೆ ಅವರ ಮನೆಯ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯು ಕಾರಣ ಎಂಬ ಅಂಶವನ್ನು ಕ್ಷೇತ್ರ ಕಾರ್ಯ ಅಧ್ಯಯನದ ಮೂಲಕ ಪ್ರತಿಶತದಲ್ಲಿ ಗುರುತಿಸಿದ್ದಾರೆ.

ಮಧು ಎಚ್ ಗೋವಿಂದಪ್ಪನವರು "ಹಿರೇಕೆರೂರ ತಾಲೂಕಿನ ಗ್ರಾಮೀಣ ಪ್ರದೇಶದ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಒಂದು ಅಧ್ಯಯನ" ಕುರಿತು ಶಿವಕುಮಾರವರ ಮಾರ್ಗದರ್ಶನದಲ್ಲಿ ಎಂ.ಇಡಿ ಕಿರು ಪ್ರಬಂಧವನ್ನು ಶ್ರೀಸತ್ಯಂ ಶಿಕ್ಷಣ ಸ್ನಾತಕೋತರ ಅಧ್ಯಯನ ಕೇಂದ್ರ ಬಳ್ಳಾರಿಗೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಶೀರ್ಷಿಕೆಯಡಿ ಕೇವಲ ಹೆಣ್ಣು ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಕಲಿಕೆಗೆ ಉಂಟಾಗುವ ಸಮಸ್ಯೆಗಳನ್ನು ಗುರುತಿಸಿದ್ದಾರೆ. ಹಾಗೂ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಹೆಣ್ಣು ಮಕ್ಕಳು ಹೆಚ್ಚು ಶೈಕ್ಷಣಿಕ ಕ್ಷೇತ್ರದಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಗಮನಿಸಿ ಅಂಕಿ ಸಂಖ್ಯೆಗಳ ಮೂಲಕ ದಾಖಲಿಸಿದ್ದಾರೆ.

೨.೩. ಎಂ.ಫಿಲ್. ಸಂಪ್ರಬಂಧಗಳು

ಎಚ್.ವರಲಕ್ಷ್ಮೀ ರವರು "ಉನ್ನತ ಶಿಕ್ಷಣದಲ್ಲಿ ಕನ್ನಡ" ಒಂದು ಅಧ್ಯಯನ ಸ್ನಾತಕೊತ್ತರ ಪದವಿಧರರನ್ನು ಅನುಲಕ್ಷಿಸಿ" ಎಂಬ ಎಂ.ಫಿಲ್ ಸಂಪ್ರಬಂಧವನ್ನು ಮಾಧವ ಪೆರಾಜೆರವರ

ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಕರ್ನಾಟಕದಲ್ಲಿನ ಸ್ನಾತಕೊತ್ತರ ಪದವಿಧರರ ಕನ್ನಡ ಪಠ್ಯಕ್ರಮವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಉನ್ನತ ಶಿಕ್ಷಣದಲ್ಲಿ ಬೋಧನಾ ಪದ್ದತಿ, ಕನ್ನಡ ಸಾಹಿತ್ಯದ ಬೋಧನಾ ಪದ್ದತಿ, ಗುರು-ಶಿಷ್ಯರ ನಡಾವಳಿ, ಕರ್ನಾಟಕದ ಉನ್ನತ ಶಿಕ್ಷಣದ ಇತಿಹಾಸ, ಉನ್ನತ ಶಿಕ್ಷಣ ಕುರಿತು ವಿವಿಧ ಆಯೋಗಗಳ ವರದಿ, ಇಂದಿನ ಸೆಮಿಸ್ಟರ್ ಪದ್ದತಿ, ಈ ಎಲ್ಲಾ ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಮತ್ತು ದೂರ ಶಿಕ್ಷಣ ಪದ್ದತಿಯ ಮೂಲಕ ಕಲಿಯುವಂತಹ ಶಿಕ್ಷಣಾರ್ಥಿಗಳಲ್ಲಿ ಕನ್ನಡ ಸಾಹಿತ್ಯ ಯಾವ ರೀತಿ ಬೆಳೆದು ಬಂದಿದೆ ಎಂಬುದನ್ನು ಪೈ ನಕ್ಷೆಯ ಮೂಲಕ ಗುರುತಿಸಿದ್ದಾರೆ.

ಸಿದ್ದಲಿಂಗಪ್ಪ ಎಸ್. ದೇಶಮುಖರವರು "ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು" ಕುರಿತು ಕೃಷ್ಣಪರಮೇಶ್ವರ ಭಟ್‌ರವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು ೨೦೦೭-೦೮ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿಯಲ್ಲಿ ಪ್ರೌಢಶಾಲೆಯ ಮಕ್ಕಳು ಕಾಗುಣಿತದ ರೇಖಾವಿನ್ಯಾಸಗಳನ್ನು ಸರಿಯಾಗಿ ಅಳವಡಿಸದೆ ಬರೆಯುವುದು.

[illegible]

ತಲೆಕಟ್ಟು ಏತ್ವ, ದೀರ್ಘ, ಕೊಂಬು, ಅರ್ಕಾವತ್ತು, ಅರ್ಧಾಕ್ಷರ ಚಿಹ್ನೆ ಬರೆಯುವುದನ್ನು ಗರುತಿಸಿದ್ದಾರೆ. ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ವ್ಯತ್ಯಾಸ ತಿಳಿಯದೆ ಓದುವುದು, ಬರೆಯುವುದು ಶ,ಷ,ಸ, ಅಕಾರಾದಿ, ಸ್ವರಾದಿ ಇತ್ಯಾದಿ ವರ್ಣಗಳಲ್ಲಿ ಆಗುವ ದೋಷಗಳನ್ನು ಗುರುತಿಸಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರೌಢಶಾಲಾ ಮಕ್ಕಳ ಸ್ವವಿವರಗಳ ಹಿನ್ನಲೆಯಲ್ಲಿ ಅಧ್ಯಯನವನ್ನು ಕೈಗೊಂಡಿದ್ದಾರೆ.

ಎಚ್.ಆರ್. ರೇಣುಕ ರವರು "ಕನ್ನಡ ಉಪಭಾಷೆಗಳು" ಕುರಿತು ಚಂದು ಕಾಳೆನ್ ಹಳ್ಳಿಯವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಈ ಶಿರ್ಷಿಕೆಯಡಿಯಲ್ಲಿ ಧ್ವನಿ, ಧ್ವನಿಮಾ, ಆಕೃತಿಮಾ, ವ್ಯಾಕರಣಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ವಿಸ್ತಾರವಾದ ಕನ್ನಡ ಉಪಭಾಷೆಯನ್ನು ಸೀಮಿತ ವ್ಯಾಪ್ತಿ ಪ್ರದೇಶಗಳಲ್ಲಿ ಅಧ್ಯಯನ ಕೈಗೊಂಡಿದ್ದಾರೆ. ಧಾರವಾಡ, ಮಂಗಳೂರು, ಮೈಸೂರು, ಕಲಬುರ್ಗಿ ಕನ್ನಡದಲ್ಲಿನ ಧ್ವನಿ, ಧ್ವನಿಮಾಗಳ ಬದಲಾವಣೆಯನ್ನು ಈ ಅಧ್ಯಯನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಹಾದೇವರವರು "ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಗಳ ಪ್ರಭಾವ" ಒಂದು ಅಧ್ಯಯನ ಕುರಿತು ಎಚ್.ಎಲ್.ಮಹಾದೇವರವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿಯಲ್ಲಿ ಕನ್ನಡ ಭಾಷೆಯು ಕೊಟ್ಟಿರುವುದಕ್ಕಿಮತ ತೆಗೆದುಕೊಂಡಿರುವುದೇ ಹೆಚ್ಚು, ಭೌಗೋಳಿಕ ವರ್ಗೀಕರಣ, ಜನಾಂಗಿಕ ವರ್ಗೀಕರಣ, ರಾಚನಿಕ ವರ್ಗೀಕರಣ, ವಾಂಶೀಕ ವರ್ಗೀಕರಣಗಳ ಮೂಲಕ ಅನ್ಯಭಾಷೆಗಳು ಯಾವ ರೀತಿಯಾಗಿ ಕನ್ನಡ ಭಾಷೆಯ ಮೇಲೆ ಪ್ರಭಾವ ಬೀರಿವೆ ಎಂಬುದನ್ನು ಅಧ್ಯಯನದ ಮೂಲಕ ಗುರುತಿಸಿಕೊಂಡಿದ್ದಾರೆ.

ಬಸವರಾಜ ಕೊಡುಗುಂಟಿಯವರು "ಮಕ್ಕಳ ಭಾಷೆ ಒಂದು ಅಧ್ಯಯನ" ಕುರಿತು ಸಂಗಮೇಶ ಸವದತ್ತಿ ಮಠರವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ವಿಷಯದ ಮೇಲೆ ಮಕ್ಕಳ ಭಾಷೆಯ ವಿಕಾಸದ ಹಂತಗಳು ಹೇಗೆ ಪ್ರಾರಂಭವಾಗುತ್ತದೆ ಎಂಬುವುದನ್ನು ಉದಾಹರಣೆ ಮೂಲಕ ಸ್ಪಷ್ಟಪಡಿಸಿದ್ದಾರೆ. ಅಲ್ಪಪ್ರಾಣ, ಮಹಾಪ್ರಾಣ, ಹ್ರಸ್ವಸ್ವರ, ದೀರ್ಘಸ್ವರಗಳು, ವ್ಯಂಜಗಳ ಬಗ್ಗೆ ತಿಳುವಳಿಕೆ ಇದ್ದು ಆ ಮಕ್ಕಳು ಪದಗಳನ್ನು ಬಳಸುವಾಗ ಆಗುವ ವ್ಯತ್ಯಾಸಗಳನ್ನು ವಿವರಿಸಿದ್ದಾರೆ. ಮಹಾಪ್ರಾಣಕ್ಷರಗಳನ್ನು ಹಾಗೂ ಪಠ್ಯದಲ್ಲಿರುವ ಮಹಾಪ್ರಾಣ ಪದಗಳನ್ನು ಮಕ್ಕಳು ಹೇಗೆ ಉಚ್ಚಾರ ಮಾಡುತ್ತಾರೆ ಎಂಬುದನ್ನು ಚರ್ಚಿಸಿದ್ದಾರೆ.

ಎಸ್.ಪಿ. ತಿಪ್ಪನಾಯಕರವರು "ಕನ್ನಡ ಸಂಧಿ ಸಮಸ್ಯೆಯ ಸ್ವರೂಪ" ಕುರಿತು ಪಿ.ಮಹಾದೇವಯ್ಯರವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦ರಲ್ಲಿ ಸಲ್ಲಿಸಿದ್ದಾರೆ. ಈ ಶೀರ್ಷಿಕೆಯಡಿಯಲ್ಲಿ ಪ್ರಾಥಮಿಕ ಕನ್ನಡ ಭಾಷಾ ಪಠ್ಯಗಳನ್ನು ಅನುಲಕ್ಷಿಸಿ ಕನ್ನಡ ಸಂಧಿ ಸಮಸ್ಯೆಯ ಸ್ವರೂಪವನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಕನ್ನಡ ಭಾಷಾ ಪಠ್ಯಗಳಲ್ಲಿ ಕನ್ನಡ, ಸಂಸ್ಕೃತ ಸಂಧಿಗಳೆಂದು ಬೇರೆ ಬೇರೆ ಹೇಳಲಾಗುತ್ತದೆ. ಆದರೆ ಅವೆರಡು

ಸಂಧಿಗಳು ಒಂದಕ್ಕೊಂದು ಹೇಗೆ ಭಿನ್ನ ಎಂಬುದನ್ನು ಯಾವ ಕನ್ನಡ ಭಾಷಾ ಪಠ್ಯಗಳಲ್ಲೂ ಹೇಳಿಕೊಡುತ್ತಿಲ್ಲ ಎಂಬುದನ್ನು ಉದಾಹರಣೆಯ ಮೂಲಕ ಕನ್ನಡ ಸಂಧಿ ಸ್ವರೂಪವನ್ನು ವಿಶ್ಲೇಷಿಸಿದ್ದಾರೆ.

೨.೪. ಪತ್ರಿಕಾ ಲೇಖನಗಳು

"ಬರೆದು ಬರೆದು ಅರೆದು ಕುಡಿಯುವದೇ ಉತ್ತಮ" ಎಂಬ ಲೇಖನವು ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಕಂಪ್ಯೂಟರನಲ್ಲಿ ಟೈಪ್ ಮಾಡಿ ಕಲಿಯುವುದಕ್ಕಿಂತ ಓದುವುದು ಮತ್ತು ಬರೆಯುವುದರಿಂದ ಮೆದುಳಿನ ವಿವಿಧ ಭಾಗಗಳು ಉತ್ತೇಜನಗೊಳ್ಳುತ್ತವೆ ಎಂದು ತಜ್ಞರು ಒಪ್ಪಿ ಹೇಳಿರುತ್ತಾರೆ. ಮಕ್ಕಳು ಪೆನ್ನಿನಿಂದ ಬರೆಯುವುದರಿಂದ ಭಾಷೆ ಸಹ ಕಲಿಯುವಿಕೆ ಪ್ರಕ್ರಿಯೆ ಮೇಲೆ ಪ್ರಭಾವ ಬೀರುತ್ತದೆ. ಕಲಿಯುವಿಕೆ ಕಷ್ಟವಿರುವ ಮಂದಿಗೆ ವಿಶೇಷ ಶಿಕ್ಷಣದ ಭಾಗವಾಗಿರುತ್ತದೆ ಎಂದು ಮ್ಯಾಂಗೇನ್ ರವರು ಹೇಳುತ್ತಾರೆ. ಒಟ್ಟಿನಲ್ಲಿ ಈ ಲೇಖನದಲ್ಲಿ ತಿಳಿಸುವುದೇನೆಂದರೆ ಬರವಣಿಗೆಯಿಂದ ಕಲಿಕೆ ಸ್ಪಷ್ಟಗೊಳ್ಳುತ್ತದೆ.

"ನಮ್ಮ ಮಕ್ಕಳು ಆಟ-ಪಾಠ-ಒಡನಾಟ" ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಈ ಲೇಖನಗಳು ಗಿರಿಮನೆ ಶ್ಯಾಮರಾವ ರವರ ಲೇಖನವಾಗಿದೆ. ಈ ಲೇಖನಗಳು ಮಕ್ಕಳ ಕಲಿಕೆ ಹೇಗಿರಬೇಕು, ಮಕ್ಕಳನ್ನು ಯಾವ ರೀತಿ ಕಲಿಕೆಗೆ ಪ್ರೇರೆಪಿಸಬೇಕು, ತಂದೆ-ತಾಯಿಯರ ಕರ್ತವ್ಯವೇನು, ಮಕ್ಕಳ ಮೇಲೆ ಶಿಕ್ಷಕರು ತಮಗೆ ಗೊತ್ತಿಲ್ಲದೆ ಹೇಗೆ ಒತ್ತಡ ಹಾಕುತ್ತಾರೆ, ಮಕ್ಕಳ ಮೇಲೆ ಒತ್ತಡ ಹಾಕದೆ ಹೇಗೆ ಕಲಿಸಬೇಕು, ಎಂಬಿತ್ಯಾದಿ ಅಂಶಗಳನ್ನು ಕುರಿತು ವಿವರಣೆಯನ್ನು ಕೊಡುತ್ತಾರೆ.

"ಸಿಕ್ಕಿದವರಿಗೆ ಸೀರುಂಡೆ' ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡ ಈ ಲೇಖನದಲ್ಲಿ ವ್ಯಾಕರಣ ಹಾಸ್ಯಕ್ಕೆ ಗುರಿಯಾಗಿದೆ ಎಂಬ ವಿಷಯವನ್ನು ಕುರಿತು ಎಂ.ವಿ ಸೀತಾರಾಮಯ್ಯನವರು ಹೀಗೆ ಹೇಳುತ್ತಾರೆ. ಕಬ್ಬಿಣದ ಕಡಲೆಯಂತಿರುವ ವ್ಯಾಕರಣವು ಆದಿಶಂಕರನಾದ ಪಂಪನವರೆಗೆ ಮತ್ತು ಇಂದಿಗೂ ಅವಹೇಳನ ಹಾಸ್ಯಕ್ಕೆ ಗುರಿಯಾಗಿದೆ ಎನ್ನುತ್ತಾರೆ. ಇಂತಹ ವ್ಯಾಕರಣವನ್ನು ಕಲಿಸುವುದಕ್ಕಾಗಿಯೆ ಶಾಲೆಗಳನ್ನು ಪ್ರಾರಂಭಿಸಿಸಲಾಗಿದೆ. ವಿದ್ಯಾರ್ಥಿಗಳಿಗೆ ಭಾಷಾ ಕಲಿಕೆಯ ಸಂದರ್ಭದಲ್ಲಿ ವ್ಯಾಕರಣ ಕಲಿಕೆ ಸಮಸ್ಯೆಯಾಗುತ್ತದೆ ಎಂದು ಹೇಳಿದ್ದಾರೆ.

"ಕನ್ನಡ ಶಬ್ದ ಸಂಪತ್ತು ವಿನಾಶ ತಡೆ ನಮ್ಮೆಲರ ಜವಾಬ್ದಾರಿ" ಎನ್ನುವ ಪತ್ರಿಕಾ ಸಂವಾದದಲ್ಲಿ ಜಿ.ವೆಂಕಟಸುಬ್ಬಯ್ಯನವರು ಇವತ್ತಿನ ಕನ್ನಡ ಬರವಣಿಗೆ ಶೈಲಿ, ಓದುಗಾರಿಕೆ, ಕನ್ನಡ ಕೃತಿಗಳನ್ನು ಕುರಿತು ಮಾತನಾಡುತ್ತ ಕನ್ನಡಕ್ಕೆ ಬೇಕಾದ ಕೆಲಸಗಳು ಆಗುತ್ತಿಲ್ಲ ಇಂಗ್ಲಿಷ್ ಅಡುಗೆ ಮನೆಯವರೆಗೆ ಕಾಲಿಟ್ಟಿದೆ ಹಾಗಾಗಿ ನಮ್ಮ ಮಕ್ಕಳು ಕನ್ನಡ ಮೊದಲು ಅಭ್ಯಾಸ ಮಾಡಲಿ ನಂತರ ಬೇಕಿದ್ದರೆ ಬೇರೆ ಭಾಷೆ ಕಲಿಯಲಿ ಎಂದಿದ್ದಾರೆ.

"ಅಕ್ಷರ ವಂಚಿತರ ಪರ ಇರುವ ಮೂಲಭೂತ ಶಿಕ್ಷಣ ಹಕ್ಕು" ಎನ್ನುವ ಲೇಖನವು ಪ್ರಜಾವಾಣಿ ಪತ್ರಿಕೆಯಲ್ಲಿ ೨೦-೦೮-೧೦ರಂದು ಪ್ರಕಟಗೊಂಡಿತು ಲೇಖನಕಾರರು

[illegible]

ಟಿ.ಎಂ.ಕುಮಾರರವರು. ಆರ್.ಟಿ.ಇ ನಿಯಮ ೨೯ ರಂತೆ ರಾಜ್ಯಗಳು ತಮ್ಮಲ್ಲಿರುವ ಎಲ್ಲ ಶಾಲೆಗಳ ಶೈಕ್ಷಣಿಕ ನಿರ್ವಹಣೆಗಾಗಿ ಶೈಕ್ಷಣಿಕ ಪ್ರಾಧಿಕಾರ ರಚಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯ ಪಠ್ಯಕ್ರಮ ಹಾಗೂ ಕೇಂದ್ರ ಪಠ್ಯಕ್ರಮಗಳಲ್ಲಿ ಏಕರೂಪತೆ ಬರಬೇಕಾಗುತ್ತದೆ. ಆಗ ಗುಣಮಟ್ಟ ಕುಸಿಯುತ್ತದೆ. ಆದ್ದರಿಂದ ರಾಜ್ಯ ಹಂತದ ನಿರ್ವಹಣೆ ಬೇಡ ಎಂದಿದ್ದಾರೆ.

"ಕನ್ನಡ ಲಿಪಿ ಪರಿಷ್ಕರಣೆ" ಎನ್ನುವ ಲೇಖನವು ಆರ್ ವೈ ಗೋಪಾಲ ಬಿಳಿಮಲೆ ಎನ್ನುವವರು ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಪ್ರಸ್ತುತದಲ್ಲಿರುವ ಲಿಪಿ ರಚನೆಯ ಮೂಲ ಸ್ವರೂಪವನ್ನು ಉಳಿಸಿಕೊಂಡು ಸ್ವಲ್ಪ ಮಟ್ಟಿಗೆ ಆಧುನೀಕರಿಸಿಕೊಳ್ಳಬೇಕು. ಆಗ ಅದು ಸರಳ ಸುಲಲಿತವಾಗುತ್ತದೆ. ಕನ್ನಡ ಭಾಷೆಯ ಒಟ್ಟಾರೆ ಮೌಲ್ಯ ವೃದ್ಧಿಯಾಗಲಿದ್ದು, ಮಾದರಿ ಭಾರತೀಯ ಭಾಷೆಯನ್ನು ಕಾಣಬಹುದು. ಅಕ್ಷರಗಳ ಪರಿಷ್ಕರಣೆಯಲ್ಲಿ ಎಲ್ಲಾ ಅಕ್ಷರಗಳು ಹ್ರಸ್ವದಲ್ಲಿರಬೇಕು, ಲಿಪಿಗಳನ್ನು ಒತ್ತಕ್ಷರಗಳ ಕ್ಲಿಷ್ಟತೆಯಿಂದ ಮುಕ್ತಮಾಡಿ ಸರಳಗೊಳಿಸಬೇಕು. ಇದರಿಂದ ಮೂಲಾಕ್ಷರಗಳ ಒಟ್ಟು ಸಂಖ್ಯೆ ೫೨ ರಿಂದ ೨೮ ಕ್ಕೆ ಇಳಿಯುತ್ತದೆ. ಉದಾ: ಸ್ವರಾಕ್ಷರಗಳು ೧೪ ರಿಂದ ೫ ಮತ್ತು ವ್ಯಂಜನಾಕ್ಷರಗಳು ೩೮ ರಿಂದ ೨೩ ಮಾತ್ರ. ಈ ರೀತಿಯ ಅಕ್ಷರಗಳ ಕಡಿತದಿಂದ ಬರವಣಿಗೆಯು ಸರಳವೂ, ಸುಲಲಿತವು ಮತ್ತು ನೋಡುವುದಕ್ಕೆ ಬಹಳ ಆಕರ್ಷಕವಾಗಿ ಕಾಣುತ್ತದೆ ಎನ್ನುತ್ತಾರೆ. ಇಂತಹ ಒಂದು ಬದಲಾಣೆಯಿಂದ ಭಾರತೀಯ ಎಲ್ಲಾ ಭಾಷೆಗಳಲ್ಲಿಯೂ ಏಕರೂಪತೆಯನ್ನು ತರಬಹುದು ಎಂದಿದ್ದಾರೆ.

"ಪಠ್ಯಕ್ರಮ ಹತ್ತೆಂಟು ಮಜಲು ಹಲವು ಗೋಜಲು" ಎನ್ನುವ ಲೇಖನವನ್ನು ವಿಜಯಕರ್ನಾಟಕ ಪತ್ರಿಕೆಯಲ್ಲಿ ಟಿ.ಎಂ. ಕುಮಾರ ಇವರು ಪ್ರಕಟಿಸಿದ್ದಾರೆ. ರಾಷ್ಟ್ರೀಯ ಪಠ್ಯಕ್ರಮವನ್ನು ರೂಪಿಸುವ ಬಗ್ಗೆ ಕೇಳಬರುತ್ತಿರುವ ಮಾತುಗಳನ್ನು ಮತ್ತು ಈ ಕುರಿತು ಪ್ರಯತ್ನಗಳು ಸಾಗಿಬಂದ ಹಾದಿ ಯಾವುದು ಹಾಗು ಪಠ್ಯಕ್ರಮ ಪರಿಚಯಿಸುವುದರ ಹಿಂದಿನ ತೊಳಲಾಟಗಳೇನು ಎಂಬ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ.

"ಗಡಿಯಲ್ಲಿ ಭಾಷಿಕ ಅಸ್ಮಿತೆ ಸಾಫಲ್ಯ-ವೈಫಲ್ಯ" ಎಂಬ ಲೇಖನವನ್ನು ಡಿ.ಎಸ್. ಚೌಗಲೆಯವರು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಭಾಷಾವಾರು ಪ್ರಾಂತಗಳ ರಚನೆಯಾದ ಮೇಲೆ ಗಡಿಯಲ್ಲಿರುವ ಪ್ರದೇಶಗಳು ಎರಡೆರಡು ಭಾಷೆಗಳ ಬಳಕೆಯಿಂದ ಎದುರಿಸುವ ಸಮಸ್ಯೆಗಳನ್ನು ಕುರಿತು ವಿವರಿಸಿದ್ದಾರೆ.

"ಸರಕಾರವೆ ಶಿಕ್ಷಣ ನೀಡುವುದೋ? ನಾವೇ ಮೌಲ್ಯ ಬಿಸಾಡಿ ಖರಿದಿಸುವುದೋ?" ಎಂಬ ಹರ್ಷವರ್ಧನ ವಿ. ಶೀಲವಂತ ರವರು ವಿಜಯಕರ್ನಾಟಕ ಪತ್ರಿಕೆಗೆ ನೀಡಿದ ಲೇಖನದಲ್ಲಿ ಬೋಧಕರನ್ನು ಸರಕಾರ ಯಾವ ರೀತಿಯಾಗಿ ಪರಿಗಣಿಸಲ್ಪಡುತ್ತಿದೆ ಎನ್ನುವುದನ್ನು ಕುರಿತು ವಿಶ್ಲೇಷಿಸಿದ್ದಾರೆ.

ದಿನಾಂಕ ೨೩-೧೦-೨೦೧೦ ರಂದು ಪ್ರಜಾವಾಣಿ ಪತ್ರಿಕೆಯಲ್ಲಿ "ಪ್ರಶ್ನೆ: ವಿದ್ಯಾರ್ಥಿ-ಬೋಧಕ" ಎನ್ನುವ ಲೇಖನದಲ್ಲಿ ಪದ್ಯಾಣ ಪರಮೇಶ್ವರ ಭಟ್ ರವರು ಬೋಧಕ ಮತ್ತು ವಿದ್ಯಾರ್ಥಿಯ ಮಧ್ಯೆ

ಸಂಪರ್ಕ ಸಾಧಿಸುವ, ಬೆಳೆಸುವ ಪ್ರಮುಖ ಸಾಧನವೆ ಪ್ರಶ್ನೆ ಎನ್ನುತ್ತಾರೆ. ಬೋಧನೆಯ ಸಂದರ್ಭದಲ್ಲಿ ಪ್ರಶ್ನೆಗಳು ಸಂಶಯಾಸ್ಪದವಾಗಿರಕೂಡದು. ಪ್ರಶ್ನೆ ಅರ್ಥವಾಗಿ ವಿದ್ಯಾರ್ಥಿಗಳು ಉತ್ತಿರಿಸುವ ರೀತಿಯಲ್ಲಿ ಪ್ರಶ್ನೆಗಳಿರಬೇಕು ಎನ್ನುತ್ತಾರೆ. ಹಾಗೂ ಬೋಧಕರು ಎರಡನೇ ಬಾರಿಗೆ ವಿದ್ಯಾರ್ಥಿಯಾಗಿ ನಿರಂತರ ಅಧ್ಯಯನ ಶೀಲರಾಗಿರಬೇಕು. ಇದು ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವ ಮಾರ್ಗ ಎನ್ನುತ್ತಾರೆ.

"ಶೈಕ್ಷಣಿಕ ಗುಣಮಟ್ಟ ಗ್ರಾಮೀಣ ಶಿಕ್ಷಣಕ್ಕೆ ಕಾಯಕಲ್ಪ ಅಗತ್ಯ" ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಅಂಜನಾದ್ರಿಯವರ ಲೇಖನವಾಗಿದೆ. ಖಾಸಗಿ ಶಾಲೆಗಳಿಗಿಂತ ಸರಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಏಕೆ ಹಿಂದೆ ಬಿದ್ದಿದೆ ಎಂದರೆ ಸರಕಾರಿ ಶಾಲೆಗಳಲ್ಲಿ ಬಿಸಿಯೂಟ ಯೋಜನೆ, ಸೈಕಲ್, ಪುಸ್ತಕ, ಸಮವಸ್ತ್ರ ವಿತರಣೆ, ಹೀಗೆ ಖರ್ಚು ಆಧಾರಿತ ಸರಕಾರಿ ಸ್ವಾಮ್ಯದ ಶಿಕ್ಷಣ ಕ್ಷೇತ್ರ ಸಂಪನ್ಮೂಲವನ್ನು ಅವಲಂಬಿಸಿದೆ. ಅದಕ್ಕಾಗಿ ಏಕರೂಪದ ಶಿಕ್ಷಣ ನೀತಿ ಜಾರಿಯಾಗಬೇಕು. ಖಾಸಗಿ ಶಾಲೆಗಳಲ್ಲಿ ಕಲಿಕಾ ಗುಣಮಟ್ಟ ಇದೆ. ಆದರೆ ಶುಲ್ಕ ನೀತಿಯು ಬೇರೆ ಬೇರೆಯಾಗಿದೆ. ಹಾಗೂ ಗ್ರಾಮಾಂತರ ಶಿಕ್ಷಕರು ಅವರವರ ಪ್ರದೇಶದಲ್ಲಿ ವಾಸ್ತವ್ಯ ಮಾಡಬೇಕು. ನೋಡಿಕಲಿ, ಮಾಡಿಕಲಿ, ಎಂಬಂತಾಗಿ ಕಲಿಕಾ ಸಾಮಾಗ್ರಿಗಳ ವ್ಯವಸ್ಥೆಯಾಗಬೇಕು. ಗ್ರಂಥಾಲಯ, ಪ್ರಯೋಗಾಲಯಗಳ ವ್ಯವಸ್ಥೆಯಿರಬೇಕು. ಈ ಎಲ್ಲಾ ಅನುಕೂಲಗಳು ಖಾಸಗಿ ಶಾಲೆಗಳಿಗೆ ಮಾತ್ರ ಲಭ್ಯ. ಸರಕಾರಿ ಶಾಲೆಗಳಲ್ಲಿ ಇಲ್ಲದಿರುವುದರಿಂದ ಕಲಿಕಾ ಗುಣಮಟ್ಟ ಕುಸಿದಿದೆ ಆದಕಾರಣ ಏಕರೂಪದ ಶಿಕ್ಷಣ ಜಾರಿಯಾಗಬೇಕು ಎಂದಿದ್ದಾರೆ.

"ಕಾದಿದೆ ಕನ್ನಡ ಶಾಲೆಗಳಿಗೆ ಇನ್ನಷ್ಟು ಗಂಡಾಂತರ" ೧೨ ಜನೆವರಿ ೨೦೧೨ರಂದು ಸುಧಾಕರ ಎಸ್.ಶೆಟ್ಟಿಯವರ ಲೇಖನವು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಸರಕಾರವು ಶೇಕಡಾ ೨೫ ರಷ್ಟು ಬಡ ಮಕ್ಕಳಿಗಾಗಿ ಖಾಸಗಿ ಶಾಲೆಗಳಲ್ಲಿ ಸೀಟನ್ನು ಕಾಯ್ದಿರಿಸಬೇಕು. ಅಷ್ಟು ಸೀಟುಗಳ ಶುಲ್ಕ ಸರಕಾರವೆ ಭರಿಸುತ್ತದೆ. ಇದರಿಂದ ಸರಕಾರಿ ಶಾಲೆಗಳಿಗೆ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗಿ ಸರಕಾರಿ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬರುತ್ತದೆ. ಅದನ್ನು ಹೊರತುಪಡಿಸಿ ಸರಕಾರಿ ಶಾಲೆಗಳನ್ನು ಖಾಸಗಿ ಶಾಲೆಯವರು ದತ್ತು ಪಡೆದುಕೊಂಡು ಗುಣಮಟ್ಟದ ಶಿಕ್ಷಣವನ್ನು ನೀಡಲಿ ಏಕೆಂದರೆ ಖಾಸಗಿ ಶಾಲೆಗಳಲ್ಲಿ ಎಲ್ಲಾ ರೀತಿಯ ಕಲಿಕಾ ಸೌಕರ್ಯವಿರುತ್ತದೆ ಎಂದಿದ್ದಾರೆ.

"ಕಲಿಸಬೇಕಿದೆ ಕನ್ನಡಿಗರಿಗೆ ಅಪ್ಪಟ ಕನ್ನಡ" ೫ನೇ ಜನೆವರಿ ೨೦೧೨ರಲ್ಲಿ ಸಿ.ಎನ್ ಕೃಷ್ಣಮಾಚಾರ್ ಅವರ ಲೇಖನವು ಪ್ರಜಾವಾಣಿಯಲ್ಲಿ ಪ್ರಕಟಗೊಂಡಿದ್ದು. ಕನ್ನಡ ಭಾಷೆಯ ಮೇಲೆ ತೆಲಗು, ಮಲೆಯಾಳಿ, ಪಂಜಾಬಿ, ಉರ್ದು, ಗುಜರಾತಿ, ಬೆಂಗಾಲಿ, ಅತಿಹೆಚ್ಚು ಎಂದರೆ ಇಂಗ್ಲಿಷ್ ಭಾಷೆ ಈ ಎಲ್ಲಾ ಭಾಷೆಗಳ ಪ್ರಭಾವದಿಂದಾಗಿ ಕನ್ನಡ ಭಾಷೆಯನ್ನು ಮಾತನಾಡುವಂತಹ ಕಿರಿಯರಿಂದ ಹಿರಿಯರವರೆಗೆ ಕನ್ನಡದ ಭಾಷೆಯ ಒಂದು ಪದವಾದರೆ ಇಂಗ್ಲಿಷ್ ಭಾಷೆಯ ಮತ್ತೊಂದು ಪದವನ್ನು ಸೇರಿಸಿ ಹೇಳುವವರೆಗೆ ಅವರ್‍ಯಾರಿಗು ಸಮಾಧಾನವೇ ಆಗುವದಿಲ್ಲ. ಆದಕಾರಣ ಕನ್ನಡಿಗರಿಗೆ

ಮೊದಲು ಅಪ್ಪಟ ಕನ್ನಡ ಭಾಷೆಯನ್ನು ಕಲಿಸಬೇಕು, ಕಲಿಸುವ ಕನ್ನಡದಲ್ಲಿ ತನ್ನತನವಿರಲಿ ಬೇರಾವುದೆ ಭಾಷೆ ಸುಳಿಯಬಾರದು. ಮನೆಯ ಪರಿಸರದಲ್ಲಿ ಮೊದಲು ತಮ್ಮ ತಮ್ಮ ಮಕ್ಕಳೊಂದಿಗೆ ಕನ್ನಡ ಭಾಷೆಯಲ್ಲಿಯೇ ಮಾತನಾಡಿದಾಗ ಮಾತ್ರ ಕನ್ನಡ ಉಳಿಯುತ್ತೆ ಎಂದಿದ್ದಾರೆ.

"ಶಾಲೆಗಳನ್ನು ಮುಚ್ಚುವದೇ ಸುಧಾರಣೆಯಲ್ಲ" ಡಾ.ಎಸ್.ಬಿ. ಜೋಗೂರ ಇವರ ಲೇಖನವು ೨ನೇ ನವೆಂಬರ್ ೨೦೧೧ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಫಲಿತಾಂಶದಲ್ಲಿ ಇಳಿಮುಖವಾಗಲು ಕಾರಣ ಕೇವಲ ಕಲಿಸುವವರು ಮಾತ್ರ ಕಾರಣವಾಗಿರದೇ ಆ ವಿದ್ಯಾರ್ಥಿಯ ಕೌಟುಂಬಿಕ ವಾತಾವರಣ, ಗೆಳೆಯರ ಬಳಗ, ಶೈಕ್ಷಣಿಕ ಪರಿಸರ, ಪಠ್ಯಕ್ರಮ, ಆಡಳಿತ ಮಂಡಳಿ, ಮೌಲ್ಯಮಾಪನದ ಕ್ರಮ, ಗ್ರಂಥಾಲಯ, ವಿದ್ಯಾರ್ಥಿಯ ಅಧ್ಯಯನದ ಕ್ರಮ ಮುಂತಾದವುಗಳು ಪ್ರಮುಖ ಕಾರಣವಾಗುತ್ತವೆ. ಎಲ್ಲದಕ್ಕೂ ಬೋಧಕರನ್ನೆ ಹೊಣೆಗಾರರನ್ನಾಗಿ ಮಾಡುವ ಮೂಲಕ ಗುಣಮಟ್ಟದ ಶಿಕ್ಷಣ ನಿರೀಕ್ಷಿಸುವುದು ತಪ್ಪು. ಅದಕ್ಕಾಗಿ ಶಾಲೆಗಳನ್ನು ಮುಚ್ಚುವ ಬದಲು ಸರಕಾರಿ ಶಾಲೆಗಳಲ್ಲಿ ಸುಧಾರಣೆಯಾದಾಗ ಮಾತ್ರ ಕಲಿಕೆಯ ಗುಣಮಟ್ಟ ಹೆಚ್ಚಾಗುತ್ತದೆ ಎನ್ನುತ್ತಾರೆ.

"ಮಾತೃಭಾಷೆ ಜೀವ ಉಳಿಸುವ ಹಾಲು" ನಿರಂಜನಾರಾಧ್ಯ ವಿ.ಪಿ.ಯವರ ಲೇಖನ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಸರಕಾರವೇ ಸರಕಾರಿ ಶಾಲೆಗಳಲ್ಲಿ ಆರನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸುವ ತೀರ್ಮಾನವನ್ನು ಕೈಗೊಂಡಿದ್ದರಿಂದ ಖಾಸಗಿ ಶಾಲೆಗಳು ಇದರ ಹೆಚ್ಚಿನ ಲಾಭವನ್ನು ಪಡೆದುಕೊಳ್ಳುತ್ತವೆ. ಜೀವನ ರೂಪಿಸಿದ ಮಾತೃಭಾಷೆಯನ್ನೆ ಮರೆತಂತೆ ಆಗುತ್ತದೆ. ಹಾಗಾಗಿ ೧೨ನೇ ತರಗತಿಯ ವರೆಗೆ ಮಾತೃಭಾಷೆಯಲ್ಲಿಯೇ ಬೋಧನೆ ಕಡ್ಡಾಯಗೊಳಿಸಬೇಕು ಎಂದಿದ್ದಾರೆ.

"ಸರಕಾರಿ/ಖಾಸಗಿ ಶಾಲೆ ನಮಗೆ ದಕ್ಕಿದೆಯೇ ವಸ್ತುಸ್ಥಿತಿ?" ಪ್ರಜಾವಾಣಿ ಪತ್ರಿಕೆಯ ಸಾಪ್ತಾಹಿಕ ಪುರಾವಣಿಯಲ್ಲಿ ಪ್ರಕಟಗೊಂಡ ಸುಮಂಗಲ ಅವರ ವಿಮರ್ಶಾ ಲೇಖನ ಇದಾಗಿದೆ. ಸರಕಾರಿ ಶಾಲೆ ಮತ್ತು ಖಾಸಗಿ ಶಾಲೆಯ ನಿಜವಾದ ವಸ್ತುಸ್ಥಿತಿ ಎಂದರೆ ಖಾಸಗಿ ಶಾಲೆಯಲ್ಲಿ ಎಲ್ಲಾ ರೀತಿಯ ಸೌಲಭ್ಯಗಳಿರುತ್ತವೆ. ಹಾಗೂ ಇಂಗ್ಲಿಷ್ ಶಿಕ್ಷಕರು ಇರುತ್ತಾರೆ. ಆದರೆ ಸರಕಾರಿ ಶಾಲೆಗಳಲ್ಲಿ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಮತ್ತು ಇಂಗ್ಲಿಷ್ ಬೊಧನೆಯ ಸಮಸ್ಯೆ ಇರುವುದರಿಂದ ಜನರು ಹಳ್ಳಿಯಲ್ಲಿ ಸರಕಾರಿ ಶಾಲೆ ಇದ್ದರು ಪಟ್ಟಣಗಳಲ್ಲಿರುವ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಾರೆ.

"ಮಗುವಿನ ಭಾಷೆ ಮತ್ತು ನಾವು ನೀವು" ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಗುರುಸ್ವಾಮಿಯವರ ಲೇಖನದಲ್ಲಿ ಭಾಷೆ ಚಿಂತನೆಗೆ, ಭಾವನೆಗೆ, ಅನುಭವಕ್ಕೆ ಆಕಾರ ಕೊಡುವ ಸಾಧನ. ಮಗುವಿನಲ್ಲಿ ಶೈಕ್ಷಣಿಕ ಪ್ರಗತಿಯಲ್ಲಿ ಭಾಷೆ ವಹಿಸುವ ಪಾತ್ರದ ಅರಿವು ಶಿಕ್ಷಕರಿಗೆ ಮಾತ್ರವೆ ಅಲ್ಲ ಪೋಷಕರಿಗೂ ಇರಬೇಕು. ಭಾಷಾ ಕಲಿಕೆಗೆ ಸಂಬಂಧಿಸಿದ ಬಾಹ್ಯ ವರ್ತನೆಗಳಲ್ಲಿ ಪ್ರಮುಖವಾದ

[illegible]

ಆಲಿಸುವಿಕೆ, ಮಾತನಾಡುವುದು, ಓದು, ಬರವಣಿಗೆ, ಇಂತಹ ವರ್ತನೆಗಳನ್ನು ಪ್ರಚೋದಿಸುವ ಮೂಲಕ ಭಾಷಾ ಕಲಿಕೆಯನ್ನು ಮಗುವಿನಲ್ಲಿ ವೃದ್ಧಿಸಬಹುದು ಎಂದಿದ್ದಾರೆ.

"ಶಿಕ್ಷಣ ಹಕ್ಕು : ಹಳೆ ಪಾತ್ರೆಯಲ್ಲಿ ಹೊಸನೀರು"? ೮-೫-೨೦೧೨ ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಆರ್. ಇಂದಿರಾರವರ ಲೇಖನ. ಭಾರತದ ಸಂವಿಧಾನ ೮೬ನೆ ತಿದ್ದುಪಡಿ ಅನ್ವಯ ೨೧(೦) ವಿಧಿಯಾಗಿ ರೂಪಿತವಾಗಿರುವ ಶಿಕ್ಷಣ ಹಕ್ಕು ಕಾಯ್ದೆಯ ಮೂಲ ಆಶಯವೆಂದರೆ ಶಾಲಾ ವಯೋ ಗುಂಪಿನ ಯಾವುದೇ ಮಗು ಶಾಲೆಯಿಂದ ಹೊರಗುಳಿಯಬಾರದೆಂದು. ಇದನ್ನೆ ಸರಕಾರ ಈಗ ಶಿಕ್ಷಣ ಹಕ್ಕು ಎಂದು ಪುನರ್ ಉಚ್ಚರಿಸುತ್ತಿದೆ. ಶಿಕ್ಷಣ ಹಕ್ಕಿನಡಿಯಲ್ಲಿ ಸರಕಾರವು ಶೇಕಡಾ ೨೫ ರಷ್ಟು ಬಡ ಮಕ್ಕಳಿಗೆ ಖಾಸಗಿ ಶಾಲೆಯಲ್ಲಿ ದಾಖಲಾತಿ ನೀಡಬೇಕು ಎಂದು ಹೇಳಿರುವ ಸಂಗತಿಯಲ್ಲಿ ಅಸ್ಪಷ್ಟತೆಯಿದೆ. ಏಕೆಂದರೆ ಯಾವ ರೀತಿಯಿಂದ ಬಡತನದಲ್ಲಿದ್ದವರು ಎಂದು ವಿಶ್ಲೇಷಿಸಬೇಕಿತ್ತು. ಮತ್ತು ಶೇಕಡಾ ೨೫ ಖಾಸಗಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುತ್ತದೆ. ಆದರೆ ಇನ್ನೂಳಿದ ಮಕ್ಕಳು ಇದರಿಂದ ವಂಚಿತರಾಗುತ್ತಾರೆ. ಏಕೆಂದರೆ ಸರಕಾರಿ ಶಾಲೆಗಳಲ್ಲಿ ಯಾವುದೇ ರೀತಿಯ ಸೌಲಭ್ಯಗಳು ಇಲ್ಲದಿರುವುದರಿಂದ ಎಂದಿದ್ದಾರೆ.

"ಸರಕಾರಿ ಶಾಲೆಗಳನ್ನು ಉಳಿಸಲು ಗುಣಮಟ್ಟದ ಶಿಕ್ಷಣವೆ ಪರಿಹಾರ" ೨೨-೧೨-೨೦೧೧ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಜಿ.ಎಸ್. ಜಯದೇವ ಅವರ ಲೇಖನದಲ್ಲಿ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಕಡಿಮೆಯಾಗಿ ಶಾಲೆ ಮುಚ್ಚುವ ಪರಿಸ್ಥಿಗೆ ಬರಲು ಕಾರಣ ಸರಕಾರಿ ಶಾಲೆಗಳ ಕಲಿಕಾ ಗುಣಮಟ್ಟವೇ ಆಗಿದೆ. ಆದ್ದರಿಂದ ಮೊದಲು ಸರಕಾರಿ ಶಾಲೆಗಳಲ್ಲಿನ ಕಲಿಕಾ ಗುಣಮಟ್ಟ ಹೆಚ್ಚಿಸಬೇಕು ಎಂದಿದ್ದಾರೆ.

"ಶಾಲೆ ಮುಚ್ಚುವುದರಿಂದ ಏರುವುದೇ ಶಿಕ್ಷಣದ ಮಟ್ಟ" ೩೧-೧-೨೦೧೧ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಈ ಲೇಖನವು ಆರ್. ಇಂದಿರಾರವರದ್ದು. ಈ ಲೇಖನದಲ್ಲಿಯೂ ಕೂಡಾ ಸರಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಬೇಕು ಅದನ್ನು ಬಿಟ್ಟು ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಇದೆ ಎಂದು ಶಾಲೆಗಳನ್ನು ಮುಚ್ಚಬಾರದು. ದಾಖಲಾತಿ ಕಡಿಮೆಯಾಗಲು ಕಾರಣವನ್ನು ಹುಡಕಬೇಕು ಎಂದಿದ್ದಾರೆ.

"ಹಳೆಗನ್ನಡ ಓದು : ಹಲವು ಮಾದರಿ" ೨೧-೧೧-೨೦೧೧ರಂದು ಉಪ್ಪಾರಹಟ್ಟಿ ಚಿತ್ತಯ್ಯರವರ ಲೇಖನ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಪ್ರಾಚೀನ ಕನ್ನಡ ಕವಿ ಕಾವ್ಯಗಳ ಓದು, ವ್ಯಾಖ್ಯಾನ ಮತ್ತು ಗ್ರಹಿಕೆ ಇಂದು ಶಾಲಾ ಕಾಲೇಜುಗಳ ವಿದ್ಯಾರ್ಥಿ ಸಮುದಾಯದಿಂದ ದೂರವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಸೆಮಿಸ್ಟರ ಪದ್ದತಿಯಿಂದಾಗಿ ಹಳಗನ್ನಡವನ್ನು ಗ್ರಹಿಸಿಕೊಳ್ಳುವುದು ಭಾಷಾ ಅಧ್ಯಯನಕಾರರಿಗೆ ಕಷ್ಟವಾಗುತ್ತದೆ ಎಂದಿದ್ದಾರೆ.

"ಗುಣಮಟ್ಟದ ಶಿಕ್ಷಣ ಹೊಸ ಸವಾಲು" ೩೦-೧-೨೦೧೨ರಂದು ಎಂ. ನವೀನಕುಮಾರ ರವರ ಲೇಖನ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಗುಣಮಟ್ಟದ ಶಿಕ್ಷಣದಿಂದ ಕಲಿಕಾರ್ಥಿಗಳು

ಸರಕಾರಿ ಶಾಲೆಗಳಲ್ಲಿ ವಂಚಿತರಾಗುತ್ತಿದ್ದಾರೆ. ಶೇಕಡಾ ೩.೯ ರಷ್ಟು ಮಕ್ಕಳು ಒಂದರಿಂದ ಒಂಬತ್ತರವರೆಗಿನ ಅಂಕಿಗಳನ್ನು ಕ್ರಮಬದ್ಧವಾಗಿ ಗುರಿತಿಸುವುದಿಲ್ಲ ಎಂಬ ಅಂಶಗಳು ಸಮೀಕ್ಷೆಯಲ್ಲಿ ಬಹಿರಂಗವಾಗಿವೆ. ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಿ ಆ ಮೂಲಕ ಶೇ. ೧೦೦ ಸಾಕ್ಷರತೆ ಸಾಧಿಸಲು ಎದರು ನೋಡುತ್ತಿರುವ ಸರಕಾರ ಗುಣಮಟ್ಟದ ಶಿಕ್ಷಣದ ಬಗ್ಗೆ ಚಿಂತಿಸುವ ಕಾಲ ಬಂದಿದೆ ಎಂದಿದ್ದಾರೆ.

"ಮಕ್ಕಳಿಗೆ ಬೇಕು ಭಾಷಾ ಕೌಶ್ಯಲ" ೨೧-೫-೨೦೧೨ ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಸಾ.ದು ಶಿವಮಲ್ಲಯ್ಯ ಸಾಸಲಾಪೂರ ರವರ ಲೇಖನ ಇದಾಗಿದೆ. ಭಾಷಾ ಕೌಶಲ್ಯ ಮಗುವಿನ ಶೈಕ್ಷಣಿಕ ಬೆಳವಣಿಗೆಯ ಮುಖ್ಯ ಹಂತ. ಆದರೆ ಈಗಿನ ಮಕ್ಕಳಿಗೆ ಸರಿಯಾಗಿ ಬರೆಯಲು ಬರುವುದಿಲ್ಲ. ಓದುವ ಹವ್ಯಾಸವು ಇಲ್ಲ ಎಂಬ ಟೀಕೆ ಸರ್ವೇಸಾಮಾನ್ಯ. ಇದರ ಹೊಣೆಯನ್ನು ಬೋಧಕರು ಹೋರಬೇಕಾಗುತ್ತದೆ ಎನ್ನುತ್ತಾರೆ.

"ಗ್ರಹಿಕೆಗೆ ಇಂಗ್ಲಿಷ್; ವಿಷಯ ಜ್ಞಾನಕ್ಕೆ ಕನ್ನಡ" ೨೧-೬-೨೦೧೨ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಯು,ಆರ್ ಅನಂತಮೂರ್ತಿ ರವರ ಲೇಖನ. ಸರಕಾರಿ ಶಾಲೆಗಳಿಗೆ ಸೇರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಸರಕಾರ ನೇಮಿಸಿರುವ ಶಿಕ್ಷಕರಿಗೆ ಕೆಲಸವಿಲ್ಲದಂತಾಗಿ ಹಲವು ಶಿಕ್ಷಕರಿಗೆ ಕೆಲಸ ಮಾಡಿಸಿಕೊಳ್ಳದೇ ಸಂಬಳ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಇಂತಹ ಸಮಸ್ಯೆಯ ಸ್ವರೂಪ ಕುರಿತು ಖಾಸಗಿ ಶಾಲೆ ಮತ್ತು ಸರಕಾರಿ ಶಾಲೆಗಳ ಕ್ಷೇತ್ರ ಅಧ್ಯಯನ ಕೈಗೊಂಡಾಗ ತಿಳಿದು ಬಂದ ನಿಜಸಂಗತಿ ಎಂದರೆ ಶಿಕ್ಷಕರಾಗಿ ಸೇವೆ ಸಲ್ಲಿಸಲು ಬೇಕಾಗುವಂತ ಕನಿಷ್ಟ ಮಟ್ಟದ ಅರ್ಹತೆಯನ್ನು ಹೊಂದದ ಶಿಕ್ಷಕರು ಖಾಸಗಿ ಶಾಲೆಗಳಲ್ಲಿದ್ದಾರೆ. ಆದರೂ ಜನರು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗಿ ಸರಕಾರಿ ಶಾಲೆಗಳಿಗೆ ಕಳುಹಿಸದೆ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಇಂಗ್ಲಿಷ್ ಎನ್ನುವುದು ಕೇವಲ ಗ್ರಹಿಸಿಕೊಳ್ಳುವುದಕ್ಕೆ ಮಾತ್ರ. ವಿಷಯದ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಕನ್ನಡ ಭಾಷೆಯ ಕಲಿಕೆಯ ಅಗತ್ಯ ಇದೆ ಎನ್ನುತ್ತಾರೆ.

"ಸುಧಾರಣೆ ಕಾಣದ ಪೂರ್ವ ಪ್ರಾಥಮಿಕ ಶಿಕ್ಷಣ" ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಡಿ.ಸಿ.ನಂಜುಂಡರವರ ಲೇಖನದಲ್ಲಿ ಇಂದು ಉನ್ನತ ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡುತ್ತ ಪೂರ್ವ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಕೇಳುವವರೇ ಇಲ್ಲದಂತಾಗಿದೆ. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಪರಿಗಣಿಸಲು ಸರಕಾರಗಳು ಚಿಂತಿಸಬೇಕಾಗಿದೆ ಎನ್ನುತ್ತಾರೆ.

"ಸರಕಾರಿ ಶಾಲೆ ಬೇಡವಾಗುವುದೇಕೆ? ದಿನಾಂಕ ೬-೨-೨೦೧೨ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಡಾ. ಚಂದ್ರಶೇಖರ ದಾಮ್ಲೆಯವರ ಲೇಖನದಲ್ಲಿ ಸರಕಾರಿ ಶಾಲೆ ಬೇಡವಾಗುದಕ್ಕೆ ಇಂಗ್ಲಿಷ್ ಕಲಿಕೆ ಇಲ್ಲದಿರುವುದು ಅಷ್ಟೆ ಅಲ್ಲ ಸರಕಾರಿ ಶಾಲೆ ಬೇಡವೆನಿಸುವುದಕ್ಕೆ ಪಠ್ಯಕ್ರಮದ ವೈಫಲ್ಯವು, ಮಕ್ಕಳೊಂದಿಕೆ ಸಂವಹನಕ್ಕೆ ಅಗತ್ಯವಿರುವಷ್ಟು ಬೋಧಕರು ಇಲ್ಲದಿರುವುದು ಕಾರಣವಾಗಿದೆ. ಕಡಿಮೆ ಸಂಖ್ಯೆಯ ಬೋಧಕರಿರುವ ಶಾಲೆಗಳಲ್ಲಿ ಒಂದನೇ, ಎರಡನೇ ತರಗತಿಯ ಮಕ್ಕಳನ್ನು

ಒಂದೇ ಕೋಣೆಯಲ್ಲಿ ಹಾಕಿ ಸುಮ್ಮನೆ ಕುಡಿಸುವುದು ಬೇರೆ ತರಗತಿಗಳಿಗೆ ಪಾಠ ಬೋಧಿಸುವದು. ಹೀಗಾಗಿ ಬುನಾದಿ ಕಲಿಕೆಯಲ್ಲಿ ಕಲಿಕಾರ್ಥಿಗಳು ಸಮಸ್ಯೆ ಎದುರಿಸಿವಂತಾಗಿದೆ. ಅದಕ್ಕಾಗಿ ಖಾಸಗಿ ಶಾಲೆಗಳತ್ತ ಪಾಲಕರು ಆಸಕ್ತಿ ತೋರುತ್ತಿದ್ದಾರೆ.

"(ಪಠ್ಯವಿವಾದ) ಪಠ್ಯ ರಾಜಕೀಯ" ೪-೨-೨೦೧೨ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನ. ಇದರ ಲೇಖಕರು ಸಾರ್ವಜನಿಕ ಶಿಕ್ಷಣ ಇಲಾಕೆ ನಿವೃತ್ತ ನಿರ್ದೇಶಕರು ಹೆಸರು ಹೇಳಿಲ್ಲ. ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ೨೦೦೦ನೆಯ ಇಸ್ವಿಯಲ್ಲಿ ಪಠ್ಯಕ್ರಮ ಕುರಿತು ಪ್ರಕಟಗೊಂಡ ನಂಬಿಕೆಗಳು ಮಣ್ಣು ಪಾಲಾಗುವುದಕ್ಕೆ ಬಿಜೆಪಿ ಸರಕಾರವೆ ಕಾರಣ. ಏಕೆಂದರೆ ತನಗೆ ಇಷ್ಟಬಂದಂತೆ ೨೦೦೫ ರಲ್ಲಿ ನೂತನ ಪಠ್ಯಪುಸ್ತಕ ರಚನೆಗೆ ಮುಂದಾಯಿತು. ಇದರಲ್ಲಿ ಪಠ್ಯ ಪುಸ್ತಕ ರಚನಾಕಾರರು ಮಾಹಿತಿ ತುರಿಕಿದ್ದಾರೆ ಹೊರತು ಜ್ಞಾನವಲ್ಲ. ಎಲ್ಲವನ್ನು ಏಕಕಾಲಕ್ಕೆ ಹೇಳುವ ತವಕ ಬಹಳ ಬೋಧಿಸುವುದು, ಕಲಿಕೆ ಮಾತ್ರ ಕಡಿಮೆ. ಇದಕ್ಕೆ ಪರೀಕ್ಷೆಗಳ ವೈಭವಿಕರಣಕ್ಕೆ ಪಠ್ಯಪುಸ್ತಕ ಕೊಡುಗೆ ನೀಡಿದಂತಿವೆ.

"ಭಾಷಾವಲೋಕನ-೨" (ಆಳ-ನಿರಾಳ) ೧-೭-೨೦೧೧ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಕೆ.ವಿ ತಿಮಲೇಶರವರ ಲೇಖನದಲ್ಲಿ ಎಲ್ಲಾಭಾಷೆಗಳೂ ಮೂಲತ: ಒಂದೇ ಭಾಷೆಯಿಂದ ಹುಟ್ಟಿದುವು ಎಂಬ ಕಲ್ಪನೆ ಕೆಲವರಲ್ಲಿದೆ. ಉದಾ: ಎಲ್ಲಾ ಭಾಷೆಗಳಿಗೂ ಸಂಸ್ಕೃತವೇ ಮೂಲವೆಂದು ಕೆಲವರ ಅಂಬೋಣ. ಆದರೆ ಇದು ಅವರ ಸಂಸ್ಕೃತಾಭಿಮಾನಕ್ಕೆ ಸೇರಿದ ಸಂಗತಿಯಲ್ಲದೇ ಇದಕ್ಕೆ ಯಾವ ಆಧಾರವೂ ಇಲ್ಲ. ಭಾಷಾ ಅಧ್ಯಯನವೂ ಭಾಷೆಯೊಂದರ ರಚನೆ ಹೇಗಿದೆ ಎಂದು ಪರಿಶೀಲಿಸುವುದು ಒಂದು ರೀತಿಯ ಅಧ್ಯಯನ. ನೆರೆಕೆರೆಯ ಭಾಷೆಗಳು ಯಾವುವು? ಗಡಿನಾಡುಗಳಲ್ಲಿ ಅದರ ರೂಪ ಮತ್ತು ಬಳಕೆ ಹೇಗಿದೆ? ಅದರ ಒಳ ಪ್ರಭೇದಗಳು ಯಾವುವು? ಶಿಕ್ಷಣ ಮತ್ತು ಮಾಧ್ಯಮಗಳಲ್ಲಿ ಪ್ರಚಲಿತವಿರುವ ಪ್ರಭೇದ ಯಾವುದು? ಆಡುನುಡಿಗೂ ಬರಹದ ಭಾಷೆಗೂ ಇರುವ ಅಂತರ ಎಷ್ಟು ಮಟ್ಟಿನದು? ಅರ್ಥಾತ್ ಈ ವ್ಯತ್ಯಾಸ ದ್ವಿಭಾಷಿಕತ್ವಕ್ಕೆ ಎಡೆಮಾಡಿದೆಯೇ ಇತ್ಯಾದಿ ಅಂಶಗಳನ್ನು ಈ ಲೇಖನ ಒಳಗೊಂಡಿದೆ.

"ಪೂರ್ವ ಪ್ರಾಥಮಿಕ ಶಿಕ್ಷಣ ಹೀಗಿರಬೇಕು" ೨೧-೮-೨೦೧೧ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡ ಯು.ಎಸ್. ಸಂಗನಾಳ ಮಠರವರ ಲೇಖನ ಮಗುವಿಗೆ ಕಥೆ ಹೇಳಬೇಕು. ಚಿಕ್ಕ ಕಥೆಗಳನ್ನು ಹೇಳುವ, ಮಹಾಪುರುಷರ ಬಗ್ಗೆ ಹೇಳುವ ಕತೆಯನ್ನು ಬೋಧಕರು ಕರಗತ ಮಾಡಿಕೊಳ್ಳಬೇಕು. ಮತ್ತು ಹಾಡು, ನೃತ್ಯ, ಶಿಸುಗೀತೆಗಳನ್ನು ಹೇಳಿಕೊಡುವುದರ ಜೊತೆಗೆ ಕನ್ನಡ-ಆಂಗ್ಲ-ಹಿಂದಿ ಅಕ್ಷರಗಳ ಕಲ್ಪನೆಯನ್ನು ಮೂಡಿಸಬೇಕು. ಮಗು ಯಾವ ಜಾತಿ ಮತ ಪಂಥಕ್ಕೆ ಸೇರಿದ್ದರು ಪ್ರತಿಯೊಂದು ಮಗುವನ್ನು ಗೌರವಿಸಬೇಕು ಎಂಬ ಅಂಶಗಳನ್ನು ಈ ಲೇಖನ ಒಳಗೊಂಡಿದೆ.

[illegible]

"ಶಿಕ್ಷಕ ಶಿಕ್ಷಣದ ಬವಣೆ ಬದಲಾವಣೆ" ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಡಾ.ಎಂ.ಎಸ್. ಸಂತೋಷ ರವರ ಲೇಖನವು ಬೋಧಕರಾದವರು ಕೇವಲ ಮೂರು ನಾಲ್ಕು ವರುಷ ಅನುಭವವಾದರೆ ಸಾಕು ತರಗತಿಗಳಿಗೆ ಪೂರ್ವಸಿದ್ದತೆ ಇಲ್ಲದೆಯೇ ಬರುವ ಹಲವು ಉದಾರಹಣೆಗಳಿವೆ. ಇದರಿಂದ ಅವರ ಕಲಿಕಾ ಸಾಮಾರ್ಥ್ಯ ಕುಗ್ಗಿ ನಿರಾಸಕ್ತಿ ಉಂಟಾಗುತ್ತದೆ. ಹೊಸ ವಿಚಾರಗಳು ಉದಾಹರಣೆಗಳು ಮೂಡುವ ಅಥವಾ ನೀಡುವ ಸಾಧ್ಯತೆ ನಶಿಸಿಹೊಗುತ್ತದೆ. ಮತ್ತು ಬೋಧಕರಿಗೆ ಸರಿಯಾದ ಪ್ರೋತ್ಸಾಹ ಮಾರ್ಗದರ್ಶನ ಸಿಗುತ್ತಿಲ್ಲ. ಇಂದಿನ ಶಾಲಾ-ಕಾಲೇಜುಗಳ ಯಜಮಾನರು ಶಿಕ್ಷಕರಿಗಿಂತ ಹೆಚ್ಚು ಕಟ್ಟಡಕ್ಕೆ ಮತ್ತು ಸೌಲಭ್ಯಗಳಿಗೆ ಒತ್ತು ನೀಡುತ್ತಿರುವುದರಿಂದ ಬೋಧಕರು ಬೋಧನಾ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ ಎಂಬ ಅಂಶಗಳು ಒಳಗೊಂಡಿದೆ.

"ಕನ್ನಡವಾಗಲಿ ರಾಗಿ ಜೋಳದ ಭಾಷೆ" ೯-೧೨-೨೦೧೧ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡ ಈ ಸಂದರ್ಶನದ ಲೇಖನ ಸಿ.ಪಿ.ಕೆ.ಯವರ ಕುರಿತಾಗಿದೆ. ಕನ್ನಡ ಶಾಲೆಗಳನ್ನು ಮುಚ್ಚಲು ಸರಕಾರ ಹೊರಟಿದೆ. ನಿಮ್ಮ ಪ್ರತಿಕ್ರಿಯೆ ಏನು ಎಂಬ ಪ್ರಶ್ನೆಗೆ ಸಿ.ಪಿ.ಕೆ.ಯವರ ಉತ್ತರ ಒಬ್ಬನೆ ವಿದ್ಯಾರ್ಥಿ ಇದ್ದರೂ ಶಾಲೆಗಳನ್ನು ನಡಸಬೇಕು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಕಾರಣಗಳನ್ನು ಪರಿಶಿಲಿಸಬೇಕು. ಪಾಲಕರು ಇಂಗ್ಲಿಷ್ ವ್ಯಾಮೋಹ ಬಿಡಬೇಕು. ಇಲ್ಲದಿದ್ದರೆ ಗ್ರಾಮೀಣ ಭಾಗದಲ್ಲಿಯೂ ಕನ್ನಡ ಭಾಷೆ ಉಳಿಯುವುದಿಲ್ಲ, ಕನ್ನಡ ಅನ್ನದ ಭಾಷೆಗಿಂತ ರಾಗಿ, ಜೋಳದ ಭಾಷೆಯಾಗಿ ಗಟ್ಟಿಯಾಗಿ ನೆಲೆಯೂರಬೇಕು. ಇಲ್ಲದಿದ್ದರೆ ಕನ್ನಡಕ್ಕೆ ಅಸ್ತಿತ್ವ ಇಲ್ಲದಂತಾಗುತ್ತದೆ ಎನ್ನುತ್ತಾರೆ.

೨.೫. ನಮ್ಮ ಕನ್ನಡ ಪತ್ರಿಕೆ ಮತ್ತು ಇತರ ಸಂಚಿಕೆಗಳು

ಜೀವನ ವಿಕಾಸ ಶೈಕ್ಷಣಿಕ ಸಂಚಿಕೆಯಲ್ಲಿ ಪ್ರಕಟಗೊಂಡ ಬೊಧನೆಗೆ ಮಾರ್ಗಗಳು ಎಂಬ ಲೇಖನ ಲೀಲಾವತಿ ಬಿ. ಕುಲಕರ್ಣಿ ಯವರದು. ಲೇಖನ ಬೋಧನೆ ಮತ್ತು ಕಲಿಕೆ ಈ ಎರಡು ಪದಗಳಿಗೆ ಒಂದಕ್ಕೊಂದು ಸಂಬಂಧವಿದೆ. ಕಲಿಕೆಯಲ್ಲಿ ಕಲಿಸುವಿಕೆ ಮತ್ತು ಕಲಿಯುವಿಕೆ ಈ ಅಂಶಗಳನ್ನು ಕಾಣುತ್ತೇವೆ. ಬೋಧನೆ ಪದವು ಕಲಿಸುವಿಕೆಗೆ ಹತ್ತಿರವಾದ ಅರ್ಥವನ್ನು ಕೊಡುತ್ತದೆ. ಬೋಧನೆಯಲ್ಲಿ ಕಲಿಸುವಿಕೆ ಮತ್ತು ಕಲಿಯುವಿಕೆ ಈ ಎರಡು ಕೆಲಸಗಳು ನಡೆಯುವಂತಾದರೆ ಬೋಧನೆ ಫಲದಾಯಕವಾಗುತ್ತದೆ. ಬೋಧನೆಯು ಚರ್ಚೆ, ವೀಕ್ಷಣೆ, ಪ್ರಯೋಗದಿಂದ ಕೂಡಿರಬೇಕು ಎಂಬ ವಿಷಯಗಳನ್ನು ಕುರಿತು ಅಭಿವ್ಯಕ್ತಪಡಿಸಿದ್ದಾರೆ.

"ಕುಷ್ಟಗಿಯಲ್ಲೊಂದು ಕಲಿಕಾ ಕಲರವ" ಶಿಕ್ಷಣ ವಾರ್ತೆ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನ ಬಿ.ಹೆಚ್. ಗೋನಾಳ ಇವರದು. ಉತ್ತಮ ಬೊಧಕರೆಂದರೆ ಹೀಗಿರುತ್ತಾರೆ ಎಂದು ಈ ಲೇಖನದಲ್ಲಿ ತಿಳಿಸಿದ್ದಾರೆ. ವಿಷಯದ ಪಾಂಡಿತ್ಯ, ಉತ್ತಮ ಬೋಧನಾ ಅಭಿರುಚಿ, ಬೋಧಿಸುವ ಕಲೆ ತಿಳಿದಿರುತ್ತಾರೆ. ಮಕ್ಕಳ ಕಲಿಕೆಯನ್ನು ಪರೀಕ್ಷಿಸುವ ಗುಣ, ಉತ್ತಮ ಬೋಧಕರು ಪ್ರದರ್ಶಿಸುತ್ತಾರೆ. ಸಾಮಾನ್ಯ

ಬೋಧಕರು ವಿವರಿಸುತ್ತಾರೆ, ಅದಮ ಬೋಧಕರು ದೂರುತಾರೆ. 'ವಿದ್ಯಾಧನಂ ಸರ್ವಧನಂ ಪ್ರಧಾನಂ' ಸೂಕ್ತಿಗೆ ಪಾತ್ರನು ಉತ್ತಮ ಬೋಧಕರಾಗಿರುತ್ತಾರೆ.

"ನಿರಂತರ ಸಹಪಠ್ಯ ಚಟುವಟಿಕೆಗಳು" ಶಿಕ್ಷಕರ ಮತು ಕ್ಷೇತ್ರ ಮಟ್ಟದ ಅಧಿಕಾರಿಗಳ ಕೈಪಿಡಿ. ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ ಇವರು ಪ್ರಕಟಿಸಿರುವ ಈ ಸಂಚಿಕೆಯಲ್ಲಿ ಕಲಿಕೆ ಮತ್ತು ಬೋಧನೆಯಲ್ಲಿ ಸಹಪಠ್ಯ ಚಟುವಟಿಕೆಗಳು ಹೇಗೆ ಮಹತ್ವವಾದವು ಎಂದು ವಿವರಿಸಲಾಗಿದೆ.

ನಮ್ಮ ಕನ್ನಡ ಸಂಚಿಕೆ ೧೧ ರಲ್ಲಿ "ಕನ್ನಡ ಉಳಿಯುವುದೇ?" ಲೇಖನದಲ್ಲಿ ಕೆ.ವಿ.ನಾರಾಯಣರವರು ಹೀಗೆ ಹೇಳುತ್ತಾರೆ. ಭಾಷೆಗಳು ನಾಶವಾಗಲು ಹಲವಾರು ಕಾರಣಗಳಿರುತ್ತವೆ. ಒಂದು ಭಾಷೆಯನ್ನಾಡುವ ಜನರು ತಮ್ಮ ಭಾಷೆಯನ್ನು ಬಿಟ್ಟು ಮತ್ತೊಂದು ಭಾಷೆಯ ಪ್ರಭಾವಕ್ಕೆ ಒಳಗಾಗಿ ಮುಂದೊಂದು ದಿನ ತಮ್ಮ ಭಾಷೆಯನ್ನು ತಮಗೆ ಉಳಿಸಿಕೊಳ್ಳಲು ಆಗದೆ ಹೊಗಬಹುದು. ಅಂತಹ ಒಂದು ಪರಿಸ್ಥಿತಿ ಕನ್ನಡ ಭಾಷೆಗೆ ಬಂದೊದಗಬಹುದು ಎಂದಿದ್ದಾರೆ.

ನಮ್ಮ ಕನ್ನಡ ಸಂಚಿಕೆ ೩೪. 'ಬರವಣಿಗೆ ದೋಷಗಳು' ಕೆ.ವಿ.ನಾರಾಯಣ ರವರ ಲೇಖನ ಕನ್ನಡ ಬರವಣಿಗೆಯಲ್ಲಿ ಮತ್ತು ಮುದ್ರಣದಲ್ಲಿ ಹಲವಾರು ಕಾಗುಣಿತ ದೋಷಗಳು ಸಂಭವಿಸುತ್ತವೆ. ಪ್ರಮುಖವಾಗಿ ಮಹಾಪ್ರಾಣ 'ಧ' ಕಾರವನ್ನು ಹೆಚ್ಚಾಗಿ ಅಲ್ಪಪ್ರಾಣವಾಗಿ ಬಳಸುತ್ತಿದ್ದರು. ಅದನ್ನು ಗಮನಿಸದೆ ಹೋಗುವ ಪ್ರಸಂಗಗಳು ಹೆಚ್ಚಾಗುತ್ತಿವೆ ಎನ್ನುತ್ತಾರೆ.

ನಮ್ಮ ಕನ್ನಡ ೬೦ನೇ ಸಂಚಿಕೆಯಲ್ಲಿ ವಿಶೇಷ ಸಂಚಿಕೆಯಲ್ಲಿ 'ಕನ್ನಡ ಕಲಿಕೆ' ಕೆ.ವಿ.ನಾರಾಯಣ, 'ಭಾಷಾ ಶಿಕ್ಷಣದ ಆಯಾಮಗಳು' ಡಿ. ಪಾಂಡುರಂಗಬಾಬು,

'ಭಾಷಾ ಬೋಧನೆ ಮತ್ತು ಕಲಿಕೆಯ ಸಂದರ್ಭದಲ್ಲಿ ಓದು' (ಪ್ರಾಥಮಿಕ ಹಂತದ ಶಿಕ್ಷಣವನ್ನು ಅನುಲಕ್ಷಿಸಿ) ಅಶೋಕಕುಮಾರ ರಂಜೇರೆ 'ಪ್ರಾಥಮಿಕ ಶಾಲೆಗಳಲ್ಲಿ ಬರಹದ ಕೌಶಲ್ಯ ಉತ್ತಮ ಪಡಿಸುವಿಕೆ', 'ಬೋಧನೆಗೆ ಸಲಹೆಗಳು' ಸಾಂಬಮೂರ್ತಿ, 'ಕನ್ನಡ ಭಾಷೆ ಕಲಿಕೆ ಮತ್ತು ಬೋಧನೆ ಅನ್ಯಭಾಷಿಕ ಮಕ್ಕಳನ್ನು ಅನುಲಕ್ಷಿಸಿ' ಪಿ.ಮಹಾದೇವಯ್ಯ, 'ಕನ್ನಡ ಪಠ್ಯಪುಸ್ತಕ ರಚನೆಯಲ್ಲಿನ ಸಮಸ್ಯೆಗಳು' ಪಿ.ಮಹಾದೇವಯ್ಯ. ಈ ಎಲ್ಲಾ ಲೇಖನಗಳು ಕಲಿಕೆ, ಬೋಧನೆ, ಬರವಣಿಗೆ ಪಠ್ಯಪುಸ್ತಕಗಳಲ್ಲಿನ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗಿವೆ.

"ಭಾವೈಕ್ಯ ಬಂಧ" (ಸ್ಮರಣ ಸಂಚಿಕೆ) ಕಲಬುರ್ಗಿ ಜಿಲ್ಲಾ ೧೧ನೇಯ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಂಡ ಈ ಸಂಚಿಕೆಯಲ್ಲಿ 'ಯಾದಗಿರಿ ಕನ್ನಡ' ನಾಗೇಂದ್ರ ಮಸೂತಿ ಯವರ ಲೇಖನ. ಯಾದಗಿರಿ ಕನ್ನಡದಲ್ಲಿರುವ ಧ್ವನಿ, ಧ್ವನಿಮಾ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಅ ಕಾರದಿಂದ ಳ ಕಾರದವರೆಗಿನ ಧ್ವನಿ ಶಿಷ್ಟ ಭಾಷೆಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಗಮನಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾಲಯವು ಎಂ.ಎಡ್.ಪದವಿಗಾಗಿ ಪ್ರಕಟಿಸಿರುವ ಪಠ್ಯಪುಸ್ತಕಗಳು ಶೈಕ್ಷಣಿಕ ನಾಯಕರ ಇತಿಹಾಸ ಇದರಲ್ಲಿ ಪ್ರೋಬೆಲ್ ಮಾಂಟೋಸೋರಿ ರೋಸೋ, ಪೆಸ್ಟೋಲಾಜಿ,

ಠಾಗೋರ ಅರಬಿಂದೋ ವಿವೇಕಾನಂದ, ಮಹಾತ್ಮಾಗಾಂಧಿ, ಜಾಕೀರ ಹುಸೇನ ಮತ್ತು ರಾಧಾಕೃಷ್ಣರವರುಗಳ ಶಿಕ್ಷಣದಲ್ಲಿ ಕಲಿಕೆ ಮತ್ತು ಬೋಧನೆಯನ್ನು ಕುರಿತು ಹೇಳಿರುವ ಅಂಶಗಳನ್ನು ಒಳಗೊಂಡಿದೆ.

"ಶಿಕ್ಷಣದ ಮನೋವಿಜ್ಞಾನ" ಕಲಿಕಾ ಸಿದ್ಧಾಂತಗಳಾದ ಸಂಜ್ಞಾತ್ಮಕ, ಗೆಸ್ಟಾ ಸಿದ್ಧಾಂತ, ಅನಪೇಕ್ಷಣಾ ಕಲಿಕೆ, ಮಾನವತವಾದಿ ಕಲಿಕೆಯ ದೃಷ್ಟಿಕೋನಗಳನ್ನು ಒಳಗೊಂಡಿದೆ.

"ಶಿಕ್ಷಣದ ತಾತ್ವಿಕ ವಿಶ್ಲೇಷಣೆ" ಈ ಘಟಕದಲ್ಲಿ ಶಿಶು ಕೇಂದ್ರಿತ ಮತ್ತು ವಿದ್ಯಾರ್ಥಿ ಕೇಂದ್ರಿದ ಕಲಿಕೆ, ಕಲಿಕಾ ಸಮಾಜ, ಜೀವನ ಪರ್ಯಂತ ಕಲಿಕೆ, ಮುಕ್ತ ಕಲಿಕೆ ಮಾಡುತ್ತಾ ಕಲಿಯುವಿಕೆ ಎಂಬಂತಹ ಅಂಶಗಳನ್ನು ಒಳಗೊಂಡಿದೆ.

೨.೬. ಸಂಶೋಧನಾ ಕೃತಿಗಳು

"ಭಾಷೆ ಮತ್ತು ಶಿಕ್ಷಣ" ಅಶೋಕಕುಮಾರ ರಂಜೇರೆಯವರ ಈ ಪುಸ್ತಕವು ಪ್ರಮುಖವಾಗಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಪ್ರತಿಬಿಂಬಿಸುತ್ತದೆ. ಹಾಗೂ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು, ಪ್ರಾಥಮಿಕ ಶಿಕ್ಷಣದ ಭಾಷಾ ಬೋಧನೆ, ಭಾಷಾ ಕಲಿಕೆ ಸಂದರ್ಭದಲ್ಲಿ ಭಾಷಾ ಬೋಧನೆ ಮತ್ತು ತಂತ್ರಜ್ಞಾನಗಳ ಕುರಿತು ಲೇಖನಗಳ ಮೂಲಕ ಪ್ರಾಥಮಿಕ ಶಿಕ್ಷಣದ ಸ್ವರೂಪವನ್ನು ವಿವರಿಸಿದ್ದಾರೆ. ಪ್ರಾಥಮಿಕ ಕನ್ನಡ ಭಾಷಾ ಪಠ್ಯದಲ್ಲಿರುವ ತಪ್ಪುಗಳನ್ನು ಗುರುತಿಸಿದ್ದಾರೆ. ಬೋಧನೆ, ಕಲೆಯ ಸಮಸ್ಯೆ ಇಂದಿನ ಬೋಧಕರಲ್ಲಿರುವುದನ್ನು ಗಮನಿಸಿ ಬೋಧಕ ವೃತ್ತಿಯೂ ಕೇವಲ ಸಂಬಳ ದೊರೆಯುವ ಹುದ್ದೆಯಾಗಬಾರದು ಎಂದ್ದಿದ್ದಾರೆ. ಸರಕಾರ ಮಕ್ಕಳಿಗೆ ಮಧ್ಯಾಹ್ನದ ಊಟ ಮತ್ತು ಹಾಲು ಕೊಡುವುದನ್ನು ಬಿಟ್ಟು ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮುಂದಾಗಬೇಕು ಹಾಗೂ ಪ್ರಜ್ಞಾವಂತ ಶಿಕ್ಷಣ ತಜ್ಞರೊಂದಿಗೆ ಸಮಾಲೋಚಿಸಿ ಇಂದಿನ ಮಕ್ಕಳಿಗೆ ಯಾವ ಶಿಕ್ಷಣ ಕೊಡಬೇಕು ಎಂದು ಸೂಕ್ಷ್ಮವಾಗಿ ಪರಿಶೀಲಿಸಿ ಅದರ ಅಡಿಯಲ್ಲಿ ಶಿಕ್ಷಣ ಪದ್ಧತಿ ರೂಪಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

"ಮಾತೃಭಾಷೆ ಕನ್ನಡ ತತ್ವ ಮತ್ತು ಬೋಧನಾ ಮಾರ್ಗ" ಅನಸೂಯ ವಿ.ಪರಗಿರವರ ಪುಸ್ತಕ ಇದಾಗಿದೆ. ಈ ಪುಸ್ತಕವು ಪ್ರೌಢಶಾಲೆಗೆ ಸಂಬಂಧಿಸಿದ ಕನ್ನಡ ಭಾಷೆಯ ಪಠ್ಯಪುಸ್ತಗಳು ಹೇಗಿರಬೇಕು ಎಂದು ವಿಶ್ಲೇಷಿಸಿದ್ದಾರೆ. ಶಾಲೆ, ಬೋಧಕ, ಬೋಧನೆ, ಕುಟುಂಬದ ವ್ಯವಸ್ಥೆಯಲ್ಲಿ ಭಾಷೆಯು ಹೇಗೆ ಬಳಕೆಯಾಗುತ್ತದೆ ಎಂಬ ಅಂಶಗಳನ್ನು ವಿವರಿಸಿದ್ದಾರೆ.

ಭಾಷೆಗೆ ಸಂಬಂಧ ಪಟ್ಟಂತೆ ಡಿ.ಎನ್. ಶಂಕರಭಟ್ ರವರ ಕೆಲವು ಪುಸ್ತಕಗಳು ಇಂತಿವೆ. "ಕನ್ನಡಕ್ಕೆ ಬೇಕು ಕನ್ನಡದ್ದೆ, ವ್ಯಾಕರಣ", "ಕನ್ನಡ ಬರಹವನ್ನು ಸರಿಪಡಿಸೋಣಾ", "ನಿಜಕ್ಕೂ ಹಳಗನ್ನಡ ವ್ಯಾಕರಣ ಎಂತಹದು?", "ಭಾಷೆಯ ಬಗೆಗೆ ನೀವೇನು ಬಲ್ಲಿರಿ?", "ಕನ್ನಡ ಪದಗಳ ಒಳರಚನೆ", "ಕನ್ನಡ ವಾಕ್ಯಗಳ ಒಳರಚನೆ", "ಕನ್ನಡ ನುಡಿ ನಡೆದು ಬಂದ ದಾರಿ", ಇಂತಹ

ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಸಂಶೋಧನಾ ಬರಹದ ಪುಸ್ತಕಗಳನ್ನು ಬರೆದು ಕನ್ನಡ ಭಾಷೆಗೆ ಕ್ರಾಂತಿಕಾರಿ ಅಂಶಗಳನ್ನು ಬಿತ್ತರಿಸಿದ್ದಾರೆ. ಸಂಸ್ಕೃತ ಭಾಷೆಯ ಅಡಿಯಲ್ಲಿ ಕನ್ನಡ ಭಾಷೆಯು ರಚನೆಯಾಗುತ್ತಿದೆ. ಅದನ್ನು ಬದಲಾಯಿಸುವ ಅಗತ್ಯವಿದೆ ಎಂದಿದ್ದಾರೆ. ನಾವು ಕಲಿಸುವ ಕನ್ನಡ ಭಾಷಾ ಪಠ್ಯಗಳು ಸಹ ಸಂಸ್ಕೃತದ ಹಿನ್ನಲೆಯಲ್ಲಿ ರಚನೆಯಾಗಿವೆ. ಅವುಗಳ ಬಳಕೆಗಳು ಇಂದಿನ ಸಮಾಜ ವ್ಯವಸ್ಥೆಯಲ್ಲಿ ಕಾಣುತ್ತಿಲ್ಲ. ಆದರೆ ಕಲಿಸುವುದು ಮಾತ್ರ ಬೇರೆ ಎಂಬ ಚಿಂತನೆಯ ಅಂಶಗಳನ್ನು ಒಳಗೊಂಡ ಸಂಶೊಧನಾ ಮಾದರಿಯ ಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡ ಬರಹ ಎಲ್ಲರ ಸೊತ್ತಾಗಬೇಕು. ಓದಲು ಬರೆಯಲು ಕಲಿತರೆ ಪರಿಪೂರ್ಣವಾದಂತಲ್ಲ. ತಮ್ಮ ಜೀವನದಲ್ಲಿ ಕಲಿತ ಕಲಿಕೆಯ ಮೂಲಕ ಎಂತಹ ಪ್ರಯೋಜನೆಗಳನ್ನೆಲ್ಲ ಪಡೆಯಲು ಸಾಧ್ಯ ಎಂಬುದನ್ನು ಎಲ್ಲಾ ಕನ್ನಡಿಗರೂ ಸರಿಯಾಗಿ ತಿಳಿದುಕೊಳ್ಳಬೇಕು. ಕನ್ನಡ ಬರಹಕ್ಕೂ ಸಾಮಾನ್ಯ ಕನ್ನಡಿಗರ ಮಾತಿಗು ನಡುವೆ ಇರುವ ಅಂತರ ಹೆಚ್ಚಾಗುತ್ತಿರುವುದಕ್ಕೆ ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದು ಕನ್ನಡದವೇ ಆದ ಪದಗಳನ್ನು ಬರೆಯಲು ಒಟ್ಟು ಮೂವತ್ತುಮೂರು ಅಕ್ಷರಗಳು ಇದ್ದರೆ ಸಾಕು. ಎರಡನೆಯದು ಅವಶ್ಯವಿಲ್ಲದ ಸಂಸ್ಕೃತ ಪದಗಳನ್ನು ಹೇಳಿಕೋಡುವುದರಿಂದ ಕನ್ನಡ ಕಲಿಸುವುದು ಕಠಿಣವಾಗುತ್ತದೆ. ಆದ್ದರಿಂದ ಸಂಸ್ಕೃತ ಪದಗಳ ಸಡಲಿಕೆ ಅಗತ್ಯ ಎಂದಿದ್ದಾರೆ. ಇದು ಲಿಪಿಕ್ರಾಂತಿಯಿಂದ ಮಾತ್ರ ಸಾಧ್ಯವಾಗುತ್ತದೆ. ಮತ್ತು ಪಠ್ಯ ಪುಸ್ತಕಗಳಲ್ಲಿ ಸಂಸ್ಕೃತ ಪದಗಳನ್ನು ಬಳಸುವುದನ್ನು ಬಿಟ್ಟು ಕನ್ನಡದಲ್ಲಿನ ತತ್ಭವ ರೂಪಗಳನ್ನು ಬಳಸಬೇಕು ಎಂದಿದ್ದಾರೆ. ಮತ್ತು ಕನ್ನಡವನ್ನು ಕಲಿಸುವಾಗ ಸಂಸ್ಕೃತದ ನಿಯಮಗಳನ್ನು ನೇರವಾಗಿ ಕನ್ನಡ ಪಠ್ಯಗಳಲ್ಲಿ ಅಳವಡಿಸಿಕೊಳ್ಳದೆ ಅವುಗಳನ್ನು ಸಂಸ್ಕೃತದಿಂದ ಮೊದಲಿಗೆ ಹೊಸಗನ್ನಡಕ್ಕೆ ಎಂತಹ ಪದಗಳು ಎರವಲಾಗಿ ಬಂದಿವೆ ಎಂಬುದನ್ನು ತಿಳಿಸಬೇಕು. ಹೀಗೆ ಈ ಎಲ್ಲಾ ಸಂಶೋಧನಾ ಕೃತಿಗಳು ಕನ್ನಡ ಭಾಷೆ ವ್ಯಾಕರಣ, ಬರಹ ಇತ್ಯಾದಿ ಅಂಶಗಳು ಹೇಗಿರಬೇಕು ಎಂದು ತಿಳಿಸುತ್ತವೆ.

ಮಹಾಬಲೇಶ್ವರರಾವ್‌ರವರ "ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ" ಎಂಬ ಪುಸ್ತಕದಲ್ಲಿ ಪ್ರಾಥಮಿಕ ಹಂತದಲ್ಲಿ ನಡೆಯುವ ಕನ್ನಡ ಬೋಧನೆಯ ವಿವಿಧ ಕ್ರಮಣಿಕೆಯನ್ನು ವಿವರಿಸಿದ್ದಾರೆ. ಅಲ್ಲದೇ ಕನ್ನಡ ಬೋಧನೆ ನಡೆಯುವ ಪ್ರಕ್ರಿಯೆಯನ್ನು ವಿವರಿಸಿದ್ದಾರೆ. ಪಠ್ಯಪುಸ್ತಕಗಳು ಹೇಗಿರಬೇಕು ಎಂಬುದನ್ನು ಈ ಹಿನ್ನಲೆಯಲ್ಲಿ ವಿವರಿಸಿದ್ದಾರೆ. ಪಠ್ಯಪುಸ್ತಕದ ಮೂಲಕ ಭಾಷೆ ಕಲಿಯುವುದು ಅತ್ಯಂತ ಅವೈಜ್ಞಾನಿಕ ಎಂಬ ಮಾತಿದೆಯಾದರೂ ಶಿಕ್ಷಕರಿಗೆ ಮಾರ್ಗದರ್ಶಿಯಾಗಿ ಭಾಷಾ ಪಠ್ಯಪುಸ್ತಕಗಳು ತೀರಾ ಅನಿವಾರ್ಯ ಎಂದಿದ್ದಾರೆ. ಬೋಧಕರಿಗೆ ಭಾಷಾ ಸಾಮರ್ಥ್ಯಗಳನ್ನು ತಿಳಿಸಲು ಒಂದು ಸಾಧನವಿದ್ದಂತೆ. ಓದುಗಾರಿಕೆಯನ್ನು ನಿರ್ದೇಶಿಸುವ ದಿಕ್ಸೂಚಿ. ಮಕ್ಕಳ ಮನಸ್ಸನ್ನು ಸೆಳೆಯುವಂತಹ ಪಠ್ಯಪುಸ್ತಕಗಳಿರಬೇಕು. ಪ್ರತಿಯೊಂದು ತರಗತಿಯ ಬೋಧನೆಯ ಉದ್ದೇಶಕ್ಕೆ ತಕ್ಕಂತೆ ಪುಸ್ತಕ ರಚಿತವಾಗಿರಬೇಕು ಎಂದಿದ್ದಾರೆ.

ಜಿ. ಪುರುಷೋತ್ತಮರವರ 'ಕಲಿಕೆಯ ತೊಂದರೆಗಳು' ಎಂಬ ಪುಸ್ತಕದಲ್ಲಿ ವೈಜ್ಞಾನಿಕವಾಗಿ ಮಕ್ಕಳನ್ನು ಪರೀಕ್ಷಿಸಿದಾಗ ಕೆಲವು ಮಕ್ಕಳು ನರದೌರ್ಬಲ್ಯದಿಂದ ಓದಿನ ಕಲಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಾರೆ. ಮಿದುಳಿನ ಒಂದು ಕಡೆಯ ಬಾಗ (ಸಾಮಾನ್ಯವಾಗಿ ಎಡಭಾಗ) ಭಾಷೆಯ ಕೆಲಸದಲ್ಲಿ ಹೆಚ್ಚು ತೊಡಗುತ್ತದೆ. ಈ ಭಾಗಕ್ಕೆ ತೊಂದರೆಯಾದರೆ ಮಾತು ಮತ್ತು ಭಾಷೆಯನ್ನೇ ಅರಿಯದೆ ಹೋಗುತ್ತದೆ. ಮತ್ತು ಮಾನಸಿಕ ತೊಂದರೆಯಿಂದ, ಕಣ್ಣಿನ ತೊಂದರೆಯಿಂದಲೂ ಕಲಿಕೆಯಲ್ಲಿ ತೊಂದರೆ ಅನುಭವಿಸುತ್ತಾರೆ. ಎಂದರೆ ಒತ್ತಕ್ಷರಗಳು, ಸರಳ-ಅಕ್ಷರಗಳು, ಒತ್ತಕ್ಷರಗಳಿಂದ ಕೂಡಿದ ಪದಗಳು, ವ್ಯಂಜನಾಕ್ಷರಗಳಿಂದ ಕೂಡಿದ ಪದಗಳು ಇತ್ಯಾದಿ. ಅದೇ ರೀತಿಯಾಗಿ ಬರವಣಿಗೆಯಲ್ಲಿಯೂ ಕಲಿಕಾರ್ಥಿಗಳಲ್ಲಿ ತೊಂದರೆಯನ್ನು ಎದುರಿಸುತ್ತಾರೆ ಎಂದು ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಿ ಸ್ಪಷ್ಟಪಡಿಸಿದ್ದಾರೆ.

ಕೆ.ವಿ ನಾರಾಯಣರವರ "ಮತ್ತೆ ಭಾಷೆಯ ಸುತ್ತಮುತ್ತ" ಎಂಬ ಪುಸ್ತಕದಲ್ಲಿ ಮಕ್ಕಳ ಭಾಷೆಯ ಕಲಿಕೆಯ ವಿವಿಧ ಹಂತಗಳನ್ನು ವಿಶ್ಲೇಷಿಸಿದ್ದಾರೆ. ಅದರ ಜೊತೆಗೆ "ಶಾಲೆಯಲ್ಲಿ ಭಾಷೆ" ಎಂಬ ಲೇಖನದಲ್ಲಿ ಭಾಷೆಯನ್ನು ಕಲಿಸಲು ಹಾಕಿಕೊಂಡಿರುವ ಯೋಜನೆಗಳು ನಿಯಮಗಳು ಅವುಗಳ ಉದ್ದೇಶ, ಪಠ್ಯಕ್ರಮದ ಹಿನ್ನೆಲೆಯಲ್ಲಿ ಇರುವ ಗೊಂದಲಗಳನ್ನು ವಿವರಿಸುತ್ತಾರೆ. ಇದರಿಂದ ಆಗುವ ಪರಿಣಾಮವೇನು? ಜೊತೆಗೆ ಕಲಿಸುವ ಭಾಷೆ ಪಠ್ಯ ಬದಲಾವಣೆ ಹೊಂದುತ್ತದೆ. ಆದರೆ ಇನ್ನೂ ಬದಲಾಗಬೇಕು ಎಂದು ಅಭಿಪ್ರಾಯಪಡುತ್ತಾರೆ.

ಮಹಾಬಲೇಶ್ವರರಾವ್ ರವರು "ಶಿಕ್ಷಣ ಚಿಂತನೆ" ಎಂಬ ಪುಸ್ತಕದಲ್ಲಿ ಪಠ್ಯಪುಸ್ತಕಗಳಿಲ್ಲದೇ ಪಾಠ ಮಾಡಲು ಬರುವುದೇ ಇಲ್ಲ ಎಂಬ ಹಾಗೆ ನಮ್ಮ ಶಿಕ್ಷಣ ವ್ಯವಸ್ಥೆ ರೂಪಗೊಂಡಿದೆ. ಅದುದರಿಂದಲೇ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕೆಲವರು 'ಪಠ್ಯಪುಸ್ತಕ ಕೇಂದ್ರಿತ' ಪರೀಕ್ಷಾ ಆಧಾರಿತ ವ್ಯವಸ್ಥೆ ಎಂದು ಟೀಕಿಸುವುದು ಎಂದಿದ್ದಾರೆ. ಶಿಕ್ಷಣ ನೈತಿಕತೆಯನ್ನು ಮಕ್ಕಳಲ್ಲಿ ಬೆಳೆಸುವಂತಾಗಿ ಶಾಲಾ ಹಂತದಲ್ಲಿ ಶಿಕ್ಷಕರಿಗೆ ಸ್ವಾತಂತ್ರ್ಯ ಸಿಗುವಂತಹ ವ್ಯವಸ್ಥೆ ನಮ್ಮ ಶಿಕ್ಷಣರಂಗದಲ್ಲಿ ಆಗಬೇಕಿದೆ ಎಂದಿದ್ದಾರೆ.

ಬಿ.ಬಿ. ರಾಜಪುರೋಹಿತರವರ "ಭಾಷೆ ಮತ್ತು ಅರ್ಥಗಳ ಗುಟ್ಟು" ಎಂಬ ಪುಸ್ತಕದಲ್ಲಿ ವಚನಗಳ ಭಾಷೆ, ವ್ಯಾಕರಣ, ಕನ್ನಡ ವರ್ಣಗಳ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ವಿವರಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಒಂದು ಅಕ್ಷರ ಒಂದು ವಾಕ್ಯಗಳಲ್ಲಿ ಕೂಡಿರುವಂತಹ ಒಟ್ಟಾರೆ ಅರ್ಥವನ್ನು ತಿಳಿಸಲಾಗಿದೆ. ಅಕ್ಷರವು ವರ್ಣಗಳ ಅಥವಾ ಧ್ವನಿಗಳ ಪೂರ್ಣತೆಯಾಗುವುದಿಲ್ಲ. ಉದಾಃ ಕ.ಮ.ಲ ಈ ಅಕ್ಷರಗಳ ಲ.ಕ.ಮ. ಮ.ಕ.ಲ ಹೀಗೆ ಯಾವ ಕ್ರಮದಲ್ಲಿ ಹೊಂದಿಸಿದರೂ ಅರ್ಥ ಕೊಡದೆ 'ಕಮಲ' ಎಂದು ಹೊಂದಿಸಿದಾಗಲೇ ಅರ್ಥ ಕೊಡುತ್ತದೆ. ಅದೇ ರೀತಿ ವಾಕ್ಯ ಕೂಡ ಧ್ವನಿ, ಅಕ್ಷರ, ಪದಗಳಾನ್ನಾಗಿ ಗುರುತಿಸಿ ವಾಕ್ಯದ ಅರ್ಥಕ್ಕೆ ಹೋಗುವುದು ಮಕ್ಕಳ ತಿಳುವಳಿಕೆಗಾಗಿ ಮಾತ್ರ

ಎಂದಿದ್ದಾರೆ. ಮತ್ತು ವಚನಗಳ ಭಾಷೆಯಲ್ಲಿ ಕೆಲವು ಸ್ವರಗಳು ಪ್ರತ್ಯೇಕವಾಗಿ ಬಳಕೆಯಾಗಿರುವುದನ್ನು ಗುರುತಿಸಿದ್ದಾರೆ. ವಚನಕಾರರು ಸಂಧಿ ಇರುವ ಕಡೆಗಳಲೆಲ್ಲ ಸಂಧಿವಿಕಲ್ಪ ಮಾಡಿದ್ದನ್ನು ಗುರುತಿಸಿದ್ದಾರೆ. ಉದಾಃ- "ಅಪ್ಪುವಿನಲ್ಲಿ ಅದ್ದಿ" ಮತ್ತು ವಚನ ಸಾಹಿತ್ಯದ ಕಾಲದಲ್ಲಿಯೆ ಆ ಭಾಷೆಯ ಮೇಲೆಯೂ ಅನ್ಯ ಭಾಷೆಯ ಪ್ರಭಾವ ಆಗಿರುವುದನ್ನು ಗಮನಿಸಿದ್ದಾರೆ. ಉದಾ: ಚಪ್ಪನ್ನದೇಶ ಬತ್ತಿಸರಾಗ ಇತ್ಯಾದಿ. ಹಾಗೂ ಕನ್ನಡದ ಬರವಣಿಗೆ ಸ್ವರೂಪವನ್ನು ಕುರಿತು ಹೀಗೆ ಹೇಳುತ್ತಾರೆ. ಸಾಮಾನ್ಯವಾಗಿ ಬರವಣಿಗೆಯ ರೂಪದಲ್ಲಿ ಇರುವ ಧ್ವನಿಗಳು ಉಚ್ಚರಣೆಯ ರೂಪದಲ್ಲಿ ಇರಲು ಸಾಧ್ಯವಿಲ್ಲ. ಉದಾಹರಣೆಗೆ ನೋಡುವುದಾದರೆ "ಒಂದೇ ಜಾತಿಯ ಧ್ವನಿಗಳಾದ 'ಪ್' ಮತ್ತು 'ಬ್' ಗಳು ಒಂದೇ ಪದದಲ್ಲಿ ಅಕ್ಕಪಕ್ಕ ಬರಲು ಸಾಧ್ಯವಿಲ್ಲವೆಂಬುದನ್ನು ಗುರುತಿಸಿದ್ದಾರೆ.

ಐ.ಎ. ಲೋಕಾಪೂರ ರವರ "ಪ್ರೌಢ ಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ಎಂಬ ಪುಸ್ತಕವು ಗಮನಿಸಿದಾಗ ಪ್ರೌಢಶಿಕ್ಷಣಾರ್ಥಿ ಮತ್ತು ಶಿಕ್ಷಣಾರ್ಥಿಗಳ ಭಾಷಾ ಬೋಧನೆಯ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಹಕಾರಿಯಾಗಿದೆ. ನಮ್ಮ ಒಟ್ಟು ಶಿಕ್ಷಣ ವ್ಯವಸ್ಥೆಯು ಒಬ್ಬ ಉತ್ತಮ ವಿದ್ಯಾರ್ಥಿಯನ್ನಾಗಿಸುವಲ್ಲಿ ವಿವಿಧ ಹಂತಗಳಲ್ಲಿ ಬೋಧನಾ ವ್ಯವಸ್ಥೆಯು ಜರುಗುತ್ತದೆ. ಅವುಗಳೆಂದರೆ,

೧. ಪೂರ್ವ ಪ್ರಾಥಮಿಕ ಶಿಕ್ಷಣ

೨. ಪ್ರಾಥಮಿಕ ಶಿಕ್ಷಣ

೩. ಮಾಧ್ಯಮಿಕ ಅಥವಾ ಪ್ರೌಢ ಶಿಕ್ಷಣ

೪. ಪದವಿ ಪೂರ್ವ, ಪದವಿ ಶಿಕ್ಷಣ ಇತ್ಯಾದಿ.

ಈ ಎಲ್ಲಾ ಹಂತಗಳು ಉತ್ತಮ ಕಲಿಕಾರ್ಥಿಯನ್ನಾಗಿಸುವ ರಂಗಮಂದಿರಗಳಾಗಿವೆ. ಅವುಗಳಲ್ಲಿ ಪ್ರೌಢ ಶಿಕ್ಷಣದ ಹಂತವು ಅತ್ಯಂತ ಪ್ರಮುಖವಾದದ್ದು. ಪ್ರೌಢ ಶಾಲೆಯಲ್ಲಿ ಭಾಷೆ ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿ, ಶಿಕ್ಷಕ ಹಾಗೂ ಪಠ್ಯಪುಸ್ತಕಗಳ ಮಧ್ಯದ ಅಂತರ್ ಸಂಬಂಧ ಸಂಪೂರ್ಣ ಪ್ರಕ್ರಿಯೆಯನ್ನು ಅರ್ಥಪೂರ್ಣಗೊಳಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಒಟ್ಟಾರೆಯಾಗಿ ಬೋಧನೆ, ಬೋಧಕ, ಕಲಿಕಾರ್ಥಿಯನ್ನು ಕುರಿತ ಅಂಶಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ.

"ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆ" ಪುಸ್ತಕವನ್ನು ಜಿ.ವಿ.ಶ್ರೀನಾಥ ಶಾಸ್ತ್ರಿ, ಎನ್.ಎಸ್. ರಘುನಾಥ, ಜಿ.ಪುರುಷೋತ್ತಮ, ಸಿ.ಆರ್. ಚಂದ್ರಶೇಖರ್, ಜಿ. ರಾಮಕೃಷ್ಣ ರವರುಗಳ ಲೇಖನಗಳು ಒಳಗೊಂಡಿವೆ. ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆ, ಭಾರತದಲ್ಲಿ ಇಂಗ್ಲಿಷ್ ಭಾಷೆಯ ಸ್ಥಾನ ಈ ಶತಮಾನದ ಪ್ರಶ್ನೆ. ಮಗು ಯಾವಾಗ ಎರಡು ಭಾಷೆಗಳನ್ನು ಕಲಿಯಬೇಕು? ಬೆಳೆಯುವ ಮಗು, ಭಾಷೆ ಮತ್ತು ಶಿಕ್ಷಣ, ಪ್ರಾಥಮಿಕ ಶಿಕ್ಷಣದ ಸುಧಾರಣೆ, ಕುರಿತಂತಹ ವಿಚಾರಗಳನ್ನು ವಿವರಿಸಿದ್ದಾರೆ.

"ಶಿಕ್ಷಕರೆ, ಮಕ್ಕಳೆ, ಪಾಲಕರೆ ಶೈಕ್ಷಣಿಕ ಯೋಜನಾ ಕಾರ್ಯ ಯೋಚಿಸುತ್ತಿದ್ದೀರಾ?" ಎಂಬ ಅರವಿಂದ ಚೊಕ್ಕಾಡಿಯವರ ಕೃತಿಯು ಬರೆದಿದ್ದಾರೆ. ಬೋಧನೆಯಲ್ಲಿ ಕಲಿಕಾರ್ಥಿಗಳಿಂದ ಯೋಜನಾ

[illegible]

ಕಾರ್ಯಗಳನ್ನು ಮಾಡಿಸುವುದರಿಂದ ಕಲಿಕೆಯು ಪರಿಣಾಮಕಾರಿಯಾಗುತ್ತದೆ ಎಂಬುದನ್ನು ಪ್ರಯೋಗಗಳ ಮೂಲಕ ಗುರುತಿಸಿದ್ದಾರೆ.

"ಶಾಲೆಯಲ್ಲಿ ಹಿಂದುಳಿಯುವಿಕೆ" ಎಂಬ ಕೃತಿಯಲ್ಲಿ ಜಿ. ಪುರುಷೋತ್ತಮರವರು ಒಂದು ಮಗು ಶಾಲೆಯಲ್ಲಿ ಕಲಿಯುವುದರಲ್ಲಿ ಹಿಂದುಳಿಯುವುದಕ್ಕೆ ನಾನಾ ರೀತಿಯ ಕಾರಣಗಳು ಇವೆ. ಮಗುವಿಗೆ ಅಕ್ಷರ ಅಭ್ಯಾಸದ ಕೊರತೆ ಮಗುವನ್ನು ಸರಿಯಾಗಿ ಗಮನಿಸದಿರುವುದು, ಸ್ಪಷ್ಟಮಾತನಾಡಲು ಬರದೆ ಇರುವುದು, ದೃಷ್ಟಿದೋಷದಿಂದ, ಹೀಗೆ ಇತ್ಯಾದಿ ಕಾರಣಗಳಿಂದ ಕಲಿಕೆಯಲ್ಲಿ ಮಗು ಹಿಂದುಳಿಯುತ್ತದೆ ಎಂದು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

"ಶಿಕ್ಷಣ ಬಿಂಬ" ವಿಷ್ಣು ಎಂ.ಶಿಂದೆ ಯವರ ಲೇಖನ ಸಂಗ್ರಹ ಕೃತಿಯಲ್ಲಿ "ಬೋಧನೆಯಲ್ಲಿ ಧ್ವನಿ ಪರಿಣಾಮ" ಲೇಖನವನ್ನು ಗಮನಿಸಿದಾಗ ನಮ್ಮ ಇಂದಿನ ಶಿಕ್ಷಣ ರಂಗದಲ್ಲಿ ಪರಿಣಾಮಕಾರಿ ಬೋಧನೆ ಎಂದರೆ, ಇರುವ ವಿಷಯವಸ್ತುವನ್ನು ಶಿಕ್ಷಕರು ತಮಗೆ ಬೇಕಿರುವ ಪರಿಕರಗಳನ್ನು ಬಳಸಿಕೊಂಡು ತರಗತಿಯಲ್ಲಿ ತಮಗೆ ಬೇಕಾದಂತೆ ಪ್ರಸ್ತುತ ಪಡಿಸುವ ಕಾರ್ಯವಾಗಿದೆ ಎಂದು ತಿಳಿದಿದ್ದೇವೆ. ತರಗತಿಯಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡರೆ ಮಾತ್ರ ಅದು ಉನ್ನತ ಗುಣಮಟ್ಟದ ಬೋಧನೆಯೆಂದು ಬಿಂಬಿಸಲಾಗುತ್ತದೆ. ಪರಿಣಾಮಕಾರಿ ಬೋಧನೆಗೆ ಮುಖ್ಯವಾಗಿ ಬೋಧಕರು ಈ ಅಂಶಗಳನ್ನು ಗಮನಿಸಲೇಬೇಕು. ತನ್ನ ದೈಹಿಕ ಹಾಗೂ ಮಾನಸಿಕ ಆರೋಗ್ಯ, ಭಾಷಾಕೌಶಲಗಳು, ವಿಷಯ ಪಾಂಡಿತ್ಯ, ಕಲಿಕೆಯ ಮನೋವಿಜ್ಞಾನ, ತರಗತಿ ನಿರ್ವಹಣಾ ತಂತ್ರಗಳು, ಬೋಧನಾ ಸಲಕರಣೆಗಳು, ಬೋಧನಾ ಕೌಶಲಗಳು, ಧ್ವನಿಯ ಪರಿಣಾಮ ಮತ್ತು ಬೋಧಕರಿಗೆ ಈ ಕೆಳಕಂಡ ಕೊರತೆಗಳು ಇದ್ದರೆ ಬೋಧನೆ ಪರಿಣಾಮಕಾರಿಯಾಗಲಾರದು. ಉಚ್ಚಾರಣೆ ದೋಷ, ಪದಸಂಪತ್ತಿನ ಕೊರತೆ, ಪಾಠದ ಭಾವವನ್ನು ಗುರುತಿಸಲಾಗದ ಅಸಮರ್ಥತೆ ಇತ್ಯಾದಿ ಅಂಶಗಳಿಂದ ಪರಿಣಾಮಕಾರಿ ಬೋಧನೆ ಸಾಧ್ಯವಾಗದು ಎಂದಿದ್ದಾರೆ.

"ಕಡ್ಡಾಯದ ಪ್ರಾಥಮಿಕ ಶಿಕ್ಷಣ" ಕೃತಿಯನ್ನು ಜಯಕುಮಾರ ಅನಗೋಳರವರು ಬರೆದಿದ್ದಾರೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಬೇಕೆಂಬ ವಾದವನ್ನು ಕುರಿತು ಕೆ.ಟಿ ಶಹಾರವರು ಅಭಿಪ್ರಾಯ ವ್ಯಕ್ತಪಡಿಸಿದರು. ಇವರು ಸಂವಿಧಾನದ ಮೂಲಭೂತ ಹಕ್ಕುಗಳ ಉಪಸಮಿತಿಯ ಸಧಸ್ಯರಾಗಿದ್ದರು. "ಶಿಕ್ಷಣವನ್ನು ನ್ಯಾಯ ನಿರ್ಣಾಯಕವಲ್ಲದ (ನಾನ್‌ಜಸ್ಟೀಬಲ್) ಹಕ್ಕುಗಳ ಪಂಕ್ತಿಗೆ ಸೇರಿಸಿದ್ದರಿಂದ ಅದು ಕೇವಲ ಪವಿತ್ರ ಆಕಾಂಕ್ಷಿಯಾಗಿ ಉಳಿಯುವುದು. ಈ ಭೇದವನ್ನು ಮಾಡುವುದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ನ್ಯಾಯ ನಿರ್ಣಾಯಕವಲ್ಲದ ಹಕ್ಕುಗಳನ್ನು ಚಲಾವಣೆಗೆ ತರಲು ಸಾಧ್ಯವಿಲ್ಲ ಎಂಬುದಕ್ಕೆ ಕಾರಣಗಳನ್ನು/ನೆಪಗಳನ್ನು ಹುಡುಕಬಹುದು. ನಾಗರಿಕರ ಬಗ್ಗೆ ರಾಜ್ಯದ ಮೇಲೆ ಯಾವುದೇ ನಿರ್ಣಾಯಕ ಜವಾಬ್ದಾರಿಯನ್ನು ಹೇರದೆ, ಕೇವಲ ಕಾನೂನು ಪುಸ್ತಕದಲ್ಲಿ ಅವುಗಳ ಸೇರ್ಪಡೆ ಮಾಡುವುದೆಂದರೆ. ಅದೊಂದು ಪ್ರಜೆಗಳ ಮೇಲೆಸಗಿದ

[illegible]

ಮೋಸ ಅದು ಅಂಗಡಿಯಲ್ಲಿ ಆಕರ್ಷಕ ಕಿಟಕಿಯನ್ನು ನಿರ್ಮಿಸಿ ಅದರಲ್ಲಿ ಸರಕುಗಳನ್ನು ಇಡದೆ ಇರುವಂತಾಗುವುದು" ಇಂತಹ ಅಭಿಪ್ರಾಯಗಳನ್ನು ಇಟ್ಟುಕೊಂಡು ಕಡ್ಡಾಯ ಶಿಕ್ಷಣದ ಮೂಲಕ ಗುಣಮಟ್ಟದ ಕಲಿಕೆ ನೀಡುವುದು ಅಸಾಧ್ಯ ಎಂದು ಅಭಿಪ್ರಾಯ ಪಟ್ಟಿದ್ದಾರೆ.

"ಖ್ಯಾತ ಶಿಕ್ಷಣ ಮನೋವಿಜ್ಞಾನಿಗಳು" ಮಹಾಬಲೇಶ್ವರರಾವ ರವರ ಕೃತಿಯಾಗಿದೆ. ಇದರಲ್ಲಿ ಪ್ರಸಿದ್ಧ ಮನೋವಿಜ್ಞಾನಿಗಳಾದ ಪಾವ್ಲೋವ್, ಥಾರ್ನ್ಡೈಕ್, ಸ್ಕಿನರ್, ಕೊಹ್ಲರ್, ಕೋಲ್‌ಬರ್ಗ್, ಪಿಯಾಜಿ, ಮುಂತಾವರುಗಳು ಕಲಿಕೆಯನ್ನು ಕುರಿತು ಹೇಳಿರುವ ವಿಚಾರಗಳನ್ನು ವಿವರಿಸಿದ್ದಾರೆ.

"ಆಡಿ ಕಲಿಯೋಣ ಕನ್ನಡ" ಇದು ಮಂಜುನಾಥರವರ ಕೃತಿಯಾಗಿದೆ. ಕನ್ನಡ ಭಾಷೆಯನ್ನು ಸರಳಿಕರಿಸಿ ಕಲಿಯಲೂ ಕೆಲವೊಂದು ಆಟಗಳನ್ನು ಹೆಸರಿಸಿದ್ದಾರೆ. ಅಂತ್ಯಾಕ್ಷರಿ ಆಟ, ಸಮನಾರ್ಥಕ ಮತ್ತು ವಿರುದ್ದಾರ್ಥಕ ಪದಗಳ ಆಟವನ್ನು ತಂಡಗಳನ್ನಾಗಿ ಮಾಡಿ ಆಡಿಸುವುದು. ಪ್ರಾಸ ಪದಗಳ ಆಟ, ಪದರಚಿಸುವ ಆಟ, ಅಕ್ಷರ ಪಲ್ಲಟದಿಂದ ಹೊಸಪದ ರಚಿಸುವ ಆಟ, ಪದಗಳನ್ನು ಸರಿಹೊಂದಿಸುವ ಆಟ, ಇಂತಹ ಹಲವಾರು ಆಟಗಳನ್ನು ಆಡಿಸುವ ಮೂಲಕ ಮಕ್ಕಳಲ್ಲಿ ಭಾಷಾಭಿವೃದ್ಧಿಸಲು ಸಹಾಯಕವಾಗುತ್ತದೆ. ಕಲಿಕೆಯಲ್ಲಿಯೂ ಮಕ್ಕಳು ಸಕ್ರಿಯವಾಗಿ ಕ್ರಿಯಾಶೀಲರಾಗಿ ಭಾಗವಹಿಸುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

"ಶಿಕ್ಷಣದ ಆಧಾರಗಳು" ಭರತ್‌ಭೂಷಣ್ ಬಿ. ರವರ ಕೃತಿಯಾಗಿದೆ. ಪ್ರಥಮ ಪಿ.ಯು.ಸಿಯ ಶಿಕ್ಷಣ ಶಾಸ್ತ್ರದ ಪಠ್ಯಪುಸ್ತಕವಾಗಿದೆ. ಇದರಲ್ಲಿ ಶಿಕ್ಷಣದ ಅರ್ಥ, ವ್ಯಾಖ್ಯೆಗಳು, ಶಿಕ್ಷಣದ ಮಹತ್ವ, ಮನಶಾಸ್ತ್ರೀಯ ಆಧಾರದ ಮೇಲೆ ಶಿಕ್ಷಣ, ಶಿಕ್ಷಣದ ಪ್ರಾಚೀನತೆ ಇತ್ಯಾದಿ ಅಂಶಗಳನ್ನು ಕುರಿತು ವಿವರಿಸಿದ್ದಾರೆ.

"ಸ್ವತಂತ್ರ ಭಾರತದಲ್ಲಿ ಶಿಕ್ಷಣ" ಶಂಕರಲಿಂಗ ಜಿ. ಹೆಂಬಾಡೆಯವರ ಕೃತಿಯಾಗಿದೆ. ಇದು ಬಿ.ಎ. ೫ನೇ ಸೆಮಿಸ್ಟರ್ ಪಠ್ಯಪುಸ್ತಕವಾಗಿದೆ. ಶಿಕ್ಷಣದ ಆಯೋಗಗಳು. ಹೊಸ ಶಿಕ್ಷಣ ನೀತಿ. ರಾಷ್ಟ್ರೀಯ ಶಿಕ್ಷಣ ಪದ್ದತಿ. ಶಿಕ್ಷಣಕ್ಕೆ ಶಿಕ್ಷಣ ನೀತಿ. ರಾಷ್ಟ್ರೀಯ ಶಿಕ್ಷಣ ಪದ್ದತಿ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ಅವಕಾಶಗಳು ಈ ಎಲ್ಲಾ ಅಂಶಗಳನ್ನು ಕುರಿತು ವಿವರಿಸಿದ್ದಾರೆ.

"ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು" (ಪ್ರಾಥಮಿಕ ಶಾಲೆಯ ಉರ್ದುಭಾಷಿಕ ಮಕ್ಕಳನ್ನು ಅನುಲಕ್ಷಿಸಿ) ಪಿ. ಮಹಾದೇವಯ್ಯ ರವರ ಕೃತಿಯಾಗಿದೆ. ಉರ್ದುಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಕಲಿಯುವಾಗ ಪದಾದಿ ಪದಮದ್ಯ ಪದಾಂತ್ಯ ಪರಿಸರದಲ್ಲಿ ಓದುವಾಗ ಮತ್ತು ಬರೆಯುವಾಗ ಯಾವ ರೀತಿಯ ಸಮಸ್ಯೆಯನ್ನು ಎದುರಿಸುತ್ತಾರೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

"ಪಠ್ಯಾಧಾರಿತ ಕನ್ನಡ ಭಾಷಾ ಬೋಧನೆ" ಅಕ್ಕಮಹಾದೇವಿ ಬಿ. ಹಿರೇಮಠ ರವರ ಕೃತಿಯಾಗಿದೆ. ಕನ್ನಡ ಭಾಷೆಯ ಅರ್ಥ ಮತ್ತು ಸ್ವರೂಪ ಕನ್ನಡ ಬೋಧನೆಯ ಉದ್ದೇಶ. ಗದ್ಯ ಮತ್ತು ಪದ್ಯ

ಬೋಧನೆಯ ಉದ್ದೇಶ, ಪಠ್ಯ ಪುಸ್ತಕದ ಮಹತ್ವ, ಭಾಷಾ ಬೋಧನೆ ಕಲಿಕೆಗಳ ಪರಿಣಾಮಗಳ ಮೌಲ್ಯಮಾಪನ ವಿಚಾರಗಳನ್ನು ಕುರಿತು ವಿವರಿಸಿದ್ದಾರೆ.

"ಸಾಮಾಜಿಕ ಮತ್ತು ತಾತ್ವಿಕ ಬುನಾದಿಗಳು" ಶ್ರೀಮತಿ ಗಿರಿಜಾ ಹಸಬಿಯವರು ಶಿಕ್ಷಣದ ತಾತ್ವಿಕ ಬುನಾದಿ, ಪ್ರಮುಖ ತತ್ತ್ವಜ್ಞಾನಿಗಳ ಕೊಡುಗೆ. ಕರ್ನಾಟಕ ರಾಜ್ಯದ ಶಿಕ್ಷಣ ವ್ಯವಸ್ಥೆ, ಆಧುನಿಕರಣ ಮತ್ತು ಶಿಕ್ಷಣ ಪಠ್ಯಪುಸ್ತಕ, ಬೋಧನಾ ಪದ್ಧತಿ, ಶಿಕ್ಷಣ ಮತ್ತು ವಿದ್ಯಾರ್ಥಿ ಇನ್ನಿತರ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ.

"ಶೈಕ್ಷಣಿಕ ಮನೋವಿಜ್ಞಾನ" ಆರ್.ಓಬಳೇಶಘಟ್ಟಿರವರ ಈ ಕೃತಿಯಲ್ಲಿ ಗಮನಿಸಿದ ಅಂಶ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಮತ್ತು ಕಲಿಕೆಯ ವರ್ಗಾವಣೆ. ಒಬ್ಬ ವ್ಯಕ್ತಿಯಲ್ಲಿ ಕಲಿಕೆಯುಂಟಾಗಬೇಕೆಂದರೆ ಆತನ ಮೇಲೆ ಯಾವ ಅಂಶಗಳು ಪ್ರಭಾವ ಬೀರುತ್ತವೆ ಮತ್ತು ಕಲಿಕೆಯು ಹೇಗೆ ವರ್ಗಾವಣೆಗೊಳ್ಳುತ್ತದೆ ಎಂಬ ಸಂಗತಿಯನ್ನು ವಿವರಿಸಿದ್ದಾರೆ.

"ಶಿಕ್ಷಣದ ಆಧಾರಗಳು" ಭರತ್ ಭೂಷಣ್ ಬಿ. ರವರ ಕೃತಿಯಾಗಿದೆ. ಈ ಕೃತಿಯಲ್ಲಿ ಮಹಾನ್ ಶಿಕ್ಷಣ ತಜ್ಞರುಗಳನ್ನು ಕುರಿತು ಪರಿಚಯಿಸುತ್ತಾ ಪ್ರಾಚೀನ ಭಾರತ, ವೇದಕಾಲದಲ್ಲಿನ ಶಿಕ್ಷಣ, ಬೌದ್ಧ, ಮಧ್ಯಕಾಲಿನ ಭಾರತ, ಆಧುನಿಕ ಭಾರತದಲ್ಲಿ ಬ್ರಿಟೀಶ್ ಆಳ್ವಿಕೆಯಲ್ಲಿನ ಶಿಕ್ಷಣದ ಸ್ಥಿತಿಗತಿಯೊಂದಿಗೆ ಸ್ವತಂತ್ರ ಭಾರತದಲ್ಲಿನ ಶಿಕ್ಷಣ ಕುರಿತು ವಿವರಿಸಿದ್ದಾರೆ.

"ಕನ್ನಡ ಭಾಷೆಯ ಇತಿಹಾಸ" ಬಿ. ರಾಮಚಂದ್ರರಾವ್‌ರವರ ಕೃತಿಯಾಗಿದೆ. ಚಾರಿತ್ರಿಕವಾಗಿ ಕನ್ನಡ ಭಾಷೆಯ ಉತ್ತರದ ಗಡಿಯು ರೇವಾ ನದಿಯ ತಟ ಎಂದು ಇಟ್ಟುಕೊಳ್ಳಬಹುದು. ಚರಿತ್ರೆಗೆ ಪೂರ್ವದಲ್ಲಿ ವಿಂದ್ಯಾದ್ರಿಯ ತಪ್ಪಲಲ್ಲಿ ವಾಸಿಸುತ್ತಿದ್ದ ಒಂದು ವರ್ಗದ ಗಿರಿಜನರ ಮನೆಮಾತು ಕನ್ನಡವಾಗಿತ್ತು ಎಂದಿದ್ದಾರೆ. ಹಾಗೂ ಕನ್ನಡ ಭಾಷೆಯ ವ್ಯಾಪ್ತಿ. ಸ್ವರೂಪ ಎಲ್ಲಿಯವರೆಗೆ ಹಬ್ಬಿತ್ತು ಮತ್ತು ಕನ್ನಡ ಭಾಷೆಯು ಬದಲಾವಣೆಗೊಂಡ ರೂಪವನ್ನು ಕುರಿತು ವಿವರಿಸಿದ್ದಾರೆ.

"ಕನ್ನಡ ಜಗತ್ತು ಅರ್ಧಶತಮಾನ" ಕೆ.ವಿ ನಾರಾಯಣರವರ ಕೃತಿಯಾಗಿದೆ. ಕರ್ನಾಟಕದಲ್ಲಿ ಕನ್ನಡಿಗರು ಕನ್ನಡ ಭಾಷೆಯನ್ನೆ ಮಾತ್ರ ಮಾತನಾಡುತ್ತಿದ್ದಾರೆ ಎಂಬುದು ಈಗ ಸುಳ್ಳಾಗಿದೆ. ಏಕೆಂದರೆ ಕಳೆದ ಅರ್ಧಶತಮಾನದಿಂದ ಇಚೇಗೆ ಕರ್ನಾಟಕದ ಮೇಲೆ ಅನ್ಯಭಾಷೆಗಳ ಪ್ರಭಾವ ಹೆಚ್ಚಾಗಿ ಕನ್ನಡ ಭಾಷೆಯ ಜೊತೆಗೆ ಒಂದಕ್ಕಿಂತ ಹೆಚ್ಚು ಭಾಷೆಯನ್ನು ಮಾತನಾಡುವ ಸಮುದಾಯಗಳು ಹೆಚ್ಚಾಗುತ್ತಿವೆ. ರಾಜ್ಯಗಳು ತಂತಮ್ಮ ಪ್ರಾಂತೀಯ ಭಾಷೆಗಳನ್ನು ಆಡಳಿತ ಭಾಷೆಯಾಗಿ ಬಳಸಬಹುದು ಎಂಬ ಅವಕಾಶ ರಾಜ್ಯಾಂಗದಲ್ಲಿದೆ. ಹಿಗಿದ್ದರೂ ಕೂಡಾ ನಮ್ಮ ಸರಕಾರದಲ್ಲಿ ಇಂಗ್ಲಿಷ್‌ನೊಂದಿಗೆ ಕನ್ನಡ ಭಾಷೆಯೂ ಜೊತೆಯಲ್ಲಿ ಆಡಳಿತ ಭಾಷೆಯಾಗಿ ಕಾರ್ಯ ನಿರ್ವಹಿಸಲಿ ಎಂಬ ಪರಿಸ್ಥಿತಿ ಉಂಟಾಯಿತು. ಕನ್ನಡ ಭಾಷೆಯು ತನ್ನ ಧ್ವನಿ ಉಚ್ಚರಣೆಯಲ್ಲಿ ಕೆಲವೊಂದು ಧ್ವನಿಗಳನ್ನು ಇಂಗ್ಲೀಷ

ಭಾಷೆಯ ಪ್ರಭಾವದಿಂದ ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಇಂತಹ ಹಲವಾರು ವಿಷಯಗಳನ್ನು ಚರ್ಚಿಸಿದ್ದಾರೆ.

"ಭಾಷೆ ರಚನೆ ಬಳಕೆ" ಸೋಮಶೇಖರಗೌಡ ರವರ ಕೃತಿಯಾಗಿದೆ. ಆಡುಗ ಮತ್ತು ಕೇಳುಗನ ಅವಶ್ಯಕತೆಗೆ ತಕ್ಕಂತೆ ಭಾಷೆ ರಚನೆಗೊಂಡಿರುತ್ತದೆ. ಶಿಷ್ಟಭಾಷೆಯು ಹೆಚ್ಚು ಜನರು ಅರ್ಥಮಾಡಿಕೊಳ್ಳುವಂತದು. ಏಕೆಂದರೆ ಇದು ವಾಕ್ಯರಚನೆ ಹಾಗೂ ವ್ಯಾಕರಣ ರೂಪ ಪಡೆದುಕೊಂಡಿರುತ್ತದೆ. ಪ್ರಾದೇಶಿಕ ಉಪಭಾಷೆಗಳು ಆಯಾ ಪ್ರಾದೇಶದ ಜನರಿಗೆ ಅರ್ಥವಾಗುತ್ತವೆ. ಒಂದು ಪ್ರದೇಶದ ಭಾಷೆ ಮತ್ತೊಂದು ಪ್ರದೇಶದ ಜನರಿಗೆ ಹೆಚ್ಚು ಅರ್ಥವಾಗದೆ ಹೋಗಬಹುದು. ಇಂತಹ ಹಲವಾರು ಭಾಷಿಕ ಅಂಶಗಳನ್ನು ವಿವರಿಸಿದ್ದಾರೆ.

"ಪಠ್ಯಕ್ರಮ ಸಂವಹನಾ ತತ್ವಗಳು" ರಾಜೇಶ ಬೆಳ್ಳೇರ್ ರವರ ಕೃತಿಯಾಗಿದೆ. ಪಠ್ಯಕ್ರಮ ಮತ್ತು ಶೈಕ್ಷಣಿಕ ತಂತ್ರಜ್ಞಾನ, ಬೋಧನೆ ಮತ್ತು ಬೋಧನಾ ತಂತ್ರಜ್ಞಾನ, ಸಾಮರ್ಥ್ಯಧಾರಿತ ಬೋಧನೆ-ಕಲಿಕೆ ಮಾರ್ಗ, ಪಾಠಯೋಜನೆ ಮತ್ತು ಮೌಲ್ಯಮಾಪನ, ಶಿಕ್ಷಣದಲ್ಲಿ ದೃಕ್‌ಶ್ರವಣ ಸಾಧನ, ತಂತ್ರಜ್ಞಾನ ಮಾಧ್ಯಮಗಳನ್ನು ಕುರಿತು ವಿವರಿಸಿದ್ದಾರೆ.

"ವಿಷಯಾಧಾರಿತ ಕನ್ನಡ ಭಾಷಾಬೋಧನಾ ವಿಧಾನ ಪಠ್ಯಕ್ರಮ" ವಿಜಯಕುಮಾರ ಕೆ.ಗೋತಗಿ ಯವರ ಕೃತಿಯಾಗಿದೆ. ಈ ಕೃತಿಯು ಕನ್ನಡ ಬೋಧನೆಯ ಉದ್ದೇಶಗಳು ಬೋಧನೆಯ ವಿಧಾನಗಳನ್ನು ತಿಳಿಸುತ್ತದೆ ಮತ್ತು ಕನ್ನಡ ಭಾಷಾ ಬೋಧನೆಗೆ ಬೇಕಾಗುವಂತಹ ಬೋಧನಾ ಸಂಪನ್ಮೂಲಗಳನ್ನು ಕುರಿತು ಅವುಗಳ ಮಹತ್ವವನ್ನು ವಿವರಿಸುತ್ತದೆ.

"ಭಾಷೆ ಮತ್ತು ಕನ್ನಡ ಭಾಷಾ ಬೋಧನೆ" ಆರ್.ಓಬಳೇಶಘಟ್ಟಿಯವರ ಕೃತಿಯಾಗಿದೆ. ಇದರಲ್ಲಿ ಭಾಷೆ ಮತ್ತು ಮಾತೃಭಾಷೆ ಎರಡರ ನಡುವಿನ ಸೂಕ್ಷ್ಮತೆಯನ್ನು ತಿಳಿಸುತ್ತಾ ಕನ್ನಡ ಮಾತೃಭಾಷಾ ಬೋಧನೆ ಮತ್ತು ಬೋಧಕನ ಲಕ್ಷಣಗಳನ್ನು ವಿವರಿಸಿದ್ದಾರೆ. ಹಾಗೂ ಭಾಷಾ ಪಠ್ಯ ಪುಸ್ತಕದ ಅವಶ್ಯಕತೆ, ರಚನಾ ತತ್ವಗಳು, ಬೋಧಕನು ಗಮನಿಸಬೇಕಾದ ಅಂಶಗಳನ್ನು ಕುರಿತು ವಿವರಿಸಿದ್ದಾರೆ.

"ಶೈಕ್ಷಣಿಕ ಮನೋವಿಜ್ಞಾನ" ಹೆಚ್.ವಿ ವಾಸುದೇವಪ್ಪರವರ ಪುಸ್ತಕವಾಗಿದೆ. ವಿಶಿಷ್ಟ ಮಕ್ಕಳ ಶಿಕ್ಷಣ, ಕಲಿಕೆ, ಅರ್ಥ, ಸ್ವರೂಪ ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು. ಈ ಅಂಶಗಳನ್ನು ಕುರಿತು ವಿವರಣಾತ್ಮಕವಾಗಿ ವಿವರಿಸಿದ್ದಾರೆ.

"ಶಿಕ್ಷಣ" ಈ ಕೃತಿಯನ್ನು ಎಸ್.ಬಿ ಯಾದವಾಡರವರು ಬರೆದಿದ್ದಾರೆ. ಇದರಲ್ಲಿ ಶೈಕ್ಷಣಿಕ ಆಡಳಿತದಲ್ಲಿ ವಿವಿಧ ಶಿಕ್ಷಣದ ನಿಯೋಗಗಳ ಪಾತ್ರ (ಸಮಾಜ,ಮನೆ,ಶಾಲೆ) ಹಾಗೂ ಅವುಗಳ ಅಂತರ್ ಸಂಬಂಧ, ರಾಷ್ಟ್ರಿಯ ಗುರಿಗಳು ಹಾಗೂ ಅಂತರಾಷ್ಟ್ರೀಯ ತಿಳುವಳಿಕೆಗೆ ಸಂಬಂಧಿಸಿದಂತೆ ಶಿಕ್ಷಣದ ಗುರಿಗಳ ಕುರಿತು ವಿಮರ್ಶಾತ್ಮಕ ವಿಶ್ಲೇಷಣೆ, ಶಿಕ್ಷಣದ ಗುಣಾತ್ಮಕತೆ, ಹಾಗೂ ಪರಿಮಾಣಾತ್ಮಕ

[illegible]

ಬೆಳವಣಿಗೆಗೆ ಸಂಬಂಧಿಸಿದಂತೆ ಶಾಲಾ ಸಮುದಾಯದ ಸಂಬಂಧ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಹಾಗೂ ಅದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು, ಕಲಿಕೆ ವಿಧಗಳು. ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು, ಸೇವಾ ನಿರತ/ಸೇವಾವದಿ ಶಿಕ್ಷಕರ ಕಾರ್ಯಕ್ರಮಗಳು. ಸೇವಾ ಪೂರ್ವ ಶಿಕ್ಷಕರ ಕಲ್ಯಾಣ ಕಾರ್ಯಕ್ರಮಗಳು ಮುಂತಾದ ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

"ಶಿಕ್ಷಣ ರೂಪಾಂತರ" (ವಿವಿಧ ಶಿಕ್ಷಣ ತಜ್ಞರ ಲೇಖನಗಳು) ವಿದ್ಯಾಂಕುರ ರವರ ಸಂಪಾದನ ಕೃತಿಯಾಗಿದೆ. 'ಶಿಶುಕೇಂದ್ರಿತ ಶಿಕ್ಷಣ' ಲೇಖನವನ್ನು ಜೇನ್ ಸಾಹಿಯವರು ಬರೆದಿದ್ದಾರೆ. ಇದು ಶಿಶುಕೇಂದ್ರಿತ ವಿಷಯಗಳನ್ನು ಒಳಗೊಂಡಿದ್ದು ತಾತ್ವಿಕ ಮತ್ತು ಮನೋವೈಜ್ಞಾನಿಕ ರೀತಿಯ ವಿವರಣೆ ನೀಡುತ್ತದೆ. ಶಿಕ್ಷಣದಲ್ಲಿ ಶಿಶುಕೇಂದ್ರಿತ ಶಿಕ್ಷಣವನ್ನು ಅಪೇಕ್ಷಿಸುವ ಶಿಕ್ಷಕರು ಏನು ಮಾಡಬೇಕೆಂಬುದರ ಸಲಹೆ ನೀಡುತ್ತದೆ. ಶಿಶು ಮಗುವಾಗಿ, ವ್ಯಕ್ತಿಯಾಗಿ, ಕಲಿಯುವವನಾಗಿ, ಪರಸ್ಪರ ಕಲಿಕೆಯಲ್ಲಿ ಮಗು–ಶಿಕ್ಷಕರ ಸಂಬಂಧ ಯಾವ ರೀತಿಯಲ್ಲಿರುತ್ತದೆ ಎಂಬುದನ್ನು ವಿವರಿಸಿದ್ದಾರೆ. ಅದೇ ರೀತಿಯಾಗಿ ಶಿಶು ಕೇಂದ್ರಿತ ಎಂದರೇನು, ಮಕ್ಕಳು ಹೇಗೆ ಕಲಿಯುತ್ತಾರೆ, ಬದುಕಿಗಾಗಿ ಕಲಿಕೆ, ನನ್ನ ಶಿಕ್ಷಣ ಇಂತಹ ಹಲವಾರು ಲೇಖನಗಳನ್ನು ಈ ಕೃತಿ ಒಳಗೊಂಡಿದೆ.

ಅಧ್ಯಯನ ಸಮೀಕ್ಷೆಯಲ್ಲಿ ಒಳಪಡಿಸಿದ ಎಲ್ಲಾ ಎಂ.ಫಿಲ್ ಕಿರುಪ್ರಬಂಧಗಳು ಮತ್ತು ಎಂ.ಇಡಿ ಕಿರುಪ್ರಬಂಧಗಳು ನನ್ನ ಅಧ್ಯಯನಕ್ಕೆ ನೇರ ಮತ್ತು ಪರೋಕ್ಷವಾದ ಮಾಹಿತಿಯನ್ನು ಒದಗಿಸುತ್ತವೆ. ಅದೇ ರೀತಿಯಾಗಿ ಸಂಶೋಧನಾ ಕೃತಿಗಳಾದ ಪುರುಷೋತ್ತಮರವರ ಕಲಿಕೆಯ ತೊಂದರೆಗಳು, ಮಹಾಬಲೇಶ್ವರ ರವರ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ, ಡಿ.ಎನ್.ಶಂಕರಭಟ್ಟರವರ ಕನ್ನಡಕ್ಕೆ ಬೇಕು ಕನ್ನಡ್ಡೆ, ವ್ಯಾಕರಣ, ಕನ್ನಡ ಬರಗವನ್ನು ಸರಿಪಡಿಸೋಣಾ, ಇತ್ಯಾದಿ ಕೃತಿಗಳು ಅಧ್ಯಯನಕ್ಕೆ ನೇರವಾದ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಅದೇ ರೀತಿಯಾಗಿ ಸರಕಾರ ನೀಡುವ ತರಬೇತಿಗಳು ಅಧ್ಯಯನದ ೩ನೇ ಅಧ್ಯಾಯಕ್ಕೆ ನೇರವಾದ ಮಾಹಿತಿಯನ್ನು ಒದಗಿಸಿದೆ. ಪತ್ರಿಕಾ ಲೇಖನಗಳು ಪರೋಕ್ಷವಾದ ಮಾಹಿತಿಯನ್ನು ಒದಗಿಸುವುದರ ಜೊತೆಗೆ ಅಧ್ಯಾಯಗಳನ್ನು ವಿವರಿಸುವಲ್ಲಿ ಸಹಾಯಕಾರಿಯಾಗಿವೆ. ಪ್ರತಿಯೊಂದು ಅಧ್ಯಯನಗಳು ತನ್ನದೆಯಾದ ಸತ್ಯತೆಗಳನ್ನು ಒಳಗೊಂಡಿದ್ದರೂ ಇವೆಲ್ಲವುಗಳಿಗಿಂತ ಭಿನ್ನವಾದ ಅಧ್ಯಯನ ಇದಾಗಿದೆ.

ಈ ಮೇಲೆ ತಿಳಿಸಿದ ಎಲ್ಲಾ ಸಂಶೋಧನಾ ಮಹಾಪ್ರಬಂಧಗಳು ಈ ಅಧ್ಯಯನಕ್ಕೆ ನೇರವಾಗಿ ಸಂಬಂಧಿಸಿದ್ದರೂ ಕೂಡಾ ಈ ಅಧ್ಯಯನಗಳಿಗಿಂತ ನನ್ನ ಅಧ್ಯಯನ ಭಿನ್ನವಾಗಿದೆ. ನನ್ನ ಅಧ್ಯಯನವು ಬೋಧಕ, ಕಲಿಕಾರ್ಥಿ ಮತ್ತು ಪಠ್ಯಪುಸ್ತಕದ ಈ ಮೂರು ಅಂಶಗಳ ಮಿತಿಯಲ್ಲಿ ಸಾಗುತ್ತದೆ. ಆದರೆ ಮೇಲಿನ ಅಧ್ಯಯನಗಳು ಯಾವುದಾದರು ಒಂದು ಅಂಶದ ಮೇಲೆ ಅಧ್ಯಯನ ನಡೆದಿವೆ. ಉದಾಹರಣೆಗೆ ಉರ್ದು ಮಕ್ಕಳು, ಲಂಬಾಣಿ ಮಕ್ಕಳು, ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಕಲಿಯುವ

[illegible]

ಮಕ್ಕಳು, ಪಠ್ಯಪುಸ್ತಕ, ಇತ್ಯಾದಿ ಅಂಶಗಳ ಮೇಲೆ ಅಧ್ಯಯನ ನಡೆದಿವೆ. ಹೊರತು ಬೋಧಕ ಕಲಿಕಾರ್ಥಿ ಮತ್ತು ಪಠ್ಯಪುಸ್ತಕದ ಚೌಕಟ್ಟಿನೊಳಗೆ ಇರುವ ಸಮಸ್ಯೆಗಳನ್ನು ಯಾವ ಅಧ್ಯಯನಗಳು ಗುರುತಿಸಿಲ್ಲಾ ಹೀಗಾಗಿ ಈ ಎಲ್ಲಾ ಅಧ್ಯಯನಗಳಿಗಿಂತ ನನ್ನ ಅಧ್ಯಯನವು ಭಿನ್ನ ಎಂಬುದು ಈ ಅಧ್ಯಯನ ಸಮೀಕ್ಷೆಯಿಂದ ತಿಳಿದು ಬಂದಿದೆ.

* * *

ಅಧ್ಯಾಯ : ಮೂರು

ಭಾಷಾ ಬೋಧನೆಯ ವೈಶಿಷ್ಟ್ಯಗಳು

೩.೧. ಬೋಧನೆಯ ವ್ಯಾಖ್ಯೆಗಳು ಮತ್ತು ಸ್ವರೂಪ

೩.೨. ಬೋಧನೆಯ ವೈಶಿಷ್ಟ್ಯಗಳು

೩.೩. ಬೋಧನಾ ಪದ್ಧತಿಯ ಪ್ರಕಾರಗಳು

೩.೪. ಬೋಧಕರಿಗೆ ಸೇವಾನಿರತ ತರಬೇತಿಗಳು

೩.೫. ಬದಲಾಗುತ್ತಿರುವ ಬೋಧನಾ ಪದ್ಧತಿಯ ಅನುಕೂಲ ಮತ್ತು ಅನಾನುಕೂಲಗಳು

ಅಧ್ಯಾಯ : ಮೂರು

ಭಾಷಾ ಬೋಧನೆಯ ವೈಶಿಷ್ಟ್ಯಗಳು

ಕನ್ನಡ ಭಾಷಾ ಬೋಧನೆಯ ವೈಶಿಷ್ಟಗಳನ್ನು ಕುರಿತು ಈ ಅಧ್ಯಾಯದಲ್ಲಿ ಹೇಳುವ ಉದ್ದೇಶವೆಂದರೆ ಕನ್ನಡ ಭಾಷೆಯು ಅತ್ಯಂತ ಸರಳವಾದದ್ದು ಎಂದು

"ಸುಲಿದ ಬಾಳೆಯ ಹಣ್ಣಿನಂದದಿ

ಕಳಿದ ಸಿಗುರಿನ ಕಬಿನಂದದಿ

ಅಳಿದ ಉಷ್ಣದ ಹಾಲಿನಂದದಿ

ಸುಲಭವಾಗಿರ್ಪ ಲಲಿತವಹ ಕನ್ನಡ ನುಡಿಯಲಿ"

ತಿಳಿದ ತನ್ನೊಳು ತನ್ನ ಮೋಕ್ಷವ

ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು?" ಎಂದು ಮಹಲಿಂಗರಂಗ ಕವಿ ಹೀಗೆ ಹೇಳಿದ್ದಾರೆ ಮತ್ತು ಶ್ರೀವಿಜಯ ರಚಿಸಿರುವ ಕವಿರಾಜ ಮಾರ್ಗ ಕೃತಿಯಲ್ಲಿಯೂ.

"ಪದವಿಜೆದು ನುಡಿಯಲುಂ ನುಡಿ

ದುದನಜೆದಾರಯಲುಮಾರ್ಪರಾ ನಾಡವರ್ಗಳ್

ಚದುರರ್ ನಿಜದಿಂ ಕುಜೆತೋ

ದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದು ಹೇಳುವ ಮೂಲಕ ಕನ್ನಡ ಭಾಷೆಯ ಸರಳತೆ ಮತ್ತು ಕನ್ನಡಿಗರ ಜಾಣ್ಮೆಯನ್ನು ಕುರಿತು ತಿಳಿಸುತ್ತವೆ. ಇಂತಹ ಸರಳವಾದ ಕನ್ನಡ ಭಾಷೆಯು ಬೋಧನೆಯಲ್ಲಿ ತನ್ನದೆಯಾದ ವೈಶಿಷ್ಟ್ಯವನ್ನು ಒಳಗೊಂಡಿದೆ. ಭಾಷೆಯನ್ನು ಬೋಧಿಸುವುದರ ಮೂಲಕ ಕನ್ನಡದ ಅನೇಕ ಉಪಭಾಷೆಗಳನ್ನು ಪರಿಚಯಿಸುತ್ತದೆ. ಪಠ್ಯಪುಸ್ತಕದ ಭಾಷೆ ಮತ್ತು ಕಲಿಕಾರ್ಥಿಗಳ ಪರಿಸರದ ಭಾಷೆಯ ನಡುವಿನ ವ್ಯತ್ಯಾಸ ಗುರುತಿಸುತ್ತದೆ. ಕನ್ನಡ ಸಾಹಿತ್ಯ ಪ್ರಕಾರಗಳನ್ನು ಪರಿಚಯಿಸುತ್ತದೆ. ಇಂತಹ ಅನೇಕ ಪ್ರಮುಖವಾದ ಅಂಶಗಳನ್ನು ಬೋಧನೆಯು ಒಳಗೊಂಡಿರುತ್ತದೆ.

ಹಾಗೂ ಬೋಧಿಸುವ ಹಲವಾರು ಕ್ರಮಗಳನ್ನು ಪರಿಚಯಿಸುವುದರ ಪದ್ಧತಿ, ಚರ್ಚಾಪದ್ಧತಿ ಇತ್ಯಾದಿ ಬೋಧನಾ ಪ್ರಕಾರಗಳನ್ನು ಪರಿಚಯಿಸುವುದರ ಜೊತೆಗೆ ಬೋಧನೆಯಲ್ಲಿ ಬೋಧನಾ ಪ್ರಕಾರಗಳನ್ನು ಪರಿಚಯಿಸುವುದರ ಜೊತೆಗೆ ಬೋಧನೆಯಲ್ಲಿರುವ ಅನುಕೂಲ ಮತ್ತು ಅನಾನುಕೂಲಗಳನ್ನು ತಿಳಿಸುತ್ತದೆ. ಈ ಎಲ್ಲಾ ಅಂಶಗಳನ್ನು ತಿಳಿಸುವುದು ಈ ಅಧ್ಯಾಯದ ಉದ್ದೇಶ ಮತ್ತು ಪ್ರಾಮುಖ್ಯತೆಯಾಗಿದೆ.

ಕನ್ನಡ ಭಾಷಾ ಬೋಧನೆಯು ಪ್ರಮುಖವಾಗಿ ತರಗತಿಯಲ್ಲಿ ತಾಯ್ನುಡಿ ಕಲಿಸುವ ನಿರ್ದಿಷ್ಟ ವ್ಯವಹಾರಿಕ ಉದ್ದೇಶವೆಂದರೆ ಮಕ್ಕಳಿಗೆ ಸರಳವಾದ ವಿಷಯವನ್ನು ಸರಳವಾದ ರೀತಿಯಲ್ಲಿ ಹೇಳುವುದಕ್ಕೂ, ಸರಳವಾದ ವಿಚಾರವನ್ನೂ ಸರಳವಾಗಿ ಕೇಳಿ ತಿಳಿದುಕೊಳ್ಳುವದಕ್ಕೂ, ಸರಳವಾದ ಸಂಗತಿಯನ್ನು ಸರಳವಾಗಿ ಓದುವುದಕ್ಕೂ, ಸರಳವಾದುದನ್ನು ಸರಳವಾದ ಕ್ರಮದಲ್ಲಿ ಬರೆಯುವುದಕ್ಕೂ ಕಲಿಸುವುದು, ಮಾತೃಭಾಷೆಯ ಕಲಿಕೆಯ ಉದ್ದೇಶವೆಂದು ಜಿ.ಸಾಂಪ್ಸನ್ ಹೇಳಿದ್ದಾರೆ. (ಭಾಷೆ ಮತ್ತು ಕನ್ನಡ ಬೋಧನೆ ಡಾ.ಎನ್.ಬಿ.ಕೊಂಗವಾಡ ಪು.ಸಂ. ೨೬)

ಸಾಂಪ್ಸನ್‌ರವರ ಹೇಳಿಕೆಯು ಕನ್ನಡ ಭಾಷಾ ಬೋಧನೆಗೆ ಸ್ಪಷ್ಟತೆಯನ್ನು ತಿಳಿಸಿದೆ. ಬೋಧಿಸುವ ಕ್ರಮ ಮತ್ತು ಕಲಿಕಾರ್ಥಿ ಸಾಮರ್ಥ್ಯ ಎರಡನ್ನು ಅರ್ಥೈಸಿಕೊಂಡು ಬೋಧಿಸಬೇಕಾಗಿರುವುದು ಬೋಧಕನ ಕರ್ತವ್ಯವಾಗಿದೆ.

ಶಾಲೆಗಳಲ್ಲಿ ಭಾಷೆಕಲೆ-ಬೋಧನೆಯು ಒಂದು ಅಧಿಕೃತ ಕೆಲಸವಾಗಿದೆ. ಭಾಷಾ ಕೌಶಲಗಳ ಸಾಮರ್ಥ್ಯಗಳನ್ನು ಪ್ರಾಥಮಿಕ ಹಂತದಲ್ಲಿ ಬೋಧಿಸುವಾಗ ವೈಜ್ಞಾನಿಕವಾಗಿ ಯೋಚಿಸಬೇಕು. ಭಾಷೆಯನ್ನು ಯಾರು ಬೇಕಾದರೂ ಬೋಧಿಸುವುದಕ್ಕೆ ಬರುವುದಿಲ್ಲ. ಭಾಷಾ ಕಲಿಕೆ ಹಾಗೂ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದಾದ ನಿಯಮಗಳನ್ನು ತಂತ್ರಗಳನ್ನು ಅರ್ಥಮಾಡಿಕೊಂಡು ಬೋಧಿಸಬೇಕಾಗುತ್ತದೆ. ಬೋಧಕರು ಪರಿಣಾಮಕಾರಿಯಾಗಿ ಬೋಧಿಸಿದಾಗ ಮಾತ್ರ ಕಲಿಕಾರ್ಥಿಗಳು ಕಲಿಕೆಯನ್ನು ಸಾಧಿಸಿದ್ದಾರೋ ಇಲ್ಲವೋ ಎಂಬುದನ್ನು ತಿಳಿಯಲಾಗುತ್ತದೆ. ಅದಕ್ಕಾಗಿ ಕಲಿಕಾ ಕ್ಷೇತ್ರದಲ್ಲಿ ಬೋಧನೆಯು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಬೋಧನೆಯನ್ನು ಕುರಿತು ವ್ಯಾಖ್ಯಾನಕಾರರು ಹೀಗೆ ಹೇಳಿದ್ದಾರೆ.

೩.೧. ಬೋಧನೆಯ ಅರ್ಥ, ವ್ಯಾಖ್ಯೆಗಳು ಮತ್ತು ಸ್ವರೂಪ

೩.೧.೧. ಬೋಧನೆಯ ಅರ್ಥ :

'ಬೋಧನೆ' ಎಂದರೆ ಮಕ್ಕಳಿಗೆ ಉಪದೇಶ ನೀಡುವುದು, ಅರಿವು ಮೂಡಿಸುವುದು, ಹೊಸ ವಿಷಯಗಳನ್ನು ತಿಳಿಸಿಕೊಡುವುದು, ನವೀನ ದೃಷ್ಟಿಕೋನ್ ಬೆಳೆಸುವುದು ಎಂಬ ಅರ್ಥ ಬರುತ್ತದೆ. ಒಟ್ಟಿನಲ್ಲಿ ಮಕ್ಕಳನ್ನು ಕಲಿಕೆಗೆ ಪ್ರಚೋದಿಸಿ ಕಾರ್ಯೋನ್ಮುಖರಾಗುವಂತೆ ಮಾಡಿ, ಅವರ ಅವಶ್ಯಕತೆಗಳನ್ನು ತೃಪ್ತಿಕರವಾಗಿ ಪೂರೈಸುವಲ್ಲಿ ನೆರವಾಗುವುದುದೇ ಬೋಧನೆ. ಮಕ್ಕಳ ವೈಯಕ್ತಿಕ ಕಲಿಕಾ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಬೋಧನಾ ತಂತ್ರ ಬಳಸಿ ಕಲಿಸಬೇಕೆಂದು ರೂಸೋ, ಫೆಸ್ಟಾಲಿಜಿ,

[illegible]

ಮಾಂಟೆಸೋರಿ ಮುಂತಾದ ಶಿಕ್ಷಣ ತಜ್ಞರು ಪ್ರತಿಪಾದಿಸಿದ್ದಾರೆ. ಇವರೆಲ್ಲರುಗಳ ಸಂಶೋಧನೆ ಹಾಗೂ ಪ್ರಾಯೋಗಿಕ ಸಿದ್ಧಾಂತದ ಪ್ರಭಾವದಿಂದ ಇಂದು ಬೋಧನಾ ಕ್ರಮದಲ್ಲಿ ಆಧುನಿಕ ವಿಧಾನಗಳು ಹಾಗೂ ತಂತ್ರಗಳು ರೂಪುಗೊಂಡಿವೆ.[೧]

೩.೧.೨. ವ್ಯಾಖ್ಯಾನಗಳು :

*** ರೈಬರ್ನ್ ರವರ ಪ್ರಕಾರ :**

"ಬೋಧನೆಯು ಮಕ್ಕಳ ಮನೋಭಾವನೆಗಳಿಗೆ ಕೊಡುವ ತರಬೇತಿಯನ್ನು ಒಳಗೊಂಡಿರುತ್ತದೆ."

*** ಮುರ್ಸೆಲ್ ರವರ ಪ್ರಕಾರ :**

"ನಿರ್ದೇಶನ ಹಾಗೂ ಮಾರ್ಗದರ್ಶನ ನೀಡುವುದರ ಜೊತೆಗೆ ಮಕ್ಕಳ ಕಲಿಕೆಯನ್ನು ವ್ಯವಸ್ಥೆಗೊಳಿಸುವುದೇ ಬೋಧನೆ".

*** ಬರ್ಟನ ರವರ ಪ್ರಕಾರ :**

"ಮಕ್ಕಳ ಉದ್ವೇಗಗಳನ್ನು ನಿಯಂತ್ರಿಸಿ ಯೋಗ್ಯ ರೀತಿಯಲ್ಲಿ ಕಲಿಯಲು ಸಹಾಯವಾಗುವುದೆ ಬೋಧನೆ".

*** ಪಿಂಟ್ನೆನ್ ರವರ ಪ್ರಕಾರ :**

"ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಪ್ರಭಾವ ಬೀರುವುದೇ ಬೋಧನೆ".

*** ಸ್ಕಿನರ್ ರವರ ಪ್ರಕಾರ :**

"ಬೋಧನೆಯು ಕ್ರಿಯೆಯಿಂದ ಕೂಡಿರಬೇಕು ಎಂದಿದ್ದಾನೆ".

*** ಆಲ್ ಕಾರ್ನ್ ರವರ ಪ್ರಕಾರ :**

"ಬೋಧನೆಯು ಶಿಕ್ಷಕನ ಒಂದು ವಿಶಿಷ್ಟ ಶಕ್ತಿಯಾಗಿದ್ದು ಕಲಿಯುವವರಿಗೆ ಮಾರ್ಗದರ್ಶನ ನೀಡುತ್ತದೆ".

*** ಕ್ಲರ್ಕ್ ರವರ ಪ್ರಕಾರ :**

"ಬೋಧನೆ ಎಂದರೆ ಚಟುವಟಿಕೆಗಳಲ್ಲಿ ವಿನ್ಯಾಸಗೊಳಿಸುವುದು ಮತ್ತು ವಿದ್ಯಾರ್ಥಿಗಳ ವರ್ತನೆಯಲ್ಲಿ ಬದಲಾವಣೆ ತರುವುದು".[೨]

*** ಸಾರಿಸ್ ಹುಸೇನರ ಪ್ರಕಾರ :**

ಆರು ಬೋಧನಾ ಚಟುವಟಿಕೆಗಳು ಬೋಧನೆಯನ್ನು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದು ಬೋಧಕರ ಪಾತ್ರಕ್ಕೆ ಸಂಬಂಧಿಸಿದೆ. ಅವುಗಳೆಂದರೆ,

* ಮಾಹಿತಿ ನೀಡುವುದು
* ಸಲಹೆ ನೀಡುವುದು
* ಅಭಿಪ್ರೇರಕರು
* ಮಾರ್ಗದರ್ಶಿಗಳು
* ಆಧಾರ ನೀಡುವವರು
* ಶಿಸ್ತು ಪಾಲಿಸುವವರು
* **ರ್‍ಯಾಥಸ್‌ರ ಪ್ರಕಾರ :**

ಬೋಧನೆಯು ಪರಿಣಾಮಕಾರಿಯಾಗಲು ಬೇಕಾಗುವ ಏಳು ಕಾರ್ಯಗಳಿವೆ ಎಂದು ಹೇಳಿದ್ದಾರೆ.

* ಮಾಹಿತಿ ನೀಡುವುದು ಮತ್ತು ವಿವರಿಸುವುದು
* ಪ್ರಾರಂಭಿಸುವುದು
* ನಿರ್ದೇಶಿಸುವುದು
* ಗುಂಪುಗಳನ್ನು ಒಟ್ಟುಗೂಡಿಸುವುದು
* ರಕ್ಷಣೆ ನೀಡುವುದು
* ಮನೋಭಾವನೆ, ನಂಬಿಕೆ, ಸಮಸ್ಯೆಗಳನ್ನು ವಿಂಗಡಿಸುವುದು
* ಮೌಲ್ಯಮಾಪನ.

ಈ ಏಳು ಅಂಶಗಳೊಂದಿಗೆ ಬೋಧಕರು ಸೂಕ್ತ ಕಲಿಕಾ ಪರಿಸರವನ್ನು ಒದಗಿಸಬೇಕು.

* **ರೋಜರ್ಸ್ ರವರ ಪ್ರಕಾರ :**

ಕಲಿಕೆಗೆ ಪ್ರೋತ್ಸಾಹ ನೀಡುವ ಬೋಧಕರು ಹೇಗಿರುತ್ತಾರೆ ಎಂದರೆ, "ಶೈಕ್ಷಣಿಕ ವಾತಾವರಣದಲ್ಲಿ ತನ್ನ ನಿಜದ 'ಸ್ವ'ದ ಮೂಲಕ ವ್ಯವಹರಿಸುವುದು ಹಾಗೂ ಕಲಿಕೆಗೆ ಬೋಧನೆ ನೀಡುವುದು ಕಷ್ಟವೆಂಬುದು ಇವರ ಅಭಿಪ್ರಾಯ ಕಲಿಕೆಗೆ ಇಂಬು ನೀಡುವ ಶಿಕ್ಷಕರು 'ಬೆಲೆಕೊಡುವಿಕೆ ಸ್ವೀಕರಿಸುವಿಕೆ ಹಾಗೂ ವಿಶ್ವಾಸವಿಡುವಿಕೆ' ಎಂಬ ಮೂರು ಗುಣಗಳನ್ನು ವ್ಯಕ್ತಪಡಿಸುತ್ತಾರೆ. ಇಂಥ ಶಿಕ್ಷಕರು ವಿದ್ಯಾರ್ಥಿಗಳ ಬಗ್ಗೆ ಕಳಕಳಿ ಉಳ್ಳವರಾಗಿದ್ದು ಅವರ ಬಗ್ಗೆ ಅಧಿಕಾರ ದರ್ಪದಿಂದ ತೀರ್ಪುನೀಡಲು ಹೋಗುವುದಿಲ್ಲವೆಂದು ಹೇಳುತ್ತಾನೆ."[೩]

ಈ ಎಲ್ಲಾ ವ್ಯಾಖ್ಯೆಗಳನ್ನು ಗಮನಿಸಿದ ಮೇಲೆ ಬೋಧಕ, ಕಲಿಕಾರ್ಥಿ ಮತ್ತು ಬೋಧನೆ ಈ ಮೂರು ಒಂದನೊಂದು ಅವಿನಭಾವ ಸಂಬಂಧ ಹೊಂದಿವೆ. ಆದರೆ ಕನ್ನಡ ಭಾಷೆಯ ಬೋಧನಾ ಸ್ವರೂಪ ಪೂರ್ವ ಪ್ರಾಥಮಿಕದಿಂದ ಪ್ರೌಢ ಶಿಕ್ಷಣದವರೆಗೆ ಇರುವಂತಹ ಬೋಧನಾ ಸ್ವರೂಪ ತಿಳಿಯುವುದು ಅವಶ್ಯಕ.

೩.೧.೩. **ಬೋಧನೆಯ ಸ್ವರೂಪ :**

ಪ್ರೌಢ ಶಾಲೆಯ ಶಿಕ್ಷಣದವರೆಗೆ ಮೂರು ಹಂತದಲ್ಲಿ ಬೋಧನಾ ಸ್ವರೂಪವನ್ನು ಕಾಣುತ್ತೇವೆ.

೧) ಪೂರ್ವ ಪ್ರಾಥಮಿಕ ಶಿಕ್ಷಣ

೨) ಪ್ರಾಥಮಿಕ ಶಿಕ್ಷಣ

೩) ಪ್ರೌಢ ಶಿಕ್ಷಣ

೧) ಪೂರ್ವ ಪ್ರಾಥಮಿಕ ಶಿಕ್ಷಣ :

ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸಲು, ಮಾನವನನ್ನು ಒಂದು ಸಂಪನ್ಮೂಲವಾಗಿ ಅಭಿವೃದ್ಧಿಪಡಿಸಲು ಶಿಕ್ಷಣದ ತಳಪಾಯ ಅಗತ್ಯವಾಗಿದೆ. ಇಲ್ಲಿ ಶಿಶು ರಕ್ಷಣೆ ಹಾಗೂ ಶಿಶು ಶಿಕ್ಷಣಕ್ಕೂ ಮಹತ್ವವಿದೆ. ಮಗು ೩ ವರ್ಷ ೧೦ ತಿಂಗಳಿನಿಂದ ಪ್ರಾಥಮಿಕ ಶಾಲಾ ಪೂರ್ವಾವಧಿ ಅಭ್ಯಾಸ ಮಾಡುವುದು. ಶಾಲಾ ಪೂರ್ವ ಶಿಕ್ಷಣವು ಶಿಶುಗಳ ಶಿಕ್ಷಣಕ್ಕೆ ಒಂದು ಆಧಾರವಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಕೊಡುಗೆಯನ್ನು ನೀಡುತ್ತದೆ.

ಇಂಥಹ ಶಿಕ್ಷಣ ಮಗುವಿನ ಬಾಲ್ಯದಿಂದ ಪ್ರಾರಂಭಗೊಳ್ಳುತ್ತಿದ್ದು ಇದು ಬಾಲವಾಡಿ, ಅಂಗನವಾಡಿ, ಶಿಶುವಿಹಾರ, ಎಲ್.ಕೆ.ಜಿ, ಯು.ಕೆ.ಜಿ,(ನರ್ಸರಿ) ಎಂಬಿತ್ಯಾದಿ ಶಬ್ದಗಳಿಂದ ಕರೆಯಲ್ಪಡುತ್ತಿರುವ ಈ ಪೂರ್ವ ಪ್ರಾಥಮಿಕ ಶಿಕ್ಷಣ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅವಿಭಾಜ್ಯ ಅಂಗವೇನೂ ಅಲ್ಲ. ಇಲ್ಲಿ ಎಲ್ಲಾ ಮಕ್ಕಳು ೫–೬ ವರ್ಷದ ಒಳಗಿನವರೇ ಪ್ರಾಥಮಿಕ ಶಾಲೆಗೆ ದಾಖಲಾಗಲು ಅದೇ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳಲು ಈ ಶಾಲೆ ಒಂದು ಮಾರ್ಗಸೂಚಿ. ಇಂಥ ಶಾಲೆಗಳು, ಪುಟ್ಟ ಮಕ್ಕಳಿಗೆ ನಗುತ್ತಾ ನಲಿಯುತ್ತಾ ಕಲಿಸುವ ಬೋಧನೆಯ ಮೊದಲ ಹೆಜ್ಜೆಯಾಗಿದೆ. ಇಲ್ಲಿ ಮಗುವಿನ ಭೌತಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಬೆಳವಣಿಗೆಗೆ ಪೂರಕವಾದ ಅನುಭವ ಉಂಟಾಗುತ್ತದೆ.[೪]

ಹೀಗೆ ಪೂರ್ವ ಪ್ರಾಥಮಿಕ ಶಿಕ್ಷಣವು ಬೋಧನೆಯಲ್ಲಿ 'ಮನೆಯೇ ಮೊದಲ ಪಾಠ ಶಾಲೆ' ಎಂಬಂತೆ ಕಾರ್ಯ ನಿರ್ವಹಿಸುತ್ತವೆ. ಹಾಗೆ ಪ್ರಾಥಮಿಕ ಶಾಲೆಯ ಕಲಿಕೆ ಮತ್ತು ಬೋಧನೆಯನ್ನು ಆಲಿಸುವುದಕ್ಕೆ ಅಣಿಗೊಳಿಸುವಂತಹ ಬೋಧನಾ ಪದ್ಧತಿಯಾಗಿದೆ. ಹೀಗೆ ಇಂದಿನ ದಿನಗಳಲ್ಲಿ ಸರಕಾರಿ ಶಾಲೆಗಳಲ್ಲಿ ಒಂದನೇ, ಎರಡನೇ ತರಗತಿಯ ಮಕ್ಕಳಿಗಿಂತ ಹೆಚ್ಚಾಗಿ ಖಾಸಗಿ ವಲಯದಲ್ಲಿ ಎಲ್.ಕೆ.ಜಿ, ಯು.ಕೆ.ಜಿ ಮಕ್ಕಳಿಗೆ ಬೋಧಿಸುವುದು, ಮನೆಗೆಲಸ ನೀಡಿ ಮಕ್ಕಳಿಗೆ ಹೊರೆಯಾಗಿಸುತ್ತಿವೆ. ಆದರೆ ಸರಕಾರಿ ಅಂಗನವಾಡಿ ಕೇಂದ್ರಗಳಲ್ಲಿ 'ಚಿಲಿಪಿಲಿ' ಹೆಸರಿನ ಸಂಗೀತ, ಕಥೆ, ಆಟಗಳನ್ನಾಧರಿಸಿದ ವಿವಿಧ ಚಟುವಟಿಕೆಗಳ ಸಂಚಿಕೆಯನ್ನು ಕರ್ನಾಟಕ ಸರ್ಕಾರ ರಾಜ್ಯಾದ್ಯಂತ ಹೊರತಂದು ಮಕ್ಕಳಿಗೆ ಬೋಧಿಸುವಂತೆ ತಿಳಿಸಿದೆ. ಈ ಹಂತದಲ್ಲಿ ಮಗು ಒಂದು ಅಂದಾಜಿನ ಪ್ರಕಾರ ದಿನವೊಂದಕ್ಕೆ ಒಟ್ಟು

[illegible]

[illegible]

[illegible]

[illegible]

[illegible]

೧೧,೦೦೦ ದಿಂದ ೧೫,೦೦೦ ಪದಗಳನ್ನು ತಮ್ಮ ಮಾತಿನಲ್ಲಿ ಬಳಸುತ್ತಾರಂತೆ. ಈ ಹಂತದಲ್ಲಿ ಅವರ ಶಬ್ದಕೋಶ ಬೆಳೆಯುತ್ತದೆ.[೫]

ಪ್ರಾಥಮಿಕ ಶಿಕ್ಷಣ :

ಪ್ರಾಥಮಿಕ ಶಿಕ್ಷಣ ಹಂತವನ್ನು ತೆಗೆದುಕೊಂಡರೆ ಇಲ್ಲಿ ಎರಡು ಭಾಗಗಳಾಗಿ ಗುರುತಿಸಿಕೊಂಡಿದ್ದಾರೆ. ಅವುಗಳೆಂದರೆ,

ಅ) ಕಿರಿಯ ಪ್ರಾಥಮಿಕ ಶಾಲೆ.

ಆ) ಹಿರಿಯ ಪ್ರಾಥಮಿಕ ಶಾಲೆ.

ಅ) ಕಿರಿಯ ಪ್ರಾಥಮಿಕ ಶಾಲೆ : ಈ ಹಂತದಲ್ಲಿ ೧ ರಿಂದ ೩ನೇ ತರಗತಿಯವರೆಗೆ ನಲಿಕಲಿ ಬೋಧನಾ ಪದ್ಧತಿ ಜಾರಿಯಲ್ಲಿದೆ. ನಲಿಕಲಿ ಬೋಧನಾ ವಿಧಾನದಲ್ಲಿ ತರಗತಿಯ ಕೊಠಡಿಯು ವಿಶಿಷ್ಟವಾಗಿರುತ್ತದೆ. ಕಲಿಕಾ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಜೋಡಣೆ ಮಾಡಿಕೊಳ್ಳಬೇಕಾಗುತ್ತದೆ. ಮಕ್ಕಳಿಗೆ ಕಲಿಸುವಾಗ ಬೋಧಕರು ಸಹಕರಿಸಬೇಕಾಗುತ್ತದೆ. ಪ್ರತಿಯೊಬ್ಬ ಮಗು ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕಾಗಿರುತ್ತದೆ. ಈ ನಲಿಕಲಿ ಬೋಧನೆಯು ಮೂರು ಹಂತದ ಕಲಿಕೆಯಾಗಿದೆ. ೧. ಕಲಿಕಾಂಶ, ೨) ಕಾರ್ಡುಗಳು, ೩) ಚಟುವಟಿಕೆ. ನಲಿಕಲಿ ತರಗತಿ ಇತರ ತರಗತಿಗಳಿಗಿಂತ ಭಿನ್ನಾಗಿದ್ದು ೧, ೨, ೩ರು ತರಗತಿಗಳ ಸಾಮರ್ಥ್ಯಗಳು ಬಹುಪಾಲು ಹೊಂದಾಣಿಕೆಯಿಂದಿರುತ್ತವೆ. ಒಂದನೇ ತರಗತಿಯಲ್ಲಿ ರ.ಗ.ಸ.ದ ಅಕ್ಷರಗಳ ಬೋಧನೆ, ಎರಡನೇ ತರಗತಿಯಲ್ಲಿ ಎರಡು, ಮೂರು ಅಕ್ಷರಗಳಿರುವ ಪದಗಳ ಅಭ್ಯಾಸ, ಮೂರನೇ ತರಗತಿಯಲ್ಲಿ ಪುನರಾವರ್ತನೆ ಬೋಧನೆಯಾಗಿದ್ದು ಚಟುವಟಿಕೆಯಿಂದ ಕೂಡಿರುತ್ತದೆ.[೬]

ಆದರೆ ನಾಲ್ಕು ಮತ್ತು ಐದನೇ ತರಗತಿಯಲ್ಲಿ ಸಣ್ಣ ಸಣ್ಣ ಕತೆಗಳು, ಹಾಡುಗಳ ಸಾಹಿತ್ಯ ರೂಪಗಳಿಂದ ವಾಕ್ಯರೂಪದಲ್ಲಿ ಕನ್ನಡ ಭಾಷೆಯನ್ನು ಬೋಧಿಸುತ್ತಾರೆ.

೨) ಹಿರಿಯ ಪ್ರಾಥಮಿಕ ಶಾಲೆ : ಹಿರಿಯ ಪ್ರಾಥಮಿಕ ಹಂತ ಮೊದಲು ೫ ರಿಂದ ೭ನೇ ತರಗತಿಯವರೆಗೆ ಇತ್ತು. ಈಗ ೬ ರಿಂದ ೮ನೇ ತರಗತಿಯವರೆಗೆ ಹಿರಿಯ ಪ್ರಾಥಮಿಕ ಶಾಲೆಯ ವ್ಯಾಪ್ತಿ ಇದೆ. ಈ ಹಂತದಲ್ಲಿನ ಬೋಧನೆಯು ಬಾನುಲಿ ಕಾರ್ಯಕ್ರಮಗಳನ್ನು ಆಲಿಸುತ್ತಾ ಕಲಿಯುವುದು. ಉಪಗ್ರಹ (ಸ್ಯಾಟ್‌ಲೈಟ್) ಮೂಲಕ ಬೋಧನೆ, ಪಠ್ಯ ಪುಸ್ತಕದ ಬೋಧನೆಗಳು ನಡೆಯುತ್ತದೆ. ಕಲಿಕಾರ್ಥಿಗಳು ಬೋಧಿಸಿದನ್ನು ಆಲಿಸಿ, ಗ್ರಹಿಸಿ ಅಭಿವ್ಯಕ್ತ ಪಡಿಸುತ್ತಾನೆ. ಇದರಿಂದ ಅವರಲ್ಲಿ ಬರವಣಿಗೆ ಕೌಶಲವು ಸರಳವಾಗುತ್ತದೆ. ಹೀಗೆ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಬೋಧನಾ ವಿಧಾನವಾಗಿದೆ.

೩) **ಪ್ರೌಢ ಶಾಲೆ :** ಪ್ರಾಥಮಿಕ ಶಿಕ್ಷಣದ ಮುಂದುವರಿಕೆಯೇ ಇದಾಗಿದ್ದು, ಕಲಿಕಾರ್ಥಿಗಳ ಭಾವಿ ಬದುಕಿಗೆ ಇದು ಭದ್ರ ಬುನಾದಿಯನ್ನು ಒದಗಿಸುತ್ತದೆ. ಈ ಹಂತದಲ್ಲಿ ಕನ್ನಡ ಭಾಷೆಯನ್ನು ಕಲಿಸುವಾಗ ಬೋಧಕರ ಜವಾಬ್ದಾರಿ ಹೆಚ್ಚಿರುತ್ತದೆ. ಏಕೆಂದರೆ ಇತ್ತೀಚಿನ ಶಿಕ್ಷಣ ವ್ಯವಸ್ಥೆಯು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಒಳಗೊಂಡಿರುವುದರಿಂದ ಬೋಧಕರು ಸದಾ ಕ್ರಿಯಾಶೀಲರಾಗಿ ಬೋಧಿಸಬೇಕಾಗಿದೆ. ಉದಾಹರಣೆಗೆ : ನಾಟಕಾಭಿನಯ, ರಸಪ್ರಶ್ನೆ ಕಾರ್ಯಕ್ರಮ, ಪಾತ್ರಾಭಿನಯ, ಭಾಷಾ ಆಟಗಳು, ಚರ್ಚಾಕೂಟ ಇತ್ಯಾದಿ. ಈ ರೀತಿಯಾಗಿ ಚಟುವಟಿಕೆಯಾದಾರಿತ ಬೋಧನೆಯಲ್ಲಿ ಬೋಧಕ ಮಾರ್ಗದರ್ಶಕನಂತೆ ಸಲಹೆ ಸೂಚನೆ ನೀಡುತ್ತಾ ಕಲಿಕಾರ್ಥಿಗಳಿಂದಲೆ ವಿಷಯಾಂಶವನ್ನು ಸ್ಪಷ್ಟಪಡಿಸಬೇಕಿದೆ.

ಹೀಗೆ ಮೂರು ಹಂತಗಳಲ್ಲಿರುವ ಬೋಧನೆಯ ಸ್ವರೂಪವು ಸ್ವಲ್ಪ ಭಿನ್ನವೆನಿಸಿದರೂ ಒಂದೇ ದಾರಿಯಲ್ಲಿ ಸಾಗುವಂತಹ ಬೋಧನಾ ಪದ್ಧತಿಗಳಾಗಿವೆ. ಇಂತಹ ಬೋಧನೆಯು ತನ್ನದೆಯಾದ ಬೋಧನಾ ಪದ್ಧತಿಗಳಾಗಿವೆ. ಇಂತಹ ಬೋಧನೆಯು ತನ್ನದೆಯಾದ ಬೋಧನಾ ವೈಶಿಷ್ಟ್ಯತೆಯನ್ನು ಒಳಗೊಂಡಿರುವುದನ್ನು ಗುರುತಿಸಲಾಗಿದೆ.

೩.೨. ಕನ್ನಡ ಬೋಧನೆಯ ವೈಶಿಷ್ಟ್ಯಗಳು

ಭಾಷೆ ಚಿಂತನೆಗೆ, ಭಾವನೆಗೆ, ಅನುಭವಕ್ಕೆ ಆಕಾರ ಕೊಡುವ ಸಾಧನ. ಆದರೆ ಭಾಷಾ ಕಲಿಕೆಗೆ ಸಂಬಂಧಿಸಿದ ಬಾಹ್ಯ ವರ್ತನೆಗಳಲ್ಲಿ ಪ್ರಮುಖವಾದ ಆಲಿಸುವಿಕೆ, ಮಾತನಾಡುವಿಕೆ, ಓದು, ಬರವಣಿಗೆ ಇಂತಹ ವರ್ತನೆಗಳನ್ನು ಪ್ರಭಾವಿಸುವ ಮೂಲಕ ಭಾಷೆಯನ್ನು ಬೋಧಿಸುವುದಾಗಿದೆ. ಬೋಧನೆ ಮತ್ತು ಕಲಿಕೆ ಒಂದೆಯಾಗಿದ್ದು ಬೋಧನೆ ಇಲ್ಲದೆ ಕಲಿಕೆ ಇಲ್ಲ, ಕಲಿಕೆ ಇಲ್ಲದೆ ಬೋಧನೆಯಿಲ್ಲ. ಹೀಗಾಗಿ ಮಾತೃಭಾಷೆ ಕನ್ನಡ ಕಲಿಯುವವರಿಗೆ ಮೊದಲ ಭಾಷೆ ಕನ್ನಡವಾಗಿರುತ್ತದೆ. ಕರ್ನಾಟಕದ ನುಡಿಯು ಕೂಡಾ ಕನ್ನಡ. ಈ ಕನ್ನಡ ಭಾಷೆಯ ವೈಶಿಷ್ಟ್ಯವನ್ನು ತಿಳಿಸಿಕೊಡುವುದೇ ಬೋಧನೆಯ ವೈಶಿಷ್ಟ್ಯವಾಗಿದೆ. ಭಾಷಾ ಬೋಧನೆಯ ವೈಶಿಷ್ಟ್ಯವನ್ನು ತಿಳಿಸಿಕೊಡುವುದರಲ್ಲಿ ಬೋಧಕರ ಪಾತ್ರ ಪ್ರಮುಖವಾದದ್ದು. ಇಂತಹ ಬೋಧನಾ ವೈಶಿಷ್ಟ್ಯತೆಯನ್ನು ಈ ರೀತಿಯಾಗಿ ಗಮನಿಸಲಾಗಿದೆ.

*** ಜೀವನಕ್ಕೆ ಆದರ್ಶ ಮೌಲ್ಯ ಕೊಡುತ್ತದೆ :**

ಉದಾಹರಣೆಗೆ : ಕನ್ನಡ ಕಸ್ತೂರಿ ೧೦ನೇ ತರಗತಿ ೨೦೦೯ ರಲ್ಲಿ 'ತ್ಯಾಗಮಯಿ' ಕಥೆಯಲ್ಲಿ ಬರುವಂತಹ ಸನ್ನಿವೇಶ "ಅಪ್ಪಾ.... ಮಕ್ಕಳೆಲ್ಲಾ ಹೊಟ್ಟೇಗಿಲ್ದೆ ಸಾಯ್ತಾ ಅವೆ. ಗೌರಿಹಸು ಹ್ಯಾಂಗೂ ಮುದುಕಿ ಆಗೋದ್ಲು. ಅವಳಿಗೂ ಸರಿಯಾಗಿ ಹುಲ್ಲು ನೀರಿಲ್ಲ. ಅದು ಈಟ್ಟನಗಂಟ ಬದುಕಿದ್ದೇ ಹೆಚ್ಚು. ಮಾರಿದರೆ ಒಂದ್ಹತ್ತು ರೂಪಾಯಾದ್ರೂ ಬತ್ತದೆ. ಮಕ್ಕಳು ಒಂದೆರಡು ದಿನ ಹಾಯಾಗಿ ಗಂಜೀನಾದ್ರೂ ಕುಡೀಬಹ್ದು".

“ಏನೆಂದೇ”? – ನನ್ನ ಕರುಳನ್ನೆ ಯಾರೋ ಕಿತ್ತು ಎಳೆದಂತಾಗಿ ಹುಚ್ಚು ಕೋಪದಿಂದ ಅಬ್ಬರಿಸಿದ್ದೆ.

“ನನಗೆ ನಿನಗೆ ಪ್ರಾಣಕೊಟ್ಟ ದೇವತೆ ಕನೋ ಕೆಂಪ ಇವಳು. ಇಲ್ಲೀಗಂಟ ನಮ್ಮ ಸಲುವಾಗಿ ದುಡ್ದೂ ದುಡ್ದೂ ತನ್ನ ಪ್ರಾಣ ತೇದು ನಮ್ಮ ಬದುಕಿಸವಳೆ ಕನೋ ಈ ಪುಣ್ಯವಂತೆ. ಅದೃಷ್ಟ ಚೆಂದಾಗಿದ್ರೆ ಇವಳ್ನ ನಮ್ಮ ಹೊಲದಲ್ಲಿ ಹೂಣಿಸಿ ಮ್ಯಾಲೊಂದು ಮಂಟಪ ಕಟ್ಟಿಸಬೇಕೂ ಅಂತಿದ್ದೆ. ಆ ಪುಣ್ಯ ನನ್ನ ಹಣೇಲಿ ಬರೀನಿಲ್ಲ. ಈಗ ಇವಳು ಸಾಯೋ ಕಾಲದಲ್ಲಿ ಕಟುಕನಿಗೆ ಮಾರಿ ಆ ಅನ್ನ ತಿಂದ್ರ ನಮ್ಮ ಬಾಯ್ಲಿ ಹುಳಾ ಬೀಳಾಕಿಲ್ವೇನೋ?

ಈ ಕಥೆಯಲ್ಲಿ ಕಡು ಬಡತನವಿರುವ ಕುಟುಂಬ, ವಯಸ್ಸಾದ ಮೂಕ ಪ್ರಾಣಿ (ಹಸು) ಯಾವ ಕೆಲಸಕ್ಕೂ ಬರುವುದಿಲ್ಲ ಅದನ್ನು ಮಾರುವ ಚಿಂತೆ ಮಗನಿಗಿದ್ದರೇ ಅದು ಸಾಯುವವರೆಗೆ ಮನೆಯಲ್ಲಿಯೇ ಇರಬೇಕು ಎನ್ನುವ ಆಸೆ ತಂದೆಯದು. ತಿನ್ನುವುದಕ್ಕೆ ಏನು ಇಲ್ಲದಿದ್ದರೂ ಚಿಂತೆಯಿಲ್ಲ ಇಷ್ಟು ವರ್ಷ ಮನೆಗಾಗಿ ದುಡಿದ ಆ ವಯಸ್ಸಾದ ಹಸುವನ್ನು ನಾನು ಕಟುಕನಿಗೆ ಮಾರುವುದಿಲ್ಲ ಎಂಬ ಮಾತು ಯಾರಿಗೂ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಇಂತಹ ಮೌಲ್ಯವನ್ನು ಬೆಳೆಸುವುದು ಬೋಧನೆಯಿಂದ ಬೋಧಕರಿಗೆ ಮಾತ್ರ ಸಾಧ್ಯ.

*** ಭಾವನಾತ್ಮಕ ಬಾಂಧವ್ಯ ಬೆಳೆಸುತ್ತದೆ :**

೨೦೦೯ ‘ಕನ್ನಡ ಕಸ್ತೂರಿ’ ೧೦ನೇ ತರಗತಿಯ ‘ಸಂಕಲ್ಪ’ ಪಾಠದಲ್ಲಿ ಬರುವಂತಹ ಕಥೆಯ ಸಂದರ್ಭ ‘ಸ್ವಾಮಿ! ಇತರರ ಮಾತನ್ನು ನಾನೇತಕ್ಕೆ ಆಡಲಿ? ನನ್ನ ಮಾತು ಹೇಳುತ್ತೇನೆ ಸ್ವಾಮಿ! ವಯಿನಾದ ಹೆಂಡತಿಯಿದ್ದರೆ ಬಡತನದ ದು:ಖ ಕಾಣಿಸೋದಿಲ್ಲ! ನನಗೆ ಹದಿನೈದು ರೂಪಾಯಿ ಸಂಬಳ. ನಾನು ಬಡವ ಎಂಬ ಚಿಂತಯೇ ನನಗಿರಲಿಲ್ಲ ಸ್ವಾಮಿ! ದೇವರಾಣೆಗೂ ಹೇಳುತ್ತೇನೆ. ಹೇಗೆ ತಾನೆ ಸಂಸಾರವನ್ನು ನಡೆಸುತ್ತಿದ್ದಳೊ ಆಕೆ! ಸೀರೆ ಬೇಕು ಎಂದು ಕೇಳಿದವಳಲ್ಲ. ಒಡವೆ ಬೇಕು ಎಂದು ಕೇಳಿದವಳಲ್ಲ; ಎಂದೂ ಮುಖವನ್ನು ಸಿಡುಕು ಮಾಡಿಕೊಂಡವಳೇ ಅಲ್ಲ! ಅಂಥ ಹೆಂಡತಿಯೊಡನೆ ಸಂಸಾರ ಮಾಡಿ, ಅದನ್ನು ಮರೆಯುವುದುಂಟೇ? ಆಕೆಯನ್ನು ಮರೆಯುವುದುಂಟೆ? ಆಕೆಯನ್ನು ಮರೆತು ಬೇರೋಬ್ಬಳನ್ನು ಮದುವೆಯಾಗುವುದುಂಟೆ! ದೃಢ ಸಂಕಲ್ಪ ಮಾಡಿದ್ದೇನೆ ಸ್ವಾಮಿ! ಮರು ಮದುವೆಯಾಗುವುದಿಲ್ಲ.

ಇವತ್ತೀನ ದಿನಗಳಲ್ಲಿ ಹೆಂಡತಿ ಇರುವಾಗಲೆ ಇನ್ನೊಂದು ಮದುವೆಯಾಗುವುದು, ಇಲ್ಲಾ ಹೆಂಡತಿಗೆ ವಿಚ್ಛೇದನ ನೀಡಿ ಮರು ಮದುವೆಯಾಗುವವರಿಗೆ ಭಾವನೆಯ ಬೆಲೆಯನ್ನು ತಿಳಿಸಿಕೊಡುತ್ತದೆ. ಕನ್ನಡ ಭಾಷಾ ಕಲಿಕಾರ್ಥಿಗಳಿಗೆ ಹೇಗೆ ಭಾವನಾತ್ಮಕ ಬಾಂಧವ್ಯವನ್ನು ಪ್ರೀತಿಸಬೇಕು ಮತ್ತು ಗೌರವಿಸಬೇಕು ಎಂದು ತಿಳಿಸಿಕೊಡುವುದು ಬೋಧನೆಯ ಇನ್ನೊಂದು ವೈಶಿಷ್ಟ್ಯವಾಗಿದೆ.

*** ಓದುವ ಕೌಶಲ್ಯ ಬೆಳೆಸುತ್ತದೆ :**

ಬೋಧಕರು ಓದು ಕಲಿಸುವ ಮೊದಲು ತಮ್ಮ ಕಲಿಕಾರ್ಥಿಗಳ ಸಾಮರ್ಥ್ಯಗಳು ಹಾಗೂ ಕೊರತೆಗಳನ್ನು ಗುರುತಿಸಿ ಅವರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಕನ್ನಡವು ಧ್ವನಿ ಪ್ರಧಾನ ಭಾಷೆಯಾಗಿದೆ ಧ್ವನಿ ವ್ಯತ್ಯಾಸ, ಹಾವಭಾವ, ನಾಟಕ ಭಾಷಾ ಶೈಲಿ, ಗೀತನಾಟಕ ಶೈಲಿ, ಜನಪದ ನಾಟಕ, ಜನಪದ ಕಥೆ. ಈ ಎಲ್ಲಾ ಸಾಹಿತ್ಯ ರೂಪಗಳ ಓದುವ ಶೈಲಿ ಭಿನ್ನವಾಗಿರುತ್ತದೆ. ಆದಕಾರಣ ಬೋಧಕರು ಪ್ರತಿಯೊಂದು ಶೈಲಿ ಭಿನ್ನವಾಗಿರುತ್ತದೆ. ಆದಕಾರಣ ಬೋಧಕರು ಪ್ರತಿಯೊಂದು ಸಾಹಿತ್ಯದ ಓದುವ ಶೈಲಿಯನ್ನು ಕಲಿಕಾರ್ಥಿಗಳಿಗೆ ಅರ್ಥೈಸಿ ಬೋಧಿಸಬೇಕಾಗುತ್ತದೆ. ಆಗ ಕಲಿಕಾರ್ಥಿಗಳು ಓದುವ ಕೌಶಲವನ್ನು ಬೆಳೆಸಿಕೊಳ್ಳುತ್ತಾರೆ.

*** ಮುಂದಿನ ವಿಷಯವನ್ನು ಕಲಿಯುವುದಕ್ಕೆ ಅನುಕೂಲ :**

ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯುತ್ತಿರುವ ಕಲಿಕಾರ್ಥಿಗಳಿಗೆ ಕನ್ನಡವು ಓದಲು ಮತ್ತು ಬರೆಯಲು ಬರಬೇಕು. ಕಲಿಕಾರ್ಥಿಗಳು ಓದಿದನ್ನು ಅರ್ಥೈಸಿಕೊಂಡು ಬರೆಯುವ ಸಾಮರ್ಥ್ಯ ಹೊಂದಬೇಕು. ಹೀಗೆ ಕಲಿಕೆ ಸಾಧಿಸಬೇಕು ಎಂದರೆ ಬೋಧಕರು ತರಗತಿಯಲ್ಲಿ ಮಾರ್ಗದರ್ಶಕರಂತೆ ಬೋಧಿಸುಬೇಕು. ಆಗ ಮಾತ್ರ ಕನ್ನಡ ಭಾಷೆಯಲ್ಲಿ ಕಲಿಕೆ ಸಾಧಿಸಿದವರು ಇನ್ನಿತರ ವಿಷಯಗಳಾದ ವಿಜ್ಞಾನ, ಗಣಿತ, ಸಮಾಜ ವಿಜ್ಞಾನಗಳಲ್ಲಿಯೂ ಕಲಿಕೆ ಸಾಧಿಸುತ್ತಾರೆ. ಆದ್ದರಿಂದ ಕನ್ನಡ ಭಾಷಾ ಬೋಧನೆಯ ಹೊಣೆಗಾರಿಕೆ ಹೆಚ್ಚಿದೆ.

*** ಕನ್ನಡ ಭಾಷೆಯ ಪ್ರಾದೇಶಿಕ ಉಪಭಾಷೆಗಳ ಪರಿಚಯ :**

ಕನ್ನಡ ಭಾಷಾ ಬೋಧನೆಯು ಕೇವಲ ಓದು ಮತ್ತು ಬರಹಗಳೆರಡನ್ನು ಬೋಧಿಸದೆ ಪಠ್ಯಪುಸ್ತಕದಲ್ಲಿರುವ ಉಪಭಾಷೆಗಳನ್ನು ಪರಿಚಯಿಸುತ್ತದೆ. ಉದಾಹರಣೆಗೆ: ಧಾರವಾಡ ಕನ್ನಡ, ಕಲಬುರಗಿ ಕನ್ನಡ, ಮೈಸೂರು ಕನ್ನಡ, ಕರಾವಳಿ ಕನ್ನಡ, ಕನ್ನಡ ಭಾಷೆಯನ್ನು ಕಲಿಯುವ ಕಲಿಕಾರ್ಥಿಗಳಿಗೆ ಕನ್ನಡ ಭಾಷೆ ಎಂದರೆ ಒಂದೇ ಭಾಷೆ ಎಂದು ಭಾವಿಸಿರುತ್ತಾರೆ. ಆದರೆ ಕನ್ನಡ ಭಾಷೆಯು ಅನೇಕ ಉಪಭಾಷೆಗಳನ್ನು ಒಳಗೊಂಡಿದೆ ಎಂದು ತಿಳಿಸಿಕೊಡುವುದು ಕನ್ನಡ ಭಾಷಾ ಬೋಧನೆಯಾಗಿದೆ.

*** ಭಾಷೆಯ ವ್ಯಾಪ್ತಿ ಗುರುತಿಸುತ್ತದೆ :**

ಭಾಷಾ ಬೋಧನೆಯು ಧ್ವನಿರಚನೆ, ಪದರಚನೆ, ವಾಕ್ಯರಚನೆಗಳ ಜೊತೆಗೆ ಇನ್ನಿತರ ನೆಲೆಗಳನ್ನು ಬೋಧಿಸಲಾಗುತ್ತದೆ. ಅವುಗಳು ಯಾವುವು ಎಂದರೆ. ಭಾಷೆಯು ಯಾವ ಭಾಷಾ ಪರಿವಾರಕ್ಕೆ ಸೇರಿದ್ದು? ಅದನ್ನು ಮಾತನಾಡುವವರು ಯಾರು. ಎಲ್ಲಿ? ಅದಕ್ಕೆ ಲಿಪಿ ಇದೆಯೇ ಇಲ್ಲವೇ? ಅದರಲ್ಲಿ ಸಾಹಿತ್ಯವಿದೆಯೇ. ಇದ್ದರೆ ಎಷ್ಟು ಕಾಲದಿಂದ? ಅದು ಆಧುನಿಕತೆಯನ್ನು ಹೇಗೆ ಎದುರಿಸಿದೆ? ಎಷ್ಟರ ಮಟ್ಟಿಗೆ ಇತರ ಭಾಷೆಗಳಿಂದ ಕಡ ಪಡೆದಿದೆ. ಹಾಗೂ ಇತರ ಭಾಷೆಗಳು ಅದರಿಂದ ಎಷ್ಟರ

ಮಟ್ಟಿಗೆ ಕೊಂಡಿವೆ? ಅದರ ನೆರೆಕೆರೆಯ ಭಾಷೆಗಳು ಯಾವುವು? ಗಡಿನಾಡುಗಳಲ್ಲಿ ಅದರ ರೂಪ ಮತ್ತು ಬಳಕೆ ಹೇಗಿದೆ? ಅದರ ಒಳ ಪ್ರಭೇದಗಳು ಯಾವುವು?

ಈ ಪ್ರಭೇದಗಳು ಪ್ರಾದೇಶಿಕವೇ ಶ್ರೇಣಿ ಕೃತವೇ, ವೃತ್ತಿಪರವೇ, ಜಾತೀಯವೇ? ಭಾಷೆಯ ಅನೇಕ ಪ್ರಭೇದಗಳಿದ್ದಾಗ ಪ್ರಾಮಾಣಿಕೃತ ಪ್ರಭೇದ ಯಾವುದು? ಅರ್ಥಾತ್ ಶಿಕ್ಷಣ ಮತ್ತು ಮಾಧ್ಯಮಗಳಲ್ಲಿ ಪ್ರಚಲಿತವಿರುವ ಪ್ರಭೇದ ಯಾವುದು? ಆ ಭಾಷೆಗೆ ಎಲ್ಲರೂ ಸ್ವೀಕರಿಸುವ ವ್ಯಾಕರಣವೊಂದು ಇದೆಯೇ? ನಿಘಂಟುಗಳಿವೆಯೇ? ಆಡು ನುಡಿಗೂ ಬರಹದ ಭಾಷೆಗೂ ಇರುವ ಅಂತರ ಎಷ್ಟು ಮಟ್ಟಿನದು? ಭಾಷೆಯೊಂದರ ಆಡುಗರು ಪರಭಾಷೆಗಳ ಕುರಿತಾಗಿ ಇರಿಸಿಕೊಂಡಿರುವ ನಿಲುವುಗಳೇನು? ಇತರ ಭಾಷೆಗಳಿಂದ ಆ ಭಾಷೆಗೆ ಸಾಕಷ್ಟು ಅನುವಾದಗಳು ಆಗಿವೆಯೇ? ಇತ್ಯಾದಿ ಅಂಶಗಳನ್ನು ಚಿಂತನೆಗೆ ಒಳಪಡುವಂತೆ ಮಾಡುವುದೇ ಬೋಧನೆ.[೭]

ಭಾಷೆಯೊಂದು ಕಾಲಾಂತರದಲ್ಲಿ ಹೇಗೆ ಬದಲಾಗುತ್ತ ಬಂದಿದೆ ಎನ್ನುವುದು ಅಧ್ಯಯನದಿಂದ ತಿಳಿಯುತ್ತದೆ. ಭಾಷೆಯು ಧ್ವನಿ, ಪದ ಮತ್ತು ವಾಕ್ಯರೂಪಗಳಲ್ಲಿ ನಾವು ಹಲವು ವ್ಯತ್ಯಾಸಗಳನ್ನು ಕಾಣುತ್ತೇವೆ. ಕೆಲವು ಪದಗಳು ಇಲ್ಲದಾಗುತ್ತವೆ, ಹೊಸ ಪದಗಳು ಸೇರಿಕೊಳ್ಳುತ್ತವೆ. ಈ ಎಲ್ಲಾ ಅಂಶಗಳು ಸ್ಪಷ್ಟಗೊಳ್ಳುವುದು ಕಲಿಕೆ ಮತ್ತು ಬೋಧನೆಯಿಂದ ಮಾತ್ರ ಸಾಧ್ಯ. ಬೋಧಕರು ಮಾರ್ಗದರ್ಶಕರಾಗಿ ಸಲಹೆಗಾರರಾಗಿ ಅನೂಕೂಲಿಸುವವರಾಗಿ, ಗುರುವಾಗಿ ಮೇಲಾಗಿ ಬೋಧನಕಾರರಾಗಿ ಬೋಧಿಸುವುದು ವಿಶೇಷವಾಗಿದೆ.

ಹೀಗೆ ಬೋಧನೆಯು ಕೇವಲ ಓದು ಮತ್ತು ಬರಹದ ಜೊತೆಗೆ ಕಲಿಕಾರ್ಥಿಗಳಿಗೆ ಮೌಲ್ಯಗಳು, ಸಾಹಿತ್ಯಾಸಕ್ತಿ, ಚಿಂತನೆ, ಸಂಶೋಧನೆ, ಭಾವನಾತ್ಮಕತೆ. ಹಾಗೂ ಎಲ್ಲದಕ್ಕೂ ಹೆಚ್ಚಾಗಿ ಕನ್ನಡ ಭಾಷೆಯ ಸತ್ವಪೂರ್ಣ ಕಲಿಕೆ ನೀಡುವುದು ಕನ್ನಡ ಭಾಷಾ ಬೋಧನೆಯ ವೈಶಿಷ್ಟ್ಯವಾಗಿದೆ. ಇಂತಹ ಬೋಧನಾ ಪದ್ಧತಿಯೂ ಬೋಧನಾ ಪ್ರಕಾರಗಳನ್ನು ಒಳಗೊಂಡಿರುವುದನ್ನು ಗುರುತಿಸಲಾಗಿದೆ.

೩.೩. ಭಾಷಾ ಬೋಧನಾ ಪದ್ಧತಿಯ ಪ್ರಕಾರಗಳು

ಭಾಷಾ ಬೋಧನಾ ಪದ್ಧತಿಯಲ್ಲಿ ಎರಡು ಪ್ರಕಾರಗಳನ್ನು ಗಮನಿಸಬಹುದು.

ಅ) ಸಾಂಪ್ರದಾಯಕ ಪದ್ಧತಿಗಳು

ಆ) ಆಧುನಿಕ ಪದ್ಧತಿಗಳು

ಅ) ಸಾಂಪ್ರದಾಯಕ ಪದ್ಧತಿಗಳು :

ಕಥನ ಪದ್ಧತಿ : ಈ ಪದ್ಧತಿಯಲ್ಲಿ ಭಾಷೆಯ ಪ್ರಾಥಮಿಕ ಕೌಶಲವಾದ ಆಲಿಸುವಿಕೆಗೆ ಹೆಚ್ಚಿನ ಮಹತ್ವವಿದೆ. ಇದು ಶಾರೀರಿಕ ಆಯಾಸವಿಲ್ಲದೆ ಶಾಂತವಾಗಿ ಗ್ರಹಿಕೆಯಾಗುತ್ತದೆ. ಇತಿಹಾಸದ ಪಾಠಗಳು ಮತ್ತು ಸಾಹಿತ್ಯ ವಿಷಯ ತಿಳಿಸಲು ಈ ಪದ್ಧತಿಯ ಬಳಕೆ ಸೂಕ್ತವಾಗಿದೆ. ಈ ಬೋಧನಾ

ಪದ್ಧತಿಯಲ್ಲಿ ವಿಷಯವನ್ನು ಕಥೆಯ ರೀತಿ ನಿರೂಪಿಸುವ ಬೋಧಕರು ಅನೇಕ ಹೊಸ ಪದಗಳು, ವಾಕ್ಯಗಳು, ಹೇಳಿಕೆ ವಿವರಣೆ ನೀಡುವುದರಿಂದ ಪದಸಂಪತ್ತು ಮತ್ತು ವಾಕ್ಯ ರಚನಾ ಕೌಶಲ ಬೆಳೆಯುತ್ತದೆ.

ಉಪನ್ಯಾಸ ಪದ್ಧತಿ : ಪಠ್ಯಕ್ಕೆ ಸಂಬಂಧಿಸಿದಂತೆ ಒಂದು ಗದ್ಯವನ್ನು ಆಯ್ಕೆ ಮಾಡಿಕೊಂಡು "ವಿಷಯ ಒಂದಕ್ಕೆ ಸಂಬಂಧಿಸಿದ ವಿವರಗಳನ್ನು ಒದಗಿಸುವುದಕ್ಕೂ ಚಟುವಟಿಕೆಗಳನ್ನು ಮಾಡಿಸುವುದಕ್ಕೂ ವಿಮರ್ಶಾತ್ಮಕ ಆಲೋಚನೆಗಳನ್ನು ಹುಟ್ಟಿಸುವುದಕ್ಕೂ ಅಥವಾ ಅಭಿಪ್ರಾಯಗಳನ್ನು ರೂಪಿಸುವುದಕ್ಕೂ ಅಧ್ಯಾಪಕರು ಪಾಠ ಮಾಡುವ ಒಂದು ವಿಧಾನ" ಉಪನ್ಯಾಸ ವಿಧಾನವಾಗಿದೆ.

ನಾಟಕಾಭಿನಯ ಪದ್ಧತಿ : ಭಾಷಾ ಬೋಧನೆಯಲ್ಲಿ ಬರುವ ಕಥೆ, ಜೀವನಚರಿತ್ರೆ, ವಿವರಣೆ ಮೊದಲಾದವುಗಳನ್ನು ಸಂಭಾಷಣೆಯ ರೀತಿ ಅಗತ್ಯ ಪಾತ್ರಗಳನ್ನು ಸೃಷ್ಟಿಸಿ ಸಂದರ್ಭಕ್ಕನುಗುಣವಾಗಿ ಶಾರೀರಿಕ ಹಾವಭಾವಗಳನ್ನು ಅಳವಡಿಸಿಕೊಂಡು ಬೋಧಿಸುವುದೇ ನಾಟಕಾಭಿನಯ ಪದ್ಧತಿ.

ಪ್ರಶ್ನೋತ್ತರ ಪದ್ಧತಿ : ಬೋಧಿಸುವ ವಿಷಯದ ಬಗೆಗೆ ಪ್ರಶ್ನೆಗಳನ್ನು ಕೇಳುತ್ತಾ ಮಕ್ಕಳಿಂದ ಉತ್ತರ ಹೇಳಿಸುತ್ತಾ, ವಿವರಿಸುತ್ತಾ, ಅವರು ಗ್ರಹಿಸಿರುವ ವಿಷಯ ಜ್ಞಾನವನ್ನು ಪರೀಕ್ಷಿಸುವ ಕಲಿಕಾರ್ಥಿಗಳಿಗೆ ವಿಷಯ ಜ್ಞಾನವನ್ನು ತಿಳಿಸುವ ಕ್ರಮವೇ ಪ್ರಶ್ನೋತ್ತರ ಪದ್ಧತಿ. ಈ ಪದ್ಧತಿಯು ಬೋಧನೆ ಮತ್ತು ಕಲಿಕೆಯ ನಡುವೆ ಸಂಪರ್ಕ ಕಾಯ್ದುಕೊಳ್ಳುವುದಾಗಿದೆ.

ಅನುಗಮನ ಪದ್ಧತಿ : ಈ ಬೋಧನಾ ಪದ್ಧತಿಯಲ್ಲಿ ಬೋಧಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಉದಾಹರಣೆಗಳನ್ನು ಅಥವಾ ಆಧಾರಾಂಶಗಳನ್ನು ಮೊದಲು ನೀಡಿ ಅವುಗಳನ್ನು ಅರ್ಥೈಸಿ, ನಂತರ ಆ ಉದಾಹರಣೆಗಳಲ್ಲಿನ ಸಾಮಾನ್ಯ ಗುಣಲಕ್ಷಣವನ್ನು ಪ್ರತಿಬಿಂಬಿಸುವಂತೆ ಒಂದು ಸೂತ್ರ ಅಥವಾ ನಿಯಮವನ್ನು ರೂಪಿಸುವುದೇ ಅನುಗಮನ ಪದ್ಧತಿ ಬೋಧನೆಯಾಗಿದೆ. ಈ ಪದ್ಧತಿಯಲ್ಲಿ ಬೋಧನಾ ವಿಷಯದ ಬಗೆಗೆ ಹಲವು ಉದಾಹರಣೆಗಳನ್ನು ಮಕ್ಕಳಿಗೆ ಒದಗಿಸಲಾಗುತ್ತದೆ. ನಂತರ ಮಕ್ಕಳೇ ಈ ಉದಾಹರಣೆಗಳಲ್ಲಿರುವ ಸಾಮಾನ್ಯ ಗುಣವನ್ನು ಗುರುತಿಸಿ. ಈ ಗುಣವನ್ನು ಪ್ರತಿಬಿಂಬಿಸುವಂತಹ ಒಂದು ನಿಯಮವನ್ನು ರಚಿಸಲು ಶಕ್ತರಾಗುತ್ತಾರೆ ಮತ್ತು ಸ್ವಯಂ ಕಲಿಯುವ ಸಾಮರ್ಥ್ಯಗಳಿಸುತ್ತಾರೆ.

ನಿಗಮನ ಪದ್ಧತಿ : ಇದು ಅನುಗಮನ ಪದ್ಧತಿಗೆ ವಿರುದ್ಧವಾದಂತಹದ್ದು "ಸಾಮಾನ್ಯ ತಿರ್ಮಾನ, ಸೂತ್ರ/ನಿಯಮದಿಂದ ಪ್ರಾರಂಭವಾಗಿ ನಿರ್ದಿಷ್ಟವಾದ ವಿಷಯಗಳತ್ತ ತಾರ್ತಿಕವಾಗಿ ಸಾಗುವ ಬೋಧನಾ ಕ್ರಿಯೆಯೇ ನಿಗಮನ ಪದ್ಧತಿ. ಇಲ್ಲಿ ಬೋಧಿಸುವ ಪಠ್ಯಾಂಶದ ಬಗ್ಗೆ ಒಂದು ನಿಯಮ ಅಥವಾ ಸೂತ್ರವನ್ನು ಮೊದಲು ಹೇಳಿ ಈ ಸೂತ್ರದಲ್ಲಿರುವ ಅರ್ಥಕ್ಕೆ ಸಂಬಂಧಿಸಿದಂತಹ ನಿರ್ದಿಷ್ಟ ಉದಾಹರಣೆಗಳನ್ನು ಹುಡಿಕಿ ಸೂತ್ರವನ್ನು ಅನ್ವಯಿಸಿಕೊಂಡು ಬೋಧಿಸಲಾಗುತ್ತದೆ. ಇದು ಹೆಚ್ಚು ವ್ಯಾಕರಣ ಕಲಿಕೆಯಲ್ಲಿ ಸಹಾಯವಾಗುತ್ತದೆ. ಉದಾ: ಗುಣಸಂಧಿಯ ನಿಯಮವನ್ನು ಬೋಧಕರು ಹೇಳುವುದು ನಂತರ ಅದನ್ನು ಅರ್ಥೈಸಿಕೊಂಡ ಮಕ್ಕಳು ಉದಾಹರಣೆಗಳನ್ನು ಹೇಳುತ್ತಾರೆ.

ಆಧುನಿಕ ಬೋಧನಾ ಪದ್ಧತಿಗಳು

ಕ್ರೀಡಾ ಪದ್ಧತಿ : ಸಹಜ, ಸಹಭಾಗಿಯಾಗಿ, ಸ್ವಯಂ ಕಲಿಕೆ ಆಗುತ್ತದೆ. ಮಾಡುತ್ತಾ ಕಲಿ ಆಡುತಾ ಕಲಿ ಮತ್ತು ಪಾಲ್ಗೊಂಡು ಕಲಿ ಎಂಬ ಮನೋವೈಜ್ಞಾನಿಕ ತತ್ವದ ಬೆಳಕಿನಲ್ಲಿ ಕ್ರೀಡಾಪದ್ಧತಿಯಿದೆ.

ಕಿಂಡರ್ ಗಾರ್ಟನ ಕಲಿಕಾ ಪದ್ಧತಿ : ಈ ಪದ್ಧತಿಯ ಪಿತಾಮಹ ಪ್ರೆಡ್ರಿಕ್ ಪ್ರೋಬೆಲ್. ೧೮೩೭ರಲ್ಲಿ ಬ್ಲಾಕೆನ್ ಬರ್ಗನಲ್ಲಿ ಈ ಶಾಲೆಯನ್ನು ತೆರೆದನು. ಪ್ರೋಬೆಲ್ನ ಪ್ರಕಾರ "ಮಾನವನ ಅಂತಃ ಸ್ವಂತಗಳ ಸ್ವಾಭಾವಿಕ, ಸಾಮರಸ್ಯ ಮತ್ತು ಪ್ರಗತಿಪರ ಬೆಳವಣಿಗೆಯೇ ಶಿಕ್ಷಣ" ಮಗುವಿನ ಸರ್ವತೋಮುಖ ವಿಕಾಸ ಸಮಗ್ರ ಬೆಳೆವಣಿಗೆ ಶಿಕ್ಷಣದ ಅಂತಿಮ ಗುರಿ ಪರಿಪೂರ್ಣ ಪ್ರವೀಣತೆಗಳಿಸುವುದೇ ಅಲ್ಲ ಬದುಕಿಗೆ ಅಗತ್ಯವಾದ ಸಾಮರ್ಥ್ಯಗಳನ್ನು ಬೆಳೆಸುವುದು, ಉತ್ತಮ ಜೀವನಕ್ಕೆ ತರಬೇತಿ ನೀಡುವುದು. ಈ ಪದ್ಧತಿಯಲ್ಲಿ ಭಾಷಾ ಕೌಶಲ್ಯಗಳನ್ನು ಗುಂಪಿನ ಆಟಗಳು ಹಾಗೂ ಹಾಡುಗಳ ಮೂಲಕ, ಕತೆ, ನಾಟಕ ಹಾಗೂ ದೃಷ್ಟಾಂತಗಳ ಮೂಲಕ ಅಭ್ಯಾಸ ಮಾಡಿಸಬಹುದು.

ಮಾಂಟೆಸೋರಿ ಪದ್ಧತಿ : ಈ ಪದ್ಧತಿಯ ಜನಕ ಮಾಂಟೆಸೋರಿ ಇವರ ಪ್ರಕಾರ ಪ್ರತಿಯೊಂದು ಮಗುವಿನಲ್ಲಿಯು ಜ್ಞಾನ, ಕೌಶಲ ಮತ್ತು ಸಾಮರ್ಥ್ಯಗಳು ಸುಪ್ತವಾಗಿರುತ್ತವೆ. ಈ ಸುಪ್ತ ಪ್ರತಿಭೆಗಳ ಸಹಜ, ಸ್ವಾಭಾವಿಕ ವಿಕಾಸಕ್ಕೆ ನೀಡುವ ಕ್ರಿಯಾಶೀಲ ಸಹಾಯ ಉತ್ತೇಜನವೇ ಶಿಕ್ಷಣ ಎಂದಿದ್ದಾರೆ. ಮತ್ತು ಜ್ಞಾನೇಂದ್ರಿಯಗಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಇದ್ದು ಮಕ್ಕಳ ಜ್ಞಾನೇಂದ್ರಿಯಗಳ ಪಟುತ್ವಕ್ಕೆ ತರಬೇತಿ ಕೊಡುವುದು ಅವಶ್ಯಕ ಎಂದು ಮಾಂಟೆಸೋರಿಯವರು ಅಭಿಪ್ರಾಯ ಪಟ್ಟಿದ್ದಾರೆ. ಜ್ಞಾನೇಂದ್ರಿಯಗಳೇ ಎಲ್ಲಾ ರೀತಿಯ ಬೆಳವಣಿಗೆ ಮತ್ತು ವಿಕಾಸಕ್ಕೆ ಮೂಲವಾಗಿರುವುದರಿಂದ ಮೊದಲು ಮಕ್ಕಳ ಕಣ್ಣು, ಕಿವಿ, ಕೈಗಳಿಗೆ ಚಟುವಟಿಕೆಗಳ ಅವಕಾಶಗಳನ್ನು ಒದಗಿಸಿದಾಗ ಮಕ್ಕಳಲ್ಲಿ ಕಲಿಕೆ ಮೂಡುತ್ತದೆ ಎನ್ನುತ್ತಾರೆ.

ಮೇಲ್ವಿಚಾರಣಾ ಪದ್ಧತಿ : ಈ ಪದ್ಧತಿಯಲ್ಲಿ ಬೋಧಕರು ನೇರವಾಗಿ ಮಕ್ಕಳ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಮಕ್ಕಳು ಕಲಿಯುವ ಸನ್ನಿವೇಶದಲ್ಲಿ ಅವರ ಹಿಂದೆಯೇ ಇರುತ್ತಾರೆ. ಮಕ್ಕಳು ಹೇಗೆ ವಿಷಯ ಸಂಗ್ರಹಿಸುತ್ತಾರೆ, ಸಮಸ್ಯೆಗಳನ್ನು ಹೇಗೆ ಬಿಡಿಸುತ್ತಾರೆ, ಮಕ್ಕಳ ಕಲಿಕೆಯಲ್ಲಿ ಏನಾದರೂ ಅಡಚಣೆಗಳು ಸಂಭವಿಸಬಹುದು ಎಂಬುದನ್ನು ಗಮನಿಸುತ್ತಿದ್ದು ಅಗತ್ಯವೆಂದ ಕಡೆ ಮಾತ್ರ ಸೂಕ್ತ ಸಲಹೆ ಕೊಡುತ್ತಾರೆ. ಮತ್ತು ಇದರಲ್ಲಿ ಅರ್ಥಗ್ರಹಿಕೆ, ವಾದನ ಅಭ್ಯಾಸ, ಪ್ರಬಂಧ ರಚನೆ, ಪಠ್ಯಗಳನ್ನು ಓದಿ ಟಿಪ್ಪಣಿ ಮಾಡುವುದು ಇತ್ಯಾದಿ ಅಂಶಗಳನ್ನು ಒಳಗೊಂಡಿದೆ.

ಪಠ್ಯಪುಸ್ತಕ ಪದ್ಧತಿ : ಒಂದು ನಿರ್ದಿಷ್ಟ ಭಾಷಾ ಪಠ್ಯಪುಸ್ತಕದ ಸಹಾಯದಿಂದ ಆ ಪಠ್ಯಪುಸ್ತಕ ನಿರ್ದೇಶಿಸುವ ರೀತಿ, ಭಾಷೆ ಮತ್ತು ವಿಷಯ ಜ್ಞಾನವನ್ನು ಕಲಿಸುವ ಕ್ರಮವನ್ನು ಪಠ್ಯಪುಸ್ತಕ ಪದ್ಧತಿ ಎನ್ನುತ್ತಾರೆ. ಬೋಧಕರು ಪಠ್ಯಪುಸ್ತಕದ ಆಶಯಗಳು, ಗುರಿಗಳು, ಸೂಚನೆ, ಸಲಹೆ, ವಿಷಯವ್ಯಾಪ್ತಿ, ಅನುಕ್ರಮಣಿಕೆಗಳನ್ನು ಪಾಲಿಸಿ ಬೋಧಿಸುವ ಕ್ರಮವೇ ಪಠ್ಯಪುಸ್ತಕ ಪದ್ಧತಿಯಾಗಿದೆ.

[illegible]

ಸ್ವಯಂ ಬೋಧಿನಿ/ಕಲಿಕಾ ಸಾಮಗ್ರಿಗಳ ವಿಧಾನ : ಭಾಷಾಂಶಗಳ ಬಗ್ಗೆ ಅಭಿವೃದ್ಧಿ ಪಡಿಸಿರುವ ಅಭ್ಯಾಸ ಪುಸ್ತಕಗಳು, ಚಾರ್ಟ್‌ಗಳು, ಚಿತ್ರಪುಸ್ತಕಗಳು, ಕಾರ್ಡುಗಳನ್ನು ಸ್ವಯಂಬೋಧಿಸಿ ಸಾಧನಗಳಾಗಿ ಬಳಸಬಹುದು. ಇಂತಹ ಕಲಿಕಾ ಸಾಧನೆಗಳನ್ನು ಬಳಸಿ ಕಲಿಯುವ ಕ್ರಮದ ಬಗ್ಗೆ ಬೋಧಕರು ಸೂಕ್ತ ಸೂಚನೆ, ತಿಳುವಳಿಕೆ, ಮೇಲ್ವಿಚಾರಣೆ ಮೂಲಕ ಬೋಧಿಸುವ ವಿಧಾನ ಇದಾಗಿದೆ.

ದೃಕ್-ಶ್ರವಣೋಪಕರಣಗಳ ಮೂಲಕ ಭಾಷಾ ಬೋಧನೆ : ಬೋಧನಾ ಉಪಕರಣಗಳೇ ಸ್ವತಂತ್ರವಾಗಿ ಒಂದು ವಿಧಾನ ಎನಿಸುವುದಿಲ್ಲವಾದರೂ ಬೋಧನಾ ಕ್ರಿಯೆಯಲ್ಲಿ ಪ್ರಧಾನ ಪಾತ್ರವಹಿಸುವ ಸಲಕರಣೆಗಳನ್ನು ಆಧರಿಸಿ ಇದನ್ನು ಒಂದು ಬೋಧನಾ ವಿಧಾನ ಎಂದು ಪರಿಗಣಿಸಲಾಗಿದೆ. ದೃಕ್ – ಶ್ರವಣೋಪಕರಣಗಳು ಬೋಧನೆ ಮತ್ತು ಕಲಿಕೆಯ ನಡುವೆ ನೇರ ಸಂಬಂಧವನ್ನುಂಟು ಮಾಡಿ ಬೋಧನೆಗೆ ಜೀವ ತುಂಬುತ್ತವೆ. ಕಲಿಕೆಯ ಕ್ರಿಯೆಯಲ್ಲಿ ಹೆಚ್ಚು ಜ್ಞಾನೇಂದ್ರಿಯಗಳು ಸಹಭಾಗಿಯಾಗಲು ಬೋಧನೋಪಕರಣಗಳು ಸಹಕಾರಿಯಾಗುತ್ತವೆ.[೮]

ಈ ಎಲ್ಲಾ ಬೋಧನಾ ಪ್ರಕಾರಗಳು ಹಳೆಯ ಬೋಧನಾ ಪದ್ಧತಿಗಳಲ್ಲಿ ಪೀಠಿಕೆಯನ್ನು ಹಾಕಿ ಬೋಧಿಸುವುದಕ್ಕೆ ಮಾತ್ರ ಬಳಸುತ್ತಿದ್ದರು. ಆದರೆ ನೂತನ ಬೋಧನಾ ಪದ್ಧತಿಯಲ್ಲಿ ಇಡಿಯಾಗಿ ಒಂದು ಗದ್ಯವನ್ನು ಪೀಠಿಕೆಯ ರೀತಿಯಲ್ಲಿಯೆ ಬೋಧಿಸುವುದಾಗಿದೆ.

ಈ ಮೇಲ್ಕಂಡ ಎಲ್ಲಾ ಬೋಧನಾ ಪದ್ಧತಿಗಳನ್ನು ಒಂದು ಉಪಘಟಕಕ್ಕೆ ಬಳಸಿಕೊಂಡು ಬೋಧಿಸಬೇಕು. ಉದಾಹರಣೆಗೆ–ಒಂಬತ್ತನೆ ತರಗತಿಯ ಪಠ್ಯಪುಸ್ತಕದಲ್ಲಿ ಸಮಾಗಮ ಎಂಬ ಒಂದು ನಾಟಕವಿದೆ. ಈ ನಾಟಕಕ್ಕೆ ಪರ್ಯಾಯವಾಗಿ ಬೋಧಕರು ಒಂದು ನಾಟಕದ ಅಭಿನಯ ಮಾಡಿ ತೋರಿಸಬೇಕು. ನಂತರ ಪಠ್ಯದಲ್ಲಿರುವ ನಾಟಕವನ್ನು ಕಲಿಕಾರ್ಥಿಗಳಿಗೆ ಮಾಡಲು ತಿಳಿಸಬೇಕು. ಆಗ ನಾಟಕವನ್ನು ಗುಂಪುಗಳಾಗಿ ಮಾಡಿಕೊಂಡು ಎಲ್ಲಾ ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸುವರು. ಎಲ್ಲಾ ವಿದ್ಯಾರ್ಥಿಗಳನ್ನು ಬೋಧಕರು ಗಮನಿಸಬೇಕು. ಯಾವ ವಿದ್ಯಾರ್ಥಿಗೆ ಓದಲು ಬರೆಯಲು ಬರುವುದಿಲ್ಲವೋ ಅಂತಹ ವಿದ್ಯಾರ್ಥಿಗಳು ಅಭಿನಯ ಕೌಶಲವುಳ್ಳವರಾಗಿದ್ದಾರೆ ಬೋಧಕರು ಕೇಳುವ ಪ್ರಶ್ನೆಗೆ ಅಭಿನಯ ಅಥವಾ ಮಾತಿನ ಮೂಲಕ ಉತ್ತರಿಸಿದರೆ ಅವರಿಗೆ ಆ ನಾಟಕಕ್ಕೆ ಸಂಬಂಧಿಸಿದಂತೆ ಅಂಕಗಳನ್ನು ನೀಡಬೇಕು.

ಈ ರೀತಿಯಾಗಿ ಹೊಸ ಬೋಧನಾ ಪದ್ಧತಿಯ ಪ್ರಕಾರ ಪ್ರಶ್ನೆಗಳಿಗೆ ಬರೆದು ಉತ್ತರಿಸಬೇಕು ಎಂಬ ನಿಯಮವೇನು ಇಲ್ಲ. ಬರೆಯದೆ ಅಭಿನಯ ಮಾತಿನ ಮೂಲಕ ಉತ್ತರಿಸಿದರೂ ಆ ವಿದ್ಯಾರ್ಥಿ ಉತ್ತೀರ್ಣನಾಗುತ್ತಾನೆ. ಇಂತಹ ಬೋಧನಾ ಪದ್ಧತಿಯಿಂದ ಅನುಕೂಲ ಮತ್ತು ಅನಾನುಕೂಲ ಎರಡು ಆಗುವುದನ್ನು ಗಮನಿಸಬಹುದು

[illegible]

೩.೪. ಬೋಧಕರಿಗೆ ಸೇವಾನಿರತ ತರಬೇತಿಗಳು

ಸೇವಾನಿರತ ಬೋಧಕರ ತರಬೇತಿಯಲ್ಲಿ UNESCOದ ಪಾತ್ರವು ಅತ್ಯಂತ ಪ್ರಮುಖವಾದುದು. ಗುಣಾತ್ಮಕತೆ ಶಿಕ್ಷಣದ ಹೃದಯ "Quality is the heart of the Education" ಬೋಧಕರನ್ನು ತಯಾರಿಸುವದು UNESCOದ ಮುಖ್ಯ ಕಾರ್ಯಗಳಲ್ಲಿ ಒಂದಾಗಿದೆ. ಇಂದಿನ ದಿನಗಳಲ್ಲಿ ವಿಶೇಷ ಸಾಮರ್ಥ್ಯ ಹಾಗೂ ಅರ್ಹತೆಯನ್ನು ಹೊಂದಿದ ಶಿಕ್ಷಕರ ಕೊರತೆ ಇರುವುದನ್ನು ಅರಿತು UNESCO ಕೊರತೆಯನ್ನು ಸರಿಪಡಿಸಲು ಹಲವು ಶೈಕ್ಷಣಿಕ ಸಂಸ್ಥೆಗಳಿಗೆ ರಾಷ್ಟ್ರ ಅಭಿವೃದ್ಧಿಯಲ್ಲಿ ಶಿಕ್ಷಣದ ಹಾಗೂ ಬೋಧಕರ ಮಹತ್ವವನ್ನು ಅರಿತು ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಳ್ಳುವಂತೆ ನಿರ್ದೇಶನ ನೀಡಿದೆ.

UNESCOವು ಗುಣಾತ್ಮಕ ಶಿಕ್ಷಕರನ್ನು ಸಿದ್ದಪಡಿಸುವ ಹಾಗೂ ತರಬೇತಿಗೊಳಿಸುವ ವಿಚಾರದಲ್ಲಿ ಹಲವು ಯೋಜನೆಗಳನ್ನು ರೂಪಿಸಿಕೊಂಡಿದೆ. ಹಲವು ಉನ್ನತ ಗುಣಮಟ್ಟದ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪಾಠವನ್ನು ಮಾಡುವ ಹೊಸ ಹೊಸ ಬೋಧನಾ ಪದ್ಧತಿಗಳ ಕುರಿತು ತರಬೇತಿಯನ್ನು ರೂಪಿಸಿದೆ. ಪ್ರಾಥಮಿಕ ಹಂತಗಳಲ್ಲಿ ಚುಟುವಟಿಕೆ ಆಧಾರದ ಬೋಧನೆಗಳಿಗೆ ಮಹತ್ವ ನೀಡುವ ಸೂಚನೆ ಬೋಧಕರಿಗೆ ಈ ಹಿನ್ನಲೆಯಲ್ಲಿ ತರಬೇತಿ ನೀಡಲು ಸಹಾಯ ಮಾಡಿದೆ.

ಅದೇ ರೀತಿಯಾಗಿ ಕರ್ನಾಟಕ ಸರ್ಕಾರವು ಕೂಡಾ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಸುಧಾರಣೆಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಾಕುತ್ತಾ ಬಂದಿದೆ. ಕೆಲವೊಂದು ಯೋಜನೆಗಳು ನಿಷ್ಫಲ ಪ್ರದಾಯಕವಾದರೆ, ಗರಿಷ್ಠ ಯೋಜನೆಗಳು ಫಲಪ್ರದಾಯಕವಾಗಿವೆ.ಬೋಧಕರು ನಿರಂತರ ವಿದ್ಯಾರ್ಥಿ, ದಿನೇ ದಿನೇ ಶಿಕ್ಷಣದಲ್ಲಿ ಹೊಸ ಹೊಸ ಆವಿಷ್ಕಾರಗಳು ಉಂಟಾಗುತ್ತವೆ. ದಿನಕ್ಕೊಂದು ಬೋಧನಾ ವಿಧಾನ, ತಾಸಿಗೊಂದು ಬದಲಾವಣೆ, ನಿಮಿಷಕ್ಕೊಂದು ಚಟುವಟಿಕೆ, ಕ್ಷಣಕೊಂದು ಹೊಸ ಬದಲಾವಣೆಗಳ ಬೆಳವಣಿಗೆಯು ಕಲಿಕಾ ರಂಗದಲ್ಲಿ ಯಾವಾಗಲೂ ನಡದೇ ಇರುತ್ತವೆ. ಇದರ ಲಾಭ ಎಲ್ಲಾ ಬೋಧಕರಿಗೆ ಸಿಗಲಿ ಎನ್ನುವ ಉದ್ದೇಶದಿಂದ ಬೋಧಕರಿಗೆ ಸೇವಾವಧಿ ತರಬೇತಿ ನೀಡಲಾಗುತ್ತದೆ. ವೃತ್ತಿ ಬದುಕಿನಲ್ಲಿ ಹೆಚ್ಚಿನ ಜ್ಞಾನ, ಪ್ರಸ್ತುತ ಆವಿಷ್ಕಾರಗಳ ಮಾಹಿತಿ ಪಡೆಯಬೇಕಾದರೆ ಅವರಿಗೆ ತರಬೇತಿಯ ಅವಶ್ಯಕತೆ ಇರುತ್ತದೆ. ರವೀಂದ್ರನಾಥ ಠಾಗೋರ್ ರವರು ಹೇಳುವಂತೆ "ಸ್ವತಃ ಜ್ವಾಲೆಯಿಂದ ಉರಿಯದ ದೀಪ ಮತ್ತೊಂದು ದೀಪವನ್ನು ಯಾವ ರೀತಿ ಹೊತ್ತಿಸಲಾರದೋ, ಸ್ವತಃ ಕಲಿಯದೇ ಇರುವ ಬೋಧಕ ಏನನ್ನು ಬೋಧಿಸಲಾರ" ಎಂದಿದ್ದಾರೆ.

ಸೇವಾನಿರತ ಬೋಧಕರಿಗೆ ತರಬೇತಿ ನೀಡುವ ಪ್ರಮುಖ ಘಟಕಗಳು ಎಂದರೆ,

* ಬೋಧಕರ ಸಂಘಗಳು
* ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಮಂಡಳಿ
* ಸೇವಾ ವಿಸ್ತರಣಾ ಇಲಾಖೆ

[illegible]

* ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ
* ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು.

ಸೇವಾವಧಿ ತರಬೇತಿಯ ಉದ್ದೇಶಗಳು :

* ಸೇವಾನಿರತ ಬೋಧಕರು ತರಬೇತಿಯ ನಂತರ ತಮ್ಮ ವೃತ್ತಿರಂಗದಲ್ಲಿ ಪರಿಣಾಮಕಾರಿಯಾಗಿ ಮತ್ತು ದಕ್ಷತೆಯಿಂದ ಕರ್ತವ್ಯ ನಿರ್ವಹಿಸುವ ಸಲುವಾಗಿ ತರಬೇತಿ ನೀಡಲಾಗುತ್ತದೆ.
* ಬದಲಾಗುತ್ತಿರುವ ಪಠ್ಯವಸ್ತು ಮತ್ತು ಪಠ್ಯಕ್ರಮ ಆಧಾರಿತ ಬೋಧನೆಯ ಕ್ರಮವನ್ನು ತಿಳಿಸಿಕೊಡುವ ಉದ್ದೇಶ ಹೊಂದಿದೆ.
* ಬೋಧನಾ ಸಾಮಗ್ರಿಗಳ ಬಳಕೆಯ ಸಾಮರ್ಥ್ಯದ ಬೆಳವಣಿಗೆಗಾಗಿ ಹೊಸ ಮೌಲ್ಯಮಾಪನ ಪದ್ಧತಿಯ ತಿಳುವಳಿಕೆ ನೀಡಲು.

ಹೀಗೆ ಇನ್ನಿತರ ಹತ್ತು ಹಲವಾರು ವಿಷಯಗಳ ಮಾಹಿತಿ ನೀಡಲು ಬೋಧಕರಿಗೆ ತರಬೇತಿ ನೀಡುವುದು ಇವರ ಉದ್ದೇಶವಾಗಿದೆ.

* ತರಬೇತಿಯ ವಿಧಗಳು
* ವಿಷಯ ಸಂಪದೀಕರಣ ಕಾರ್ಯಕ್ರಮ
* ಮೌಲ್ಯಮಾಪನ ತರಬೇತಿ
* ಕ್ರಿಯಾ ಸಂಶೋಧನೆ ತರಬೇತಿ
* ಕಂಪ್ಯೂಟರ್ ಶಿಕ್ಷಣ ತರಬೇತಿ
* ಕಲಿಕಾ ಉಪಕರಣಗಳ ತರಬೇತಿ
* ಎಸ್.ಎಸ್.ಎಲ್.ಸಿ. ಫಲಿತಾಂಶ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತರಬೇತಿ.
* ಬೋಧನಾ ಕ್ರಮ ಕುರಿತು ತರಬೇತಿ.

ಈ ರೀತಿಯ ತರಬೇತಿಯ ವಿಧಗಳನ್ನು ರಾಜ್ಯ ಸರಕಾರವು ಹಮ್ಮಿಕೊಂಡಿರುವುದನ್ನು ಕಾಣಬಹುದು. ಬೋಧಕರಿಗೆ ಸಮೂಹ ಹಂತದಲ್ಲಿ, ತಾಲೂಕೂ, ಜಿಲ್ಲಾ, ವಿಭಾಗ, ಮತ್ತು ರಾಜ್ಯ ಮಟ್ಟದಲ್ಲಿ ತರಬೇತಿ ನೀಡುತ್ತಾರೆ. ಈ ತರಬೇತಿಗಳು ವಿಷಯವಾರು ತರಬೇತಿಗಳಾಗಿರುತ್ತವೆ. ಕನ್ನಡ ಭಾಷಾ ಬೋಧಕರಿಗಾಗಿಯೇ ನೀಡಿದಂತಹ ತರಬೇತಿಗಳು ಈ ರೀತಿಯಾಗಿವೆ.

೧ನೇ ಸಾಧನಾ ತರಬೇತಿ :

ಈ ತರಬೇತಿಯ ಪ್ರಮುಖ ಉದ್ದೇಶ ಬೋಧಕರಾದವರು ಕಲಿಕಾರ್ಥಿಗಳನ್ನು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಒಳಪಡಿಸಬೇಕು ಎಂಬುದಾಗಿದೆ.

ಈ ತರಬೇತಿಯನ್ನು ಕರ್ನಾಟಕ ಸರಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ೨೦೧೨-೧೩ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಬೋಧಕರಿಗೆ ತರಬೇತಿಯನ್ನು ಕೊಡಲಾಗಿದೆ. ಈ ತರಬೇತಿಯ ಪ್ರಕಾರ ಬೋಧಕರು ಒಂದು ಗದ್ಯವನ್ನೇ ಆಗಲಿ ಪದ್ಯವನ್ನೇ ಆಗಲಿ ಬೋಧಿಸುವ ಪ್ರತಿಯೋರ್ವ ಕಲಿಕಾರ್ಥಿಗೂ ಮೌಲ್ಯಮಾಪನ ಕ್ರಿಯೆ ನಡೆಯಬೇಕು. ಒಂದು ಜ್ಞಾನಕ್ಕೆ ಸಂಬಂಧಿಸಿದಂತೆ ಮತ್ತೊಂದು ಭಾವನಾತ್ಮಕ ವಲಯಕ್ಕೆ ಸಂಬಂಧಪಟ್ಟಂತೆ ಮೌಲ್ಯಮಾಪನ ಮಾಡಬೇಕು.

ಈ ಬೋಧನಾ ಪದ್ಧತಿಯ ಪ್ರಕಾರ ಒಟ್ಟೊಟ್ಟಿಗೆ ಎರಡೆರಡು ಕ್ರಿಯೆಗಳು ನಡೆಯುತ್ತವೆ. ಬೋಧಕರು ಕಲಿಕಾರ್ಥಿಗಳಿಗೆ ಒಂದು ವಿಷಯವನ್ನು ಕುರಿತು ಬೋಧಿಸುತ್ತಿದ್ದರೆ ಕಲಿಕಾರ್ಥಿಯು ಸರಿಯೋ! ಅಥವಾ ತಪ್ಪೋ! ಒಟ್ಟಿನಲ್ಲಿ ಉತ್ತರಿಸಬೇಕು. ಒಂದು ವೇಳೆ ಉತ್ತರಿಸದಿದ್ದರೆ ಮುಂದಿನ ಕಲಿಕಾಂಶವನ್ನು ಬೋಧಿಸುವಂತಿಲ್ಲ. ವಿದ್ಯಾರ್ಥಿಯು ತಪ್ಪಾಗಿ ಉತ್ತರಿಸಿದರೂ ಅದನ್ನು ಸರಿ ಎಂದು ಪರಿಗಣಿಸಿ ಶ್ರೇಣಿಯನ್ನು ನೀಡಬೇಕು. ಉದಾಹರಣೆಗೆ : ಮಗ್ಗದ ಸಾಹೇಬ ಯಾರು? ಎಂದು ಪ್ರಶ್ನಿಸಿದಾಗ ವಿದ್ಯಾರ್ಥಿಯು 'ಮಗ್ಗವನ್ನು ನೇಯುವವನು ಮಗ್ಗದ ಸಾಹೇಬ' ಎಂದು ಉತ್ತರಿಸಿದರೆ ಅದು ಸರಿಯೆಂದು ಬೋಧಕರು ಪರಿಗಣಿಸಬೇಕು, ಅದರ ಸರಿಯಾದ ಉತ್ತರವೆಂದರೆ 'ಮಗ್ಗದ ಸಾಹೇಬ ಎಂದರೆ ಅಬ್ದುಲ್ ರಹೀಮ್ ಸಾಹೇಬ್' ಎಂದು ಉತ್ತರಿಸಬೇಕು.

ಹೀಗಾಗಿ ಈ ಬೋಧನಾ ಪದ್ಧತಿಯಿಂದ ಕಲಿಕಾರ್ಥಿಗಳಲ್ಲಿ ಭಾಷಾ ಕೌಶಲ್ಯಗಳಾದ ಬರವಣಿಗೆ ಓದುಗಾರಿಕೆ, ಅರ್ಥೈಸಲು ಸಾಧ್ಯವಾಗುವುದಿಲ್ಲ ಕೇವಲ ಮಾತುಗಾರಿಕೆ ಮತ್ತು ಆಲಿಸುವಿಕೆ ಕ್ರಿಯೆಗಳು ಮಾತ್ರ ಹೆಚ್ಚಿನ ಕಾರ್ಯನಿರ್ವಹಿಸುತ್ತವೆ.

೨) ಸಾಧನ - ಪುಷ್ಠಿ ತರಬೇತಿ

ಈ ತರಬೇತಿಯನ್ನು 'ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸರ್ವ ಶಿಕ್ಷಣ ಅಭಿಯಾನ ಯೋಜನೆ' ಅಡಿಯಲ್ಲಿ 'ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ' ವತಿಯಿಂದ ನವೀಕರಣಗೊಂಡ ಎಂಟನೇ ತರಗತಿಯ ಹೊಸ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ತಾಲೂಕ ಕೇಂದ್ರಗಳಲ್ಲಿ ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ ಕನ್ನಡ ಭಾಷಾ ಬೋಧಕರು ಮಾತ್ರ ಭಾಗವಹಿಸಿದ್ದರು. ೨೦೧೨ರಲ್ಲಿ ಇದೆ ತರಬೇತಿಯನ್ನು "ಸಾಧನ" ಎನ್ನುವ ಹೆಸರಿನಲ್ಲಿ ನೀಡಲಾಗಿತ್ತು. ಈ ವಿಧಾನ ಬೋಧಕರಿಗೆ ಕಷ್ಟವಾಗುತ್ತಿದೆ ಎಂದು ಅರಿತ ತರಬೇತಿ ಇಲಾಖೆಯು ೨೦೧೨ರಲ್ಲಿ "ಸಾಧನ ಪುಷ್ಠಿ ೨" ಎಂದು ಸರಳಿಕರಿಸಿ ತರಬೇತಿ ನೀಡಿತು.

ಸಾಧನ ಪುಷ್ಠಿ ಎಂದರೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಎಂದರ್ಥ. ಇದನ್ನು ಸಿ.ಸಿ.ಇ. ಎಂದು ಕರೆಯುತ್ತಾರೆ. (Continuous Comprehensive & Valuation)

ಈ ತರಬೇತಿಯ ಪ್ರಕಾರ ಇಡೀ ೮ನೇ ತರಗತಿಯ ಕನ್ನಡ ಪಠ್ಯಪುಸ್ತಕವನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬೇಕು.

[illegible]

ಅಂದರೆ –೧) ಮೊದಲನೇ ಸೆಮಿಸ್ಟರ್ ಅವಧಿ

೨) ಎರಡನೇ ಸೆಮಿಸ್ಟರ್ ಅವಧಿ

ಈ ಹೊಸ ಪದ್ಧತಿಗೆ ಸಂಬಂಧಿಸಿದಂತೆ ಚಟುವಟಿಕೆ ಆಧಾರಿತ ಬೋಧನೆಯೊಂದಿಗೆ ಕಲಿಕಾರ್ಥಿಗಳನ್ನು ನಿರಂತರ ಮೌಲ್ಯಮಾಪನಕ್ಕೆ ಒಳಪಡಿಸಬೇಕು, ಬೋಧನೆಯನ್ನು ಚಟುವಟಿಕೆ ಆಧಾರಿತವಾಗಿ ಬೋಧಿಸಬೇಕು ಕಲಿಕಾರ್ಥಿಗಳಿಂದ ಚಟುವಟಿಕೆಗಳನ್ನು ಮಾಡಿಸಿ ಸ್ವಯಂ ಮೌಲ್ಯ ಮಾಪನ ಮಾಡಬೇಕು.

ಹೀಗೆ ಈ ರೀತಿಯ ಚಟುವಟಿಕೆ ಆಧಾರಿತ ಬೋಧನೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ಕಲಿಕಾರ್ಥಿಯನ್ನು ಮುಂದಿನ ಹಂತಕ್ಕೆ ಕಳುಹಿಸಲು ಮಾತ್ರ ಸಾಧ್ಯವಾಗುತ್ತದೆ. ಇನ್ನೂಳಿದಂತೆ ಕಲಿಕಾರ್ಥಿಯಲ್ಲಿ ಬರವಣಿಗೆ, ಓದುಗಾರಿಕೆ, ಸ್ಪಷ್ಟ ಓದು, ಶುದ್ಧಬರಹ, ಯಾವ ಅಂಶಗಳನ್ನು ಬೆಳೆಸಲು, ತಪ್ಪುಗಳನ್ನು ಗುರುತಿಸಿ ತಿದ್ದಲು ಈ ಬೋಧನಾ ಕ್ರಮದಿಂದ ಸಾಧ್ಯವಾಗುವುದಿಲ್ಲ.

೩) ರಚನಾ ೧ – ತರಬೇತಿ :

ಸಿ.ಸಿ.ಇ. ತರಬೇತಿಯು ೮ನೇ ತರಗತಿ ಬೋಧನೆಗೆ ಸಂಬಂಧಿಸಿದಂತೆ ರಚನಾ ೨, ೯ನೇ ತರಗತಿಯ ಬೋಧನೆಗೆ ಸಂಬಂಧಿಸಿದಾಗಿದೆ. ಈ ತರಬೇತಿಯನ್ನು ಕೂಡಾ "ರಾಷ್ಟ್ರಿಯ ಮಾಧ್ಯಮಿಕ ಶಿಕ್ಷಣ ಅಭಿಯಾನ" ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಜಿಲ್ಲಾ ಕೇಂದ್ರಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಐದು ದಿನಗಳ ತರಬೇತಿಯನ್ನು ನೀಡಿತು.

ಈ ತರಬೇತಿಯಲ್ಲಿ ವಿಶೇಷವಾಗಿ ಒಂದು ಅಂಶವನ್ನು ತಿಳಿಸಲಾಗಿದೆ. ಇನ್ನು ಮುಂದೆ ಬೋಧಕರನ್ನು ಸುಗಮಕಾರರು ಎಂದು ಕರೆಯಲು ಸೂಚಿಸಿದ್ದಾರೆ. ಏಕೆಂದರೆ ಕಲಿಕಾರ್ಥಿಗಳ ಕಲಿಕೆಯ ಕಷ್ಟವನ್ನು ಅಥವಾ ಸಮಸ್ಯೆಗಳನ್ನು ಸರಳೀಕರಿಸುವವರು ಬೋಧಕರು. ಹಾಗಾಗಿ ಅವರನ್ನು ಸುಗಮಕಾರರು ಎಂದು ಸಂಬೋಧಿಸಬೇಕು ಎಂದಿದ್ದಾರೆ. ಪಠ್ಯದ ವಿಷಯ ಸರಳೀಕರಿಸುವ ತರಬೇತಿ ಮಟ್ಟದಲ್ಲಿಯೂ ಕೈಗೊಂಡಿದ್ದಾರೆ ಅಂತಹ ತರಬೇತಿಗಳಲ್ಲಿ ಕೇಲವೊಂದು ಪ್ರಮುಖವಾದ ತರಬೇತಿಗಳ ವಿವರ ಕೆಳಕಂಡತಿವೆ.

೪) ವಿಷಯ ಸಂಪದೀಕರಣ :

ಈ ತರಬೇತಿಯು ಪ್ರೌಢ ಶಾಲೆಯ ಕನ್ನಡ ಭಾಷಾ ಬೋಧಕರಿಗಾಗಿ "ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ"ದ ವತಿಯಿಂದ ನೂತನ ಪಠ್ಯಕ್ರಮ ಆಧಾರಿತವಾಗಿ ತರಬೇತಿಯನ್ನು ನೀಡಲಾಗಿದೆ. ಹೊಸ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಬೋಧಿಸುವ ಕ್ರಮವು ಬದಲಾಗಿರುವುದನ್ನು ಗಮನಿಸಬಹುದು. ಉದಾರಹರಣೆಗೆ ಬೋಧಕರು ಒಂದು ನಾಟಕವನ್ನು ಕಲಿಕಾರ್ಥಿಗಳಿಗೆ ಬೋಧಿಸಲು ಹೊರಟರೆ ಆ ನಾಟಕಕ್ಕೆ ಸಂಬಂಧಿಸಿದಂತೆ ವಿಷಯುವನ್ನು ಸಂಗ್ರಹಿಸಿಕೊಳ್ಳಬೇಕು. ಸಂಗ್ರಹಿಸಿಕೊಳ್ಳುವ ಮಾದರಿ ಎಂದರೆ,

[illegible]

* ನಾಟಕದ ಸಾಮರ್ಥ್ಯಗಳ ತುಲನಾತ್ಮಕ ಪಟ್ಟಿ
* ನಾಟಕದ ಪರಿಕಲ್ಪನೆಗಳು ಮತ್ತು ಉಪ ಪರಿಕಲ್ಪನೆಗಳು
* ನಾಟಕದ ಬೋಧನೆಯ ಉದ್ದೇಶಗಳು
* ನಾಟಕಕ್ಕೆ ಸಂಬಂಧಿಸಿದಂತೆ ಪೂರಕ ಸಾಹಿತ್ಯ
* ಅನ್ವಯ ಚಟುವಟಿಕೆಗಳು/ಪ್ರಯೋಗಗಳು ಇತ್ಯಾದಿ.

ಈ ರೀತಿಯಾಗಿ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಮಾಹಿತಿಯನ್ನು ಸಂಗ್ರಹಿಸಿಕೊಂಡು ಬೋಧಿಸುವ ಕ್ರಮಕ್ಕೆ ವಿಷಯ ಸಂಪದೀಕರಣ ಎಂದು ಕರೆಯಲಾಗುತ್ತದೆ.

೫) ರಚನಾ ೨ ತರಬೇತಿ :

ಎನ್.ಸಿ.ಎಫ್ – ೨೦೦೫ ಹೊಸ ಪಠ್ಯಪುಸ್ತಕ ಆಧಾರಿತವಾಗಿ ಶಿಕ್ಷಕರ ತರಬೇತಿಯು ಸಾಹಿತ್ಯವನ್ನು ಕುರಿತು ೨೦೧೨-೧೩ನೇ ಸಾಲಿನಲ್ಲಿ ಪ್ರಾಥಮಿಕ ಪ್ರೌಢ ಶಾಲಾ ಬೋಧಕರಿಗೆ ಕರ್ನಾಟಕ ಸರಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಈ ತರಬೇತಿಯನ್ನು ತಾಲೂಕ ಮಟ್ಟಗಳಲ್ಲಿ ನೀಡಲಾಯಿತು.

ಪಠ್ಯಕ್ರಮವು ಎನ್.ಸಿ.ಎಫ್. ಮತ್ತು ಆರ್.ಟಿ.ಇ.ಯ ಶಿಫಾರಸ್ಸಿನ ಮೇರೆಗೆ ರಚನೆಗೊಂಡಿರುವಂತಹದು.

ಅದೇ ರೀತಿಯಾಗಿ ನೂತನ ಪಠ್ಯಕ್ರಮಕ್ಕೆ ಸಂಬಂಧಪಟ್ಟಂತೆ ಕಲಿಕಾರ್ಥಿಗಳನ್ನು ಕೂಡ ಚಟುವಟಿಕೆಯಲ್ಲಿ ಹೇಗೆ ಭಾಗವಹಿಸುವಂತೆ ಪ್ರೇರೆಪಿಸಬೇಕು ಮತ್ತು ಕಲಿಕಾರ್ಥಿಗಳನ್ನು ನಿರಂತರ ಮೌಲ್ಯಮಾಪನಕ್ಕೆ ಒಳಪಡಿಸಬೇಕು ಎಂಬಂತಹ ಅಂಶಗಳನ್ನು ತಿಳಿಸಲಾಗಿದೆ.

ಈ ಹೊಸ ಬೋಧನಾ ಪದ್ಧತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳ ನಿರ್ವಹಣೆ ಹೀಗಿದೆ.

* ಶಿಕ್ಷಕರ ತಪಶೀಲು ಪಟ್ಟಿ.
* ಮಕ್ಕಳ ವಯಕ್ತಿಕ ತಪಶೀಲು ಪಟ್ಟಿ.
* ಮಕ್ಕಳು ಸ್ವಯಂ ನಿರ್ವಹಿಸುವ ಮೌಲ್ಯಮಾಪನ
* ತಂಡದ ನಾಯಕರು ನಿರ್ವಹಿಸುವ ಮೌಲ್ಯಮಾಪನ ವಹಿ.
* ಘಟಕವಾರು ಶಿಕ್ಷಕರ ವಯಕ್ತಿಕ ದಾಖಲೆ ವಹಿ.
* ಶಿಕ್ಷಕರ ವಯಕ್ತಿಕ ದಾಖಲೆ ನಮೂನೆ.

೬) ೨ನೇ ಸೆಮಿಸ್ಟರ್ ಹಾಗೂ ವಾರ್ಷಿಕ ಕ್ರೋಢಿಕರಣ ವಹಿ :

ಈ ಬೋಧನಾ ಪದ್ಧತಿಗೆ ಸಂಬಂಧಿಸಿದಂತೆ ಈ ಎಲ್ಲಾ ದಾಖಲೆಗಳನ್ನು ಬೋಧಕರು ನಿರ್ವಹಿಸಬೇಕು. ಬೋಧಕರಿಗೆ ದಾಖಲೆಗಳನ್ನು ನಿರ್ವಹಿಸುವುದಕ್ಕೆ ಸಮಯ ಸಿಗುವುದಿಲ್ಲ ಇನ್ನೂ ಭಾಷಾ ಕೌಶಲ್ಯಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ, ಬರೆಯುವಿಕೆಗಳ ಜೊತೆಗೆ

ಹೊಸದಾಗಿ ಇನ್ನೆರಡು ಕೌಶಲ್ಯಗಳನ್ನು ಸೇರಿಸಲಾಗಿದೆ. ಅವುಗಳೆಂದರೆ ಅಭಿವ್ಯಕ್ತಿ ಕೌಶಲ, ಸ್ವೀಕಾರ ಕೌಶಲ ಇವುಗಳ ಕಡೆಗೆ ಬೋಧಕರು ಗಮನಹರಿಸುವುದಾದರೂ ಹೇಗೆ ಸಾಧ್ಯ.

ಈ ರೀತಿಯಾಗಿ ಹೊಸ ಬೋಧನಾ ಕ್ರಮವು ದಾಖಲೆಗಳ ಹೊರೆಯಾಗಿದೆ ಹೊರತು ಬೋಧನೆಗೆ ಸಮಯ ಸಿಗದಂತಾಗುತ್ತದೆ ಎಂಬುದು ಬೋಧಕರ ಅಭಿಪ್ರಾಯ.

೭) ಮೌಲ್ಯ ಮಾಪನ ತರಬೇತಿ :

ಬದಲಾದ ಹೊಸ ಬೋಧನಾ ಪದ್ಧತಿಗೆ ಅನುಗುಣವಾಗಿ ಕಲಿಕಾರ್ಥಿಗಳನ್ನು ಹೇಗೆ ಮೌಲ್ಯಮಾಪನಕ್ಕೆ ಒಳಪಡಿಸಬೇಕು. ಮತ್ತು ನಿರಂತರ ಮೌಲ್ಯಮಾಪನ ಕ್ರಿಯೆ ಕುರಿತು ತರಬೇತಿಯಲ್ಲಿ ತಿಳಿಸಲಾಗಿದೆ. ಹೊಸ ಮೌಲ್ಯಮಾಪನ ಪದ್ಧತಿಯ ಪ್ರಕಾರ ಕಲಿಕಾರ್ಥಿಯ ತಪ್ಪುಗಳನ್ನು ಗುರುತಿಸುವುದನ್ನು ಬಿಟ್ಟು ಅವರ ಬೌದ್ಧಿಕತೆಗೆ ತಕ್ಕಂತೆ ಉತ್ತರವನ್ನು ಕೊಟ್ಟಿದ್ದಾರೋ ಇಲ್ಲವೋ? ಎಂಬುದನ್ನು ಗಮನಿಸಬೇಕು.

ಉದಾಹರಣೆಗೆ : ದೊಡ್ಡಾಟ ಎಂದರೆ ಉತ್ತರ ಕರ್ನಾಟಕ ಜನತೆ ಆಡುವ ಒಂದು ನಾಟಕಕ್ಕೆ ದೊಡ್ಡಟ ಎಂದು ಕರೆಯುತ್ತಾರೆ.

ಇದಕ್ಕೆ ಪ್ರತಿಯಾಗಿ ಕಲಿಕಾರ್ಥಿಯು ದೊಡ್ಡವರು ಆಡುವ ಆಟ ದೊಡ್ಡಾಟ ಎಂದು ಉತ್ತರಿಸಿದರೂ ಸಹ ಹೊಸ ಪದ್ಧತಿಯ ಪ್ರಕಾರ ಸರಿಯಾದ ಉತ್ತರವೇ ಆಗಿರುತ್ತದೆ.

೩.೫. ಬದಲಾಗುತ್ತಿರುವ ಬೋಧನಾ ಪದ್ಧತಿಯ ಅನುಕೂಲ ಮತ್ತು ಅನಾನುಕೂಲಗಳು

ಪ್ರತಿ ವರ್ಷವೂ ಕೂಡಾ ಬೋಧನಾ ಪದ್ಧತಿಯಲ್ಲಿ ಬದಲಾವಣೆ ಆಗುತ್ತಿರುವುದನ್ನು ಕಾಣುತ್ತೇವೆ. ಈ ಬೋಧನಾ ವಿಧಾನಗಳು ಹೇಗಿವೆ ಎಂದರೆ ಬೋಧಕರು ತಾವು ಪ್ರಶಿಕ್ಷಣಾರ್ಥಿಗಳಿದ್ದಾಗ ಹರ್ಬಟನ ಪಂಚಸೂತ್ರಗಳ ಪ್ರಕಾರ ಬೋಧನಾ ತರಬೇತಿಯನ್ನು ಅವರಿಗೆ ನೀಡಲಾಗಿರುತ್ತದೆ. ಆದರೆ ವೃತ್ತಿ ಜೀವನದ ಬೋಧನಾ ಕ್ರಮದ ಪದ್ಧತಿಯೆ ಬೇರೆಯಾಗಿರುತ್ತದೆ. ಆದ್ದರಿಂದ ಬದಲಾಗುತ್ತಿರುವ ಭಾಷಾ ಬೋಧನಾ ಪದ್ಧತಿಯಿಂದ ಬೋಧಕರಿಗೆ ಅನುಕೂಲ ಮತ್ತು ಅನಾನುಕೂಲ ಎರಡು ಆಗುವುದುಂಟು.

೧. ಬದಲಾಗುತ್ತಿರುವ ಬೋಧನಾ ಪದ್ಧತಿಯ ಅನುಕೂಲಗಳು :

* ಬದಲಾಗುತ್ತಿರುವ ಕಲಿಕಾ ಪರಿಸರಕ್ಕೆ ತಕ್ಕಂತೆ ಬೋಧಿಸಲು ಸಹಕಾರಿಯಾಗಿದೆ.
* ಇದು ವಿದ್ಯಾರ್ಥಿ ಕೇಂದ್ರಿತ ಬೋಧನೆಯಾಗಿದೆ.
* ವಿದ್ಯಾರ್ಥಿಗಳ ಕಲಿಕೆಯ ಭಾರ ಕಡಿಮೆಗೊಳಿಸುತ್ತದೆ.
* ಕಲಿಕಾರ್ಥಿಗಳ ಮತ್ತು ಸ್ವಯಂ ಕಲಿಕೆಗೆ ಸಹಕಾರಿಯಾಗಿದೆ.
* ಸೃಜನಶೀಲ ಮತ್ತು ಪ್ರಯೋಗಾತ್ಮಕ ಕಲಿಕೆಗೆ ಹೆಚ್ಚಿನ ಆದ್ಯತೆ ಇರುತ್ತದೆ.

[illegible]

* ಕಲಿಕಾರ್ಥಿ ಮತ್ತು ಬೋಧಕರಿಬ್ಬರ ಜ್ಞಾನ ವೃದ್ಧಿಗೆ ಸಹಕಾರಿಯಾಗಿದೆ.
* ತರಗತಿಯ ಎಲ್ಲಾ ಕಲಿಕಾರ್ಥಿಗಳು ಕಡ್ಡಾಯವಾಗಿ ಕಲಿಕೆಯಲ್ಲಿ ಪಾಲ್ಗೊಳ್ಳಲೇಬೇಕಾದಂತಹ ಬೋಧನಾ ಕ್ರೀಯೆಯಾಗಿದೆ.
* ಬೋಧಕರ ಬೋಧನಾ ಭಾರ ಕಡಿಮೆಗೊಳಿಸಿದೆ.
* ಕಲಿಕಾರ್ಥಿಗಳು ಓದಲೇಬೇಕು ಬರೆಯಲೇಬೇಕು ಎಂಬ ನಿಯಮವೇನು ಇಲ್ಲ.

೨. **ಬದಲಾಗುತ್ತಿರುವ ಬೋಧನಾ ಪದ್ಧತಿಯ (ಅನಾನುಕೂಲ) ಸಮಸ್ಯೆಗಳು :**

* ಪದ್ಧತಿಯಿಂದ ಕಲಿಕಾರ್ಥಿಗಳಲ್ಲಿ ಭಾಷಾ ಕೌಶಲ್ಯಗಳಾದ ಓದುವಿಕೆ ಬರೆಯುವಿಕೆ ಹೆಚ್ಚಿನ ಅವಕಾಶವಿಲ್ಲ.
* ಬೋಧಕರಿಗೆ ಬೋಧಿಸುವುದಕ್ಕಿಂತ ಕಡತಗಳ ನಿರ್ವಹಣೆಯೆ ಹೆಚ್ಚಾಗಿರುವುದರಿಂದ ಬೋಧನೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವಂತಾಗಿದೆ.
* ಇದು ಬೋಧಕರಲ್ಲಿ ಗೊಂದಲ ಉಂಟುಮಾಡುತ್ತದೆ.
* ಆಸಕ್ತಿದಾಯಕ ಬೋಧಕರಿಗೆ ಮಾತ್ರ ಇಂತಹ ಬೋಧನೆ ಮಾಡಲು ಸಾಧ್ಯ. ವಯಸ್ಸಾದ ಬೋಧಕರಿಂದ ಕಷ್ಟವಾಗುತ್ತದೆ
* ಇಲ್ಲಿ ಕಲಿಕಾರ್ಥಿಗಳನ್ನು ಅನುತ್ತೀರ್ಣಗೊಳಿಸುವಂತಿಲ್ಲ ಹೀಗಾಗಿ ವಿದ್ಯಾರ್ಥಿಯು ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ.
* ಈ ಪದ್ಧತಿಯಿಂದ ಬರವಣಿಗೆ ಓದುಗಾರಿಕೆಯಲ್ಲಿ ಸಮಸ್ಯೆಯನ್ನು ಗುರುತಿಸುವುದು ಸಾಧ್ಯವಿಲ್ಲ.
* ಬೋಧಕರಲ್ಲಿನ ಭಾಷಾ ಪ್ರೌಢಿಮೆ ಕಡಿಮೆಯಾಗುತ್ತದೆ.

ಈ ರೀತಿಯಾಗಿ ಬೋಧನಾ ಪದ್ಧತಿಯಲ್ಲಿ ಚರಿತ್ರೆಯುದ್ದಕ್ಕೂ ಮಹತ್ತರ ಬದಲಾವಣೆಗಳು ಆಗಿರುವುದನ್ನು ನೋಡುತ್ತೇವೆ. ಭಾಷೆ ಬೋಧಿಸುವ ಕ್ರಮವೂ ಪ್ರಾಚೀನತೆಯಿಂದ ಆಧುನಿಕತೆಯವರೆಗೆ ವಿವಿಧ ಪ್ರಕಾರಗಳಲ್ಲಿ ರೂಪುಗೊಂಡಿದೆ ಕಂಠಪಾಠ ಮತ್ತು ಮೌಖಿಕ ಪರಂಪರೆಯಲ್ಲಿದ್ದ ಬೋಧನೆಯು ಇಂದಿನ ದಿನಗಳಲ್ಲಿ ಬೋಧನೆ ಹಲವಾರು ಪ್ರಕಾರಗಳಲ್ಲಿ ಬೋಧಿಸಲ್ಪಡುತ್ತಿದೆ. ಇದಕ್ಕೆ ಕಾರಣ ಕಲಿಕಾರ್ಥಿಗಳನ್ನು ಆಕರ್ಷಿಸಲು ಮತ್ತು ಬೋಧನೆ ಪರಿಣಾಮಕಾರಿಯಾಗಿಸಲು. ಇಂದಿನ ದಿನಗಳಲ್ಲಿ ಕಲಿಕಾರ್ಥಿಗಳು ಭಾಷಾ ಕಲಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವುದು, ಕನ್ನಡ ಭಾಷಾ ಬೋಧಕರು ಈ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸುತ್ತಿರುವುದರಿಂದ, ಬೋಧನೆಯಲ್ಲಿ ನಿರಂತರವಾ ಬದಲಾವಣೆಯಾಗುತ್ತಿರುವುದನ್ನು ಗಮನಿಸಬಹುದು.

ಇಂದಿನ ಬೋಧನಾ ಪದ್ಧತಿ

ಹಿಂದಿನ ಬೋಧನಾ ಪದ್ಧತಿಗೂ ಇಂದಿನ ಬೋಧನಾ ಪದ್ಧತಿಗೂ ವ್ಯತ್ಯಾಸ ಇರುವುದನ್ನು ಪ್ರಸ್ತಾವನೆಯಲ್ಲಿಯೆ ತಿಳಿಸಲಾಗಿದೆ. ಹಿಂದಿನ ಬೋಧನಾ ಪದ್ಧತಿಯು ಯಾವುದೇ ರೀತಿಯಿಂದ ನಿರ್ದಿಷ್ಟ ಸಮಯದ ವ್ಯಾಪ್ತಿಗೆ ಒಳಗೊಂಡಿರಲಿಲ್ಲ. ಅಲ್ಲಿ ಗುರು ಹೇಳಿದ್ದನ್ನು ಶಿಷ್ಯ ಪಾಲಿಸಬೇಕಾಗಿತ್ತು. ಇಂದು ಹಾಗಿಲ್ಲ. ಸರಕಾರದ ನಿಯಮಗಳ ಪರಿಪಾಲನೆಯೊಂದಿಗೆ ಬೋಧನೆ ಸಾಗುತ್ತಿದೆ.

ಇಂದಿನ ಬೋಧನಾ ಪದ್ಧತಿಯು ಪ್ರತಿವರ್ಷ ಬದಲಾವಣೆಯಾಗುತ್ತಲೆ ಸಾಗಿದೆ. ಬೋಧಕ ಪ್ರಶಿಕ್ಷಣಾರ್ಥಿಯಾಗಿದ್ದಾಗ ಹರ್ಬಟನ ಪಂಚ ಸೂತ್ರಗಳ ಮೂಲಕ ಮಕ್ಕಳಿಗೆ ಹೇಗೆ ಕಲಿಸಬೇಕೆಂದು ತರಬೇತಿಯನ್ನು ಪಡೆದುಕೊಂಡಿರುತ್ತಾನೆ. ಆದರೆ ವೃತ್ತಿ ಜೀವನದಲ್ಲಿ ಹರ್ಬಟನ ಪಂಚ ಸೂತ್ರದ ಮೂಲಕ ಬೋಧಿಸುವುದಕ್ಕೆ ಆಗುವುದಿಲ್ಲ.

ಇಂದಿನ ಬೋಧನೆಯು ಸಂಪೂರ್ಣವಾಗಿ ಸರಕಾರದ ಕೈಯಲ್ಲಿದೆ. ಸರಕಾರ ಹೇಳಿದಂತೆ ಬೋಧಕ ಕುಣಿಯಬೇಕಾಗಿದೆ. ಇಂದಿನ ಬೋಧನಾ ಕ್ರಮವಾದ ಪ್ರಾಥಮಿಕ ಹಂತದಲ್ಲಿ ನಲಿ-ಕಲಿ ಬೋಧನಾ ಪದ್ಧತಿ ಬರುವ ಮುಂಚಿತವಾಗಿ ಅ,ಆ,ಇ,ಈ ಎಂದು ಮಗು ಕಲಿಯುತ್ತಿತ್ತು. ಆದರೆ ಈಗ ರ,ಗ,ಸ,ದ ಎಂಬ ಮಾದರಿಯಿಂದ ಕಲಿಯುತ್ತಿರುವುದರಿಂದ ಸರಿಯಾಗಿ ವರ್ಣಮಾಲೆ ಗುರುತಿಸುವುದಕ್ಕೆ ಆಗುತ್ತಿಲ್ಲ. ಅದೇ ರೀತಿಯಾಗಿ ಪ್ರೌಢಶಾಲೆಗಳಿಗೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪದ್ಧತಿ ಜಾರಿಯಾದಾಗಿನಿಂದ ಕಲಿಕಾರ್ಥಿಗಳಿಗೆ ಗಟ್ಟಿವಾಚನವನ್ನು ಮಾಡಿಸುತ್ತಿಲ್ಲ. ಇದರಿಂದ ಓದುವಾಗ ಕಲಿಕಾರ್ಥಿ ಸಮಸ್ಯೆ ಎದುರಿಸಬೇಕಾಗಿದೆ.

ಈ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಚಟುವಟಿಕೆಯಾಧಾರಿತ ಬೋಧನಾ ಪದ್ಧತಿಯಾಗಿರುವುದರಿಂದ ಇಲ್ಲಿ ಬೋಧಕರು ಕೇವಲ ಚಟುವಟಿಕೆ ಮಾಡಿಸುವುದರಲ್ಲಿಯೇ ಅವರ ಸಮಯ ವ್ಯಯವಾಗುತ್ತಿರುವುದರಿಂದ ಓದುಗಾರಿಕೆ ಮತ್ತು ಬರವಣಿಗೆಯ ಕಡೆ ಗಮನಕೊಡಲು ಸಾಧ್ಯವಾಗುತ್ತಿಲ್ಲ.

ಇಂದಿನ ಬೋಧನಾ ಪದ್ಧತಿಗೆ ಕೊಡುವ ಸಮಯ ನಲವತ್ತೈದು ನಿಮಿಷ. ಈ ಸಮಯದಲ್ಲಿ ಕನ್ನಡ ಭಾಷಾ ಬೋಧಕರು ತರಗತಿ ಶಿಕ್ಷಕರಾಗಿದ್ದರೆ ಮಕ್ಕಳ ಹಾಜರಾತಿಯನ್ನು ತೆಗೆದುಕೊಳ್ಳಬೇಕು ಮತ್ತು ಶಾಲೆ ಬಿಟ್ಟಂತಹ ಮಕ್ಕಳನ್ನು ಗಮನಿಸಬೇಕು. ಒಂದು ವೇಳೆ ದೊಡ್ಡ ತರಗತಿಯಾಗಿದ್ದರೆ ಅಂದರೆ ನೂರು ನೂರೈವತ್ತು ಮಕ್ಕಳು ಇದ್ದರೆ ಸುಮಾರು ೩೦ ನಿಮಿಷ ಹಾಜರಾತಿ ತೆಗೆದುಕೊಳ್ಳುವುದಕ್ಕೆ ಬೇಕಾಗುತ್ತದೆ. ಇನ್ನೂ ಎಲ್ಲಾ ಮಕ್ಕಳ ಕಡೆ ಗಮನಕೊಡುವುದಕ್ಕೆ ಆಗುವುದಿಲ್ಲ. ಇದರಿಂದ ಬೋಧನೆ ಹಿನ್ನೆಡೆಯಾಗುತ್ತದೆ.

ಈ ಹೊಸ ಬೋಧನಾ ಪದ್ಧತಿಯ ಪ್ರಕಾರ ಬೋಧನೆಯಲ್ಲಿ ಚಟುವಟಿಕೆಯ ಮೂಲಕ ಕಲಿಕಾರ್ಥಿಗಳನ್ನು ತೊಡಗಿಸಿಕೊಳ್ಳಬೇಕು. ಉದಾಹರಣೆಗೆ ಕವಿ ಪರಿಚಯವನ್ನು ಮಾಡಬೇಕಾದರೆ

[illegible]

[illegible]

[illegible]

[illegible]

[illegible]

ಸಂದರ್ಶನ ಮಾದರಿಯಲ್ಲಿ ಒಬ್ಬ ವಿದ್ಯಾರ್ಥಿ ಕವಿಯಾಗಬೇಕು ಇನ್ನೊಬ್ಬ ವಿದ್ಯಾರ್ಥಿ ಸಂದರ್ಶಕನಾಗಿ ಕವಿ ಪರಿಚಯವನ್ನು ಕಲಿಕಾರ್ಥಿಗಳಿಂದಲೇ ಮಾಡಿಸಬೇಕು. ಇಲ್ಲಿ ಬೋಧಕ ಕೇವಲ ಮಾರ್ಗದರ್ಶಕನಾಗಿರುತ್ತಾನೆ.

ಅದೇ ರೀತಿಯಾಗಿ ಒಂದು ನಾಟಕ ಪ್ರಸಂಗದ ಗದ್ಯವಿದ್ದರೆ ಆ ನಾಟಕವನ್ನು ಕಲಿಕಾರ್ಥಿಗಳಿಂದಲೇ ಚಟುವಟಿಕೆಯಾಧಾರಿತವಾಗಿ ಮಾಡಿಸಬೇಕು. ಹೀಗೆ ಮಾಡಿಸುವುದರಿಂದ ಸಮಯ ಸಾಕಾಗುವುದಿಲ್ಲ. ಇಲ್ಲಿ ಬೋಧಕ ಕೇವಲ ಮಾರ್ಗದರ್ಶಕ ಮತ್ತು ಪ್ರೇಕ್ಷಕನಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೆ ಈ ಚಟುವಟಿಕೆಯಲ್ಲಿ ಎಲ್ಲಾ ಕಲಿಕಾರ್ಥಿಗಳು ಭಾಗವಹಿಸುವುದಿಲ್ಲ. ಓದು ಮತ್ತು ಬರವಣಿಗೆಯಲ್ಲಿ ಸಮಸ್ಯೆ ಎದುರಿಸುತ್ತಿರುವ ಕಲಿಕಾರ್ಥಿಗಳು ಇಂತಹ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆಂಬ ಸಂತೋಷ ಬಿಟ್ಟರೆ ಅವರಲ್ಲಿರುವ ಓದುಗಾರಿಕೆ ಬರವಣಿಗೆ ಸಮಸ್ಯೆ ನಿವಾರಿಸಲು ಈ ಕ್ರಮಗಳಿಂದ ಸಾಧ್ಯವಾಗುವುದಿಲ್ಲ.

ಪ್ರಸ್ತುತದಲ್ಲಿ ೧೦ನೇ ತರಗತಿಯ ಕಲಿಕಾರ್ಥಿಗಳು ಕನ್ನಡ ಭಾಷೆಯ ಪರೀಕ್ಷೆಯನ್ನು ೧೦೦ ಅಂಕಗಳಿಗೆ ಬರೆಯುತ್ತಾರೆ. ಇನ್ನೂ ೨೫ ಅಂಕಗಳನ್ನು ಬಾಹ್ಯ ಅಂಕಗಳೆಂದು ಪರಿಗಣಿಸಲಾಗಿದೆ. ಈ ಬಾಹ್ಯ ಅಂಕಗಳಿಗಾಗಿ ಒಂದೊಂದು ವಿಷಯಗಳಿಗೆ ವಿಷಯಾಧಾರಿತವಾಗಿ ಎಂಟು ಚಟುವಟಿಕೆಗಳನ್ನು ಮಾಡಿಕೊಡಬೇಕು. ಚಟುವಟಿಕೆ ಮಾಡುವುದಕ್ಕೆ ಬೋಧಕರು ಮಾರ್ಗದರ್ಶನ ನೀಡಬೇಕು.

ಕಲಿಕಾರ್ಥಿಗಳಿಂದ ಒಟ್ಟು ಎಂಟು ಚಟುವಟಿಕೆಗಳನ್ನು ನಾಲ್ಕು ಹಂತಗಳಲ್ಲಿ ಮಾಡಿಸಬೇಕು. ಒಂದು ಶೈಕ್ಷಣಿಕ ವರ್ಷದಲ್ಲಿನ ನಾಲ್ಕು ಹಂತಗಳು ಈ ರೀತಿಯಾಗಿವೆ.

ಮೊದಲನೆ ಹಂತ : ಜೂನ್ ತಿಂಗಳಿಂದ ಜುಲೈವರೆಗೆ ಒಂದನೇ ರೂಪಣಾತ್ಮಕ ಎರಡು ಚಟುವಟಿಕೆ ಒಂದು ಸಾಧನಾ ಪರೀಕ್ಷೆ ಒಳಗೊಂಡು ೫೦ ಅಂಕಗಳಿಗೆ ಸೀಮಿತಗೊಂಡಿರುತ್ತದೆ.

ಎರಡನೇ ಹಂತ : ಅಗಷ್ಟ ತಿಂಗಳಿಂದ ಸೆಪ್ಟೆಂಬರ್‌ವರೆಗೆ ಎರಡನೇ ರೂಪಣಾತ್ಮಕ ಎರಡು ಚಟುವಟಿಕೆ ಒಂದು ಸಾಧನಾ ಪರೀಕ್ಷೆ ಒಳಗೊಂಡು ೫೦ ಅಂಕಗಳಿಗೆ ನಿಗದಿಪಡಿಸಲಾಗಿದೆ.

ಮೂರನೇ ಹಂತ : ನವೆಂಬರ ತಿಂಗಳಿಂದ ಡಿಸೆಂಬರ್‌ವರೆಗೆ, ಎರಡು ಚಟುವಟಿಕೆ ಒಂದು ಸಾಧನಾ ಪರೀಕ್ಷೆ ಒಳಗೊಂಡು ೫೦ ಅಂಕಗಳಿಗೆ ನಿಗದಿಪಡಿಸಲಾಗಿದೆ.

ನಾಲ್ಕನೇ ಹಂತ : ಜನವರಿ ತಿಂಗಳಿಂದ ಫೇಬ್ರುವರಿವರೆಗೆ ನಾಲ್ಕನೇ ರೂಪಣಾತ್ಮಕ ಎರಡು ಚಟುವಟಿಕೆ ಒಂದು ಸಾಧನಾ ಪರೀಕ್ಷೆ ಸೇರಿ ೫೦ ಅಂಕಕ್ಕೆ ಸೀಮಿತವಾಗಿರುತ್ತದೆ.

ಹೀಗೆ ಈ ನಾಲ್ಕು ರೂಪಣಾತ್ಮಕವನ್ನು ಕ್ರೋಡೀಕರಿಸಿದಾಗ ಒಟ್ಟು ೨೦೦ ಅಂಕಗಳು ಆಗುತ್ತವೆ. ಉದಾಹರಣೆಗೆ ವಿದ್ಯಾರ್ಥಿಯ ೨೦೦ಕ್ಕೆ ೧೫೦ ಅಂಕಗಳನ್ನು ಪಡೆದರೆ ಆ ೧೫೦ ಅಂಕಗಳು ೨೫ ಅಂಕಕ್ಕೆ ಎಷ್ಟು ಆಯ್ತು ಎಂದು ಭಾಗಿಸಿ, ಗುಣಿಸಿ ಅಂಕಗಳನ್ನು ದಾಖಲಿಸಿ ಎ, ಬಿ, ಸಿ, ಶ್ರೇಣಿಗಳಲ್ಲಿ ಯಾವ ಶ್ರೇಣಿಯನ್ನು ಪಡೆದಿದ್ದಾನೆಂದು ಗುರುತಿಸಬೇಕು. ಈ ರೀತಿಯಾಗಿ ದಾಖಲೆಗಳನ್ನು ನಿರ್ವಹಿಸುವುದರೊಳಗೆ ಒಂದು ಶೈಕ್ಷಣಿಕ ವರ್ಷ ಮುಗಿದಿರುತ್ತದೆ. ಇಲ್ಲಿ ಯಾವುದೇ ರೀತಿಯಾಗಿ

[illegible]

ಕಲಿಕಾರ್ಥಿಯ ಓದು, ಬರವಣಿಗೆ, ಆಲಿಸುವಿಕೆಯ ಕಡೆ ಬೋಧಕರಿಗೆ ಗಮನಹರಿಸಲು ಸಾಧ್ಯವಾಗುತ್ತಿಲ್ಲಾ ಎಂಬುದು ಬೋಧಕರ ಅಭಿಪ್ರಾಯ.

ಇಲ್ಲಿ ಕೇವಲ ಬೋಧಕರು ವಿದ್ಯಾರ್ಥಿಗಳು ಚಟುವಟಿಕೆ ಮಾಡಿದ್ದಾರೋ, ಇಲ್ಲೋ, ಪರೀಕ್ಷೆಗೆ ಎಷ್ಟುಬೇಕು ಅಷ್ಟು ಪಾಠಗಳು ಮುಗಿದಿದೆಯೋ, ಕಲಿಕಾರ್ಥಿಗಳ ಪರೀಕ್ಷೆಯ ತಯಾರಿ ಹೇಗಿದೆ, ಈ ರೀತಿಯಾಗಿ ಮಾತ್ರ ಬೋಧಕರು ವಿಚಾರ ಮಾಡುತ್ತಿರುತ್ತಾರೆ ವಿನಃ, ಭಾಷೆಯ ಕುರಿತು ಗಮನ ಹರಿಸುವುದಿಲ್ಲ. ಇದಕ್ಕೆ ಕಾರಣ ಹೊಸ ಬೋಧನಾ ಪದ್ಧತಿ ಕೇವಲ ಪರೀಕ್ಷೆ ದೃಷ್ಟಿಯಿಂದ ಕಲಿಕಾರ್ಥಿಗಳಿಗೆ ಕಲಿಸುವುದಾಗಿದೆ. ಅವರಲ್ಲಿನ ಸಮಸ್ಯೆಯನ್ನು ಗುರುತಿಸಿ ಬೋಧಿಸಲು ಆಗುತ್ತಿಲ್ಲ.

ಆದ್ದರಿಂದ ನೂತನ ಬೋಧನಾ ಕ್ರಮದಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಸ್ಪಷ್ಟ ಓದು ಶುದ್ಧ ಬರಹಕ್ಕೆ ಹೆಚ್ಚು ಒತ್ತು ನೀಡುವಂತಹ ಬೋಧನಾ ಕ್ರಮ ಜಾರಿಯಾಗಬೇಕಾಗಿದೆ. ಅಂದಾಗ ಮಾತ್ರ ಓದುಗಾರಿಕೆ ಮತ್ತು ಬರವಣಿಗೆಯಲ್ಲಿನ ಸಮಸ್ಯೆ ನಿವಾರಿಸಲು ಸಾಧ್ಯವಾಗುತ್ತದೆ.

ಹೀಗಾಗಿ ಕಲಿಕಾರ್ಥಿಗಳು ಓದುವುದಕ್ಕೆ ಮತ್ತು ಬರೆಯುವುದಕ್ಕಿಂತ ಹೆಚ್ಚಿನ ಸಮಯವನ್ನು ಚಟುವಟಿಕೆಗಳನ್ನು ಮಾಡುವುದಕ್ಕೆ ಮೀಸಲಿಡುತ್ತಾರೆ. ನಾವು ಚಟುವಟಿಕೆ ಮಾಡಿಕೊಡದಿದ್ದರೆ ಬೋಧಕರು ನಮಗೆ ೨೫ ಅಂಕಗಳು ಕೊಡುವುದಿಲ್ಲ ಎಂಬ ಭಯದಲ್ಲಿಯೇ ಕಲಿಕಾರ್ಥಿಗಳು ಇಡಿ ವರ್ಷ ಕಳೆಯುವಂತಹ ಪರಿಸ್ಥಿತಿ ಎದುರಾಗಿದೆ.

ಇಂತಹ ಭಯದ ಪರಿಸ್ಥಿತಿಯಿಂದ ಕಲಿಕಾರ್ಥಿಯು ಮುಕ್ತನಾಗಬೇಕು ಎಂದರೆ ಮತ್ತೇ ಹಳೆಯ ಪರೀಕ್ಷಾ ಪದ್ಧತಿ ಅಂದರೆ ೧೨೫ ಅಂಕಗಳಿಗೆ ಬರೆಯುವ ಲಿಖಿತ ಪರೀಕ್ಷೆ ಜಾರಿಯಾಗಬೇಕು. ಚಟುವಟಿಕೆಯಾಧಾರಿತ ಬೋಧನಾ ಪದ್ಧತಿಯನ್ನು ಕೈಬಿಡಬೇಕು. ಅದರ ಬದಲಿಗೆ ಹಳೆಯ ಪದ್ಧತಿಯನ್ನೇ ಸ್ವಲ್ಪ ಬದಲಾವಣೆ ಮಾಡಿ ಕಲಿಕಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ಬೋಧಿಸಬೇಕು. ಆ ಮೂರು ಗುಂಪುಗಳು

* ಒಂದನೆ ಗುಂಪು ಓದು ಬರಹ ಬರುವಂತಹ ಕಲಿಕಾರ್ಥಿಗಳು
* ಎರಡನೆ ಗುಂಪು ಓದು ಬರಹ ಸ್ವಲ್ಪ ಬರುವಂತವರು
* ಮೂರನೇ ಗುಂಪು ಓದು ಬರಹ ಪೂರ್ತಿಯಾಗಿ ಬರದೆ ಇರುವವರು.

* **ಒಂದನೆ ಗುಂಪು** : ಈ ಗುಂಪಿನಲ್ಲಿ ಕಲಿಕಾರ್ಥಿಗಳು, ಓದುಗಾರಿಕೆ ಮತ್ತು ಬರವಣಿಗೆ ಎರಡರಲ್ಲಿಯೂ ಕಲಿಕೆಯನ್ನು ಸಾಧಿಸಿರುತ್ತಾರೆ. ಈ ಕಲಿಕಾರ್ಥಿಗಳೂ ಹೆಚ್ಚಾಗಿ ಶಾಲೆ ತಪ್ಪಿಸುವುದಿಲ್ಲ. ಇಂತಹ ಕಲಿಕಾರ್ಥಿಗಳಿಗೆ ಬೋಧಕರು ಮಾಡಬೇಕಾದದ್ದು ಇಷ್ಟೆ, ಭಾಷೆಯನ್ನು ಸ್ಪಷ್ಟವಾಗಿ ಅರ್ಥೈಸಿ ಹೇಳುವುದು, ಭಾಷಾ ವೈವಿಧ್ಯತೆಯನ್ನು ಪರಿಚಯಿಸುವುದು, ಬರವಣಿಗೆ ಕ್ರಮದಲ್ಲಿ ವಾಕ್ಯದ ಸ್ಪಷ್ಟತೆಯನ್ನು ಗಮನಿಸಿ ವ್ಯಾಕರಣ ಹಳೆಗನ್ನಡ ಮಾದರಿಯನ್ನು ಬೋಧಿಸುವುದು.

* **ಎರಡನೇ ಗುಂಪು** : ಈ ಗುಂಪಿನಲ್ಲಿ ಕಲಿಕಾರ್ಥಿಗಳಿಗೆ ಓದುವುದು ಮತ್ತು ಬರವಣಿಗೆ ಕ್ರಮದಲ್ಲಿ ಸ್ವಲ್ಪ ಸಮಸ್ಯೆಯನ್ನು ಎದುರಿಸುತ್ತಿರುತ್ತಾರೆ. ಇಂತಹ ಕಲಿಕಾರ್ಥಿಗಳಿಗಾಗಿ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳಬೇಕು. ಈ ಕ್ರಿಯಾ ಸಂಶೋಧನೆಯಲ್ಲಿ ಮೊದಲು ಕಲಿಕಾರ್ಥಿಗಳಲ್ಲಿರುವ ಸಮಸ್ಯೆಯನ್ನು ಗುರುತಿಸಿಕೊಂಡು, ನಂತರ ಸಮಸ್ಯೆಯನ್ನು ವಿಶ್ಲೇಷಣೆಗೆ ಒಳಪಡಿಸಬೇಕು. ನಂತರ ಸಮಸ್ಯೆಗೆ ಕಾರಣವನ್ನು ಗುರುತಿಸಬೇಕು. ಎಂತಹ ವರ್ಗದ ಕಲಿಕಾರ್ಥಿಗಳು ಭಾಷಾ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ? ಮತ್ತು ಏಕೆ? ಎಂಬುದನ್ನು ಗುರುತಿಸಿ ತದನಂತರ ಬೋಧಕರು ಕಲಿಕಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಅವರಿಗೆ ಅರ್ಥವಾಗುವ ರೀತಿಯಲ್ಲಿ ಬೋಧಿಸುವುದು ಇಂದಿನ ಬೋಧಕರ ಕರ್ತವ್ಯವಾಗಿದೆ.

ಟಿಪ್ಪಣಿ:

("ಕ್ರಿಯಾ ಸಂಶೋಧನೆಯು ನಮ್ಮ ಶಿಕ್ಷಕರಿಗೆ ತರಗತಿಯಲ್ಲಿ ಎದುರಿಸಬಹುದಾದ ಸಮಸ್ಯೆಗಳಿಗೆ ತಾವೇ ಪರಿಹಾರ ಹುಡಿಕಿಕೊಳ್ಳಲು ಸೂಕ್ಷ್ಮವಾದ ಕಾರ್ಯತಂತ್ರವಾಗಿದೆ. ಬದಲಾಗುತ್ತಿರುವ ವಿದ್ಯಾಮಾನಗಳಿಗೆ ಅನುಗುಣವಾಗಿ ಆಯಾ ತರಗತಿಯ ಸನ್ನಿವೇಶ ಮಕ್ಕಳ ಮಾನಸಿಕ ಸಾಮರ್ಥ್ಯಗಳಿಗೆ ಪೂರಕವಾಗಿ ಬೋಧನೆಯನ್ನು ನಿರ್ವಹಿಸಬೇಕಾಗುತ್ತದೆ. ಕಾರಣ ಶಿಕ್ಷಕರು ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಕಂಡುಬರುವ ಸಮಸ್ಯೆಗಳನ್ನು ಗುರುತಿಸಿ, ಆವಿಷ್ಕೃತ ಆಚರಣೆಗಳ ಮೂಲಕ ಅವುಗಳ ನಿವಾರಣೆಗೆ ಮುಂದಾಗಬೇಕಾಗುತ್ತದೆ. ಇಂತಹ ಕ್ರಮಬದ್ಧ ಪ್ರಯತ್ನದ ಮೂಲಕ ತಮ್ಮ ವೃತ್ತಿಪರತೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಸಹಕರಿಸುವ ವಿಧಾನದ ಇನ್ನೊಂದು ಹೆಸರೇ ಕ್ರಿಯಾ ಸಂಶೋಧನೆ.) (ಕ್ರಿಯಾ ಸಂಶೋಧನೆ ಮಾರ್ಗದರ್ಶಿ ಡಿ.ಎಸ್.ಇ.ಆರ್.ಟಿ. ೨೦೧೫-೧೬ ಪು.ಸಂ.೧) ಎಂದು ಶಿಕ್ಷಣಾಧಿಕಾರಿಗಳು ಮತ್ತು ವಿಷಯ ಸಂಪನ್ಮೂಲ ಅಧಿಕಾರಿಗಳು ಕನ್ನಡ ಭಾಷಾ ಬೋಧನಾ ತರಬೇತಿಯಲ್ಲಿ ಬೋಧಕರಿಗೆ ಈ ರೀತಿ ಸಲಹೆಯನ್ನು ನೀಡಿದ್ದಾರೆ. ಇಲ್ಲಿಯವರೆಗೆ ಕಲಿಕಾರ್ಥಿಗಳು ಏನು ಕಲಿತಿದ್ದಾರೆ ಮತ್ತು ಹೇಗೆ ಕಲಿತಿದ್ದಾರೆ ಎನ್ನುವುದಕ್ಕಿಂತ ಕಂಡುಕೊಳ್ಳಿ ಎಂದಿದ್ದಾರೆ. (ಈ ಅಂಶವನ್ನು ೨೦೧೫-೧೬ನೇ ಸಾಲಿನಲ್ಲಿ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿ.ಇ.ಟಿ) ಕಲಬುರಗಿಯಲ್ಲಿ ನಡೆದ ತರಬೇತಿಯಲ್ಲಿ ಚರ್ಚೆಗೊಂಡ ವಿಷಯವಾಗಿದೆ.

ಪ್ರಸ್ತುತದಲ್ಲಿರುವಂತಹ ಬೋಧನಾ ವಿಶೇಷತೆ ಎಂದರೆ 'ಸ್ಪಷ್ಟ ಓದು ಶುದ್ಧಬರಹ' ೨೦೧೨ರ ಶೈಕ್ಷಣಿಕೆ ಯೋಜನೆ ಇದಾಗಿದೆ. ಸ್ಪಷ್ಟ ಓದು ಶುದ್ಧಬರಹವೆಂದರೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಟ ಕಲಿಕಾ ಹಂತ ತಲುಪಿರಬೇಕು ಅಂದರೆ ಸ್ಪಷ್ಟವಾಗಿ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರಲೇಬೇಕು ಎನ್ನುವ ಯೋಜನೆ ಇದಾಗಿದೆ. ಆದರೆ ೨೦೧೬-೧೭ನೇ ಸಾಲಿನ ವರೆಗೂ ಈ ಯೋಜನೆ ಪೂರ್ಣಗೊಳ್ಳದ ಕಾರಣ ಇದನ್ನೆ ಪರಿಸ್ಕೃತಗೊಂಡು 'ಪಡೇ ಭಾರತ್ ಬಡೇ ಭಾರತ್' ಎಂದು ಕರೆಯಲಾಗಿದೆ.

[illegible]

ಈ ಯೋಜನೆಯು ಕಲಿಕೆಯಲ್ಲಿ ಹಿಂದುಳಿದ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪ್ರತ್ಯೇಕವಾಗಿ ಗುರುತಿಸಿ ಪ್ರತಿತಿಂಗಳು ಆ ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯವನ್ನು ಹಂತ ಹಂತವಾಗಿ ಗುರುತಿಸಬೇಕು. ಈ ಯೋಜನೆಗೆ ಮೇಲ್ವಿಚಾರಕರಾಗಿ ಸಿ.ಆರ್.ಪಿ/ಬಿ.ಆರ್.ಪಿ, ಮತ್ತು ಬಿ.ಆರ್.ಸಿ/ಬಿ.ಇ.ಓ ಗಳಾಗಿರುತ್ತಾರೆ. ಈ ಯೋಜನೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆರಡಕ್ಕೂ ಸಂಬಂಧಿಸಿದ್ದಾಗಿದೆ.

(ಸಿ.ಆರ್.ಪಿ – ಸಮೋಹ ಸಂಪನ್ಮೂಲ ವ್ಯಕ್ತಿ

ಬಿ.ಆರ್.ಪಿ. – ಕ್ಷೇತ್ರ ಸಂಪನ್ಮೂಲ ವ್ಯಕ್ತಿ

ಬಿ.ಆರ್.ಸಿ. – ಕ್ಷೇತ್ರ ಸಮನ್ವಯಾಧಿಕಾರಿ

ಬಿ.ಇ.ಓ. – ಕ್ಷೇತ್ರ ಶಿಕ್ಷಣಾಧಿಕಾರಿ)

* **ಮೂರನೆ ಗುಂಪು :** ಈ ಮೂರನೆ ಗುಂಪ್ಪನ್ನು ಗಮನಿಸುವುದಾದರೆ ಇಲ್ಲಿಯ ಕಲಿಕಾರ್ಥಿಗಳು ಎಂಟು ವರ್ಷಗಳ ಕಾಲ ಕನ್ನಡ ಭಾಷೆಯ ವರ್ಣಮಾಲೆಯನ್ನು ಕಲಿತಿದ್ದರೂ ಸಹ ೮ನೇ ತರಗತಿಗೆ ಬಂದರೂ ವರ್ಣಮಾಲೆ ಓದುವುದಕ್ಕೆ ಬರೆಯುವುದಕ್ಕೆ ಬರುವುದಿಲ್ಲ. ಇಲ್ಲಿಯೂ ಸಹ ಕ್ರಿಯಾ ಸಂಶೋಧನೆಯ ಮೂಲಕ ಸಮಸ್ಯೆಯನ್ನು ಗುರುತಿಸಿಕೊಂಡು ಇಂಥಾ ಕಲಿಕಾರ್ಥಿಗಳಿಗೆ ಓದು–ಬರಹದಲ್ಲಿ ಸಮಸ್ಯೆ ಎದುರಿಸುತ್ತಿರುವುದಕ್ಕೆ ಕಾರಣವನ್ನು ತಿಳಿದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಈ ರೀತಿಯಾಗಿ ಕನ್ನಡ ಭಾಷಾ ಬೋಧಕರು ಒಂದೇ ತರಗತಿಯಲ್ಲಿ ಮೂರು ರೀತಿಯಾಗಿ ಬೋಧಿಸಬೇಕಾಗಿರುವುದು ಬೋಧಕರ ಇಂದಿನ ಸ್ಥಿತಿಯಾಗಿದೆ.

ಈ ರೀತಿ ಮಾಡಿ ಕಲಿಕಾರ್ಥಿಗಳಿಗೆ ಬೋಧಿಸಿದರೆ ಕನ್ನಡ ಭಾಷೆಯ ಕಲಿಕೆಯಲ್ಲಿರುವ ಸಮಸ್ಯೆಯನ್ನು ಹಂತ ಹಂತವಾಗಿ ನಿವಾರಿಸಲು ಸಾಧ್ಯವಾಗುತ್ತದೆ. ಇಲ್ಲವಾದರೆ ಇದೆ ಚಟುವಟಿಕೆಯಾಧಾರಿತ ಬೋಧನಾ ಕ್ರಮ ಮುಂದುವರೆಸಿದರೆ ಮುದೊಂದು ದಿನ ಇನ್ನೂ ಹೆಚ್ಚಿನ ಕಲಿಕಾ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಈ ಕಲಿಕೆಯಲ್ಲಿ ಕಲಿಕಾರ್ಥಿಯು ಚಟುವಟಿಕೆಯಲ್ಲಿಯೇ ಹೆಚ್ಚಿನ ಆಸಕ್ತಿ ತೋರುವುದರಿಂದ ಬರವಣಿಗೆ ಮತ್ತು ಓದುನ ಕಡೆ ಹೆಚ್ಚು ಗಮನ ಕೊಡುವುದಿಲ್ಲ. ಆದ್ದರಿಂದ ನೂತನ ಬೋಧನಾ ಕ್ರಮದಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಸ್ಪಷ್ಟ ಓದು ಶುದ್ಧಬರಹಕ್ಕೆ ಹೆಚ್ಚು ಒತ್ತು ನೀಡುವಂತಹ ಬೋಧನಾ ಕ್ರಮ ಜಾರಿಯಾಗಬೇಕಾಗಿದೆ. ಅಂದಾಗ ಮಾತ್ರ ಓದುಗಾರಿಕೆ ಮತ್ತು ಬರವಣಿಗೆಯಲ್ಲಿನ ಸಮಸ್ಯೆ ನಿವಾರಿಸಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ಭಾರತದಲ್ಲಿರುವ ಅನಕ್ಷರತೆಯನ್ನು ತೊಲಗಿಸುವುದಕ್ಕಾಗಿ ಹೊಸ ಸಾಕ್ಷರತಾ ಯೋಜನೆಯನ್ನು ಜಾರಿಗೆ ತರಬೇಕಾಗುತ್ತದೆ. ಅಂದರೆ 'ಶಾಲೆ ಕಲಿತ ಅನಕ್ಷರಸ್ತರಿಗಾಗಿ ಸಾಕ್ಷರತಾ ಯೋಜನೆ' ಎಂದು ಆ ಯೋಜನೆಗೆ ಹೆಸರಿಡುವ ಪರಿಸ್ಥಿತಿ ಎದುರಾಗುತ್ತದೆ.

ಓಗೆ ಬೋಧನೆಯು ಒಂದು ವೈಶಿಷ್ಟ್ಯತೆಯಿಂದ ಕೂಡಿದು ಇದರ ಸ್ವರೂಪವು ಪ್ರೌಢ ಶಿಕ್ಷಣದ ಬೋಧನಾ ಹಂತಕ್ಕೆ ಬರುವಷ್ಟರಲ್ಲಿ ಕಲಿಕಾರ್ಥಿಯೂ ಮೂರು ರೀತಿಯ ಕಲಿಕಾ ಹಂತ ಮುಗಿಸಿ

[illegible]

ಬಂದಿರುತ್ತಾನೆ. ಪ್ರೌಢತೆಯನ್ನು ಪಡೆದ ಕಲಿಕಾರ್ಥಿಗಳಿಗೆ ಪ್ರೌಢ ಶಿಕ್ಷಣದ ಬೋಧನೆಯಲ್ಲಿ ಒಂದು ವಿಶೇಷತೆ ಎನಿಸುತ್ತದೆ. ಈ ವಿಶೇಷತೆ ಕಂಡುಬರುವುದಕ್ಕೆ ಕಾರಣ ಸಮಕಾಲಿನ ಸಂದರ್ಭಕ್ಕೆ ತಕ್ಕಂತೆ ಬೋಧಕರಿಗೆ ನೀಡುವ ತರಬೇತಿಗಳು ಬೋಧಕರಿಗೆ ಹೊಸ ಚೈತನ್ಯ ತಂದುಕೊಡುತ್ತದೆ. ಆದ್ದರಿಂದ ವಿವಿಧ ಬೋಧನಾ ಪ್ರಕಾರಗಳಿಂದ ಕಲಿಕಾರ್ಥಿಗಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡಿಸುವಂತೆ ಬೋಧಿಸುತ್ತಾರೆ. ಈ ರೀತಿ ಕಲಿಕೆಯಲ್ಲಿ ಆಸಕ್ತಿ ಬೆಳೆಸುವಂತೆ ಮಾಡುವ ಬೋಧನೆ ಕನ್ನಡ ಭಾಷಾ ಬೋಧನೆಯ ವಿಶೇಷತೆ ಎಂದು ಹೇಳಬಹುದು.

ಟಿಪ್ಪಣಿಗಳು

೧. ಗಂಗಾಧರಪ್ಪ ಎನ್.ಆರ್, ೨೦೦೯, ***ಶಿಕ್ಷಣದಲ್ಲಿ ಪ್ರಕ್ರಿಯೆಗಳೂ ಹಾಗೂ ಒಲವುಗಳು,*** ರೇಖಾ ಪ್ರಕಾಶನ ದಾವಣಗೆರೆ, ಪು.ಸಂ. ३४.

೨. ಅದೇ ಪುಸ್ತಕ ಪು.ಸಂ. ३४

೩. ಸಂತೋಷಕುಮಾರಿ ಎಸ್ ಪಲ್ಲೇದ, ೨೦೦೭, ಕ.ಮ.ವಿ.ವಿ. ವಿಜಯಪುರ, ***ಮಹಿಳಾ ಪ್ರೌಢ ಶಾಲಾ ಶಿಕ್ಷಕಿಯರ ಬೋಧನಾ ಪರಿಣಾಮಕಾರಿತ್ವ ಕುರಿತು ಒಂದು ಅಧ್ಯಯನ,*** ಎಂ.ಇಡಿ ಕಿರುಪ್ರಭಂದ ಪು.ಸಂ. ೨೦

೪. ಉಮಾಕಾಂತ ಟಿ.ಗೌಡ, ೨೦೦೬, ***ಇದು ನಮ್ಮ ಕರ್ನಾಟಕ/ಕರ್ನಾಟಕದಲ್ಲಿ ಆಧುನಿಕ ಶಿಕ್ಷಣ,*** ಪು.ಸಂ.೨೭೦.

೫. ಮಹಾಬಲೇಶ್ವರರಾವ್, ೨೦೧೧, ***ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ,*** ಪು.ಸಂ. ೨೭೦.

೬. ಪದ್ಮಜಾ, www.teachersofindia.org, ***ಪ್ರಾಥಮಿಕ ಶಾಲೆಗಳಲ್ಲಿ ನಲಿಕಲಿ.***

೭. ತಿರುಮಲೇಶ್ ಕೆ.ವಿ, ೧-೬-೨೦೧೧, ಪ್ರಜಾವಾಣಿ ಪತ್ರಿಕೆ ಅಂಕಣ ಬರಹ, ***ಭಾಷಾವಲೋಕನ-೭,*** ಪು.ಸಂ. ೦೬.

೮. ಅನಸೂಯ ವಿ.ಪರಗಿ, ೨೦೦೭, ***ಮಾತೃಭಾಷೆ ಕನ್ನಡ ತತ್ತ್ವ ಮತ್ತು ಬೋಧನಾ ಮಾರ್ಗ,*** ಪು.ಸಂ. ೧೧೨-೧೫೮.

* * *

[illegible]

ಅಧ್ಯಾಯ : ನಾಲ್ಕು

ಭಾಷಾ ಬೋಧನೆಯಲ್ಲಿ ಬೋಧಕರು ಎದುರಿಸುವ ತೊಡಕುಗಳು

೪.೧. ಭಾಷೆಯನ್ನು ಉಚ್ಚರಿಸುವಾಗಿನ ತೊಡಕುಗಳು

೪.೨. ಬರವಣಿಗೆಯಲ್ಲಿನ ತೊಡಕುಗಳು

೪.೩. ಬೋಧಕರ ಹೇಳಿಕೆಯಲ್ಲಿ ಕಲಿಕಾರ್ಥಿ ಕೇಂದ್ರಿತ ಸಮಸ್ಯೆಗಳು

೪.೪. ಬೋಧಕ ಕೇಂದ್ರಿತ ಸಮಸ್ಯೆ

೪.೫. ಕನ್ನಡ ಲಿಪಿ ಕುರಿತು ಬೋಧಕರಲ್ಲಿರುವ ತೊಡಕುಗಳು

೪.೬. ಬೋಧನಾ ಸಂಪನ್ಮೂಲದ ಸಮಸ್ಯೆ

೪.೭. ಕಲಿಕೆ ಮತ್ತು ಬೋಧನೆಯಲ್ಲಿರುವ ತಾತ್ವೀಕ ಮತ್ತು ಪ್ರಯೋಗಿಕ ಸಮಸ್ಯೆಗಳು

೪.೮. ಬೋಧಕರಿಗೆ ಕಲಿಸುವಿಕೆ ಸಂದರ್ಭಗಳಲ್ಲಿ ಎದುರಾಗುವ ಸವಾಲುಗಳು

೪.೯. ಬೋಧಕರು ಮೌಲ್ಯಮಾಪನದಲ್ಲಿ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು

ಅಧ್ಯಾಯ : ನಾಲ್ಕು

ಭಾಷಾ ಬೋಧನೆಯಲ್ಲಿ ಬೋಧಕರು ಎದುರಿಸುವ ತೊಡಕುಗಳು

"ಸಂವಹನ ಸಾಧನವೆನಿಸಿದ ಭಾಷೆಯ ಬೋಧನೆ-ಕಲಿಕೆ ಒಂದು ಶಾಸ್ತ್ರವಾಗಿ ಬೆಳೆದಿದೆ. ಶಿಕ್ಷಣ ಶಾಸ್ತ್ರದ ಹಿನ್ನೆಲೆಯಿಲ್ಲದೆ ಕೇವಲ ತಮ್ಮ ಅಂತಃ ಪ್ರೇರಣೆಯನ್ನು ನೆಚ್ಚಿಕೊಂಡು ಸಾಹಿತ್ಯವನ್ನು ಬೋಧಿಸುವ ಅನೇಕ ಪ್ರಾಧ್ಯಾಪಕರು ಭಾಷಾ ಬೋಧನಾಶಾಸ್ತ್ರ ಹಾಗೂ ಭಾಷಾ ಬೋಧನಾ ಶಾಸ್ತ್ರಜ್ಞರನ್ನು ಕಂಡು ಮೂಗು ಮುರಿಯಬಹುದು. ಯಾರು ಎಷ್ಟೇ ಮೂಗು ಮುರಿಯಲಿ. ಭಾಷಾ ಬೋಧನ ಕ್ಷೇತ್ರ ಕಳೆದ ನಾಲ್ಕೈದು ದಶಕಗಳಲ್ಲಿ ಸಾಕಷ್ಟು ವಿಸ್ತಾರವಾಗಿ ಬೆಳೆದಿದೆ. ಜಗತ್ತಿನಾದ್ಯಾಂತ ಶಾಲೆ ಕಾಲೇಜುಗಳಲ್ಲಿ ವಿವಿಧ ಭಾಷೆಗಳನ್ನು ಕಲಿಸುವ ಭಾಷಾ ಶಿಕ್ಷಕರು ಈ ವಾಸ್ತವಕ್ಕೆ ಕುರುಡಾಗುವಂತಿಲ್ಲ. ಭಾಷೆಯನ್ನು ವ್ಯವಸ್ಥಿತವಾಗಿ ಪರಿಗಣಿಸಬೇಕು."[೧]

'ಭಾಷೆಯನ್ನು ಕಲಿಸುವ ಶಿಕ್ಷಕರಿಗೆ ತಾವು ಕಲಿಸುವ ಭಾಷೆಯ ಹಿನ್ನೆಲೆ, ಆ ಭಾಷೆಯ ಜಾಯಮಾನ, ಅದರ ವಿಶಿಷ್ಟತೆ ಚೆನ್ನಾಗಿ ತಿಳಿದಿರಬೇಕು. ಜೊತೆಗೆ ತಮ್ಮ ವಿದ್ಯಾರ್ಥಿಗಳ ಕೌಟುಂಬಿಕ ಹಿನ್ನೆಲೆ, ಅವರು ಭಾಷೆಯನ್ನು ಕಲಿಯುವಾಗ ಎದುರಿಸುವ ಸಮಸ್ಯೆಗಳು ಮತ್ತು ಬೋಧನೆಯ ತತ್ವಗಳ ಪರಿಚಯವಿರಬೇಕು'.[೨]

'ಭಾಷೆ ಎಂದರೆ ಲಿಪಿಸಹಿತವಾದದ್ದು ಎಂಬುದು ಹಲವರ ಭಾವನೆ. ಇದು ಸರಿಯಲ್ಲ. ಲಿಪಿರಹಿತವಾಗಿ ಎಷ್ಟೋ ಭಾಷೆಗಳು ಈ ಜಗತ್ತಿನಲ್ಲಿವೆ. ಭಾಷೆ ಎಂದರೆ ಮೂಲತಃ ಮಾತು, ಆಡುನುಡಿ. ಆದುದರಿಂದ ಬರಹಕ್ಕಿಂತ ಮೊದಲು ಮಕ್ಕಳಿಗೆ ಚೆನ್ನಾಗಿ ಮಾತು ಕಲಿಸಬೇಕು. ಮಾತು ಕಲಿಯಬೇಕಾದರೆ ಅರ್ಥಸಹಿತ ಉದ್ದೇಶಪೂರ್ವಕವಾದ ಆಲಿಸುವಿಕೆಯನ್ನು ಬೋಧಕರು ಕಲಿಸಬೇಕು. ಏಕೆಂದರೆ ಭಾಷೆ ಕೇಳಿ ಕಲಿತ ಕ್ರಿಯೆ. ಅದು ಸಹಜ ಅಥವಾ ದೈವದತ್ತವಲ್ಲ. ಪರಿಸರದಲ್ಲಿರುವ ಒಂದು ಭಾಷೆಯ ಧ್ವನಿಗಳನ್ನು ಗಮನಕೊಟ್ಟು ಕೇಳುತ್ತಾ ಹೋದರೆ ಭಾಷಾ ಕಲಿಕೆ ಸುಲಭವಾಗುತ್ತದೆ. ಆದ್ದರಿಂದ ನೂತನ ಬೋಧನಾ ಕ್ರಮದಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಸ್ಪಷ್ಟ ಓದು ಶುದ್ಧಬರಹಕ್ಕೆ ಹೆಚ್ಚು ಒತ್ತು ನೀಡುವಂತಹ ಬೋಧನಾ ಕ್ರಮ ಜಾರಿಯಾಗಬೇಕಾಗಿದೆ.

[illegible]

[illegible]

[illegible]

[illegible]

[illegible]

[illegible]

[illegible]

೨೦೦೯-೧೦ನೇ ಸಾಲಿನಲ್ಲಿ ಸರಕಾರವು ಸ್ಪಷ್ಟ ಓದು ಶುದ್ಧ ಬರಹ ಪ್ರತಿಯೋಬ್ಬರಿಗೂ ಬರಬೇಕು ಎಂದು ತಿಳಿಸಿತು. ಇಂದಿಗೂ ಅದು ಸಮಸ್ಯೆಯಾಗಿಯೇ ಉಳಿದಿದೆ. ಇದಕ್ಕೆ ಕಾರಣ ಕಲಿಕಾರ್ಥಿಗಳೋ ಬೋಧಕರೋ, ಸರಕಾರವೋ, ಪಠ್ಯಪುಸ್ತಕವೋ, ಎಂಬುದನ್ನು ಗಮನಿಸಬೇಕು. ಅಂದಾಗ ಮಾತ್ರ ಓದುಗಾರಿಕೆ ಮತ್ತು ಬರವಣಿಗೆಯಲ್ಲಿನ ಸಮಸ್ಯೆ ನಿವಾರಿಸಲು ಸಾಧ್ಯವಾಗುತ್ತದೆ ಕಲಿಕೆ ಸುಲಭವಾಗುತ್ತದೆ. ಮಾತಿನ ಏರಿಳಿತ ಸ್ವರಭಾರ, ಕಾಕು, ಲಯ, ಒತ್ತು ಮುಂತಾದುವನ್ನು ಲಿಪಿಗಳಲ್ಲಿ ಪ್ರತಿನಿಧಿಸಲು ಸಾಧ್ಯವಿಲ್ಲ. ಇದೇ ಮಾತು ಸ್ವಲ್ಪಮಟ್ಟಿಗೆ ಓದಿಗೂ ಅನ್ವಯವಾಗುತ್ತದೆ. ಆದುದರಿಂದ ಮಾತು ಕಲಿತ ಮೇಲೆ ಓದು ಬರಹ ಆರಂಭಿಸಬೇಕು'.[೩]

ಈ ಅಂಶಗಳನ್ನು ಗಮನಿಸಿದಾಗ ಬೋಧಕರಲ್ಲಿಯೂ ಭಾಷಾ ಬೋಧನೆಯು ತೊಡಕಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಯಂಕಯ್ಯ ಇನಾಮದಾರ್ ರವರು ಮದರಕಿ ಮತ್ತು ಮುಡಬುಳ ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಿದಾಗ 'ಮದರಕಿ' ಶಾಲೆಯ ಇಬ್ಬರು ಬೋಧಕರು, ಮುಡಬುಳ ಶಾಲೆಯ ಒಬ್ಬರು ಬೋಧಕರಿಗೆ ಉಕ್ತಲೇಖನ ಬರೆಸಿದಾಗ ಅವರ ಬರವಣಿಗೆಯಲ್ಲಿ ಸುಮಾರು ಪದಗಳನ್ನು ತಪ್ಪಾಗಿ ಬರೆದಿರುವುದರಿಂದ ಆ ಮೂರು ಜನ ಬೋಧಕರ ಒಂದು ವೇತನ ಬಡ್ತಿಯನ್ನು ೨೦೧೫ರಲ್ಲಿ ಕಡಿತಗೊಳಿಸಿದರು.

ಈ ರೀತಿಯಾಗಿ ಪ್ರಾಥಮಿಕ ಶಾಲೆಯ ಬೋಧಕರಲ್ಲಿ ಬರವಣಿಗೆ ಸಮಸ್ಯೆಯಿರುವಂತೆ ಪ್ರೌಢ ಶಾಲೆಯ ಕನ್ನಡ ಭಾಷಾ ಬೋಧಕರಲ್ಲಿಯೂ ಬರವಣಿಗೆ ಮತ್ತು ಉಚ್ಚಾರಣೆಯಲ್ಲಿ ಸಮಸ್ಯೆಯಿರುವುದು ಗಮನಿಸಲಾಗಿದೆ.

ಕನ್ನಡ ಭಾಷಾ ಬೋಧಕರಲ್ಲಿನ ಬರವಣಿಗೆ ಮತ್ತು ಉಚ್ಚಾರಣೆಯಲ್ಲಿನ ಸಮಸ್ಯೆಯನ್ನು ಗುರುತಿಸುವುದಕ್ಕೆ ಬೋಧಕರಿಂದ ಬರವಣಿಗೆಯ ರೂಪಗಳನ್ನು ಸಂಗ್ರಹಿಸಿಕೊಳ್ಳಲಾಯಿತು. ಉಚ್ಚಾರಣೆಯ ಸಮಸ್ಯೆಯನ್ನು ಗಮನಿಸುವುದಕ್ಕಾಗಿ ಕನ್ನಡ ಭಾಷಾ ಬೋಧಕರು ತರಬೇತಿಗಳಲ್ಲಿ ನೀಡುವ ಮಾದರಿ ಪಾಠಗಳು, ಪ್ರತಿ ವರ್ಷ ಪಠ್ಯಾಧಾರಿತ ರೇಡಿಯೋ ಪಾಠಗಳನ್ನು ಗಮನಿಸಿ ಬೋಧಕರಲ್ಲಿಯು ಬರವಣಿಗೆ ಮತ್ತು ಉಚ್ಚಾರಣೆಯಲ್ಲಿ ಕೆಲವೊಂದು ಸಮಸ್ಯೆ ಇರುವುದನ್ನು ಗಮನಿಸಲಾಗಿದೆ.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಬೋಧಕರ ಬರವಣಿಗೆ ಮತ್ತು ಉಚ್ಚಾರಣೆ ಸಮಸ್ಯೆ ಬೋಧಕ ಕೇಂದ್ರಿತ ಸಮಸ್ಯೆ, ಬೋಧನಾ ಸಂಪನ್ಮೂಲದ ಸಮಸ್ಯೆ ಕುರಿತಾದ ವಿಷಯಗಳ ಮಾಹಿತಿಯನ್ನು ಸಂಗ್ರಹಿಸಿ ಬೋಧಕರು ಎದುರಿಸುವ ತೊಡಕುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಕನ್ನಡ ಭಾಷೆಯ ಸಂವಹನ ವಿಧಾನದಲ್ಲಿ ಭಾಷೆಯನ್ನು ಕಲಿಸಬೇಕೆಂದು ವಾದಿಸುವ ಬೋಧಕರು ಕಲಿಕೆಯ ಸಾಮಗ್ರಿಗಳನ್ನು ಅದಕ್ಕನುಗುಣವಾಗಿಯೇ ರೂಪಿಸುತ್ತಾರೆ. ಆದರೆ ಅವರಲ್ಲಿಯು ಭಾಷೆಯ ಉಚ್ಚಾರಣೆ ಸಮಸ್ಯೆ ಇದೆ ಎಂದು ಅರಿತಿರುವುದಿಲ್ಲ. ಏಕೆಂದರೆ ಪ್ರತಿಯೊಬ್ಬರಿಗೂ ತಾವು ಮಾತನಾಡುವ

ಪದಗಳು ತಮಗೆ ಸರಿ ಎಂದೆ ಅನಿಸುತ್ತವೆ. ಆದರೆ ಅವರ ಮಾತಿನಲ್ಲಿರುವ ತೊಡಕು ಅವರ ಮಾತನ್ನು ಆಲಿಸುತ್ತಿರುವವರು ಗಮನಿಸುತ್ತಾರೆ.

ಭಾಷಾ ಬೋಧಕರು ಕನ್ನಡ ಪಾಠವನ್ನು ಬೋಧಿಸುವಾಗ ಗಟ್ಟಿ ವಾಚನ ಮಾಡಿದ ಬಳಿಕ ಅದೇ ವಿಷಯವನ್ನು ಅರ್ಥೈಸಿ ಹೇಳಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಕೆಲವೊಂದು ಪದಗಳು ತನ್ನ ಪರಿಸರ ಭಾಷೆಯಲ್ಲಿ ಯಾವ ರೀತಿಯಾಗಿ ಬಳಸುತ್ತಾರೆಯೋ ಅದೇ ರೀತಿಯಾಗಿ ತರಗತಿಯಲ್ಲಿಯು ಬಳಸುತ್ತಾರೆ. ಉದಾ:– ಸಿಂಹ–ಸಿಂವ ಹಗುರವಾದ–ಅಗುರವಾದ, ಶಿವರಾತ್ರಿ–ಸಿವರಾತ್ರಿ, ನಾಮಫಲಕ–ನಾಮಪಲಕ ಇತ್ಯಾದಿ ಪದಗಳನ್ನು ನೋಡಿ ಓದುವಾಗ ಸರಿಯಾದ ರೀತಿಯಲ್ಲಿ ಉಚ್ಚರಿಸಿದರು ಪುನಃ ಅದೇ ಪದವನ್ನು ನೋಡದೆ ಉಚ್ಚರಿಸುವಾಗ ಈ ತೊಡಕು ಬೋಧಕರಲ್ಲಿರುವುದನ್ನು ಗಮನಿಸಲಾಗಿದೆ.

ಇಂತಹ ಒದು ತೊಡಕನ್ನು ಭಾಷಿಕ ಹಿನ್ನೆಲೆಯಲ್ಲಿ ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಇಲ್ಲಿ ಎರಡು ರೀತಿಯ ಪದಗಳು ಸರಿ ಎನ್ನುವ ರೀತಿಯಲ್ಲಿ ಬಳಕೆಯಾಗುತ್ತವೆ. ಆದರೆ ಶೈಕ್ಷಣಿಕ ಕ್ರಮದ ದೃಷ್ಟಿಯಿಂದ ಯಾವ ಪದ ಗ್ರಂಥಸ್ಥ ಭಾಷೆಯಲ್ಲಿ ಬಳಕೆಯಾಗುತ್ತಿದೆಯೋ ಅದು ಸರಿಯಾದ ರೂಪವಾಗಿರುತ್ತದೆ. ಇಂತಹ ತೊಡಕನ್ನು ಎಲ್ಲಾ ಬೋಧಕರಲ್ಲಿ ಕಾಣುವುದಿಲ್ಲ. ಸಂಗ್ರಹಿಸಿದ ಮಾಹಿತಿಯ ಪ್ರಕಾರ ನೂರಕ್ಕೆ ಪ್ರತಿಶತ ಇಪ್ಪತ್ತರಷ್ಟು ಬೋಧಕರಲ್ಲಿ ಇಂತಹ ಉಚ್ಚಾರಣಾ ತೊಡಕು ಇರುವುದನ್ನು ಗಮನಿಸಲಾಗಿದೆ.

ಬೋಧಕರ ಉಚ್ಚಾರಣೆಯ ಸಮಸ್ಯೆಯನ್ನು ಗುರುತಿಸುವುದಕ್ಕಾಗಿ ಎಸ್.ಎಸ್.ಎಲ್.ಸಿ ತರಗತಿಯ ಮಕ್ಕಳಿಗಾಗಿ ಏರ್ಪಡಿಸಿದ ರೇಡಿಯೋ ಪಾಠಗಳು, ತರಬೇತಿಗಳಲ್ಲಿ ಬೋಧಕರು ಮಾಡುವ ಮಾದರಿ ಪಾಠಗಳನ್ನು ಧ್ವನಿಸುರಳಿಯ ಮೂಲಕ ದಾಖಲಿಸಿಕೊಳ್ಳಲಾಗಿದೆ.

೪.೧ ಭಾಷೆಯನ್ನು ಉಚ್ಚರಿಸುವಾಗಿನ ತೊಡಕುಗಳು

೪.೧.೧ 'ಹ' ಕಾರ ಉಚ್ಚಾರಣೆಯ ಸಮಸ್ಯೆ

ಮೂಲರೂಪ		ಉಚ್ಚರಿಸುವ ರೂಪ
ಸಿಂಹ	–	ಸಿಂವ
ಆಹಾರ	–	ಆರ
ಹಗುರವಾದ	–	ಅಗುರವಾದ
ಹೊರಟಿತ್ತು	–	ವರಟಿತ್ತು
ಮಹತ್ವ	–	ಮಅತ್ವ
ಹಾಳಾಗಲಿ	–	ಆಳಾಗಲಿ
ಹೋದ	–	ಓದ

[illegible]

ಹೊಸ	–	ವಸ
ಹುಟ್ಟಿ	–	ಉಟ್ಟಿ
ಹರಿಯುತ್ತ	–	ಅರಿಯುತ್ತ
ಸಹಾಯ	–	ಸಾಯ

ಕಾರಣ :

ಇಂತಹ 'ಹ' ಕಾರ ಉಚ್ಚಾರಣೆಯ ಸಮಸ್ಯೆಯನ್ನು ೨೦% ರಷ್ಟು ಭಾಷಾ ಭೋಧಕರಲ್ಲಿ ಕಾಣಬಹುದು.

* 'ಹ'ಕಾರ ಅಕ್ಷರವು ವ,ಆ,ಅ, ಓ,ಉ, ಈ ಅಕ್ಷರಗಳ ರೂಪದಲ್ಲಿ ಉಚ್ಚರಿಸಲ್ಪಡುತ್ತಿದೆ.
* 'ಹ'ಕಾರಾಂತ ಪದಗಳನ್ನು ಉಚ್ಚರಿಸುವಾಗ ವ,ಆ,ಅ,ಓ,ಉ ಅಕ್ಷರಗಳಾಗಿ ಉಚ್ಚರಿಸಿದರು ಅವರಿಗೆ 'ಹ'ಕಾರವಾಗಿಯೆ ಉಚ್ಚರಿಸಿದ್ಧೇವೆನಿಸಿರುವುದರಿಂದ.
* ಇಂತಹ ಸಮಸ್ಯೆ ಎದುರಿಸುತ್ತಿರುವ ಭೋಧಕರ ಪರಿಸರದಲ್ಲಿಯೂ 'ಹ'ಕಾರಾಂತ ಅಕ್ಷರಗಳ ಪದ ಬಳಕೆ ಇಲ್ಲದಿರುವುದು.
* ಅನ್ಯ ಭಾಷೆಯ ಪ್ರಭಾವವಿರುವುದರಿಂದ.

೪.೧.೨. 'ಶ'ಕಾರ ಅಕ್ಷರಗಳ ಪದ ಉಚ್ಚಾರಣೆಯ ಸಮಸ್ಯೆ

ಮೂಲರೂಪ		ಉಚ್ಚರಿಸುವ ರೂಪ
ಶಿವರಾತ್ರಿ	–	ಸಿವರಾತ್ರಿ
ಶ್ರೀಕಾಂತ	–	ಸ್ರಿಕಾಂತ
ಶೃತಿ	–	ಸುರತಿ
ಶಿಖರ	–	ಸಿಕರ
ಶುದ್ದಬಹರ	–	ಸುದ್ದಬರಹ
ಶಿರವೆತ್ತಿ	–	ಸಿರವೆತ್ತಿ
ಶೌಚಾಲಯ	–	ಸೌಚಾಲಯ
ಶಿಷ್ಟಭಾಷೆ	–	ಸಿಷ್ಟಬಾಷೆ

ಕಾರಣ :

* ಶ,ಷ,ಸ ಅಕ್ಷರಗಳು ಒಂದೆ ರೀತಿಯಲ್ಲಿ ಉಚ್ಚರಿಸಿದರು ಬೇರೆ ಬೇರೆ ಎಂದು ಅರ್ಥೈಸಿಕೊಂಡಿರುವುದು.
* 'ಶ'ಕಾರದ ಉಚ್ಚಾರಣೆಯ ತಪ್ಪನ್ನು ಮಕ್ಕಳ ಉಚ್ಚಾರಣೆಯಲ್ಲಿ ಗಮನಿಸುವ ಭೋಧಕರು ತಾವು ಹೇಗೆ ಉಚ್ಚರಿಸುತ್ತೇವೆ ಎಂದು ಗಮನಿಸದೆ ಇರುವುದು.

* ಪರಿಸರದ ಭಾಷೆಯಲ್ಲಿ 'ಶ'ಕಾರವನ್ನು 'ಸ'ಕಾರವಾಗಿ ಹೇಳುವುದು.
* ಇನ್ನೊಂದು ಅಂಶವನ್ನು ಗಮನಿಸಿದಲ್ಲಿ 'ಶ'ಕಾರವನ್ನು 'ಸ'ಕಾರವಾಗಿ ಅನುಸ್ವರ ಅಕ್ಷರ ವಿದ್ದಾಗ 'ಶ' ಅಕ್ಷರ ಬಂದರೆ ಅದನ್ನು 'ಸ'ಕಾರವಾಗಿ ಹೆಚ್ಚಾಗಿ ಉಚ್ಚರಿಸದಿರುವುದನ್ನು ಗಮನಿಸಲಾಗಿದೆ.

  ಉದಾ: ಅಂಶ, ಶಂಕ, ಅಂಕುಶ, ಇತ್ಯಾದಿ.

೪.೧.೩. ಮಹಾಪ್ರಾಣಾಕ್ಷರಗಳ ಉಚ್ಚಾರಣೆಯ ಸಮಸ್ಯೆ

ಮೂಲರೂಪ		**ಉಚ್ಚರಿಸುವ ರೂಪ**
ಭಾರವಾದ	–	ಬಾರವಾದ
ವಿಧಾನ	–	ವಿದಾನ
ಘಂಟೆ	–	ಗಂಟೆ
ಛತ್ರಿ	–	ಚತ್ರಿ
ಭಕ್ತಿ	–	ಬಕ್ತಿ
ನಾಮಫಲಕ	–	ನಾಮಪಲಕ

ಕಾರಣ :

* ಮಹಾಪ್ರಾಣ ಪದಗಳ ಉಚ್ಚರಣೆಯ ಸಮಸ್ಯೆಯು ಕಲಿಕಾರ್ಥಿಗಳಲ್ಲಿ ಮಾತ್ರವಲ್ಲದೆ ಬೋಧಕರಲ್ಲಿಯು ಕಂಡುಬರುತ್ತದೆ.
* ಮಹಾಪ್ರಾಣ ಅಕ್ಷರವನ್ನು ಉಚ್ಚರಿಸುತ್ತಿರುವ ಮನೋಭಾವನೆ ಇರುವುದು.
* ತಮ್ಮ ತಪ್ಪಿನ ಅರಿವು ಗಮನಕ್ಕೆ ಬಾರದೆ ಇರುವುದರಿಂದ.
* ಪರಿಸರ ಭಾಷೆಯಲ್ಲಿ ಮಹಾಪ್ರಾಣ ಅಕ್ಷರಗಳ ಬಳಕೆ ಇಲ್ಲದಿರುವುದರಿಂದ.

ಈ ರೀತಿಯಾಗಿ ಬೋಧಕರಲ್ಲಿ ಮಹಾಪ್ರಾಣಾಕ್ಷರಗಳ ಉಚ್ಚಾರಣೆಯ ಸಮಸ್ಯೆಯನ್ನು ಕಾಣುವಂತಾಗಿದೆ.

ಯಾವ ಧ್ವನಿ ಪದರಚನೆಗಳ ಉಚ್ಚಾರಣೆಯಲ್ಲಿ ತೊಡಕುಗಳು/ತಪ್ಪುಗಳು ಸಂಭವಿಸುತ್ತಿವೆ ಎನ್ನುವುದನ್ನು ಶಿಕ್ಷಕರು ಅಥವಾ ಕಲಿಸುವವರನ್ನು ಕೇಳಿದರೆ ಸಾಮಾನ್ಯಾಗಿ ಇಂತಹ ತಪ್ಪುಗಳು ಸಂಭವಿಸುವ ಸಂದರ್ಭಗಳು ಒಂದು ಹಂತಕ್ಕೆ ನಿರ್ದಿಷ್ಟವಾಗಿವೆ. ಮುಖ್ಯವಾಗಿ ಉಷ್ಮಧ್ವನಿಗಳ ಉಚ್ಚಾರಣೆ 'ಶ' ಕಾರದ ಬದಲಿಗೆ 'ಸ' ಕಾರ ಬಳಸುವುದು ಹಾಗೆಯೇ 'ಹ' ಕಾರದ ಬದಲಿಗೆ 'ಅ' ಕಾರ ಬಳಸುವುದು. ಮಹಾಪ್ರಾಣಯುಕ್ತ ಧ್ವನಿಗಳನ್ನು ಅಲ್ಪಪ್ರಾಣಯುಕ್ತವಾಗಿ ಉಚ್ಚರಿಸುವುದು ಬೋಧಕರು ಮತ್ತು ಕಲಿಕಾರ್ಥಿಗಳಿಬ್ಬರಲ್ಲಿಯೂ ಇಂತಹ ತೊಡಕುಗಳಿವೆ. ಕಲಿಕೆಯ ಸಮಸ್ಯೆಗಳ ಹಿಂದಿನ ತಾತ್ವಿಕ ವಿಚಾರಗಳನ್ನು ಡಾ.ಡಿ.ಎನ್. ಶಂಕರಭಟ್, ಪ್ರೊ.ಕೆ.ವಿ. ನಾರಾಯಣರಂತಹ ಭಾಷಾತಜ್ಞರು ವಿವರಿಸಿದ್ದಾರೆ.

ಮೇಲೆ ಸೂಚಿಸಿದ ಹಾಗೆ ಸಂಸ್ಕೃತ ಪದಗಳನ್ನು ಕನ್ನಡ ಬರಹಗಳಲ್ಲಿ ಬಳಸುವಾಗಲೆಲ್ಲ ಅವನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯಬೇಕು ಎಂಬುದಾಗಿ ಕನ್ನಡ ಬರಹಗಾರರು ಒಂದು ಕಟ್ಟಲೆಯನ್ನು ಮಾಡಿಕೊಂಡಿದ್ದಾರೆ. ಈ ಬರಹಗಾರರಲ್ಲಿ ಹೆಚ್ಚಿನವರೂ ಸಂಸ್ಕೃತದ ಪದಸ್ವರೂಪವನ್ನು ತಮ್ಮದಾಗಿಸಿ ಕೊಂಡಿರುವವರಾದ ಕಾರಣ, ಹೀಗೆ ಮಾಡುವುದು ಅವರಿಗೆ ಹೆಚ್ಚು ಕಷ್ಟವೆಂದೆನಿಸುವುದಿಲ್ಲ.

ಆದರೆ ಕನ್ನಡ ಬರಹಗಳನ್ನು ಬಳಸಬೇಕಾಗಿರುವ ಜನಸಾಮಾನ್ಯರ ಮಟ್ಟಿಗೆ ಇದು ಒಂದು ತುಂಬಾ ತೊಡಕಿನ ಹೊರೆಯಾಗಿದೆ ಯಾಕೆಂದರೆ ಎರವಲಾಗಿ ಪಡೆದಿರುವ ಈ ಸಂಸ್ಕೃತ ಪದಗಳನ್ನು ಉಚ್ಚರಿಸುವಾಗ ಯಾರೂ (ಮೇಲ್ವರ್ಗದ ಬರಹಗಾರರೂ) ಇಂತಹ ಕಟ್ಟಲೆಯನ್ನು ಪಾಲಿಸುವುದಿಲ್ಲ. ಅವುಗಳಲ್ಲಿ ಕಾಣಿಸುವ ಹಲವು ರೀತಿಯ ವ್ಯತ್ಯಾಸಗಳನ್ನು ಹೆಚ್ಚಿನ ಕನ್ನಡಿಗರೂ ತಮ್ಮ ಉಚ್ಚಾರಣೆಯಲ್ಲಿ ತೋರಿಸುವುದಿಲ್ಲ. ಹಾಗಾಗಿ ಹೆಚ್ಚಿನ ಕನ್ನಡಿಗರಿಗೂ ಸಂಸ್ಕೃತ ಪದಸ್ವರೂಪ ಪರಿಚಿತವಾದುದಲ್ಲ. ಕನ್ನಡ ಬರಹಗಳನ್ನು ಓದಲು ಕಲಿಯುವುದಕ್ಕಾಗಿ ಮತ್ತು ಕನ್ನಡದಲ್ಲಿ ಬರೆಯುವುದಕ್ಕಾಗಿ ಮಾತ್ರ ಅವರು ಈ ಸಂಸ್ಕೃತದ ಪದಸ್ವರೂಪವನ್ನು ತಮ್ಮದಾಗಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗಾಗಿ ಸಂಸ್ಕೃತ ಪದಗಳಲ್ಲಿ ಬರುವ ಅಲ್ಪಪ್ರಾಣ ಮಹಾಪ್ರಾಣ ವ್ಯತ್ಯಾಸ ನೂರರಲ್ಲಿ ತೊಂಬತ್ತೊಂಬತ್ತು ಮಂದಿ ಕನ್ನಡಿಗರ ಉಚ್ಚಾರಣೆಯಲ್ಲೂ ಕಾಣಿಸುವುದಿಲ್ಲ ಮುಖ್ಯಮಂತ್ರಿ ಎಂಬುದು ಎಲ್ಲರ ಉಚ್ಚಾರಣೆಯಲ್ಲೂ ಮುಕ್ಯಮಂತ್ರಿ ಎಂದಾಗುತ್ತದೆ. ಪ್ರಧಾನ ಮತ್ತು ಪ್ರದಾನಗಳು ಒಂದೇ ರೀತಿಯಾಗಿ ಕೇಳಿಸುತ್ತವೆ.

ಕೆಲವರು ವಿದ್ವಾಂಸರು ಮಾತ್ರ ಇಂತಹ ಪದಗಳಲ್ಲಿ ಬರುವ ಮಹಾಪ್ರಾಣಾಕ್ಕರಗಳನ್ನು ಸರಿಯಾಗಿ ಉಚ್ಚರಿಸುತ್ತಿರಬಹುದು; ಆದರೆ ಈ ಉಚ್ಚಾರಣೆ ಇತರರಿಗೆ ಸ್ವಲ್ಪ ವಿಚಿತ್ರವಾಗಿ ತೋರದಿರದು. ಇದಲ್ಲದೆ ಅಂತಹ ಜನರೂ ಎಲ್ಲಾ ಸಂದರ್ಬಗಳಲ್ಲೂ ಈ ರೀತಿ ಮಹಾಪ್ರಾಣಾಕ್ಕರಗಳನ್ನು ಸರಿಯಾಗಿ ಉಚ್ಚರಿಸುವುದಿಲ್ಲ; ಎಚ್ಚರದಿಂದ ಈ ಪದಗಳನ್ನು ಬಳಸುವ ಸಂದರ್ಬಗಳಲ್ಲಿ ಮಾತ್ರ ಹಾಗೆ ಉಚ್ಚರಿಸುತ್ತಾರೆ. (ಪು.ಸಂ. ೬೪–೯೫) (ಡಿ.ಎನ್. ಶಂಕರಭಟ್‌ರವರ ಬರವಣಿಗೆ ಯಥಾ ಪ್ರಕಾರ ಬರವಣಿಗೆಯಲ್ಲಿ ಬಳಸಲಾಗಿದೆ).

ಈ ರೀತಿಯಾಗಿ ಭಾಷಾತಜ್ಞರ ವಿಚಾರದಂತೆ ಕನ್ನಡ ಭಾಷಾ ಬೋಧಕರಲ್ಲಿಯೂ ಉಚ್ಚಾರಣೆ ತೊಡಕು ಇರುವುದು ಅಧ್ಯಯನದ ಮೂಲಕ ದೃಢಪಟ್ಟಿದೆ.

೪.೨. ಬರವಣಿಗೆಯಲ್ಲಿನ ಸಮಸ್ಯೆ

'ವುದು' ವನ್ನು 'ವದು' ಎಂದು ಬರೆಯುವುದು.

ಮೂಲರೂಪ		**ಬರವಣಿಗೆ ರೂಪ**
ಬರೆಯುವುದು	–	ಬರೆಯುವದು
ಇಲ್ಲದಿರುವುದು	–	ಇಲ್ಲದಿರುವದು

ಓದುವುದಿಲ್ಲ – ಓದುವದಿಲ್ಲ

ರೂಢಿಮಾಡಿಸುವುದು – ರೂಢಿಮಾಡಿಸುವದು.

ಬೋಧಕರ ಬರವಣಿಗೆಯನ್ನು ಗಮನಿಸುವುದಕ್ಕಾಗಿ ಅವರಿಗೆ ಕೇಳಿದ ಪ್ರಶ್ನೆಗಳ ಮಾದರಿಯ ಒಂದು ಪ್ರತಿಯನ್ನು ಯಥಾಪ್ರಕಾರ ಸ್ಕ್ಯಾನ್ ಮಾಡಿ ಹಾಕಲಾಗಿದೆ.

೩) ಕನ್ನಡ ಭಾಷಾ ಬೋಧಕರಿಗಾಗಿ ಪ್ರಶ್ನೇಗಳು

೧) ಭಾಷಾ ಶಿಕ್ಷಕರ ಹೆಸರು :- ಶ್ರೀ [illegible]

೨) ಬೋಧನಾ ಅನುಭವ ಎಷ್ಟು ವರ್ಷ :- [illegible]

೩) ಎಷ್ಟು ದೂರದಿಂದ ಶಾಲೆಗೆ ಬರುತ್ತಿರಾ ? :- 17.8. [illegible]

೪) ತರಗತಿವಾರು ಎಷ್ಟು ಮಕ್ಕಳಿದ್ದಾರೆ ?

ಅ) ೮ನೇ ತರಗತಿ :- 43

ಆ) ೯ನೇ ತರಗತಿ :- 42

ಇ) ೧೦ನೇ ತರಗತಿ :- 56

* ಕನ್ನಡ ಭಾಷೆಯುಳ್ಳವರು ಎಷ್ಟು ? 141

* ಕನ್ನಡೇತರ ಮಾತೃಭಾಷೆಯುಳ್ಳವರು ಎಷ್ಟು ? 17

೫) ಮಕ್ಕಳು ಸಮಸ್ಯೆ ಎದುರಿಸುತ್ತಿರುವ ಕಲಿಕೆಯಾವುದು ?

ಅ) ಆಲಿಸುವುದು ಆ) ಮಾತನಾಡುವುದು ಇ) ಓದುಗಾರಿಕೆ

ಈ) ಬರೆಯುವುದು ಉ) ಅರ್ಥಮಾಡಿಕೊಳ್ಳುವಲ್ಲಿ

೬) ಓದುಗಾರಿಕೆಯಲ್ಲಿ ಕಂಡುಬರುವ ಪ್ರಮುಖ ದೋಷಗಳಾವುವು ? ಕಾರಣ :-

[illegible]

೭) ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ದೋಷಗಳಾವುವು ? ಕಾರಣ :-

[illegible]

೮) ಅರ್ಥಮಾಡಿಕೊಳ್ಳುವಲ್ಲಿನ ಪ್ರಮುಖ ದೋಷಗಳಾವುವು ? ಕಾರಣ :-

[illegible]

೯) ಮಕ್ಕಳ ಭಾಷಾ ಕಲಿಕೆಯಲ್ಲಿ ಕಂಡುಬರುವ ಸಾಮನ್ಯ ದೋಷಗಳಾವುವು ? – [illegible]

[illegible]

೧೦) ಪರಿಣಾಮಕಾರಿ ಕನ್ನಡ ಭಾಷಾ ಕಲಿಕೆಗೆ ರಾಜ್ಯ ಸರಕಾರದ ಯೋಜನೆಗಳಾವವು?

ಕಾರಣ :

ಈ ರೀತಿಯ ಸಮಸ್ಯೆಗೆ ಸೂಕ್ತ ಕಾರಣವೆಂದರೆ‘ವುದು’ ಬರೆಯಲಿ ಅಥವಾ ‘ವದು’ ಎಂದು ಬರೆಯಲಿ ಅರ್ಥ ವ್ಯತ್ಯಾಸ ಆಗದೆ ಇರುವುದರಿಂದ ‘ವುದು’ ಮತ್ತು ‘ವದು’ ಪ್ರತ್ಯಯಗಳು ಬರವಣಿಗೆಯಲ್ಲಿ ಒಂದೇ ರೀತಿ ಬಳಕೆಯಾಗುತ್ತಿವೆ ಎಂದು ಗಮನಿಸಬಹುದು.

೪.೨.೧ ಎರಡು ಮೂರು ಪದಗಳನ್ನು ಕೂಡಿಸಿ ಬರೆಯುವುದು

ಕಠಿಣ ರೂಪ		**ಸರಳ ರೂಪ**
ಗೌರವವುಳ್ಳವರಾಗಬೇಕು	–	ಗೌರವ ಉಳ್ಳವರಾಗಬೇಕು
ಅಭಿಪ್ರೇರಣೆಯುಂಟುಮಾಡಬೇಕು	–	ಅಭಿಪ್ರೇರಣೆಯುಂಟು ಮಾಡಬೇಕು
ಶಾಂತತೆಯಿಲ್ಲದಿರುವುದು	–	ಶಾಂತತೆ ಇಲ್ಲದಿರುವುದು
ರೂಢಿಮಾಡಿಸುವುದು	–	ರೂಢಿ ಮಾಡಿಸುವುದು

ಕಾರಣ :

ಕಠಿಣ ಮತ್ತು ಸರಳ ಎರಡು ಪದ ರೂಪಗಳು ಒಂದೇ ಅರ್ಥವನ್ನು ನೀಡುವುದರಿಂದ ಬೋಧಕರು ಅದರ ಕಡೆ ಹೆಚ್ಚು ಗಮನ ಹರಿಸಿಲ್ಲ. ಆದರೆ ಕಠಿಣತೆಯುಳ್ಳ ಪದಗಳು ಉಚ್ಚರಿಸುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತವೆ. ತರಗತಿಯಲ್ಲಿ ಇಂತಹ ಪದಗಳನ್ನು ಬಳಸಿದರೆ ಕಲಿಕಾರ್ಥಿಗಳಿಗೆ ಉಚ್ಚರಿಸಲು ಸಮಸ್ಯೆಯಾಗುತ್ತದೆ.

೪.೨.೨ ‘ತಲೆ ಕಟ್ಟಿನ ಸಮಸ್ಯೆ’

ಮೂಲರೂಪ		**ಬರವಣಿಗೆ ರೂಪ**
ಯೋಜನೆ	–	ಯೂಜನೆ
ನೋಟ	–	ನೂಟ
ಬೋಧನೆ	–	ಬೂಧನೆ
ಹಳೆಗನ್ನಡ	–	ಹಳಗನ್ನಡ

ಕಾರಣ :

ಇಂತಹ ಒಂದು ತಲೆಕಟ್ಟಿನ ಸಮಸ್ಯೆಯು ಒಂದು ಪದದಲ್ಲಿ ಎರಡು ಕಡೆ ತಲೆಕಟ್ಟು ಬಂದಿದ್ದರೆ ಒಂದು ಕಡೆ ತಲೆಕಟ್ಟು ಕೊಟ್ಟು ಇನ್ನೊಂದು ಕಡೆ ಬಿಡುವುದು ಒಂದು ವೇಳೆ ಒಂದೇ ಕಡೆ ಬಂದರೆ ಅದನ್ನು ಬಿಟ್ಟು ಬರೆಯುವುದು. ಈ ರೀತಿಯ ಸಮಸ್ಯೆಯು ಕಾಣಲು ಕಾರಣವೆಂದರೆ ಅವರ ಅವಸರದ ಬರವಣಿಗೆಯೂ ಒಂದು ಕಾರಣವಾಗಿರುತ್ತದೆ. ಕೊ ಮತ್ತು ಕೂ ಎರಡು ಒಂದೇ ರೀತಿ ಕಾಣುವುದರಿಂದ ಇಂತಹ ಸಮಸ್ಯೆ ವ್ಯಕ್ತಿಗತ ನೆಲೆಯಲ್ಲಿ ಕೆಲವೊಬ್ಬರ ಬರವಣಿಗೆಯಲ್ಲಿ ಗುರುತಿಸಲಾಗಿದೆ. ಆಡು ಮಾತಿನ ಪದಬಳಕೆಯನ್ನು ಗಮನಿಸುವುದಕ್ಕಾಗಿ ಈ ಕೆಳಗಿನ ಬರವಣಿಗೆಯ ಮಾದರಿಯನ್ನು ಗಮನಿಸಲಾಗಿದೆ.

೪.೨.೩ ‘ಆಡುಮಾತಿನ ಪದ ಬಳಕೆ’

ಮೂಲರೂಪ		ಬರಹದ ರೂಪ
ಶುದ್ದ ಬರಹ	–	ಶುಬ್ಬರ
ಆಲಿಸುವಿಕೆ	–	ಆಲಿಕೆ
ಕೌಶಲ್ಯ	–	ಕೌಸಲ್ಲ
ಒತ್ತಕ್ಷರ	–	ವತ್ತಾಕ್ಷರ

ಆಡುಮಾತಿನ ಪದಬಳಕೆಯನ್ನು ಗಮನಿಸುವುದಕ್ಕಾಗಿ ಒಂದು ಮಾದರಿಯನ್ನು ಯಥಾ ಪ್ರಕಾರ ಸ್ಕ್ಯಾನ್ ಮಾಡಿ ಹಾಕಲಾಗಿದೆ.

೩) ಕನ್ನಡ ಭಾಷಾ ಬೋಧಕರಿಗಾಗಿ ಪ್ರಶ್ನೆಗಳು

೧) ಭಾಷಾ ಶಿಕ್ಷಕರ ಹೆಸರು :- [illegible]

೨) ಬೋಧನಾ ಅನುಭವ ಎಷ್ಟು ವರ್ಷ :- [illegible]

೩) ಎಷ್ಟು ದೂರದಿಂದ ಶಾಲೆಗೆ ಬರುತ್ತಿರಾ ? :- [illegible]

೪) ತರಗತಿವಾರು ಎಷ್ಟು ಮಕ್ಕಳಿದ್ದಾರೆ ?

ಅ) ೮ನೇ ತರಗತಿ :- 46

ಆ) ೯ನೇ ತರಗತಿ :- 46

ಇ) ೧೦ನೇ ತರಗತಿ :- 35

* ಕನ್ನಡ ಭಾಷೆಯುಳ್ಳವರು ಎಷ್ಟು ? 117

* ಕನ್ನಡೇತರ ಮಾತೃಭಾಷೆಯುಳ್ಳವರು ಎಷ್ಟು ? 09

೫) ಮಕ್ಕಳು ಸಮಸ್ಯೆ ಎದುರಿಸುತ್ತಿರುವ ಕಲಿಕೆಯಾವುದು ?

ಅ) ಆಲಿಸುವುದು ಆ) ಮಾತನಾಡುವುದು ಇ) ಓದುಗಾರಿಕೆ

ಈ) ಬರೆಯುವುದು ಉ) ಅರ್ಥಮಾಡಿಕೊಳ್ಳುವಲ್ಲಿ

೬) ಓದುಗಾರಿಕೆಯಲ್ಲಿ ಕಂಡುಬರುವ ಪ್ರಮುಖ ದೋಷಗಳಾವುವು ? ಕಾರಣ :- [illegible]

೭) ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ದೋಷಗಳಾವುವು ? ಕಾರಣ :- [illegible]

೮) ಅರ್ಥಮಾಡಿಕೊಳ್ಳುವಲ್ಲಿನ ಪ್ರಮುಖ ದೋಷಗಳಾವುವು ? ಕಾರಣ :- [illegible]

೯) ಮಕ್ಕಳ ಭಾಷಾ ಕಲಿಕೆಯಲ್ಲಿ ಕಂಡುಬರುವ ಸಾಮನ್ಯ ದೋಷಗಳಾವುವು ? [illegible]

೧೦) ಪರಿಣಾಮಕಾರಿ ಕನ್ನಡ ಭಾಷಾ ಕಲಿಕೆಗೆ ರಾಜ್ಯ ಸರಕಾರದ ಯೋಜನೆಗಳಾವವು?

ಈ ರೀತಿಯಾಗಿ ಆಡು ಭಾಷೆಯ ಪದಗಳನ್ನು ಕನ್ನಡ ಭಾಷಾ ಬೋಧಕರ ಬರವಣಿಗೆಯಲ್ಲಿ ಅಲ್ಲಲ್ಲಿ ಬಳಸಿರುವುದನ್ನು ಗುರುತಿಸಲಾಗಿದೆ. ಹಾಗೂ ಅನ್ಯ ಭಾಷೆಯ ಪದಗಳನ್ನು ಕನ್ನಡ ಭಾಷಾ ಬರವಣಿಗೆಯಲ್ಲಿ ಬಳಸುತ್ತಾರೆ. ಉದಾಹರಣೆಗೆ: Xerox, &, Ex, but ಇತ್ಯಾದಿ ಪದ ಬಳಕೆ ಕನ್ನಡ ಭಾಷಾ ಬೋಧಕರ ಬರವಣಿಗೆಯಲ್ಲಿ ಕಾಣುತ್ತೇವೆ.

ಇದು ಒಂದು ಸಮಸ್ಯೆ ಎನ್ನುವುದಕ್ಕಿಂತ ಪರಭಾಷೆಯ ಪ್ರಭಾವ ಕಾರಣವಾಗಿದೆ. ಹಾಗೂ ಇತ್ತೀಚಿನ ದಿನಗಳಲ್ಲಿ ಭಾಷಾ ಬೋಧಕರಲ್ಲಿ ಕನ್ನಡ ಭಾಷೆಯ ಶಬ್ದಗಳಿಗಿಂತ ಆಂಗ್ಲ ಭಾಷೆಯ ಪದಗಳ ಬಳಕೆ ಹೆಚ್ಚಾಗಿರುವುದನ್ನು ಗಮನಿಸಲಾಗಿದೆ.

೪.೨.೪ 'ಣ' ಕಾರಕ್ಕೆ 'ನ' ಕಾರ

ಮೂಲರೂಪ		**ಉಚ್ಚರಣೆ ರೂಪ**
ಉತ್ತೀರ್ಣ	–	ಉತ್ತೀರ್ನ
ಉಚ್ಚರಣೆ	–	ಉಚ್ಚಾರನೆ
ಪೂರ್ಣ	–	ಪೂರ್ನ
ಸುರಕ್ಷಣ	–	ಸುರಕ್ಷನ

ಕಾರಣ :

'ಣ' ಕಾರಾಂತ ಅನುನಾಸಿಕ ಅಕ್ಷರಕ್ಕೆ 'ನ' ಕಾರವನ್ನು ಬಳಸುವುದಕ್ಕೆ ಕಾರಣ ಎರಡು ಅನುನಾಸಿಕ ಅಕ್ಷರಗಳೆ ಆಗಿರುವುದು.

* 'ಣ' ಮತ್ತು 'ನ' ಅಕ್ಷರಗಳ ನಡುವಿನ ಸೂಕ್ಷ್ಮತೆಯನ್ನು ಗಮನಿಸದೆ ಇರುವುದು.
* ಪರಿಸರ ಭಾಷೆಯಲ್ಲಿ 'ಣ' ಕಾರವನ್ನು 'ನ' ಕಾರವಾಗಿ ಬಳಸುತ್ತಿರುವುದು.
* 'ಣ' ಕಾರವನ್ನೆ ಉಚ್ಚರಿಸುತ್ತಿರುವ ಭಾವನೆ.
* ಭಾಷೆಯೂ ನಿಂತ ನೀರಲ್ಲ, ಹರಿಯುತ್ತಿರುವ ನೀರು ಎಂದು ಹೇಳುವುದಕ್ಕೆ ಪ್ರಮುಖವಾದ ಕಾರಣ ಶತಮಾನಗಳಿಂದ ಶತಮಾನಗಳವರೆಗೆ ಭಾಷೆಯಲ್ಲಿ ಬದಲಾವಣೆಯಾಗುತ್ತಿರುವುದನ್ನು ನೋಡಬಹುದಾಗಿದೆ. ಉದಾಹರಣೆಗೆ ಹಿಂದೆ ಕರ್ಣಾಟಕ ಎಂದು ಬರೆಯುತ್ತಿದ್ದರು ಆದರೆ ಈಗ ಕರ್ನಾಟಕ ಎಂದು ಬರೆಯಲಾಗುತ್ತಿದೆ. ಇಲ್ಲಿ 'ನ' ಕಾರ ಮತ್ತು 'ಣ' ಕಾರ ಎರಡು ಅನುನಾಸಿಕ ಅಕ್ಷರಗಳು, ಯಾವ ಅಕ್ಷರ ಬಳಸಿದರೂ ಅರ್ಥದಲ್ಲಿ ವ್ಯತ್ಯಾಸವಾಗುವುದಿಲ್ಲ. ಹಾಗೆಯೇ ಬೋಧಕರು ತಮ್ಮ ಧ್ವನಿಯಿಂದ ಹೊರಡುವಂತಹ 'ಣ' ಮತ್ತು 'ನ' ಕಾರಗಳ ಸೂಕ್ಷ್ಮ ವ್ಯತ್ಯಾಸ ಗಮನಿಸದೆ ಉಚ್ಚರಿಸುತ್ತಾರೆ ಆದರೆ ಅವರಿಗೆ ಮಾತ್ರ 'ಣ' ಕಾರವಾಗಿಯೇ ಉಚ್ಚರಿಸಿದಂತೆನಿಸುತ್ತದೆ.

ಈ 'ಣ'ಕಾರಕ್ಕೆ 'ನ'ಕಾರ ಬಳಸುವುದು ವ್ಯಕ್ತಿಗತವಾಗಿ ಕೆಲವೊಬ್ಬರಲ್ಲಿ ಇಂತಹ ತೊಡಕು ಇರುವುದನ್ನು ಗಮನಿಸಲಾಗಿದೆ.

ಬೋಧಕರ ಬರವಣಿಗೆಯಲ್ಲಿಯೆ ಗೊಂದಲವಿರುವ ಪದಗಳು ಮತ್ತು ಅಕ್ಷರಗಳು

ದೃಢೀಕರಣ

ಕ್ರೋಢೀಕರಣ

ಹೂ

ಉಚ್ಚ

ದೃಢಿಕರಣ :

ಈ ಪದವನ್ನು ಗಮನಿಸಿದಾಗ ಇದರಲ್ಲಿರುವ 'ಡಿ' ಅಕ್ಷರವನ್ನು ಅಲ್ಪಪ್ರಾಣ ಮತ್ತು ಮಹಾಪ್ರಾಣ ಎರಡೂ ರೂಪಗಳಲ್ಲಿ ಯಾವುದು ಸರಿ.

ಕ್ರೋಢೀಕರಣ :

ಈ ಪದ ಬರೆಯುವಾಗ 'ಕ್ರೋ' ಅಕ್ಷರ ಹ್ರಸ್ವ ಅಥವಾ ದೀರ್ಘ ಬರೆದರೆ ಯಾವುದು ಸೂಕ್ತ.

ಹೂ :

ಈ ಅಕ್ಷರವನ್ನು ಎರಡು ರೀತಿಯಲ್ಲಿ ಬರೆಯುತ್ತಾರೆ.

ಒಂದನೇ ರೂಪ – ಹೂ

ಎರಡನೇ ರೂಪ – ಹೂ

ಈ ಎರಡು ರೂಪದಲ್ಲಿ ಯಾವುದು ಸರಿ.

ಉಚ್ಛ :

ಈ ಪದ ಬರೆಯುವಾಗ ಅಲ್ಪಪ್ರಾಣ 'ಚ' ಮಾಹಾಪ್ರಾಣ 'ಛ' ಯಾವ ದ್ವಿತ್ವಾಕ್ಷರ ಬಳಸಬೇಕು. ಆದರೆ ಉಚ್ಚ ಎನ್ನುವ ಪದ ಕನ್ನಡ ಶಬ್ಧಕೋಶದಲ್ಲಿ ಅಲ್ಪಪ್ರಾಣ 'ಚ'ದ್ವಿತ್ವಾಕ್ಷರವಿದೆ.

ಇಂತಹ ಗೊಂದಲವಿರುವ ಪದಗಳು ೨೦೧೪ರಲ್ಲಿ ಸಿ.ಟಿ.ಇ ಕಲಬುರಗಿ ಕೇಂದ್ರದಲ್ಲಿ ನಡೆದ ರಚನಾ – ೩ರ ತರಬೇತಿಯಲ್ಲಿ ಬಹಳಷ್ಟು ಚರ್ಚೆಗೆ ಒಳಪಟ್ಟವು. ಈ ತರಬೇತಿಯು ಬೋಧನಾ ಸಮಸ್ಯೆ ಮತ್ತು ೧೦ನೇ ತರಗತಿಯ ಕನ್ನಡ ಭಾಷಾ ಪಠ್ಯ ಪುಸ್ತಕದಲ್ಲಿರುವ ಸಮಸ್ಯೆ ಹಾಗೂ ಹೊಸ ಬೋಧನಾ ಪದ್ಧತಿಯನ್ನು ಕುರಿತಾಗಿತ್ತು. ತರಬೇತಿ ನೀಡಲಾಯಿತು.

ಇಲ್ಲಿ ತರಬೇತಿ ನೀಡುವವರು ರಾಜ್ಯ ಮಟ್ಟದಲ್ಲಿ ತರಬೇತಿ ಪಡೆದ ಕನ್ನಡ ಭಾಷಾ ಬೋಧಕರಾಗಿದ್ದರು. ಈ ಮೇಲ್ಕಂಡ ಪದಗಳ ಸಮಸ್ಯೆಗಳು ಕೊನೆಗೆ ನಿರ್ಣಯಗೊಂಡಿದ್ದು ಗ್ರಂಥಸ್ಥ ಭಾಷೆಯಲ್ಲಿ ಆ ಪದಗಳು ಹೇಗೆ ಬಳಕೆಯಾಗುತ್ತವೆಯೋ ಆ ಪದಗಳೆ ಸರಿ ಎಂದು ಚರ್ಚೆಗೆ ಪೂರ್ಣವಿರಾಮ ನೀಡಿದರು.

ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ಪದಗಳಲ್ಲಿಯೇ ಈ ರೀತಿಯ ಗೊಂದಲಗಳು ಇದ್ದರೆ ಇನ್ನೂ ತಿಳಿಯದೆ ಇರುವ ಇನ್ನೆಷ್ಟು ಕನ್ನಡ ಭಾಷೆಯ ಪದಗಳು ಬೋಧಕರಿಗೆ ತೊಡಕಾಗಿರಬೇಕು ಎನಿಸಿತು.

ಇಂತಹ ಬರವಣಿಗೆ ಮತ್ತು ಉಚ್ಚರಣೆಯ ಸಮಸ್ಯೆಯು ಎಲ್ಲಾ ಭಾಷಾ ಬೋಧಕರಲ್ಲಿ ಇಲ್ಲ. ಯಾವ ಭಾಷಾ ಬೋಧಕರ ಭಾಷೆಯ ಮೇಲೆ ಅನ್ಯ ಭಾಷೆಯ ಪ್ರಭಾವ ಬೀರಿದೆಯೋ ಅಂತಹ ಬೋಧಕರಲ್ಲಿ ಈ ರೀತಿಯ ಸಮಸ್ಯೆಯನ್ನು ಕಾಣಲಾಗಿದೆ. 'ಣ' ಕಾರ 'ನ' ಕಾರದ ಸಮಸ್ಯೆಯು ಮರಾಠಿ ಭಾಷೆಯ ಪ್ರಭಾವ ಇರುವ ಬೋಧಕರಲ್ಲಿ ಕಂಡುಬಂದರೆ 'ಹ' ಕಾರಕ್ಕೆ ವ, ಅ, ಓ, ಕಾರಗಳಾಗಿ ಉಚ್ಚರಿಸುವಂತಹ ಬೋಧಕರನ್ನು ಹೆಚ್ಚಾಗಿ ಶಹಾಪುರ, ಸುರಪುರ, ಯಾದಗಿರಿ ಭಾಗದಲ್ಲಿ ಕಾಣುತ್ತೇವೆ. ಉತ್ತರ ಕರ್ನಾಟಕ ಭಾಗದ ಮೇಲೆ ನೆರೆ ರಾಜ್ಯಗಳಾದ ಆಂಧ್ರ ಮತ್ತು ಮಹಾರಾಷ್ಟ್ರ ಭಾಷೆಗಳ ಪ್ರಭಾವ ಹೆಚ್ಚಾಗಿದೆ. ಪ್ರತಿಯೊಬ್ಬರು ಎರಡು ಮೂರು ಭಾಷೆಗಳನ್ನು ಬಲ್ಲವರಾಗಿರುವುದರಿಂದ ತಮ್ಮ ತಮ್ಮ ಸಮಸ್ಯೆಗಳನ್ನು ಗುರುತಿಸಿಕೊಳ್ಳುವಲ್ಲಿ ಎಡವುತ್ತಿದ್ದಾರೆ. ಬೋಧಕರು ಭಾಷೆಯನ್ನು ಬೋಧಿಸುವ ಸಂದರ್ಭದಲ್ಲಿ ಕಪ್ಪು ಹಲಗೆ ಕಾರ್ಯದಲ್ಲಿ ಬೋಧಕರು ಹೇಗೆ ಬರೆಯುತ್ತಾರೆ ಕಲಿಕಾರ್ಥಿಗಳು ಅದನ್ನೆ ಅನುಕರಿಸುತ್ತಾರೆ. ಇಂದಿನ ದಿನಗಳಲ್ಲಿ ಮಹಾಪ್ರಾಣಾಕ್ಷರಗಳ ತೊಡಕು ಬಹುದೊಡ್ಡದಾಗಿದೆ. ಉದಾಹರಣೆಗೆ ಕಛೇರಿ – ಕಚೇರಿ, ಘಂಟೆ – ಗಂಟೆ, ಉಚ್ಛಾರಣೆ– ಉಚ್ಚಾರಣೆ ಇತ್ಯಾದಿ ಪದಗಳನ್ನು ಬೋಧಕರು ತರಗತಿಯ ಸಂದರ್ಭದಲ್ಲಿ ಬಳಸಿದಾಗ ಕಲಿಕಾರ್ಥಿಯೂ ಯಾವ ರೂಪ ಸರಿಯಾದದ್ದು ಎಂದು ಪ್ರಶ್ನೆ ಮಾಡಿದಾಗ ಬೋಧಕರು ನೀಡುವ ಉತ್ತರ ಯಾವ ಪದಗಳು ಅರ್ಥದಲ್ಲಿ ವ್ಯತ್ಯಾಸ ಕಾಣುವುದಿಲ್ಲವೋ ಅಂತಹ ಎರಡು ರೂಪಗಳೂ ಸರಿಯಾದವು ಎಂಬುದು ಬೋಧಕರ ಅಭಿಪ್ರಾಯವಾಗಿದೆ. ಈ ರೀತಿಯಾಗಿ ಬೋಧಕರಲ್ಲಿ ಭಾಷಾ ಸಮಸ್ಯೆ ಇದೆ ಎಂದು ಅಧ್ಯಯನದ ಮೂಲಕ ಸ್ಪಷ್ಟಪಡಿಸಿಕೊಳ್ಳಲಾಗಿದೆ.

೪.೩. ಬೋಧಕರ ಹೇಳಿಕೆಯಲ್ಲಿ ಕಲಿಕಾರ್ಥಿ ಕೇಂದ್ರಿತ ಸಮಸ್ಯೆಗಳು

* ಕಲಿಕಾರ್ಥಿಗಳ ಓದುವಿಕೆಯಲ್ಲಿ ಕಂಡು ಬರುವ ಪ್ರಮುಖ ಸಮಸ್ಯೆಗಳನ್ನು ಕುರಿತು ಬೋಧಕರ ಹೇಳಿಕೆಗಳು.

೧. ಕಠಿಣ ಪದಗಳನ್ನು ಉಚ್ಚರಿಸಲು ಬಾರದೆಯಿರುವುದು.

೨. ಸ್ಪಷ್ಟವಾಗಿ ಓದದೆಯಿರುವುದಕ್ಕೆ ಕಾರಣ ಕಲಿಕಾ ನ್ಯೂನ್ಯತೆ.

೩. ಓದಿನ ಕಡೆ ಗಮನ ಹರಿಸದೆ ಇರುವುದು. ಅಕ್ಷರಗಳನ್ನು ಲೋಪಮಾಡಿ ಓದುವುದು.

೪. ಕಾಗುಣಿತಗಳ ಸಮಸ್ಯೆ ಹೆಚ್ಚಾಗಿ ಕಂಡುಬರುವುದು.

೫. ಮೌಖಿಕವಾಗಿ ಓದದೆ ಇರುವುದು. ಉಚ್ಚಾರಣೆ ದೋಷ

೬. ಓದುವಾಗ ತೊದಲುವಿಕೆ

೭. ಅಲ್ಪಪ್ರಾಣ ಮಹಾಪ್ರಾಣ ಅಕ್ಷರಗಳನ್ನು ಗುರುತಿಸದೆ ಓದುವುದು.

೮. ಲೇಖನ ಚಿಹ್ನೆಗಳನ್ನು ಗುರುತಿಸದೆ ಓದುವುದು.

೯. ಒತ್ತಕ್ಷರ ಅರ್ಕಾವತ್ತಿನ ಅಕ್ಷರಗಳನ್ನು ಓದುವಾಗಿನ ಸಮಸ್ಯೆ (ಇದಕ್ಕೆ ಕಾರಣ ಪ್ರಾಥಮಿಕ ಹಂತದ ಓದು)

೧೦. ಅಕ್ಷರಗಳನ್ನು ಮೊಟಕುಗೊಳಿಸಿ ಓದುವುದು.

೧೧. ಸ್ವರ ಭಾರದೊಂದಿಗೆ ಓದುವುದಿಲ್ಲ.

೧೨. ಹ್ರಸ್ವ ದೀರ್ಘಗಳನ್ನು ತಪ್ಪಾಗಿ ಗುರುತಿಸಿ ಓದುವುದು.

೧೩. ವಾಕ್ಯ ಪರಿಪೂರ್ಣವಾಗಿ ಓದದೆ ಇರುವುದು.

೧೪. ಸ್ಪಷ್ಟವಾದ ವಿಷಯದ ಕೊರತೆಯಿಂದ ಅಸ್ಪಷ್ಟವಾಗಿ ಓದುವುದು.

೧೫. ಆಲಿಸದೆ ಇರುವುದು ಮತ್ತು ಸಮರ್ಪಕವಾದ ಅಕ್ಷರಜ್ಞಾನದ ಕೊರತೆ

೪.೩.೧. ಬೋಧಕರು ಕಲಿಕಾರ್ಥಿಗಳ ಬರವಣಿಗೆ ಸಮಸ್ಯೆಗಳ ಕುರಿತಾದ ಹೇಳಿಕೆಗಳು :

೧. ಒತ್ತಕ್ಷರಗಳನ್ನು ಬಿಟ್ಟು ಬರೆಯುವುದು.

೨. ಸ್ಪಷ್ಟವಾಗಿ ಬರೆಯದಿರುವುದು.

೩. ಲೇಖನ ಚಿಹ್ನೆ ಹಾಕದೆ, ಕರಂಡಿಕೆ ಇಲ್ಲದೆ ಬರೆಯುವುದು.

೪. ಅನುಸ್ವರಗಳನ್ನು ಬಳಸದೆ ಬರೆಯುವುದು.

೫. ತಪ್ಪಾದ ವಾಕ್ಯರಚನೆ.

೬. ಅಕ್ಷರಗಳ ಗಾತ್ರದಲ್ಲಿ ಏರುಪೇರು, ದುಂಡಾಗಿ ಬರೆಯದೆ ಇರುವುದು.

೭. ಉಕ್ತಲೇಖನ ಬರೆಯುವಾಗ ಒತ್ತಕ್ಷರ ಮತ್ತು ಲೇಖನ ಚಿಹ್ನೆಗಳನ್ನು ಬಳಸದೆ ಬರೆಯುವುದು.

೮. ಕಾಗುಣಿತ ದೋಷ.

೯. ಹ ಮತ್ತು ಅ ಕಾರಗಳನ್ನು ಬಳಸುವಾಗಿನ ಸಮಸ್ಯೆ.

೧೦. ಅರ್ಥ ಸ್ಪಷ್ಟವಾಗಿ ಬರೆಯದೆ ಇರುವುದು.

೧೧. ದೀರ್ಘ ಮತ್ತು ಮಹಾಪ್ರಾಣ ಅಕ್ಷರಗಳನ್ನು ಬಳಸದೆ ಇರುವುದು.

(ಈ ಸಮಸ್ಯೆಗಳನ್ನು ಕುರಿತು ಅಧ್ಯಾಯ ೫ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.)

೪.೩.೨. ಓದು ಮತ್ತು ಬರವಣಿಗೆ ಸಮಸ್ಯೆಗೆ ಬೋಧಕರು ಹೇಳಿದಂತಹ ಕಾರಣಗಳು :

* ಬೋಧಿಸುವಾಗ ಕಲಿಕಾರ್ಥಿಗಳು ಸರಿಯಾಗಿ ಆಲಿಸದೆಯಿರುವುದು.
* ಕಲಿಕೆಯಲ್ಲಿ ಆಸಕ್ತಿ ಇಲ್ಲದಿರುವುದು.
* ಪಾಠ ಮಾಡುವ ಸಂದರ್ಭದಲ್ಲಿ ಮನಸ್ಸನ್ನು ಕೇಂದ್ರಿಕರಿಸದೆ ಇರುವುದು.

* ಏಕಾಗ್ರತೆಯ ಕೊರತೆ.
* ಬರವಣಿಗೆ ರೂಪ, ಓದುಗಾರಿಕೆಯ ರೂಪ, ಮಾತನಾಡುವ ರೂಪಗಳಲ್ಲಿ ಏಕತೆ ಇಲ್ಲದಿರುವುದು.
* ಹ.ಅ. ಅಕ್ಷರಗಳ ವ್ಯತ್ಯಾಸ ಪರಿಸರ ಭಾಷೆಯಲ್ಲಿ ಇಲ್ಲದಿರುವುದು ಬೋಧಕರು ಸಮಸ್ಯೆಯನ್ನು ಗುರುತಿಸಿ ಸರಿಪಡಿಸದೆ ಇರುವುದು.
* ಪ್ರಾಥಮಿಕ ಕಲಿಕಾ ಹಂತದಲ್ಲಿ ಸಮಸ್ಯೆಯನ್ನು ಗುರುತಿಸಿ ತಿದ್ದದಿರುವುದು.
* ಮಾತೃಭಾಷೆ ಕನ್ನಡವಿದ್ದರೂ ಪರಿಸರದಲ್ಲಿ ಬೇರೆಬೇರೆ ಭಾಷೆಗಳು ಬಳಕೆಯಲ್ಲಿರುವುದಿರಂದ
* ಮೂಲಾಕ್ಷರಗಳ ಸರಿಯಾದ ಪರಿಕಲ್ಪನೆ ಇಲ್ಲದಿರುವುದು.
* ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದೂಳಿದ ಮಕ್ಕಳಲ್ಲಿ ಹೆಚ್ಚಿನ ಸಮಸ್ಯೆ.
* ಆಧುನಿಕ ಜೀವನ ಶೈಲಿ, ಮಾದ್ಯಮಗಳ ಪ್ರಭಾವ
* ಕಾಗುಣಿತಗಳ ಸೂಕ್ತ ಪರಿಚಯ ಇಲ್ಲದಿರುವುದು.
* ದೃಕ್ ಶ್ರವಣೋಪಕರಣ ಕಲಿಕೆ ಇಲ್ಲದಿರುವುದು.
* ಪಾಠೋಪಕರಣಗಳು ಇಲ್ಲದೆ ಬೋಧಿಸುವುದು.
* ಓದುವುದಕ್ಕೆ ಸೂಕ್ತ ಕೌಟುಂಬಿಕ ಪರಿಸರ ಇಲ್ಲದಿರುವುದು.
* ಬೋಧಕರು ವಿಷಯವನ್ನು ಸ್ಪಷ್ಟವಾಗಿ ಅರ್ಥೈಸಿ ಹೇಳದೆ ಇರುವುದು.
* ಬೋಧಕರು ಅವಸರ ಅವಸರವಾಗಿ ಪಠ್ಯಕ್ರಮವನ್ನು ಮುಗಿಸುವ ವೇಗದಲ್ಲಿ ವಿವರವಾಗಿ ಸ್ಪಷ್ಟವಾಗಿ ಬೋಧಿಸದೆ ಇರುವುದು.
* ಸತತ ಗೈರು ಹಾಜರಾಗುವುದರಿಂದ.
* ಪದ್ಯ ಪಾಠಗಳ ಸ್ಪಷ್ಟ ಭಾವ ವ್ಯಕ್ತಪಡಿಸದೆಯಿರುವುದು.

ಈ ಎಲ್ಲಾ ಹೇಳಿಕೆಗಳನ್ನು ಗಮನಿಸಿದ ಮೇಲೆ ಕನ್ನಡ ಭಾಷಾ ಕಲಿಕಾರ್ಥಿಗಳ ಸಮಸ್ಯೆಗೆ ಹೊಣೆಯಾರು? ಇದಕ್ಕೆ ಕಾರಣ ಸರ್ಕಾರವೆ? ಕಲಿಕಾರ್ಥಿಗಳ ಮನೆ ಪರಿಸರವೆ? ಅಥವಾ ಕನ್ನಡ ಭಾಷಾ ಬೋಧಕರೆ? ಎಂಬ ಪ್ರಶ್ನೆ ಎದುರಾಗುತ್ತದೆ. ಭಾಷಾ ಕಲಿಕಾರ್ಥಿಗಳಲ್ಲಿರುವ ಸಮಸ್ಯೆಯನ್ನು ಗುರುತಿಸಿ ಸರಿಪಡಿಸುವುದು ಬೋಧಕರ ಜವಬ್ದಾರಿ. ಇಂತಹ ಸಮಸ್ಯೆಯನ್ನು ಕನ್ನಡ ಭಾಷಾ ಬೋಧಕರು ಸವಾಲಾಗಿ ಸ್ವೀಕರಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆ ವಿನಃ ಭಾಷಾ ಬೋಧಕರಲ್ಲಿಯೇ ಭಾಷಾ ಸಮಸ್ಯೆ ಇರಬಾರದು. ಕನ್ನಡ ಭಾಷಾ ಬೋಧಕರು ನಿರಂತರ ಅಧ್ಯಯನಕ್ಕೆ ಒಳಪಟ್ಟಾಗ ತಮ್ಮಲ್ಲಿರುವ ತೊಡಕುಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಅಧ್ಯಯನದ ಸಂದರ್ಭದಲ್ಲಿ ಬೋಧಕರನ್ನು

ಗಮನಿಸಿದಾಗ ಕೀಳರಿಮೆ ಭಾವನೆಯಿಂದಾಗಿ ತಮ್ಮಲ್ಲಿರುವ ಭಾಷಾ ಬೋಧನೆಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದೆ ಇರುವುದನ್ನು ಗಮನಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಈ ಹೊಸ ಬೋಧನಾ ಪದ್ಧತಿಯು ಬೋಧಕರಿಗೆ ತಲೆನೋವಾಗಿ ಪರಿಣಮಿಸಿದೆ. ಈ ರೀತಿಯ ಬೋಧನಾ ಪದ್ಧತಿಯಿಂದ ಭಾಷಾ ಕಲಿಕಾರ್ಥಿಗಳಿಗೆ ಬರವಣಿಗೆ ಮತ್ತು ಓದುವ ಕೌಶಲ್ಯ ಬೆಳೆಸಲು ಆಗುವುದಿಲ್ಲ. ಕಲಿಕಾರ್ಥಿಗಳು ಮುಂದೆ ಹೆಚ್ಚಿನ ರೀತಿಯಲ್ಲಿ ಬರವಣಿಗೆ ಮತ್ತು ಓದಿನ ಸಮಸ್ಯೆಯನ್ನು ಎದುರಿಸುತ್ತಾರೆ ಎನ್ನುವುದು. ಬೋಧಕರ ಅಭಿಪ್ರಾಯ.

ಈ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಬೋಧನಾ ಪದ್ಧತಿಯಿಂದ ಸ್ವತಹ ಬೋಧಕರೆ ತಮ್ಮ ಸಮಸ್ಯೆಯನ್ನು ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಈ ಪದ್ಧತಿ ಯಿಂದಾಗಿ ಇಂದಾಗಿ ಬೋಧಕರು ದಾಖಲೆಗಳನ್ನು ನಿರ್ವಹಿಸುವುದರಲ್ಲಿಯೆ ತಮ್ಮ ಹೆಚ್ಚಿನ ಸಮಯವನ್ನು ಮೀಸಲಿಡುತ್ತಿದ್ದಾರೆ. ಬೋಧನೆಗೆ ಹೆಚ್ಚಿನ ಸಮಯ ಸಿಗುತ್ತಿಲ್ಲ ಎಂಬುದು ಬೋಧಕರ ತೊಡಕಾಗಿದೆ.

೪.೪. ಬೋಧಕ ಕೇಂದ್ರಿತ ಸಮಸ್ಯೆ

ಭಾಷೆಯನ್ನು ಬೋಧಿಸುವಂತಹ ಬೋಧಕರಲ್ಲಿ ಬರಹವನ್ನು ಕುರಿತು ಯಾವುದು ಸರಿಯಾದ ಬರಹ ತಪ್ಪು ಬರಹ ಯಾವುದು ಎಂಬುದನ್ನು ಗುರುತಿಸುವಲ್ಲಿ ಗೊಂದಲಕ್ಕೆ ಒಳಗಾಗುತ್ತಿದ್ದಾರೆ. ಇಂತಹ ಸಮಸ್ಯೆಯನ್ನು ಕುರಿತು ಬೋಧಕರನ್ನು ಪರೀಕ್ಷೆಗೆ ಒಳಪಡಿಸಿದಾಗ ಕಂಡುಬಂದಂತಹ ಅಂಶವನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಎಂತಹ ಬರಹಗಳು ಬೋಧಕ ಕೇಂದ್ರಿತ ತೊಡಕುಗಳಾಗಿ ಪರಿಣಮಿಸಿವೆ ಎಂದರೆ ಡಿ.ಎನ್.ಶಂಕರ ಭಟ್ಟ ರವರ ಬರಹಗಳಲ್ಲಿ ತಪ್ಪು-ಸರಿ ಯಾವುದು ಎಂದು ಒಪ್ಪಿಕೊಳ್ಳುವುದು ಸವಾಲಾಗಿದೆ. ಪರಿಸ್ಥಿತಿ ಇಂದಿನ ಬೋಧಕರಲ್ಲಿ ಕಾಣುತ್ತಿದೆ.

* ಡಿ.ಎನ್. ಶಂಕರ ಭಟ್ಟ ರವರ ಬರಹದಲ್ಲಿನ ಪದಗಳನ್ನು ಬೋಧಕರು ಒಪ್ಪಿಕೊಳ್ಳದೆ ಇರುವಂತಹ ಪದಗಳು ಈ ಕೆಳಗಿನಂತಿವೆ.

೪.೪.೧. ಅರ್ಕಾವತ್ತಿನ ' ೯' ಪದಗಳು

ಒಪ್ಪಿಕೊಳ್ಳುವ ಪದ		ಒಪ್ಪಿಕೊಳ್ಳದ ಪದ
ವಿದ್ಯಾರ್ಥಿ	–	ವಿದ್ಯಾರ್ಥಿ
ಪೂರ್ವ	–	ಪೂರ್ವ
ಸಂದರ್ಭ	–	ಸಂದರ್ಭ

೪.೪.೨. 'ಷ'ಕಾರ ಪದಗಳನ್ನು 'ಶ'ಕಾರ ಪದಗಳಾಗಿ ಒಪ್ಪಿಕೊಳ್ಳುವಲ್ಲಿನ ತೊಡಕು

ಬೋಧಕರು ಒಪ್ಪಿಕೊಳ್ಳುವ ಪದ		ಒಪ್ಪಿಕೊಳ್ಳದ ಪದ
ಭಾಷೆ	–	ಭಾಶೆ
ಷಟ್ಪದಿ	–	ಶಟ್ಪದಿ
ಆದಷ್ಟು	–	ಆದಶ್ಟು

೪.೪.೩. 'ಕ್ಷ' ಕಾರಕ್ಕೆ 'ಕ್ಯ' ಕಾರ ಬಳಕೆ

ಆಕ್ಷೇಪ	–	ಆಕ್ಯೇಪ
ಕ್ಷತ್ರೀಯ	–	ಕ್ಯತ್ರೀಯ
ಅಕ್ಷರ	–	ಅಕ್ಯರ

೪.೪.೪. 'ೕ' (ಅರ್ಕವತ್ತು) ಕಾರಕ್ಕೆ ರೇಫಾಕ್ಷರ ಬಳಕೆ

ವರ್ಗ	–	ವರ್‍ಗ
ವರ್ಷ	–	ವರ್‍ಶ
ನಿರ್ಬಂಧ	–	ನಿರ್‍ಬಂದ
ಅನಿವಾರ್ಯ	–	ಅನಿವಾರ್‍ಯ

೪.೪.೫. 'ಜ್ಞ' ಕಾರಕ್ಕೆ 'ಞ' ಕಾರ ದ್ವಿತ್ವ ಬಳಕೆ

ಸಂಜ್ಞೆ	–	ಸಂಜ್ಞ್ನೆ
ವೈಜ್ಞಾನಿಕ	–	ವಯ್‌ಜ್ಞ್ನಾನಿಕ
ಜ್ಞಾನ	–	ಜ್ಞ್ನಾನ
ಪ್ರಜ್ಞೆ	–	ಪ್ರಜ್ಞ್ನೆ[೫]


ಈ ಮೇಲ್ಕಂಡ ಪದಗಳನ್ನು ಒಪ್ಪಿಕೊಳ್ಳದ ಕನ್ನಡ ಭಾಷಾ ಬೋಧಕರು ಪ್ರಸ್ತುತ ವರ್ಷದ ೧೦ ನೇ ತಗರಗತಿಯ ಕನ್ನಡ ಭಾಷಾ ಪಠ್ಯ ಪುಸ್ತಕದಲ್ಲಿರುವಂತಹ 'ಜೀವನದೃಷ್ಟಿ' ಪಾಠದಲ್ಲಿ ವಿ.ಕೃ.ಗೋಕಾಕರು ಒಂದು ಪದವನ್ನು ಯಾವ ರೀತಿಯಾಗಿ ಭಿನ್ನವಾಗಿ ಬರೆಯ ಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಪದವನ್ನು ಬೋಧಕರು ಒಪ್ಪಿಕೊಂಡಿದ್ದಾರೆ. ಉದಾಹರಣೆಗೆ: ಅಂತರ್‌ಜೀವಿ ಪದವನ್ನು ಮೂರು ರೀತಿಯಲ್ಲಿ ತಮ್ಮ ಬರವಣಿಗೆಯಲ್ಲಿ ಬಳಸಿದ್ದಾರೆ. ೧) ಅಂತರ್ಜೀವಿ ೨) ಅಂತರ್‌ಜೀವಿ ೩)ಅಂತರ್ಜೀವಿ.

ಈ ಪದವು ಸರಿ ಎಂದು ಒಪ್ಪಿಕೊಂಡ ಬೋಧಕರು ಡಿ.ಎನ್.ಶಂಕರಭಟ್ಟರು ಬಳಸಿದ ಭಾಷೆಯ ಪದಗಳನ್ನು ಒಪ್ಪಿಕೊಂಡರೆ ಭಾಷಾ ಕಲಿಕಾರ್ಥಿಗಳಿಗೆ ದಾರಿ ತಪ್ಪಿಸಿದಂತಾಗುತ್ತದೆ ಎಂದಿದ್ದಾರೆ. ಹೀಗಾಗಿ ಭಾಷೆಯನ್ನು ಸರಿಯಾಗಿ ಅರ್ಥೈಸಿಕೊಂಡು ಒಪ್ಪಿಕೊಳ್ಳುವ ಇಲ್ಲವೇ ಒಪ್ಪಿಕೊಳ್ಳದೆ ಇರುವ ಸಮಸ್ಯೆ ಕನ್ನಡ ಭಾಷಾ ಬೋಧಕರಲ್ಲಿಯೆ ಇದೆ. ಇಂತಹ ಹೊಸ ಹೊಸ ಪದಗಳನ್ನು ಪ್ರೌಢ ಶಾಲೆಯ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಅಳವಡಿಸಿದಾಗ ಮಾತ್ರ ಹೊಸ ಭಾಷಾ ಪದಗಳನ್ನು ಸ್ವೀಕರಿಸಿ ತಮ್ಮಲ್ಲಿರುವ ಭಾಷಾ ತೊಡಕನ್ನು ನಿವಾರಿಸಿಕೊಳ್ಳವರು.

ಈ ಸಂಶೋಧನೆಯು ಭಾಷಿಕ ಹಿನ್ನಲೆಯಿಂದ ನೋಡುವುದಕ್ಕಾಗಿ ಡಿ.ಎನ್. ಶಂಕರಬಟ್ ರವರ ಬರವಣಿಗೆ ಕ್ರಮವನ್ನು ಒಪ್ಪಿಕೊಂಡರೂ ಸಹ ನನ್ನ ಸಂಶೋಧನೆ ಬೋಧಕ–ಪಠ್ಯಪುಸ್ತಕ ಕಲಿಕಾರ್ಥಿ ಈ ಮೂರರ ಪರಿಧಿಯಲ್ಲಿಯೇ ಸಾಗುತ್ತದೆ. ಇಲ್ಲಿ ಶಂಕರಬಟ್‌ರ ಭಾಷಾ ಬರವಣಿಗೆ

ಕ್ರಮಕ್ಕೂ ಕನ್ನಡ ಭಾಷಾ ಪಠ್ಯ ಪುಸ್ತಕದ ಭಾಷಾ ಬರವಣಿಗೆ ಕ್ರಮಕ್ಕೂ ವ್ಯತ್ಯಾಸವಿದೆ. ಶಂಕರಬಟ್ಟರು ಮಹಾಪ್ರಾಣಕ್ಷರಗಳು ಅರ್ಕಾವತ್ತು. ಶ, ಷ, ಋ, ಅಕ್ಷರಗಳು ಕನ್ನಡ ಭಾಷೆಯಲ್ಲಿ ಬಳಸದೆ ಬರವಣಿಗೆ ಹೇಗೆ ಬರೆಯಬಹುದೆಂದು ತೋರಿಸಿಕೊಟ್ಟಿದ್ದಾರೆ. ಆದರೆ ಇವರ ಬರವಣಿಗೆ ಕ್ರಮ ಸರಕಾರದಿಂದ ಮುದ್ರಣಗೊಂಡು ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಇಲ್ಲ. ಏಕೆಂದರೆ ಎಲ್ಲಾ ಜನಸಾಮಾನ್ಯರಿಗೂ ಅರ್ಥವಾಗುವಂತಹ, ಬಹುಜನ ಮತ್ತು ಶಿಕ್ಷಣ ಇಲಾಖೆ ಒಪ್ಪಿಕೊಂಡ ಬರವಣಿಗೆ ಕ್ರಮದಿಂದ ಪಠ್ಯಪುಸ್ತಕ ರಚನೆಗೊಂಡಿವೆ. ಈ ಪಠ್ಯಪುಸ್ತಕವನ್ನು ಬೋಧಿಸುವ ಬೋಧಕರು ಪಠ್ಯಪುಸ್ತಕದ ಭಾಷೆಯನ್ನು ಒಪ್ಪಿಕೊಂಡಂತೆ ಕಾಲದಿಂದಲೂ ಭಾಷೆ ಬದಲಾವಣೆಯಾಗುತ್ತಾ ಬಂದರು ಸಹ ಅದು ಎಲ್ಲರೂ ಒಪ್ಪಿಕೊಂಡ ಮೇಲೆ ಗ್ರಂಥಸ್ಥರೂಪ ಪಡೆದುಕೊಂಡಿದೆ. ಆದಕಾರಣ ಶಂಕರಬಟ್‌ರ ಬರವಣಿಗೆಯೂ ಪಠ್ಯಪುಸ್ತಕದ ಭಾಷೆಯಲ್ಲಿ ಅಳವಡಿಸಿದಾಗ ಈ ಬರವಣಿಗೆ ಕ್ರಮವನ್ನು ಎಲ್ಲರೂ ಒಪ್ಪಿಕೊಳ್ಳಬಹುದು. ಈಗಾಗಲೆ ಈ ಬರವಣಿಗೆ ಕ್ರಮವನ್ನು ಭಾಷಾ ಚಿಂತಕರಾದ ಕೆ.ವಿ.ನಾರಾಯಣ, ಆರ್.ಛಲಪತಿ, ಬಸವರಾಜ ಕೊಡಗುಂಟೆಯವರುಗಳು ಶಂಕರಬಟ್‌ರ ಬರವಣಿಗೆ ಕ್ರಮವನ್ನು ಒಪ್ಪಿಕೊಂಡಿದ್ದಾರೆ.

ಕನ್ನಡ ಭಾಷಾ ಬೋಧಕರ ಬರವಣಿಗೆ ಸಮಸ್ಯೆಯನ್ನು ಗುರುತಿಸಲು ಅವರಿಂದ ಒಂದು ಸ್ವಂತಲೆಖನ ಬರೆಸಿಕೊಳ್ಳಲಾಯಿತ್ತು ಮತ್ತು ಬೋಧಕರಿಗಾಗಿ ರಚಿಸಿದ ಪ್ರಶ್ನಾವಳಿಗಳಿಗೆ ಬೋಧಕರು ನೀಡಿದ ಕೈಬರಹದ ಉತ್ತರವನ್ನು ಗಮನಿಸಲಾಗಿದೆ. ಅದರ ಒಂದು ಮಾದರಿಯನ್ನು ಇಲ್ಲಿ ಕೊಡಲಾಗಿದೆ. ಈ ಬರವಣಿಗೆಯಲ್ಲಿ ಸ್ಪಷ್ಟ ಬರಹ ಇಲ್ಲದಿರುವುದನ್ನು ಗಮನಿಸಬಹುದು.



೪.೫. ಕನ್ನಡ ಲಿಪಿ ಕುರಿತು ಬೋಧಕರಲ್ಲಿರುವ ತೊಡಕುಗಳು

ಭಾಷೆಯನ್ನು ಬಳಕೆಯಲ್ಲಿರುವ ಧ್ವನಿಗಳಿಗೆ ಸೂಕ್ತವಾದ ಲಿಪಿಗಳನ್ನು ಅಳವಡಿಸಿ ಉಚ್ಚರಣೆಯ ದಾಟಿಯನ್ನು ಅಕ್ಷರಗಳ ಮೂಲಕ ಬರಹದಲ್ಲಿ ತೋರಿಸುವುದು, ಅಕ್ಷರ ಲಿಪಿ ಪದ್ಧತಿ. ಕನ್ನಡ ಇಂಥ ಒಂದು ಲಿಪಿಯಾಗಿದೆ. ಆಡುವ ಮಾತನ್ನೆಲ್ಲ ಲಿಪಿಯಲ್ಲಿ ತರಲು ಸಾಧ್ಯವಿಲ್ಲ. ಆದರೆ ಲಿಪಿಯಲ್ಲಿ ಬರೆದದ್ದನೆಲ್ಲಾ ಉಚ್ಚರಿಸಲು ಸಾಧ್ಯವಿದೆ. ಇಂದಿನ ಕನ್ನಡ ಲಿಪಿಯಲ್ಲಿ ಬರೆದದ್ದನೆಲ್ಲಾ ಉಚ್ಚರಿಸಲು ಸಾಧ್ಯವಿದೆ. ಇಂದಿನ ಕನ್ನಡ ಲಿಪಿಯಲ್ಲಿ ಮೂರು ಬಗೆಗಳನ್ನು ಕಾಣಬಹುದು.

೧. ಕೈಬರಹದ ಲಿಪಿ

೨. ಅಚ್ಚುಮೊಳೆ ಲಿಪಿ

೩. ಗಣಕಯಂತ್ರದ ಲಿಪಿ

ಗ್ರಾಂಥಿಕ ಅಥವಾ ಪ್ರಮಾಣ ಕನ್ನಡದ ದೃಷ್ಟಿಯಿಂದ ಕನ್ನಡದಲ್ಲಿ ಇಂದು ಬಳಕೆಯಲ್ಲಿರುವ ಲಿಪಿಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

ಕ್ರಸಂ.	ವಿವರ	ಅಕ್ಷರಗಳು	ಸಂಖ್ಯೆ
೧	ಅಚ್ಚಗನ್ನಡದ ಹ್ರಸ್ವ ಸ್ವರಗಳು	ಅ, ಇ, ಉ, ಎ, ಒ	೫
೨	ಅಚ್ಚಗನ್ನಡದ ದೀರ್ಘ ಸ್ವರಗಳು	ಆ, ಈ, ಊ, ಏ, ಓ	೫
೩	ಸಂಸ್ಕೃತದಿಂದ ಬಂದ ಸ್ವರ	ಋ	೧
೪	ಸಂಧ್ಯಕ್ಷರಗಳು	ಐ, ಔ	೨
೫	ಕನ್ನಡ ವರ್ಗೀಯ ವ್ಯಂಜನಗಳು	ಕ್, ಗ್, ಚ್, ಜ್, ಟ್, ಡ್, ತ್, ದ್, ಪ್, ಬ್	೧೦
೬	ಅನುನಾಸಿಕಗಳು	ಙ್,ಞ್,ಣ್,ನ್,ಮ್	೫
೭	ಕನ್ನಡದ ಅವರ್ಗೀಯ	ಯ್,ರ್,ಲ್,ವ್,ಸ್,ಹ್,ಳ್	೭
೮	ಸಂಸ್ಕೃತದಿಂದ ಬಂದ ಮಹಾಪ್ರಾಣ	ಖ್,ಘ್,ಛ್,ಝ್,ಠ್,ಢ್,ಥ್,ಫ್,ಭ್	೧೦
೯	ಸಂಸ್ಕೃತದಿಂದ ಬಂದ ಅವರ್ಗೀಯ	ಶ್,ಷ್	೨
೧೦	ಅನುಸ್ವರ, ವಿಸರ್ಗ	ಂ, ಃ	೨
೧೧	ಇಂಗ್ಲೀಷನಿಂದ ಬಂದ ವ್ಯಂಜನಗಳು	ಫ್,ಜ್, (ಈ ಧ್ವನಗಳಿಗೆ ಕೆಳಗೆ ಎರಡು ಚುಕ್ಕೆ ಸೇರಿಸಬೇಕು)	೨
೧೨	ಹಳಗನ್ನಡ ವ್ಯಂಜನಗಳು	ರಳ, ಶಕಟರೇಫ್	೨
೧೩	ದೀರ್ಘ ಅರ್ಕಾವೊತ್ತು	ೕ, ೖ	೨
	ಒಟ್ಟು		೫೫

ಈ ಮೇಲಿನ ಕೋಷ್ಟಕದಲ್ಲಿರುವ ಕನ್ನಡ ಅಕ್ಷರಗಳು ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಪ್ರಸ್ತುತದಲ್ಲಿ ಕಾಣುತ್ತಿರುತ್ತೇವೆ. ಆದರೆ ಈ ಲಿಪಿಗಳನ್ನು ಬರೆಯುವಾಗ ಭಾಷಾ ಬೋಧಕರಿಗೆ ಕೆಲವೊಂದು ಗೊಂದಲಗಳುಂಟಾಗುತ್ತಿವೆ ಅವುಗಳೆಂದರೆ,

ಅರ್ಕಾವತ್ತು : ಸಂಸ್ಕೃತದಿಂದ ಬಂದ ಒಂದು ಲಿಪಿ ಚಿಹ್ನೆ ಇದನ್ನು 'ೇ' ಈ ರೂಪದಲ್ಲಿ ಬರೆಯುತ್ತೇವೆ. ಸಂಸ್ಕೃತದಲ್ಲಿ ಇದನ್ನು ಅಕ್ಷರದ ಮೇಲ್ಭಾಗದಲ್ಲಿ ಬರೆಯಲಾಗುತ್ತದೆ. ಉದಾಹರಣೆಗೆ **सूर्य** ಇಲ್ಲಿ ಸೂರ್ಯ ಪದದಲ್ಲಿ ಅರ್ಕಾವತ್ತು ಸಂಸ್ಕೃತದಲ್ಲಿ ಮೇಲೆ ಬಂದಿದೆ ಅದೆ ಕನ್ನಡದಲ್ಲಿ ಬರೆಯುವಾಗ ವ್ಯಂಜನಾಕ್ಷರದ ಪಕ್ಕದಲ್ಲಿ ಬರೆಯಲಾಗುತ್ತದೆ. ಈಗ ಈ ಪದವನ್ನು ಅರ್‌ಕಾರದ ಒತ್ತು ಅರ್ಕಾರೊತ್ತು, ಅರ್ಕಾವೊತ್ತು ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಇದರ ಸರಿಯಾದ ರೂಪ ಅರ್ಕಾರೊತ್ತು. ರೂಢಿಯಲ್ಲಿ ಅರ್ಕಾವೊತ್ತು ಎಂದೆ ಬಳಕೆಯಲ್ಲಿದೆ. ಆದರೆ ಕನ್ನಡ ಭಾಷಾ ಬೋಧಕರು ಬಳಸುವುದು ಹೆಚ್ಚಾಗಿ 'ರ' ಒತ್ತಾಕ್ಷರಗಳಲ್ಲಿ ಇದು ಒಂದು.

ಕನ್ನಡದಲ್ಲಿ ಅರ್ಕಾವೊತ್ತು ಮತ್ತು ದೀರ್ಘವನ್ನು ಬಳಸುವಲ್ಲಿ ಕೆಲವು ಗೊಂದಲಗಳಿವೆಯೆಂಬ ಕುರಿತು ೨೧ ರಿಂದ ೨೯/೧೦/೧೬ ನಡೆದ ಕನ್ನಡ ಭಾಷಾ ಶಿಕ್ಷಕರ ರಾಜ್ಯ ಮಟ್ಟದ ಕಾರ್ಯಗಾರದಲ್ಲಿ ಚರ್ಚೆಗಳು ನಡೆದವು ಹಾಗೂ ಬರಹದಲ್ಲಿರುವ ತೊಡಕುಗಳಿಗೆ ಪರಿಹಾರವನ್ನು ಕುರಿತು ಇಲ್ಲಿ ಸ್ಪಷ್ಟಪಡಿಸಲಾಯಿತು.

ಅರ್ಕಾವತ್ತು ದೀರ್ಘದ ನಂತರ ಬರಬೇಕು ಎಂದು ಒಂದು ವಾದವಾದರೆ, ಅರ್ಕಾವೊತ್ತಿನ ನಂತರ ದೀರ್ಘ ಬರಬೇಕೆಂದು ಇನ್ನೊಂದು ವಾದ. ಮೊದಲ ವಾದಕ್ಕೆ ಆಧಾರವೆಂದರೆ ಶರ್ವಾಣಿ ಎಂಬಲ್ಲಿ ಇಳಿಯ ನಂತರ ಅರ್ಕಾವೊತ್ತು ಬಂದಿದೆ. ಆದ್ದರಿಂದ ನಿರ್ದೇಶನ ಎಂಬ ಪದದಲ್ಲಿ ಏತ್ವದ ನಂತರ ದೀರ್ಘ ಬರಬೇಕು (ನಿರ್ದೇಶನ). ಎರಡನೇ ವಾದಕ್ಕೆ ಆಧಾರವೆಂದರೆ ದೀರ್ಘ ಎನ್ನುವುದು ಇಡೀ ಫಲಕವನ್ನು ನಂತರ ದೀರ್ಘ ಬರಬೇಕು. ಭಾಷಿಕ ದೃಷ್ಟಿಯಿಂದ ಗಮನಿಸಿದರೆ ಮೊದಲನೇ ವಾದ ಸರಿ. ಆದರೆ ಬಳಕೆಯಲ್ಲಿ ಎರಡೂ ರೀತಿ ಇರುವುದನ್ನು ಗಮನಿಸಬಹುದು. ಆದುದರಂದ ಯಾವ ರೀತಿಯಲ್ಲಿ ಬರೆದರೂ ಉಚ್ಚರಣೆಗೆ ತೊಡಕಿರುವುದಿಲ್ಲ. ಬೇಡ ಎನ್ನುವವರು ಎರಡನ್ನೂ ಬಿಟ್ಟು 'ರ' ಕಾರವನ್ನು ಬಳಸಿ ಬರೆಯಬಹುದು ಉದಾ : ನಿರ್ದೇಶನ ಎಂದು ಬರೆಯಬೇಕು ಎಂದು ಚರ್ಚಿಸಲಾಯಿತು.

ಈ ಅರ್ಕಾವತ್ತಿನ ವಿಚಾರವಾಗಿ 'ಕನ್ನಡ ಬರಹವನ್ನು ಸರಿಪಡಿಸೋಣ' ಕೃತಿಯಲ್ಲಿ ಡಿ.ಎನ್. ಶಂಕರಬಟ್‌ರು 'ರ' ಕಾರದ ಮೂರು ರೂಪಗಳಲ್ಲಿ ಅರ್ಕಾವತ್ತು ಒಂದಾಗಿದೆ ಎಂದಿದ್ದಾರೆ. ಉದಾಹರಣೆಗೆ ರಾಮ, ಬರ್‍ರೀ, ಸೂರ್ಯ ಈ ಮೂರು ರೀತಿಯಲ್ಲಿ 'ರ' ಕಾರದ ಈ ಮೂರನೆಯ ರೂಪ ತೊಂದರೆ ಕೊಡಬಲ್ಲುದು. ಯಾಕೆಂದರೆ ಉಚ್ಚಾರಣೆಯಲ್ಲಿ ಅದು ಇನ್ನೊಂದು ವ್ಯಂಜನದ ಅನಂತರ ಬರುತ್ತದೆ! ಉದಾಹರಣೆಗಾಗಿ ಮಾರ್ಪಾಡು ಪದದ ಉಚ್ಚಾರಣೆಯಲ್ಲಿ ರ ಕಾರ ಪ ಕಾರದ ಮೊದಲು ಬರುತ್ತದೆ. ಆದರೆ ಬರಹದಲ್ಲಿ ಅದು ಪ ಕಾರದ ಅನಂತರ ಬರುತ್ತದೆ.

ಕನ್ನಡ ಬರಹವನ್ನು ಸರಿಪಡಿಸುವ ಈ ಸಂದರ್ಭದಲ್ಲಿ ಅದರಲ್ಲಿ ಕಾಣಿಸುವ ಈ ರ ಕಾರದ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಬಹುದು. ಇದಕ್ಕಾಗಿ ಸ್ವರ ಮತ್ತು ವ್ಯಂಜನಗಳ ನಡುವೆ ಬರುವ ರ ಕಾರವನ್ನು ಇತರ ವ್ಯಂಜನಗಳ ಹಾಗೆ ಅದರ ಮೊದಲನೆಯ ದೊಡ್ಡ ರೂಪದಲ್ಲೆ ಬರೆಯಬೇಕೆಂಬ ನಿಯಮವನ್ನು ಬರೆಯಬೇಕು. (ಮಾರ್ಪಾಡು ಎಂಬುದನ್ನು ಮಾರ‍್ಪಾಡು ಎಂಬುದಾಗಿ ಬರೆಯಬೇಕು). ಹೀಗೆ ಮಾಡಿದಲ್ಲಿ ಅದರ ೯ ಎಂಬ ದೊಡ್ಡ ರೂಪ ಬೇಕಾಗುವುದಿಲ್ಲ ಎಂದಿದ್ದಾರೆ. (ಪುಟ ಸಂಖ್ಯೆ. ೧೧೬-೧೧೭)

ಬರವಣಿಗೆಯಲ್ಲಿ ಕಾಗುಣಿತ ಸ್ವರೂಪವನ್ನು ಗಮನಿಸಿದಾಗ ಕೇವಲ ಕನ್ನಡ ಲಿಪಿ ಸ್ವರೂಪದಲ್ಲಿನ ಸ್ವರ, ವ್ಯಂಜನ, ಅವರ್ಗೀಯ ವ್ಯಂಜನ ಮತ್ತು ಕಾಗುಣಿತಗಳು ಎಂದು ಮಾತ್ರ ಉಚ್ಚರಿಸುವುದನ್ನು ಗಮನಿಸಲಾಗಿದೆ. ಆದರೆ ಕಾಗುಣಿತದಲ್ಲಿ ಬರುವಂತಹ ತಲೆಕಟ್ಟು, ಇಳಿ, ಗುಡಿಸು, ದೀರ್ಘ, ಕೊಂಬು, ಕೊಂಬಿನಿಳಿ, ವಟ್ಟರುಸುಳಿ, ಎತ್ವ, ಏತ್ವದೀರ್ಘ, ಐತ್ವ, ಒತ್ವ, ಓತ್ವದೀರ್ಘ, ಔತ್ವ, ಎಂಬ ಹೆಸರುಗಳಿವೆ ಎಂಬುದು ಕನ್ನಡ ಭಾಷಾ ಬೋಧಕರಿಗೆ ಪ್ರತಿಶತ ೮೦% ರಷ್ಟು ಬೋಧಕರಿಗೆ ತಿಳಿಯದಿರುವುದು ನಿಜ ಸಂಗತಿ.

ತಲೆಕಟ್ಟು : 'ಅ' ಕಾರ ಸೂಚಕ ಬರೆಹ ತಲೆಕಟ್ಟು ಇದಕ್ಕೆ ಕೆಲವೆಡೆ ತಲೆಕೊಟ್ಟು ಎಂಬ ಹೆಸರಿದೆ. ಕೊಟ್ಟು (ಗುದ್ದಲಿ) ಎಂಬ ಸಾಧನದ ಆಕಾರದಿಂದ ಇದಕ್ಕೆ ತಲೆಕಟ್ಟು ಎನ್ನಲಾಗುವುದು. ಯ ಮತ್ತು ಝ ಅಕ್ಷರಗಳ ವ್ಯತ್ಯಾಸಕ್ಕಾಗಿ 'ಝ'ದ ಪ್ರಾರಂಭದಲ್ಲಿ ತಲೆಕಟ್ಟು ಬಂದಿದೆ.

ಇಳಿ: 'ಆ' ಕಾರ ಸೂಚಕ ತಲೆಕಟ್ಟು ಇಳಿಯುವುದು ಇದರ ಲಕ್ಷಣ ಖಾ,ರಾ,ವಾ,ಯಾ,ಝಾ ಇಳಿದ ನಂತರ ಬುಡಕ್ಕೆ ಸಮನಾಂತರವಾಗಿ ಸುರಳಿ ಸುತ್ತುವುದು ರೂಢಿ.

ಗುಡಿಸು: ಗುಡಿಸು, ಗುಡುಸು, ಗುಣಿಸು ಎಂಬ ಪರ್ಯಾಯ ಹೆಸರುಗಳಿವೆ. ತೆಲುಗಿನಲ್ಲಿ ಇದಕ್ಕೆ ಗುಡಿ ಎನ್ನಲಾಗುತ್ತದೆ. ಮಂಡಲ, ವೃತ್ತ ಎಂಬ ಅರ್ಥವಿದೆ. ತಲೆಕಟ್ಟಿನ ಬದಲು ಅಥವಾ ತುದಿಯಲ್ಲಿ ವೃತ್ತವಿರುವುದು ಇದರ ಲಕ್ಷಣ. ಉದಾ: ಕಿ, ಗಿ, ಚಿ, ಇತ್ಯಾದಿ.

ಕೊಂಬು, ಕೊಂಬಿನಿಳಿ : ವ್ಯಂಜನದೊಂದಿಗೆ ಕ್ರಮವಾಗಿ ಉ,ಊ ಸ್ವರಗಳು ಸಂಯೋಜನೆಯಾಗುವುದರ ಸೂಚಕ ಕೊಂಬು ಮತ್ತು ಕೊಂಬಿನ ಇಳಿ. ಪ್ರಾಣಿಗಳ ಕೋಡಿಗೆ ಸಮೀಪವಾದ ಆಕಾರದಲ್ಲಿರುವುದರಿಂದ ಕೊಂಬು ಎಂಬ ಹೆಸರು ಬಂದಿದೆ. ಪ,ಹ,ಕಾರಗಳಿಗೆ ಕೆಳಗಿನಿಂದ ಬರೆಯುವ ರೂಢಿಯಿದೆ. ಇವೆರಡರ ನಡುವೆ ಲಿಪಿ ರೂಪದಲ್ಲಿ ಸಾಮ್ಯತೆಯಿದ್ದ ಕಾರಣ 'ಹ' ಕಾರದ ಬಲಬದಿಗೆ ಕೊಂಬು ಕೊಂಬಿನಿಳಿ ಕೊಡುವ ರೂಢಿ ಬೆಳೆದು ಬಂದಿದೆ.

ಉದಾ: ಹೂ, ಪೂ.

ವಟ್ಟೃಸೂಳಿ : ವಟ್ಟ (ದುಂಡಾದ) ಋ ಸ್ವರದ ಎಂಬುದರಿಂದ ವಟ್ಟೃಸುಳಿ ಎನ್ನುವ ಪದ ಬಂದಿದೆ. ಅಕ್ಷರದ ಕೆಳಗೆ ಒತ್ತಕ್ಷರದ ಮಾದರಿಯಲ್ಲಿ ಬರುತ್ತದೆ. ಇಳಿಗೆ ಸಮೀಪವಾದ ರೂಪವಿದು ಉದಾ: ಗೃ, ಝೃ,ಸೃ.

ಎತ್ವ : 'ಎ' ಸ್ವರದ ಸೂಚಕ ಎತ್ವ, ತಲೆಕಟ್ಟಿನ ತುದಿಭಾಗ ಸುರುಳಿಯಾಗಿ ಸುತ್ತಿ ಎತ್ವವಾಗುತ್ತದೆ. ಉದಾ: ಕೆ, ಕೇ, ಕೊ, ಇತ್ಯಾದಿ.

ಐತ್ವ : 'ಐ' ಸ್ವರದ ಸಂಯೋಜನೆ ಐತ್ವ, ಇದರ ಲಿಪಿರೂಪ 'ಐ' ಕಾರ ಮೇಲಿನಿಂದ ಪಡೆಯಲಾಗಿದೆ.

ಉದಾ: ಕೈ

ಒತ್ವ, ಓತ್ವ : ಒ ಮತ್ತು ಓ ವ್ಯಂಜನದೊಂದಿಗೆ ಸಂಯೋಜನೆಯಾಗುವ ರೂಪ. ಓತ್ವ ಕೊಂಬಿನಿಳಿಗೆ ಸಮೀಪವಾಗಿದೆ. ಅದಕ್ಕಿಂತ ಭಿನ್ನ ಎಂಬುದನ್ನು ಸೂಚಿಸುವ ಸಲುವಾಗಿ ಅಕ್ಷರದಲ್ಲಿ ಒತ್ವ ಚಿಹ್ನೆಯನ್ನು ಬಳಸುತ್ತೇವೆ ಉದಾ: ಕೊ, ಕೋ.

ಈ ರೀತಿಯಾಗಿ ಕನ್ನಡ ಲಿಪಿ ಬ್ರಾಹ್ಮಿಲಿಪಿಯಿಂದ ಬೆಳೆದುಬಂದಿದೆ. ಕನ್ನಡ ಅಕ್ಷರಗಳು ದುಂಡು ದುಂಡಾಗಿವೆ. ಅಕ್ಷರಗಳನ್ನು ಬರೆದಂತೆ ಉಚ್ಚರಿಸಲಾಗುತ್ತದೆ. ಹಾಗಾಗಿ ಕನ್ನಡ ಧ್ವನಿಕಭಾಷೆಯಾಗಿದೆ. ಈ ರೀತಿಯಾಗಿ ರಾಜ್ಯಮಟ್ಟದ ಕನ್ನಡ ಭಾಷಾ ಕಾರ್ಯಗಾರದಲ್ಲಿ ಬರಹದಲ್ಲಿರುವ ಕಾಗುಣಿತ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಚರ್ಚೆಯ ಮೂಲಕ ಪರಿಹಾರವನ್ನು ಕಂಡುಕೊಂಡು ಅಂತಿಮ ತೀರ್ಮಾನವನ್ನು ತೆಗೆದುಕೊಂಡು ಸರಿಯಾದ ಬರವಣಿಗೆ ಕ್ರಮದ ಮಾಹಿತಿಯನ್ನು ಒದಗಿಸಲಾಯಿತು.[೬]

ಹಾಗಾದರೆ ಬರವಣಿಗೆಯಲ್ಲಿ ಕನ್ನಡಭಾಷಾ ಬೋಧಕರಲ್ಲಿ ಸಮಸ್ಯೆ ಇದೆ ಎಂದು ಹೇಳುವುದಕ್ಕೆ ಈ ಅಂಶಗಳು ಸಾಕ್ಷಿಯಾಗುತ್ತವೆ. ಆದರೆ ಬೋಧಕರು ತಮ್ಮಲ್ಲಿರುವ ಬೋಧನಾ ಸಮಸ್ಯೆಯನ್ನು ಹೇಳಿಕೊಳ್ಳುವುದಿಲ್ಲ. ಏಕೆಂದರೆ ಅವರಿಗೆ ಅವರದೆಯಾದ ಸ್ವಾಭಿಮಾನ ಕಾಡುತ್ತಿರುತ್ತದೆ. ಇದರಿಂದ ಎಷ್ಟೋ ಬೋಧಕರು ಸಮಸ್ಯೆಯ ಸುಳಿಯಲ್ಲಿಯೇ ಬೋಧಿಸುತ್ತಿರುವುದರಿಂದ ಇಂದಿಗೂ ನಾವು 'ಸ್ಪಷ್ಟ ಓದು ಶುದ್ಧ ಬರಹ'ದ ಕೊರತೆ ನೀಗಿಸಲು ಸಾಧ್ಯವಾಗುತ್ತಿಲ್ಲ.

೪.೬. ಬೋಧನಾ ಸಂಪನ್ಮೂಲದ ಸಮಸ್ಯೆ

ಅ) ಪೂರ್ವ ತಯ್ಯಾರಿಯಿಲ್ಲದಿರುವುದು :

ಬೋಧಕರು ತಮ್ಮ ಅವಧಿಗೆ ಮುಂಚಿತವಾಗಿ ಯಾವುದೇ ರೀತಿಯ ಪೂರ್ವ ತಯಾರಿಯಿಲ್ಲದೆ ಬೋಧಿಸುವುದಕ್ಕೆ ಬರುವುದು ಬೋಧನೆಯ ಪ್ರಮುಖ ಸಮಸ್ಯೆಯಾಗಿದೆ. ಒಂದು ವಿಷಯವನ್ನು ಅಂದರೆ ಗದ್ಯ ಅಥವಾ ಪದ್ಯವನ್ನು ಆಯ್ಕೆಮಾಡಿಕೊಂಡು ಅದನ್ನು ಯಾವ ಮಾದರಿಯಲ್ಲಿ ಬೋಧಿಸಬೇಕು ಎಂಬುದು ಬೋಧಕರಿಗೆ ಗೊತ್ತಿರಬೇಕು. ಅಂದರೆ ನಾವು ಆಯ್ಕೆ ಮಾಡಿಕೊಂಡ ವಿಷಯವನ್ನು ಉಪನ್ಯಾಸ ಮಾದರಿಯೋ, ನಾಟಕ ಮಾದರಿಯೋ, ಕಥನ ಪದ್ಧತಿಯೋ ಎಂಬುದನ್ನು ಬೋಧಕರಾದವರು ಅರಿತಾಗ ಆಯಾ ಕಲಿಕಾರ್ಥಿಯಲ್ಲಿ ಬೆಳೆಸಲು ಸಾಧ್ಯವಾಗುತ್ತದೆ.

ಏಕೆಂದರೆ ಕನ್ನಡ ಭಾಷಾ ಬೋಧನೆಯ ಪದ್ಧತಿಗಳು ಒಂದೊಂದು ರೀತಿಯ ಭಾಷಾ ವೈಶಿಷ್ಟ್ಯತೆಯನ್ನು ಒಳಗೊಂಡಿವೆ. ನಾಟಕ ಪದ್ಧತಿಯಿರುವ ಗದ್ಯವನ್ನು ಉಪನ್ಯಾಸ ಮಾದರಿಯಲ್ಲಿ ಬೋಧಿಸಿದರೆ ಕಲಿಕಾರ್ಥಿಗೆ ನಾಟಕ ಭಾಷಾ ಶೈಲಿ ಅರ್ಥೈಸಿಕೊಳ್ಳಲು ಆಗುವುದಿಲ್ಲ. ಉದಾಹರಣೆಗೆ ನಾಟಕದ ಭಾಷಾ ಶೈಲಿಯನ್ನು ಗಮನಿಸೋಣ.

ನಾಟಕ 'ಬಿಲ್ಲ ಹಬ್ಬ' ೮ನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕ ೨೦೧೧. ಇದರಲ್ಲಿ ನಾಟಕ ಹೀಗಿದೆ. "ಪಾತ್ರದಾರಿಗಳು, ಮಂತ್ರಿ... (ಉತ್ಸಾಹಿತನಾಗಿ) ಇವರೇ ಒಡೆಯಾ ಅವರು... ಇವ ಶೈಲಿಕ... ಇವ ದುರ್ವಿಧ...

ಶೈಲಿಕ–ದುರ್ವಿದ : (ಹಲ್ಲುಗಿಂಜುತ್ತಾ) ನಮಸ್ಕಾರ ಅನ್ನದಾತ...

ಶೈಲಿಕ–ಇದು ನಿಮ್ಮ ಕೈ ಅಲ್ಲ ನಿಮ್ಮ ಕಾಲು..."

ಈ ರೀತಿಯಾ ನಾಟಕ ಶೈಲಿಯ ಕನ್ನಡ ಭಾಷೆಯನ್ನು ಬೋಧಕರು ಹಾವ–ಬಾವ, ಧ್ವನಿಯಲ್ಲಿ ಏರಿಳಿತ ಗಡಸುತನ, ನಾಜೂಕುತನ ಇತ್ಯಾದಿ ಆಯಾ ಪಾತ್ರಧಾರಿಗಳಿಗೆ ತಕ್ಕಂತೆ ಬೋಧಿಸಬೇಕಾಗುತ್ತದೆ. ಹೀಗೆ ಬೋಧಿಸಬೇಕು ಎಂದರೆ ಅವರಿಗೆ ಪೂರ್ವ ತಯ್ಯಾರಿ ಅತ್ಯಂತ ಅವಶ್ಯಕ. ಪೂರ್ವ ತಯ್ಯಾರಿ ಇಲ್ಲದೆ ಬೋಧಿಸಿದ್ದರೆ ಓದುಗಾರಿಕೆಯಲ್ಲಿ ಬೋಧಕರು ಸಮಸ್ಯೆಯನ್ನು ಎದುರಿಸುತ್ತಾರೆ.

ಆ) ಕಲಿಕೋಪಕರಣಗಳಿಲ್ಲದೆ ಬೋಧಿಸುವುದು :


ಕನ್ನಡ ಭಾಷೆಯನ್ನು ಬೋಧಿಸುವುದಕ್ಕೆ ಕಲಿಕೋಪಕರಣಗಳು / ಪಾಠೋಪಕರಣಗಳು ಅತ್ಯಂತ ಅವಶ್ಯಕ. ಪ್ರತಿಯೊಂದು ಪ್ರೌಢಶಾಲೆಗಳಲ್ಲಿ ಬೋಧಕರು ಕಲಿಕೋಪಕರಣಗಳಿಲ್ಲದೆ ಬೋಧಿಸುವಾಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹೇಗೆಂದರೆ ಬೋಧಕರು ಬಸಯ್ಯ ಮತ್ತು ಜೇನುಗೂಡು ಗದ್ಯವನ್ನು ಬೋಧಿಸುವಾಗ ಎಷ್ಟೋ ಮಕ್ಕಳು ಜೇನುಗೂಡನ್ನೆ ನೋಡಿರುವುದಿಲ್ಲ. ಹಾಗಾಗಿ ಜೇನುಗೂಡನ್ನು ಮಕ್ಕಳಿಗೆ ತೋರಿಸಿದಾಗ ಜೇನುಗೂಡಿನ ಪರಿಕಲ್ಪನೆ ಮಕ್ಕಳಲ್ಲಿ ಮೂಡುತ್ತದೆ (ಕನ್ನಡ ಕಸ್ತೂರಿ ೮ನೇ ತರಗತಿ – ೨೦೧೦). ಅದೇ ರೀತಿಯಾಗಿ ಕಠಿಣ ಪದಗಳನ್ನು ಒಳಗೊಂಡ ಮಿಂಚು ಪಟ್ಟಿಯನ್ನು ಕಲಿಕಾರ್ಥಿಗಳಿಗೆ ತೋರಿಸಿದಾಗ ಆ ಪದದ ಅರ್ಥವನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಅರ್ಥವನ್ನು ತಿಳಿಸುತ್ತಾರೆ. ಇದರಿಂದ ತರಗತಿಯಲ್ಲಿ ಆಸಕ್ತಿದಾಯಕ ವಾತಾವರಣ ನಿರ್ಮಾಣವಾಗುತ್ತದೆ. ಮತ್ತು ಭಾಷಾ ಅಭಿವೃದ್ಧಿಗೂ, ಭಾಷಾ ವಿಸ್ತಾರಕ್ಕೂ ಕಲಿಕೋಪಕರಣಗಳೂ ಸಹಾಯಕವಾಗುತ್ತವೆ. ಇಂತಹ ಭಾಷಾ ಬೋಧನೆಗೆ ಸಹಾಯಕವಾಗುವಂತಹ ಕಲಿಕೋಪಕರಣಗಳಿಲ್ಲದೆ ಬೋಧಕರು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಬೋಧಕರಿಗೆ ಯಾವುದೇ ರೀತಿಯಿಂದ ಶಾಲಾ ಆಡಳಿತದಿಂದ ಕಲಿಕೋಪಕರಣಗಳ ಮಾದರಿಗಳನ್ನು ತಯಾರಿಸುವುದಕ್ಕೆ ಹಣವನ್ನು ನೀಡದೆ ಇರುವುದು ಒಂದು ದುಸ್ತರ ಸಂಗತಿಯಾಗಿದೆ.

ಇ) **ಬೋಧನೆಗೆ ಸೂಕ್ತ ಪರಿಸರ ಇಲ್ಲದಿರುವುದು :**

ಭಾಷೆಯನ್ನು ಬೋಧಿಸುವಾಗ ಬೋಧನೋಪಕರಣಗಳು ಹೇಗೆ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆಯೋ ಅದೇ ರೀತಿಯಾಗಿ ಸೂಕ್ತವಾದ ಕಲಿಕಾ ಪರಿಸರವೂ ಬೋಧನೆಗೆ ಅತ್ಯಂತ ಅವಶ್ಯಕವಾಗಿದೆ. ಆದರೆ ಬಹಳಷ್ಟು ಸರಕಾರಿ ಶಾಲೆಗಳಲ್ಲಾಗಲಿ, ಖಾಸಗಿ ಶಾಲೆಗಳಲ್ಲಾಗಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು, ಬೋಧಕರು ಮಾತ್ರ ಒಬ್ಬರೆ ಆಗಿದ್ದಾರೆ. ಒಬ್ಬ ಭಾಷಾ ಬೋಧಕರಿಗೆ ಕನಿಷ್ಟ ತರಗತಿಗಳನ್ನು ಒಂದು ದಿನಕ್ಕೆ ಮೂರು, ಗರಿಷ್ಟ ನಾಲ್ಕು ತರಗತಿಗಳನ್ನು ಬೋಧಿಸಬೇಕು. ಆದರೆ ಕೆಲವೊಂದು ಶಾಲೆಗಳಲ್ಲಿ ಐದು ತರಗತಿಗಳು ಒಂದು ದಿನದಲ್ಲಿ ಬೋಧಿಸಬೇಕು. ಇದರಿಂದ ಬೋಧಕರಿಗೆ ವಿಶ್ರಾಂತಿ ಇಲ್ಲದೆ ನಿರಂತರ ಬೋಧಿಸುತ್ತಲೆ ದಿನ ಕಳೆದಾಗ ಬೋಧನೆಯಲ್ಲಿ ಸಮಸ್ಯೆ ಉಂಟಾಗುತ್ತದೆ.

ಹಾಗೆ ಒಂದು ತರಗತಿಯಲ್ಲಿ ಹೆಚ್ಚೆಂದರೆ ೪೦ ರಿಂದ ೫೦ ಮಕ್ಕಳು ಇದ್ದರೆ ತರಗತಿಯ ನಿರ್ವಹಣೆ ಮತ್ತು ಕಲಿಕಾರ್ಥಿಯ ಕಲಿಕಾ ನ್ಯೂನತೆಗಳನ್ನು ಬೋಧಕರು ಗುರುತಿಸಿ ಕಲಿಕಾ ಸಮಸ್ಯೆಯುಳ್ಳ ಮಗುವಿಗೆ ವಿಶೇಷವಾಗಿ ಬೋಧಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇಲ್ಲಿ ಕೆಲವೊಂದು ಶಾಲೆಗಳಲ್ಲಿ ಅಂದರೆ ಸರಕಾರಿ ಶಾಲೆಗಳಲ್ಲೆ ಹೆಚ್ಚಾಗಿ ಒಂದೊಂದು ತರಗತಿಗೆ ಎ.ಬಿ.ಸಿ ಎಂದು ಮೂರು ನಾಲ್ಕು ತರಗತಿಗಳು ಇರುತ್ತವೆ. ಒಂದೊಂದು ತರಗತಿಯಲ್ಲಿ ೭೦ ರಿಂದ ೮೦ ಮಕ್ಕಳಿರುತ್ತಾರೆ. ಅಂತಹ ಸಂದರ್ಭದಲ್ಲಿ ಬೋಧಕರಿಗೆ ಹೆಚ್ಚಿನ ಹೊರೆಯಾಗಿ ಬೋಧಿಸುವಾಗ ಸಮಸ್ಯೆಯನ್ನು ಎದುರಿಸುತ್ತಾರೆ. ಮತ್ತು ಸೂಕ್ತ ಕಲಿಕಾ ಪರಿಸರ ಇಲ್ಲದಿರುವುದರಿಂದ ಕಲಿಕೆಯಲ್ಲಿ ಮಕ್ಕಳು ಸಮಸ್ಯೆಯನ್ನು ಎದುರಿಸುತ್ತಾರೆ. ಏಕೆಂದರೆ ಬೋಧಕರು ಕಲಿಕಾರ್ಥಿಗಳ ಸಂಖ್ಯೆ ಹೆಚ್ಚಾದಾಗ ಎಲ್ಲಾ ಕಲಿಕಾರ್ಥಿಗಳನ್ನು ಗಮನಿಸುವುದಕ್ಕೆ ಆಗುವುದಿಲ್ಲ. ಹೀಗಾಗಿ ಭಾಷಾ ಕಲಿಕೆಗೆ ಸೂಕ್ತವಾದ ಕಲಿಕಾ ಪರಿಸರದ ಅವಶ್ಯಕತೆ ಇದೆ. ಆದ್ದರಿಂದ ಬೋಧಕರ ಹೇಳಿಕೆಯಲ್ಲಿ ಕಲಿಕೆಗೆ ಯಾವುದು ಸೂಕ್ತ ಸಮಯ ಯಾವ ಸಮಯದಲ್ಲಿ ಕನ್ನಡ ಭಾಷೆ ಬೋಧಿಸಬೇಕು, ಮತ್ತು ಪಠ್ಯಪುಸ್ತಕದಲ್ಲಿನ ಪಾಠಗಳ ಕಠಿಣ ಮತ್ತು ಸರಳತೆಯ ಮಟ್ಟವನ್ನು ತಿಳಿದುಕೊಳ್ಳಲು ಒಟ್ಟು ೪೦ ಕನ್ನಡ ಭಾಷಾ ಬೋಧಕರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಧ್ಯಯನದಿಂದ ಬಂದ ಮಾಹಿತಿಯನ್ನು ಸ್ಥಂಬ ರೇಖಾ ಚಿತ್ರದ ಮೂಲಕ ಪ್ರತಿಶತವನ್ನು ತೋರಿಸಲಾಗಿದೆ.

ಪ್ರಶ್ನೆ. ಕನ್ನಡ ಭಾಷೆಯನ್ನು ಬೋಧಿಸುವುದಕ್ಕೆ ಯಾವ ಸಮಯ ಸೂಕ್ತವಾಗಿದೆ? ಎಂಬ ಪ್ರಶ್ನೆಗೆ ಈ ಕೆಳಗಿನ ಸ್ತಂಭ ರೇಖಾ ಚಿತ್ರದ ಮೂಲಕ ಪ್ರತಿಶತವನ್ನು ಗುರುತಿಸಲಾಗಿದೆ.




ಸ್ತಂಭ ರೇಖಾ ಚಿತ್ರ–೧

ವಿಶ್ಲೇಷಣೆ :

ಕನ್ನಡ ಭಾಷೆಯನ್ನು ಬೋಧಿಸುವುದಕ್ಕೆ ಬೆಳಗಿನ ಸಮಯ ಸೂಕ್ತ ಎಂದು ಪ್ರತಿಶತ ೯೬ರಷ್ಟು ಬೋಧಕರು ಒಪ್ಪಿಕೊಂಡಿದ್ದಾರೆ ಬೆಳಗಿನ ಸಮಯದಲ್ಲಿ ಮೊದಲನೇಯ ಅವಧಿಯನ್ನು ೮, ೯, ೧೦ನೇ ತರಗತಿಗಳಲ್ಲಿ ಕೇವಲ ಒಂದು ತರಗತಿಗೆ ಮಾತ್ರ ಬೋಧಿಸುವುದಕ್ಕೆ ಆಗುತ್ತದೆ. ಇನ್ನೊಂದು ತರಗತಿ ಅರ್ಧವಿರಾಮದ ನಂತರ ತೆಗೆದುಕೊಂಡರೆ, ಮತ್ತೊಂದು ಅವಧಿಯನ್ನು ಮಧ್ಯಾಹ್ನ ಊಟದ ನಂತರ ಬೋಧಿಸಬೇಕಾಗುತ್ತದೆ.

ಈ ಬೆಳಗಿನ ಸಮಯದಲ್ಲಿ ಕಲಿಕಾರ್ಥಿಗಳು ಆಸಕ್ತಿಯಿಂದ ಆಲಿಸಿದಷ್ಟು, ಅರ್ಧ ವಿರಾಮದ ನಂತರ ಆಲಿಸುವುದಿಲ್ಲ. ಮತ್ತು ಮಧ್ಯಾಹ್ನ ಊಟದ ನಂತರ ಆಕಳಿಕೆ, ತೂಕಡಿಕೆಯಿಂದ ಕಲಿಕೆಯಲ್ಲಿ ತೊಡಗುವುದರಿಂದ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿಯಿರುವುದಿಲ್ಲ. ಆದ್ದರಿಂದ ಕಲಿಸುವುದಕ್ಕೆ ಬೆಳಗಿನ ಅವಧಿ ಸೂಕ್ತ ಎನ್ನುವುದು ಬೋಧಕರ ಅಭಿಪ್ರಾಯವಾಗಿದೆ.

• ಕನ್ನಡ ಭಾಷೆಯನ್ನು ಬೋಧಿಸುವುದಕ್ಕೆ ಸಮಯ ಸಾಕಾಗುತ್ತದೆಯೇ? ಎಂಬ ಪ್ರಶ್ನೆಗೆ ಈ ಕೆಳಗಿನ ರೇಖಾ ಚಿತ್ರದ ಮೂಲಕ ಪ್ರತಿಶತ ಹಾಕಲಾಗಿದೆ.




ರೇಖಾ ಚಿತ್ರ-೨

ವಿಶ್ಲೇಷಣೆ :

ಮೊದಲಿನ ಬೋಧನಾ ಪದ್ಧತಿಯ ಪ್ರಕಾರ ಸಮಯ ಸಾಕಾಗುತ್ತಿತ್ತು. ಹೊಸ ಬೋಧನಾ ಪದ್ಧತಿಯು ಚಟುವಟಿಕೆಯಾಧಾರಿತ ಇರುವುದರಿಂದ ಸಮಯ ಸಾಕಾಗುತ್ತಿಲ್ಲ ಎಂಬ ಅಂಶ ತಿಳಿದುಬಂದಿದೆ. ಕಲಿಕಾರ್ಥಿಗಳು ಮಾಡುವ ಚಟುವಟಿಕೆಗಳಿಗೆ ಬೋಧಕರು ಮಾರ್ಗದರ್ಶನ ನೀಡಬೇಕು. ಆಗ ಪಠ್ಯವನ್ನು ಬೋಧಿಸುವುದಕ್ಕೆ ಮತ್ತು ಕಲಿಕಾರ್ಥಿಗಳ ಬರವಣಿಗೆ, ಓದುಗಾರಿಕೆಯನ್ನು ಗಮನಿಸುವುದಕ್ಕೆ ಕೊಟ್ಟಂತಹ ಸಮಯ ಸಾಕಾಗುತ್ತಿಲ್ಲ. ಈ ಅಂಶವು ಅಧಿಕಾರಿಗಳ ಗಮನಕ್ಕೆ ತಂದ್ದಾಗ ಅವರಿಂದ ಬಂದ ಉತ್ತರ ಹೆಚ್ಚಿನ ಅವಧಿಗಳನ್ನು ತೆಗೆದುಕೊಳ್ಳಬೇಕು ಎಂದಿದ್ದಾರೆ. ಒಂದು ದಿನದಲ್ಲಿ ಶಾಲಾ ವೇಳಾ ಪಟ್ಟಿಯ ಪ್ರಕಾರ ಸರಕಾರದ ನಿಯಮದ ಪ್ರಕಾರ ಎಂಟು ತರಗತಿಗಳು ಇರುತ್ತವೆ. ಆರು ವಿಷಯಾಧಾರಿತ ತರಗತಿಗಳು ಮೂರು ಚಿತ್ರಕಲೆ, ದೈಹಿಕ ಶಿಕ್ಷಣ, ವೃತ್ತಿ ಶಿಕ್ಷಣ ತರಗತಿಗಳು ಒಳಗೊಂಡಿವೆ. ಬೆಳಿಗ್ಗೆ ೯:೫೦ಕ್ಕೆ ಪ್ರಾರ್ಥನೆ ಮುಗಿದ ನಂತರ ೧೦ ಗಂಟೆಯಿಂದ ೧೦:೪೦ ರವರೆಗೆ

ಒಂದು ಅವಧಿಯಿರುತ್ತದೆ. ಹೀಗೆ ನಿರಂತರವಾಗಿ ತರಗತಿಗಳು ನಡೆದಾಗ ಹೆಚ್ಚಿನ ಅವಧಿಗಳನ್ನು ಶಾಲಾವಧಿಯ ಪೂರ್ವ ಅಥವಾ ನಂತರದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಹೀಗೆ ಹೆಚ್ಚಿನ ಅವಧಿಯನ್ನು ತೆಗೆದುಕೊಂಡರು ಒಂದು ವಿಷಯಕ್ಕೆ ವಾರದಲ್ಲಿ ಒಂದು ಅವಧಿ ಮಾತ್ರ ಸಿಗುತ್ತದೆ ಎನ್ನುವುದು ಬೋಧಕರ ಅಭಿಪ್ರಾಯವಾಗಿದೆ.

- **ಪ್ರಾದೇಶಿಕವಾರು ಭಾಷಾ ಭಿನ್ನತೆಯುಳ್ಳ ಪಾಠಗಳು ಸರಳವೋ ಕಠಿಣವೋ? ಎಂಬ ಪ್ರಶ್ನೆಗೆ ಈ ಕೆಳಕಂಡ ರೇಖಾ ಚಿತ್ರದ ಮೂಲಕ ಪ್ರತಿಶತ ತಿಳಿಸಲಾಗಿದೆ.**



ರೇಖಾ ಚಿತ್ರ-೩

ವಿಶ್ಲೇಷಣೆ :

ಪ್ರಾದೇಶಿಕವಾರು ಭಾಷಾ ಭಿನ್ನತೆಯುಳ್ಳ ಪಾಠಗಳು ಸರಳ ಎಂದು ಪ್ರತಿಶತ ೨೬% ರಷ್ಟು ಬೋಧಕರು ಮಾತ್ರ ಒಪ್ಪಿಕೊಂಡಿದ್ದು, ಉಳಿದವರು ಕಠಿಣವಾಗುತ್ತೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಒಂದು ಪ್ರದೇಶದ ಭಾಷೆ ಮತ್ತೊಂದು ಪ್ರದೇಶದ ಕಲಿಕಾರ್ಥಿಗಳಿಗೆ ಬೋಧಿಸುವುದೆಂದರೆ ಕಷ್ಟ. ಉದಾಹರಣೆಗೆ ಕಲಬುರಗಿಯ ಕನ್ನಡ ಭಾಷೆ ಮಂಗಳೂರಿನ ಕಲಿಕಾರ್ಥಿಗಳು ಅರ್ಥೈಸಿಕೊಳ್ಳುವಲ್ಲಿ ಸಮಸ್ಯೆಯಾಗುತ್ತದೆ. ಮಂಗಳೂರಿನ ಕನ್ನಡ ಭಾಷೆ ಕಲಬುರಗಿಯಲ್ಲಿನ ಕಲಿಕಾರ್ಥಿಗಳು ಅರ್ಥೈಸಿಕೊಳ್ಳುವಲ್ಲಿ ಸಮಸ್ಯೆಯಾಗುತ್ತದೆ. ಅದೇ ರೀತಿಯಾಗಿ ಆಯಾ ಭಾಷೆ ಆಳಕ್ಕೆ ಹೋಗಿ ಬೋಧಿಸಲು ಬೋಧಕರಿಗೂ ಸಮಸ್ಯೆಯುಂಟಾಗುತ್ತದೆ ಎಂಬುವುದು ಸಮೀಕ್ಷೆಯ ಮೂಲಕ ತಿಳಿದು ಬಂದಿದೆ.

ಹಾಗಾದರೆ ಭಾಷಾ ಕಲಿಕೆಗೆ ಸೂಕ್ತವಾದ ಪರಿಸರ ಇಲ್ಲದಿರುವುದರಿಂದ ಕನ್ನಡ ಭಾಷಾ ಕಲಿಕಾರ್ಥಿಗಳು ಸಮಸ್ಯೆಯನ್ನು ಎದುರಿಸುತ್ತಿರುವರೇ? ಅಥವಾ ಅವರದೆಯಾದ ಕಲಿಕಾ ಸಮಸ್ಯೆಗಳು ಇವೆಯೇ? ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಕ್ಷೇತ್ರಕಾರ್ಯ ಅಧ್ಯಯನದ ಮೂಲಕ ಕನ್ನಡ ಭಾಷಾ ಕಲಿಕಾರ್ಥಿಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೪.೭. ಕಲಿಕೆ ಮತ್ತು ಬೋಧನೆಯಲ್ಲಿರುವ ತಾತ್ವಿಕ ಪ್ರಾಯೋಗಿಕ ಸಮಸ್ಯೆಗಳು

ಕನ್ನಡ ಭಾಷೆ ಎಂದು ಹೇಳುವುದಕ್ಕೆ ಒಂದೇ ಎನಿಸಿದರು ಅದರ ವಿಧಗಳು ಎರಡು. ಆರಂಭದಲ್ಲಿ ಅರ್ಜಿತವಾಗುವ ಆಡುಭಾಷೆ ಮತ್ತು ಅನಂತರದಲ್ಲಿ ಕಲಿಯುವ ಗ್ರಾಂಥಿಕ ಭಾಷೆ. ಜೀವದ್ಭಾಷೆಯಾದ ಆಡುಭಾಷೆ ಸಹಜವಾಗಿಯೇ ಒಲಿಯುತ್ತದೆ. ಹೆಚ್ಚು ಶಾಶ್ವತವೆನಿಸದ ಗ್ರಾಂಥಿಕ ಭಾಷೆ ಕಲಿಕೆಯಿಂದ ಸೇರಿಕೊಳ್ಳುತ್ತದೆ.

ಮಗುವಿಗೆ ಆರಂಭದಲ್ಲಿ ಸಹಜವಾಗಿ ದೊರೆತ ಭಾಷೆಯೇ ಅವರ ಮಾತೃಭಾಷೆ ಯೆನಿಸುತ್ತದೆ. ಮಗುವಿನ ಭಾಷಾ ವಿಕಾಸ ಈ ಭಾಷೆಯಿಂದಲೇ. ಮಾತೃಭಾಷೆಯ ಮೂಲಕವೇ ಕಲಿಕೆ ಆರಂಭವಾಗುತ್ತದೆ. ಆ ಕಲಿಕಾರ್ಥಿಗಳಿಗೆ ಮುಂದಿನ ಎಲ್ಲಾ ಆಗುಹೋಗುಗಳಿಗೆ, ಪ್ರಗತಿಗೆ ಆಧಾರವಾಗಿ ನಿಲ್ಲುವುದೇ ಈ ಮಾತೃಭಾಷೆ. ಆದ ಕಾರಣ ಕಲಿಕಾರ್ಥಿಗಳಿಗೆ ಮಾತೃಭಾಷೆಯ ಕಲಿಕೆ ಮಹತ್ವದಾಗಿರುತ್ತದೆ.

ಇಂತಹ ಸಂದರ್ಭದಲ್ಲಿ ಪ್ರೌಢ ಶಾಲೆಗಳಲ್ಲಿ ಕನ್ನಡ ಭಾಷಾ ಬೋಧಕರು ತಾತ್ವಿಕ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ಕಾರ್ಯನಿರ್ವಹಿಸಬೇಕಾಗುತ್ತದೆ.

* ಪಠ್ಯಕ್ರಮ ಎಂದರೆ ಕಲಿಕಾರ್ಥಿಯು ಪಡೆಯುವ ಶಾಲಾ ಅನುಭವಗಳ ಮೊತ್ತ.
* ಪಠ್ಯ ವಸ್ತುವೆಂದರೆ ಈ ಪಠ್ಯಕ್ರಮವನ್ನು ಆಧರಿಸಿ ವಯೋಮಾನ ಹಾಗೂ ತರಗತಿವಾರು ವಿಂಗಡಿಸಿದ ವಿಷಯಾಂಶ ಹಾಗೂ ನೀಡಬಹುದಾದ ಅನುಭವಗಳ ಹಂಚಿಕೆ ಪಟ್ಟಿ.
* ಪಠ್ಯಪುಸ್ತಕವೆಂದರೆ ಪಠ್ಯವಸ್ತುವನ್ನು ಆಧರಿಸಿ ಅಲ್ಲಿನ ಉಲ್ಲೇಖಗಳನ್ನು ಸಮಗ್ರವಾಗಿ ಕಟ್ಟಿಕೊಡುವ ಪ್ರಧಾನ ಸಾಮಗ್ರಿಯೆ ಈ ಪಠ್ಯಪುಸ್ತಕ.

ಇಂತಹ ಪಠ್ಯಪುಸ್ತಕವನ್ನು ಆಧರಿಸಿಯೇ ತರಗತಿ ಚಟುವಟಿಕೆಗಳು ಮತ್ತು ಮೌಲ್ಯಮಾಪನ ನಡೆಯುತ್ತದೆ. ಕೆಲವೊಮ್ಮೆ ಮೌಲ್ಯಮಾಪನದ ಮಿತಿಗಳು ಕಲಿಕಾ ಅನುಭವಗಳನ್ನು ನೀಡುವ ಅವಕಾಶಗಳನ್ನು ಕಡಿಮೆ ಮಾಡುವಂತೆ ಶಿಕ್ಷಕರನ್ನು ಪ್ರಭಾವಿಸಬಹುದು.

ಬೋಧಕರು ಪಠ್ಯಕ್ರಮ–ಪಠ್ಯವಸ್ತು–ಪಠ್ಯಪುಸ್ತಕ ಈ ಮೂರು ರಚನೆಯ ಮಧ್ಯದಲ್ಲಿ ಮಾರ್ಗದರ್ಶಕರಾಗಿ, ಸುಗಮಕಾರರಾಗಿ ಮತ್ತು ಅನುಕೂಲಿಸುವವರಾಗಿ ಕಾರ್ಯ ನಿರ್ವಹಿಸಬೇಕು. ಪಠ್ಯಪುಸ್ತಕವು ತನ್ನದೆಯಾದ ರಚನಾಕ್ರಮವನ್ನು ಹೊಂದಿದು ಇದನ್ನು ತಾತ್ವಿಕ ಹಿನ್ನೆಲೆಯಲ್ಲಿ ಬೋಧಕರು ಬೋಧಿಸುವಾಗ ಸಮಸ್ಯೆ ಎದುರಿಸಬೇಕಾಗುತ್ತದೆ.

ಆದರೆ ಮನೆಯಲ್ಲಿ ಮಾತನಾಡುವ ಭಾಷೆ ಕನ್ನಡವಾಗಿದ್ದು ಕನ್ನಡ ಭಾಷೆಯ ಕಲಿಕಾರ್ಥಿ ಮತ್ತು ಬೋಧಕರು ಕನ್ನಡ ಭಾಷೆಯಲ್ಲಿಯೇ ತೊಡಕನ್ನು ಎದುರಿಸುತ್ತಿದ್ದಾರೆ. ಭಾಷೆಯನ್ನು ಶೈಕ್ಷಣಿಕ ವ್ಯವಸ್ಥೆಯಿಂದ ನೋಡುವುದಾದರೆ ಇದರಲ್ಲಿ ಎರಡು ಕ್ರಮಗಳಿವೆ.

೧. ಆಡು ಭಾಷೆ

೨. ಗ್ರಂಥಸ್ಥ ಭಾಷೆ

ಈ ಆಡು ಭಾಷೆಯನ್ನು ಬರವಣಿಗೆಯಲ್ಲಿ ಬಳಸಿದರೆ ಅದನ್ನು ಸಮಸ್ಯೆಯ ರೂಪದಲ್ಲಿ ಶಿಕ್ಷಣ ವ್ಯವಸ್ಥೆ ನೋಡುತ್ತದೆ. ಭಾಷೆಯ ಕಲಿಕೆಯ ದೃಷ್ಟಿಯಿಂದ 'ಸ್ಪಷ್ಟ ಓದು ಶುದ್ಧಬರಹ'ಎನ್ನಬೇಕಾದರೆ ಅದು ಗ್ರಂಥಸ್ಥ ಭಾಷೆಯಾಗಿರಬೇಕು.

ಆದರೆ ಬೋಧಕ ಮತ್ತು ಕಲಿಕಾರ್ಥಿಗಳಿಬ್ಬರು ಸಮಾಜದ ಮಧ್ಯದಲ್ಲಿ ಹೆಚ್ಚಿನ ಸಂವಹನ ಕ್ರಿಯೆ ನಡೆಸುತ್ತಾರೆ. ಅದು ಆಡು ಭಾಷೆಯ ರೂಪವಾಗಿರುತ್ತದೇ ಹೊರತು ಗ್ರಂಥಸ್ಥ ಪದಗಳ ಬಳಕೆ ಇರುವುದಿಲ್ಲ. ಹೀಗಾಗಿ ಶಾಲಾ ಪರಿಸರದಲ್ಲಿಯೂ ಶಿಷ್ಟಭಾಷೆಗಿಂತ ದೇಸಿ ಸೊಗಡಿನ ಪದಗಳ ಬಳಸುವಿಕೆ ಹೆಚ್ಚಾಗಿ ಕಾಣುತ್ತೇವೆ. ನಾವು ಹೇಗೆ ಮಾತನಾಡುತ್ತೇವೇ ಹಾಗೆ ನಮ್ಮ ಬರವಣಿಗೆ ಕ್ರಮವಿರುತ್ತದೆ. ಹಾಗೆ ನಾವು ಯಾವ ರೀತಿಯಾಗಿ ಮಾತನಾಡುತ್ತೇವೆಯೋ ಅದೇ ಕಲಿಕಾರ್ಥಿಗಳಿಗೆ ವಿವರಣೆ ನೀಡುವ ಕ್ರಮವಾಗಿರುತ್ತದೆ. ಅದಕ್ಕಾಗಿಯೇ ಆಡು ಭಾಷೆಗೆ ಗ್ರಂಥಸ್ಥ ಭಾಷೆಗಿಂತ ಹೆಚ್ಚಿನ ಆಯಸ್ಸು ಇರುತ್ತದೆ. ಆದ್ದರಿಂದಲೇ ಈ ಆಡು ಭಾಷೆಯ ಪರಿಣಾಮದಿಂದ ಕನ್ನಡ ಭಾಷಾ ಬೋಧಕರಲ್ಲಿ ಆಯಾ ಪರಿಸರ ಭಾಷೆಗೆ ತಕ್ಕಂತೆ ಕೆಲವೊಂದು ತೊಡಕುಗಳನ್ನು ಗಮನಿಸಬಹುದು.

ತಾತ್ವಿಕ ಎಂದರೆ

* ಬಾಯಿ ಪಾಠ / ಕಂಠ ಪಾಠ ಮಾಡುಸುವುದು : ಕಲಿಕೆಯಲ್ಲಿ ಬಾಯಿ ಪಾಠ ಮಾಡಿಸುವುದು ಒಂದು ತತ್ತ್ವವಾಗಿದೆ.
* ಕಂಠಪಾಠ ಪದ್ಧತಿಯನ್ನು ಬೋಧನೆಯಿಂದ ಕೈಬಿಟ್ಟರು ಪದ್ಯಗಳನ್ನು ಕಂಠಪಾಠ ಮಾದರಿಯಲ್ಲಿಯೆ ಬೋಧಿಸಬೇಕಾಗುತ್ತದೆ.
* ವಾರ್ಷಿಕ ಪಾಠ ಹಂಚಿಕೆ ಮಾಡಿದಾಗ ಒಂದೊಂದು ತರಗತಿಗಳಿಗೆ ೧೯೯ ಅವಧಿಗಳನ್ನು ಬೋಧಿಸಬೇಕು. ಈ ಅವಧಿಗಳು ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದಾರೆ. ಆ ನಾಲ್ಕು ಗುಂಪುಗಳು ೧ನೇ ರೂಪಣಾತ್ಮಕ, ೫೪ ೨ನೇ ರೂಪಣಾತ್ಮಕ, ೩೬ ಅವಧಿ ೩ನೇ ರೂಪಣಾತ್ಮಕ, ೩೬ ಅವಧಿ ೪ನೇ ರೂಪಣಾತ್ಮಕಕ್ಕೆ ೪೦ ಅವಧಿಗಳು ಲಭ್ಯವಾಗುತ್ತವೆ. ಈ ನಾಲ್ಕು ಹಂತದ ಬೋಧನೆಯು ಜೂನ್ ತಿಂಗಳಿನಿಂದ ಜನವರಿ ತಿಂಗಳವರೆಗೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಮೂಲಕ ಬೋಧಿಸಲಾಗುತ್ತದೆ. ಫೆಬ್ರುವರಿ ತಿಂಗಳಲ್ಲಿ ಪುನರಾವರ್ತನೆ ಅಭ್ಯಾಸ ಮತ್ತು ಮಾರ್ಚ ತಿಂಗಳಲ್ಲಿ ಪುನರಾವರ್ತನೆ ಅಭ್ಯಾಸ ಮತ್ತು ಮಾರ್ಚ ತಿಂಗಳಲ್ಲಿ

ಫಲಿತಾಂಶ ಕ್ರೋಢಿಕರಣದ ಕಾರ್ಯ ನಡೆಯುತ್ತಾರೆ. ಇಂತಹ ಬೋಧನೆಯು ಬೋಧಕರಿಗೆ ಒತ್ತಡವನ್ನುಂಟು ಮಾಡುತ್ತದೆ.

* ಕಲಿಕಾರ್ಥಿಯು ಬೋಧಿಸಿದ ವಿಷಯದ ಅರ್ಥವನ್ನು ಗ್ರಹಿಸಿದ್ದಾನೆ ಇಲ್ಲವೊ ಎಂದು ಮೌಲ್ಯಮಾಪನ ಪ್ರಶ್ನೆಗಳಿಂದ ಮತ್ತು ಪುನರಾವರ್ತನೆ ಪ್ರಶ್ನೆಗಳಿಂದ ಬೋಧಿಸುವುದು ಇನ್ನೊಂದು ತತ್ವವಾಗಿದೆ.

* ತಾತ್ವಿಕ ಬೋಧನೆಯಲ್ಲಿ ಚಟುವಟಿಕೆಯಾಧಾರಿತ ಬೋಧನೆಯು ಬೋಧಕರಿಗೆ ಒಂದು ದೊಡ್ಡ ಸವಾಲಾಗಿದೆ. ಪ್ರತಿಯೊಬ್ಬ ಕಲಿಕಾರ್ಥಿಗಳನ್ನು ಕೇಂದ್ರಿಕರಿಸಿ ಚಟುವಟಿಕೆಯ ಮೂಲಕ ಬೋಧಿಸಬೇಕಾಗಿದೆ. ಪಠ್ಯದಲ್ಲಿರುವ ವಿಷಯಾಂಶವನ್ನು ಅನ್ವಯಿಸಿಕೊಂಡು ಬೋಧಿಸುವಾಗ ಸಮಸ್ಯೆಗಳನ್ನು ಎದುರಿಸುತ್ತಾರೆ. ಉದಾ: ಒಂದು ನಾಟಕವನ್ನು ಒಳಗೊಂಡ ವಿಷಯ ಇದ್ದರೆ ಮಕ್ಕಳೆಲ್ಲರು ನಾಟಕದ ಪಾತ್ರದಾರಿಗಳು ತಾವೇ ಆಗಿ ನಾಟಕ ಶೈಲಿಯಲ್ಲಿ ಅಭಿನಯಿಸಿ ಚುಟುವಟಿಕೆ ಮಾಡಬೇಕಾಗುತ್ತದೆ. ಅದಕ್ಕೂ ಪೂರ್ವದಲ್ಲಿ ಬೋಧಕರು ಮಾಡಿ ತೋರಿಸಬೇಕಾಗುತ್ತದೆ. ಆಸಕ್ತಿದಾಯಕ ಬೋಧಕರು ಮಾಡಿದರ ಆಸಕ್ತಿ ಇಲ್ಲದ ಕ್ರಿಯಾಶೀಲರಿಲ್ಲದ ಬೋಧಕರಿಂದು ಮಾಡುವುದು ಕಷ್ಟವಾಗುತ್ತದೆ. ಈ ರೀತಿಯಾಗಿ ತಾತ್ವಿಕ ಸಮಸ್ಯೆಯುನ್ನು ಬೋಧನೆಯಲ್ಲಿ ಎದುರಿಸಬೇಕಾಗುತ್ತದೆ.

ಕಲಿಕೆ ಮತ್ತು ಬೋಧನೆಗೆ ಇರುವ ಪ್ರಾಯೋಗಿಕ ಸಮಸ್ಯೆ :

ಪ್ರಸ್ತುತ ಕಲಿಕೆ ಮತ್ತು ಬೋಧನಾ ಪದ್ಧತಿಯನ್ನು ಗಮನಿಸಿದಾಗ ಕನ್ನಡ ಭಾಷಾ ಬೋಧನೆಗೆ ನೀಡುವ ಕಾಲಾವಧಿ ೪೫ ನಿಮಿಷ. ಈ ೪೫ ನಿಮಿಷದಲ್ಲಿ ಬೋಧಕರು ಭಾಷೆಯನ್ನು ಕಲಿಸುವುದರೊಂದಿಗೆ ಬೇರೆ ಬೇರೆ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ತರಗತಿ ಶಿಕ್ಷಕರಾಗಿದ್ದರೆ ಕಲಿಕಾರ್ಥಿಗಳ ಹಾಜರಾತಿಯನ್ನು ತೆಗೆದುಕೊಳ್ಳಬೇಕು. ಹಾಜರಾತಿ ತೆಗೆದುಕೊಂಡನಂತರ ಶಾಲೆ ಬಿಟ್ಟ ಮಕ್ಕಳ ಬಗ್ಗೆ ವಿಚಾರಿಸಬೇಕು. ಮತ್ತೇ ಶಾಲೆ ಬೀಡದಂತೆ ಮಕ್ಕಳಿಗೆ ಸಲಹೆ ನೀಡಬೇಕು. ಇಷ್ಟು ಮಾಡುವಷ್ಟರಲ್ಲಿ ೧೫ ನಿಮಿಷ ಕಳೆದು ಇನ್ನೂ ೩೦ ನಿಮಿಷ ಉಳಿದಿರುತ್ತೆ. ಆ ೩೦ ನಿಮಿಷದಲ್ಲಿ ಹಿಂದಿನ ತರಗತಿಯಲ್ಲಿ ನೀಡಿದ ಮನೆಗೆಲಸ ಮಾಡಿರುವರೋ ಇಲ್ಲವೋ ಎಂದು ವಿಚಾರಿಸಿ ಪುನರಾವರ್ತನೆ ಪ್ರಶ್ನೆಗಳನ್ನು ಕೇಳಿ ಬೋಧನೆ ಪ್ರಾರಂಭಿಸುವಷ್ಟರಲ್ಲಿ ೨೦ ನಿಮಿಷ ಕಳೆದು ಇನ್ನೂ ೧೦ ನಿಮಿಷ ಮಾತ್ರ ಉಳಿದಿರುತ್ತದೆ.

ಈ ೧೦ ನಿಮಿಷದಲ್ಲಿ ಕಲಿಕಾರ್ಥಿಗಳನ್ನು ತರಗತಿಯಲ್ಲಿ ಇಡಿಯಾಗಿ ಬೋಧಿಸಬೇಕೋ ಅಥವಾ ಬಿಡಿಬಿಡಿಯಾಗಿ ಬೋಧಿಸಬೇಕೆಂಬ ಸವಾಲು ಎದುರಾಗುತ್ತದೆ. ಏಕೆಂದರೆ ಒಂದು ತರಗತಿಯನ್ನು ತೆಗೆದುಕೊಂಡಾಗ ಅಲ್ಲಿ ಜಾಣ ಮಕ್ಕಳು ಅಂದರೆ ಓದು ಬರಹ ಎರಡರಲ್ಲಿಯು ಸ್ಪಷ್ಟತೆಯುಳ್ಳ ಮಕ್ಕಳಿರುತ್ತಾರೆ. ಮತ್ತೇ ಕೆಲವು ಮಕ್ಕಳಿಗೆ ಓದುವುದಕ್ಕೆ ಬರುತ್ತದೆ ಬರೆಯುವುದಕ್ಕೆ ಬರುವುದಿಲ್ಲ. ಕೆಲವರಿಗೆ ಓದು-ಬರಹ ಎರಡು ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಬೋಧಿಸುವುದು ದೊಡ್ಡ ಸಮಸ್ಯೆಯಾಗುತ್ತದೆ ಎನ್ನುವುದು ಬೋಧಕರ ಅಭಿಪ್ರಾಯವಾಗಿದೆ. ಬೋಧಕರಿಗೆ ಸಿಗುವಂತಹ ಅಲ್ಪ

ಸಮಯದಲ್ಲಿ ಎಲ್ಲಾ ಮಕ್ಕಳನ್ನು ಕೇಂದ್ರಿಕರಿಸಿ ಎಲ್ಲಾ ಕಲಿಕಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಬೋಧಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಕಲಿಕಾರ್ಥಿಗಳಲ್ಲಿ ಕಲಿಕೆಯ ಸಮಸ್ಯೆ ಹಾಗೆ ಉಳಿಯುತ್ತದೆ. ಈ ಕಲಿಕೆಯ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ 'ಪರಿಹಾರ ಬೋಧನೆ' ಎಂದು ಹೆಚ್ಚಿನ ಅವಧಿಯನ್ನು ಬೆಳಿಗ್ಗೆ ಅಥವಾ ಸಾಯಂಕಾಲ ತೆಗೆದುಕೊಂಡಾಗ ಈ ಪರಿಹಾರ ಬೋಧನೆ ತರಗತಿಗೆ ಕಲಿಕೆಯ ಸಮಸ್ಯೆ ಎದುರಿಸುತ್ತಿರುವ ಕಲಿಕಾರ್ಥಿಗಳು ಹಾಜರಾಗುವುದಿಲ್ಲ ಮತ್ತು ಹೆಚ್ಚಿನ ಅಭ್ಯಾಸಕ್ಕಾಗಿ ಮನೆಗೆಲಸವನ್ನು ಕೊಟ್ಟರೆ ಆ ಮನೆಗೆಲಸ ಮಾಡದೆ ಏನಾದರು ನೆಪ ಹೇಳಿ ಮಾಡುವುದಕ್ಕೆ ಆಗಲಿಲ್ಲ, ಎಂದು ಜಾರಿಕೊಳ್ಳುತ್ತಾರೆ. ಕಲಿಕಾರ್ಥಿಗಳು ಈ ರೀತಿ ಮಾಡುವುದಕ್ಕೆ ಕಾರಣ ಬೋಧಕರು ಶಿಕ್ಷಿಸದೆ ಇರುವುದು. ಹಿಂದೆ ಒಂದು ಕಾಲವಿತ್ತು 'ದಂಡಂ ದಶಗುಣಂ, ಛಡಿ ಆಯಿ ಛಮ್ಮ ಛಮ್ಮ, ವಿದ್ಯಾ ಆಯಿ ಗಮ್ಮಗಮ್ಮ' ಎಂಬ ಮಾತಿನಂತೆ ವಿದ್ಯೆ ಪರಿಮಳ ಸೂಸಿಸುತ್ತಿತ್ತು. ಆದರೆ ಇಂದಿನ 'ಮಕ್ಕಳ ಹಕ್ಕು' ಕಾಯ್ದೆಯ ಪ್ರಕಾರ ಮಕ್ಕಳಿಗೆ ಬೈಯುವಂತ್ತಿಲ್ಲ, ಹೊಡೆಯುವಂತ್ತಿಲ್ಲ, ಜೋರಾಗಿ ಬೆದರಿಸುವಂತ್ತಿಲ್ಲ, ಅವರನ್ನು ಮುಟ್ಟುವಂತ್ತಿಲ್ಲ ಇಂತಹ ಕಾನೂನಿನ ಚೌಕಟ್ಟಿನಲ್ಲಿ ಬೋಧಕರು ಸಮಸ್ಯೆಯ ಸುಳಿಯಲ್ಲಿ ಸಿಲುಕಿದ್ದೇವೆ ಎನ್ನುತ್ತಾರೆ.

ಈ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಯಾವುದೇ ರೀತಿಯ ಪ್ರಯೋಗಗಳನ್ನು ನಡೆಸಿದರೂ ಕೂಡಾ ಬೋಧನೆಯಲ್ಲಿರುವ ಮತ್ತು ಕಲಿಕೆಯಲ್ಲಿರುವ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

೪.೮. ಬೋಧಕರಿಗೆ ಕಲಿಸುವಿಕೆ ಸಂದರ್ಭಗಳ ಸವಾಲುಗಳು

ಕನ್ನಡ ಭಾಷಾ ಬೋಧಕ ಭಾಷೆಯನ್ನು ಬೋಧಿಸುವಾಗ ಅನೇಕ ಸವಾಲುಗಳನ್ನು ಎದುರಿಸುತ್ತೇವೆ ಎಂಬ ಅಳಲನ್ನು ಬೋಧಕರೆ ಹೇಳಿಕೊಂಡ ಸತ್ಯಾಂಶಗಳು ಈ ಕೆಳಗಿನಂತಿವೆ ಈ ಮಾಹಿತಿಗಳು ಕನ್ನಡ ಭಾಷಾ ಕಾರ್ಯಗಾರ ತುಮಕೂರಿನಲ್ಲಿ ಚರ್ಚೆಗೊಂಡ ಅಂಶಗಳಾಗಿವೆ.

೧. **ಚಿಕ್ಕ ತರಗತಿಗಳು :** ತಾತ್ವಿಕ ನೆಲೆಯಲ್ಲಿ ಗುಂಪು ಚಟುವಟಿಕೆಗಳನ್ನು ಇಲ್ಲಿ ಮಾಡಿಸಲು ಆಗುವುದಿಲ್ಲ.

೨. **ದೊಡ್ಡ ತರಗತಿಗಳು :** ಇಲ್ಲಿ ವೈಯಕ್ತಿಕ ಸಾಧನೆಯ ಮಟ್ಟ ಗುರುತಿಸಿ ಬೆಂಬಲಿಸುವುದಕ್ಕೆ ಆಗುವುದಿಲ್ಲ.

೩. ಪ್ರೌಢ ಹಂತಕ್ಕೆ ಬಂದ ೮ನೇ ತರಗತಿಯ ಮಕ್ಕಳಲ್ಲಿ ಭಾಷೆಯ ಮೂಲ ಕೌಶಲಗಳು (ಓದು,ಬರಹ) ಬರದೆಯಿರುವುದು ಅವರಲ್ಲಿಯ ಕೊರತೆಯ ಅಂಶ ಗುರುತಿಸುವುದು ಸವಾಲೆನಿಸುತ್ತದೆ.

೪. ಮಕ್ಕಳಲ್ಲಿ ಕೌಟಂಬಿಕ, ಸಾಮಾಜಿಕ ಭಾಷೆಯ ಪ್ರಭಾವ ದಟ್ಟವಾಗಿದ್ದಾಗ ಗ್ರಂಥಸ್ಥ ಭಾಷೆಯನ್ನು ಕಲಿಸುವುದು ಸವಾಲಾಗಿ ಪರಿಣಮಿಸುತ್ತದೆ.

೫. ಭಾಷೆಯ ಜೊತೆಗೆ ಇನ್ನೊಂದು ವಿಷಯ ಬೋಧಿಸುವುದು ಬೋಧಕರಿಗೆ ಹೊರೆಯಾಗಿ ಬೋಧನೆಯಲ್ಲಿ ಸಮಸ್ಯೆಯುಂಟಾಗುತ್ತದೆ.

೬. ಬೋಧಕರು ಕೇವಲ ಪರೀಕ್ಷಾ ದೃಷ್ಟಿಯಿಂದ ಭಾಷೆಯನ್ನು ಬೋಧಿಸುವುದರಿಂದ ಉಳಿದ ವಿಷಯಾಂಶ ಅರ್ಥೈಸಿಕೊಳ್ಳುವಲ್ಲಿ ಸಮಸ್ಯೆಯುಂಟಾಗುತ್ತಿದೆ.

೭. ಭಾಷಾ ಚಟುವಟಿಕೆಗಳಲ್ಲಿ ಮಕ್ಕಳು ಸ್ವಯಂ ಸ್ಫೂರ್ತಿಯಿಂದ ಭಾಗವಹಿಸದೆ ಇರುವುದು.

೮. ಅನ್ಯ ಭಾಷೆಯ ಪ್ರಭಾವವಿರುವ ಮಕ್ಕಳಿಗೆ ಕನ್ನಡ ಭಾಷೆ ಬೋಧಿಸುವುದು ಒಂದು ಸವಾಲೆನಿಸುತ್ತದೆ. ಈ ಸವಾಲುಗಳ ಜೊತೆಗೆ ಭಾಷಾ ಬೋಧಕರಲ್ಲಿರುವ ಸಮಸ್ಯೆ ಮತ್ತು ಭಾಷಾ ತೊಡಕುಗಳನ್ನು ಗಮನಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ.[೭]

೪.೯. ಬೋಧಕರು ಮೌಲ್ಯಮಾಪನದಲ್ಲಿ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು

೪.೯.೧. ಮೌಲ್ಯಮಾಪನದ ಅರ್ಥ ಮತ್ತು ಸ್ವರೂಪ :

ಮೌಲ್ಯಮಾಪನವು ಶಿಕ್ಷಣದ ಅವಿಭಾಜ್ಯ ಅಂಗ. ಶಿಕ್ಷಣ ಫಲಪ್ರದವಾಗಬೇಕಾದರೆ ಬೋಧನೆ ಪರಿಣಾಮಕಾರಿಯಾಗಿರಬೇಕು. ಬೋಧನಾ ಕ್ರಿಯೆಯಿಂದ ಅಪೇಕ್ಷಿತ ಬದಲಾವಣೆ ನಿರೀಕ್ಷಿಸಬೇಕಾದರೆ ಬೋಧಿಸುವ ವಿಷಯಗಳನ್ನು ನಿರಂತರವಾಗಿ ಮೌಲ್ಯಮಾಪನ ಮಾಡಬೇಕು. ಮತ್ತು ಮೇಲ್ವಿಚಾರಣೆ ಮಾಡಬೇಕು. ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಗಳನ್ನು ಪರೀಕ್ಷಿಸುವುದನ್ನೆ ಸಾಮಾನ್ಯ ಅರ್ಥದಲ್ಲಿ ಮೌಲ್ಯಮಾಪನ ಎನ್ನಬಹುದು. ಶೈಕ್ಷಣಿಕ ಉದ್ದೇಶಗಳು ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿವೆ? ವಿದ್ಯಾರ್ಥಿಗಳಿಗೆ ಒದಗಿಸಿರುವ ಕಲಿಕಾ ಅನುಭವಗಳ ಪರಿಣಾಮಕಾರತ್ವವೇನು? ಉದ್ದೇಶಗಳನ್ನು ಸಾಧಿಸಲು ಈ ಅನುಭವಗಳು ಸಹಾಯಕವಾಗುತ್ತಿವೆಯೇ? ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಮೌಲ್ಯೀಕರಿಸುವ ವ್ಯವಸ್ಥಿತ ಪ್ರಕ್ರಿಯೆಯೇ ಮೌಲ್ಯಮಾಪನ. ಇದು ಒಂದು ವ್ಯಾಪಕ ಮತ್ತು ನಿರಂತರ ಪ್ರಕ್ರಿಯೆಯಾಗಿದ್ದು, ಬೋಧನಾ ಉದ್ದೇಶಗಳು, ಬೋಧಿಸುವ ವಿಷಯಗಳು, ಒದಗಿಸುವ ಕಲಿಕಾ ಅನುಭವಗಳು ಮತ್ತು ಮೌಲ್ಯೀಕರಿಸುವ ಕ್ರಮವನ್ನು ಒಳಗೊಂಡಿರುತ್ತದೆ. ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯನ್ನು ಗುಣಾತ್ಮಕ ಹಾಗೂ ಗುಣಾತ್ಮಕವಾಗಿ ಪರೀಕ್ಷಿಸುವ ಮೌಲ್ಯಮಾಪನವು ವಿದ್ಯಾರ್ಥಿಗಳು ಏನು ಕಲಿತಿದ್ದಾರೆ? ಎಷ್ಟು ಕಲಿತಿದ್ದಾರೆ? ಹೇಗೆ ಕಲಿತಿದ್ದಾರೆ? ಯಾವ ವಿಷಯಗಳನ್ನು ಎಷ್ಟರಮಟ್ಟಿಗೆ ಕಲಿತಿದ್ದಾರೆ? ಯಾವ ದೃಷ್ಟಿಕೋನದಿಂದ ಅರ್ಥಮಾಡಿಕೊಂಡಿದ್ದಾರೆ? ವಿಷಯಾಂಶಗಳು, ಭಾಷೆಯ ಕೌಶಲಗಳು, ಸಾಹಿತ್ಯ ಅಭಿರುಚಿ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವದ ವಿವಿಧ ಮುಖಗಳಲ್ಲಿ ಕಂಡುಬರುವ ವಿವಿಧ ರೀತಿಯ ಬದಲಾವಣೆಗಳೇನು? ವಿದ್ಯಾರ್ಥಿಯ ಕಲಿಕೆಯ ಸ್ವರೂಪವೇನು? ಕಲಿಕೆಯಲ್ಲಿ ಕಂಡು ಬರುವ ಕೊರತೆಗಳೇನು? ಎಂಬುದನ್ನು ಪತ್ತೆಹಚ್ಚಿ ಯೋಗ್ಯರೀತಿಯ ಬೆಳವಣಿಗೆಯ ಕಡೆ ವಿದ್ಯಾರ್ಥಿಯನ್ನು ಮಾರ್ಗದರ್ಶಿಸುವುದೇ ಶೈಕ್ಷಣಿಕ ಮೌಲ್ಯಮಾಪನ.[೮]

೪.೯.೨. ಮೌಲ್ಯಮಾಪನದ ವ್ಯಾಖ್ಯಾನಗಳು :

ಕ್ವಿಲ್ಲೆನಾ ಮತ್ತು ಹೆನ್ನಾ ರವರ ಪ್ರಕಾರ :

"ವಿದ್ಯಾರ್ಥಿಗಳ ಶಾಲಾ ಪ್ರಗತಿಯ ಮೂಲಕ ಅವರ ವರ್ತನೆಯ ಪರಿವರ್ತನೆಯ ಕುರಿತಾಗಿ ಸಾಕ್ಷಿಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಅರ್ಥೈಸುವ ವಿಷಯ ಪ್ರಕ್ರಿಯೆಯೇ ಮೌಲ್ಯಮಾಪನ".[೯]

ಜಾನ್ ಯು. ಮೈಕೇಲ್ಸ ರವರ ಪ್ರಕಾರ :

"ಮೌಲ್ಯಮಾಪನ ಪ್ರಕ್ರಿಯೆಯು ಶಿಕ್ಷಣದ ಗುರಿಗಳನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂಬುದನ್ನು ನಿರ್ಧರಿಸುವುದಾಗಿದೆ. ಅದು ಶಿಕ್ಷಕರು ಮಕ್ಕಳು ಮತ್ತು ಇತರೆ ಹಿತಚಿಂತಕರು ತಮ್ಮದೇ ಆದ ಮಾಹಿತಿಗಳನ್ನು ತಿಳಿಸಲು ಬಳಸಿಕೊಂಡ ನಿಯಮಗಳನ್ನು ಒಳಗೊಂಡಿದ್ದಾಗಿದೆ".[೧೦]

೪.೯.೩ ಕನ್ನಡ ಭಾಷಾ ಬೋಧನೆಯಲ್ಲಿ ಮೌಲ್ಯಮಾಪನದ ಮಹತ್ವ ಮತ್ತು ಉದ್ದೇಶಗಳು

ಕೊಠಾರಿ ಶಿಕ್ಷಣ ಆಯೋಗದ ಪ್ರಕಾರ ಮೌಲ್ಯಮಾಪನವು ವಿದ್ಯಾರ್ಥಿಗಳ ಅಭ್ಯಾಸದ ಮೇಲೂ, ಶಿಕ್ಷಣದ ಬೋಧನಾ ವಿಧಾನಗಳ ಮೇಲೂ ಹೆಚ್ಚು ಪ್ರಭಾವವನ್ನು ಬೀರುತ್ತದೆ. ಅಲ್ಲದೆ ಅದು ಶೈಕ್ಷಣಿಕ ಸಾಧನೆಯನ್ನು ಮಾಪನ ಮಾಡುವುದಕ್ಕೆ ಸಹಾಯ ಮಾಡುವುದಲ್ಲದೆ ಅದನ್ನು ಸುಧಾರಿಸಲೂ ನೆರವಾಗುತ್ತದೆ.

೧. ಮೌಲ್ಯಮಾಪನವು ಶಿಕ್ಷಕನ ಬೋಧನೆಯ ಗುಣಮಟ್ಟವನ್ನು ಸುಧಾರಿಸುತ್ತದೆ. ಭಾಷಾ ಬೋಧನೆಯ ಗುರಿಗಳು, ಕಲಿಕೆಯ ಅನುಭವಗಳು ಮತ್ತು ಮೌಲ್ಯ ಮಾಪನದ ನಡುವೆ ಜೀವಾಳದ ಸಂಬಂಧಿವಿದೆ. ಮೌಲ್ಯಮಾಪನವು ನಿರ್ದಿಷ್ಟ ಪಡಿಸಿದ ಗುರಿಗಳನ್ನು ಸಾಧಿಸಿದ ಶ್ರೇಣಿಯನ್ನು ಗುರುತಿಸುತ್ತದೆ.

೨. ಮೌಲ್ಯಮಾಪನವು ಭಾಷಾ ಬೋಧನಾ ಉದ್ದೇಶಗಳನ್ನು ನಿಷ್ಕರ್ಷಿಸಲು ಸಹಾಯ ಮಾಡುತ್ತದೆ.

೩. ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ಬಡ್ತಿ ನೀಡಲು ಸಹಾಯಕವಾಗುತ್ತದೆ. ಮಕ್ಕಳ ಸಾಧನೆಯ ಬಗ್ಗೆ ಪಾಲಕರಿಗೆ ವರದಿ ನೀಡುವುದು.

೪. ಪಠ್ಯಕ್ರಮವನ್ನು ಪುನರ್ವಿನ್ಯಾಸಗೊಳಿಸಲು ಸಹಾಯಕವಾಗುತ್ತದೆ.

೫. ಮೌಲ್ಯಮಾಪನವು ಶಿಕ್ಷಕರಲ್ಲಿ ಕ್ರಿಯಾ ಸಂಶೋಧನೆ ಕೈಗೊಳ್ಳಲು ಒಲವು ಮೂಡಿಸುತ್ತದೆ.


೬. ಭಾಷಾ ಜ್ಞಾನವನ್ನು ಅಳತೆ ಮಾಡುವುದು, ಪ್ರತಿಯೊಬ್ಬ ವಿದ್ಯಾರ್ಥಿಯ ಭಾಷಾ ಕಲಿಕೆಯ ಜ್ಞಾನ, ಸ್ಪಷ್ಟತೆ, ಚಿಂತನೆ, ವಿಮರ್ಶಾತ್ಮಕ ನಿರ್ಣಯ ಶಕ್ತಿ, ತಾರ್ಕಿಕ ಶಕ್ತಿಯನ್ನು ಬೆಳೆಸುವುದು.

೭. ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಗಳ ಅರ್ಥಗ್ರಹಣ, ರಸ ಅಸ್ವಾದನೆ, ವಾಚನ, ಲೇಖನ, ಮಾತುಗಾರಿಕೆ, ಆಲಿಸುವಿಕೆ ಮೊದಲಾದ ಕೌಶಲ್ಯಗಳಲ್ಲಿಯ ಸಾಧನೆ, ದೌರ್ಬಲ್ಯಗಳನ್ನು ಕಂಡುಹಿಡಿದು ಅಭಿವೃದ್ಧಿಪಡಿಸಲು ಸಹಾಯಕವಾಗುತ್ತದೆ.

೮. ವಿದ್ಯಾರ್ಥಿಗಳ ಪರಿಣಾಮಕಾರಿ ಕಲಿಕೆಯನ್ನು ಪ್ರಚೋದಿಸುತ್ತದೆ.

ಮೌಲ್ಯಮಾಪನ ಪದ್ಧತಿ :

* ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಪರೀಕ್ಷೆಗಳಲ್ಲಿ ಒಟ್ಟು ಎರಡು ಪ್ರಕಾರಗಳಿವೆ.



೧. ಮೌಖಿಕ ಪರೀಕ್ಷೆ

ಸಂದರ್ಶನಕಾರನು ಪರೀಕ್ಷಾರ್ಥಿಯ ಎದುರು ಮುಖಾ–ಮುಖಿ ಸನ್ನಿವೇಶದಲ್ಲಿ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವ ವಿಧಾನಕ್ಕೆ ಮೌಖಿಕ ಪರೀಕ್ಷೆ ಎನ್ನುವರು. ಈ ಪರೀಕ್ಷಾ ಮಾದರಿಯಿಂದ ಓದುಗಾರಿಕೆ, ಉಚ್ಚರಣೆ, ಚರ್ಚಾ ವಿಷಯಗಳಲ್ಲಿ ಭಾಗವಹಿಸಿ ಸಫಲತೆ ಪಡೆಯಲು ಸಾಮರ್ಥ್ಯ ಇದೆಯೇ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಮತ್ತು ಇದು ಬೋಧಕನ ಪೂರ್ವಗ್ರಹ ಪೀಡನೆಗೆ ಒಳಗಾಗುವ ಸಾಧ್ಯತೆ ಇದೆ.

೨. ಲಿಖಿತ ಪರೀಕ್ಷೆಗಳು

ಹೆಸರೆ ಸೂಚಿಸುವಂತೆ ಲಿಖಿತ ಪರೀಕ್ಷೆಗಳು ಬರವಣಿಗೆಯ ರೂಪದಲ್ಲಿರುವಂತಹ ಪರೀಕ್ಷೆಗಳಾಗಿವೆ. ಇವು ಪ್ರಮುಖವಾಗಿ ಪ್ರಬಂಧ ಮಾದರಿ, ಲಘು ಮಾದರಿ, ವಸ್ತುನಿಷ್ಠ ಮಾದರಿ ಪರೀಕ್ಷೆಗಳನ್ನು ಒಳಗೊಂಡಿರುತ್ತವೆ.[೧೧]

ಪ್ರಶ್ನೆ ಪತ್ರಿಕೆ ಸಿದ್ಧತೆಯ ಉದ್ದೇಶ :

ಪ್ರೌಢ ಶಾಲೆಯ ಹಂತದಲ್ಲಿ ೮, ೯, ೧೦ನೇ ತರಗತಿಗಳು ಒಳಗೊಂಡಿವೆ. ಕೆಲವೊಂದು ಶಾಲೆಗಳಿಗೆ ಮಾತ್ರ ಹಿರಿಯ ಪ್ರಾಥಮಿಕ ಶಾಲೆಗೆ ೮ನೇ ತರಗತಿಯನ್ನು ಸರಕಾರ ವಿಲಿನಗೊಳಿಸಿದರೆ. ಇನ್ನೂ ಕೆಲವಡೆ ಪ್ರೌಢ ಶಾಲೆಗಳಲ್ಲಿಯೇ ೮ನೇ ತರಗತಿ ಇರುವುದನ್ನು ಗಮನಿಸಲಾಗಿದೆ. ೮ ಮತ್ತು ೯ನೇ ತರಗತಿಯ ಪ್ರಶ್ನೆ ಪತ್ರಿಕೆಯನ್ನು ಆಯಾ ಶಾಲೆಗಳಲ್ಲಿ ಕನ್ನಡ ಭಾಷಾ ಬೋಧಕರೆ ಸಿದ್ಧಪಡಿಸುತ್ತಾರೆ. ಆದರೆ ಎಸ್.ಎಸ್.ಎಲ್.ಸಿ. ತರಗತಿಯ ವಾರ್ಷಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಸಿದ್ಧಪಡಿಸುತ್ತದೆ. ಪ್ರಶ್ನೆ ಪತ್ರಿಕೆ ರಚಿಸುವ ಪ್ರಮುಖ ಉದ್ದೇಶ ವಿದ್ಯಾರ್ಥಿಗಳು ವರ್ಷಪೂರ್ತಿ ಪಠ್ಯಪುಸ್ತಕದ ಮೂಲಕ ಕಲಿತಿರುವುದನ್ನು ಮೂರು ಗಂಟೆಯ ಅವಧಿಯಲ್ಲಿ ಲಿಖಿತರೂಪದಲ್ಲಿ ಉತ್ತರಿಸಬೇಕು. ಆ ಉತ್ತರ ಪತ್ರಿಕೆಗಳನ್ನು ಕನ್ನಡ ಭಾಷಾ ಬೋಧಕರು ಮೌಲ್ಯಮಾಪನ ಮಾಡಿ ವಿದ್ಯಾರ್ಥಿ ಕಲಿಕೆ ಸಾಧಿಸಿದ್ದಾನೋ ಇಲ್ಲವೋ ಎಂದು ಗುರುತಿಸುವುದಕ್ಕಾಗಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಲಾಗುತ್ತದೆ.

ಪ್ರಶ್ನೆಗಳ ಸ್ವರೂಪ ಮತ್ತು ಉದ್ದೇಶ :

೧) ಉದ್ದಿಷ್ಟಾನುಸಾರ ಪ್ರಾಮುಖ್ಯತೆ : ಸ್ಮರಣೆ, ಗ್ರಹಿಕೆ, ಅಭಿವ್ಯಕ್ತಿ, ಪ್ರಶಂಸೆಗಳಿಗೆ ಸಂಬಂಧಿಸಿದಂತೆ.

೨) ವಿಷಯಾನುಸಾರ ಪ್ರಾಮುಖ್ಯತೆ : ಗದ್ಯ, ಪದ್ಯ, ಪಠ್ಯಪೋಷಕ ಅಧ್ಯಯನ ಅಪರಿತ ಗದ್ಯ, ವ್ಯಾಕರಣಾಂಶಗಳು, ಛಂದಸ್ಸು ಅಲಂಕಾರ ಮತ್ತು ವಾಕ್ಯ ರಚನೆ.

ವಸ್ತುನಿಷ್ಠ, ಕಿರು ಉತ್ತರಗಳು ಎರಡು ಮಾದರಿಯಲ್ಲಿ ಒಂದು ಅಂಕದ ಪ್ರಶ್ನೆಗಳು ಎರಡು ಅಂಕದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ದೀರ್ಘ ಉತ್ತರದ ಪ್ರಶ್ನೆಗಳು ಮೂರು, ನಾಲ್ಕು ಮತ್ತು ಐದು ಅಂಕಗಳನ್ನು ಒಳಗೊಂಡಿರುತ್ತವೆ. ಈ ಎಲ್ಲಾ ಪ್ರಶ್ನೆಗಳ ಮಟ್ಟ ಹೀಗಿರುತ್ತದೆ.

* ಸುಲಭ ಪ್ರಶ್ನೆಗಳು - ಪ್ರತಿಶತ - ೩೦
* ಸಾಧಾರಣ ಪ್ರಶ್ನೆಗಳು - ಪ್ರತಿಶತ - ೫೦
* ಕಠಿಣ ಪ್ರಶ್ನೆಗಳು - ಪ್ರತಿಶತ - ೨೦

ಒಟ್ಟು = ಪ್ರತಿಶತ ೧೦೦ ಆಗಿರುತ್ತದೆ.[೮]

ಪ್ರಶ್ನೆ ಪತ್ರಿಕೆಯು ಈ ಕೆಳಕಂಡ ಮಾದರಿಯಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ,

* ಬಹು ಆಯ್ಕೆಯ ಪ್ರಶ್ನೆಗಳು
* ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆ ಪದಕ್ಕೆ ಉತ್ತರಿಸಿ
* ಹೊಂದಿಸಿ ಅಥವಾ ಸಂಬಂಧಿ ಪದ ಬರೆಯುವುದು.
* ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.
* ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ
* ಕವಿಗಳ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯುವುದು.
* ಪದ್ಯಭಾಗ ಪೂರ್ಣ ಮಾಡುವುದು
* ಪದ್ಯಭಾಗದ ಸಾರಾಂಶವನ್ನು ಬರೆಯುವುದು.
* ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು.
* ಕೊಟ್ಟಂತಹ ಗದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು.
* ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯುವುದು.
* ಪ್ರಬಂಧ ಮಾಧರಿ ಬರವಣಿಗೆ.
* ಪತ್ರ ಲೇಖನ ಬರೆಯುವುದು.

ಈ ಎಲ್ಲಾ ಪ್ರಶ್ನೆಗಳ ಉದ್ದೇಶ ವಿದ್ಯಾರ್ಥಿಗಳಲ್ಲಿನ ಪದಗಳನ್ನು ಜೋಡಿಸಿ ವಾಕ್ಯರೂಪವನ್ನು ಮಾಡುವುದು ಗುರುತಿಸುವ ಸಾಮರ್ಥ್ಯವನ್ನು ಕಂಡುಹಿಡಿಯುವುದು ಬರವಣಿಗೆ ಕ್ರಮ, ಭಾಷಾ ಶೈಲಿ, ಪದಗಳ ರಚನೆಯನ್ನು ಗಮನಿಸುವ ಉದ್ದೇಶದಿಂದ ಪ್ರಶ್ನೆಗಳು ರಚನೆಗೊಳ್ಳುತ್ತವೆ.

* **ಮೌಲ್ಯಮಾಪನ ಮಾಡುವ ವಿಧಾನ :**

ಕನ್ನಡ ಭಾಷಾ ಬೋಧಕರಿಂದಲೆ ಮೌಲ್ಯಮಾಪನ ಕ್ರಿಯೆ ನಡೆಯುತ್ತದೆ. ಶಾಲಾ ಹಂತದಲ್ಲಿನ ಮೌಲ್ಯಮಾಪನ ಗಮನಿಸಿದರೆ ಆಡಳಿತಾತ್ಮಕ ದೃಷ್ಟಿಯಿಂದ ಎಲ್ಲಾ ವಿದ್ಯಾರ್ಥಿಗಳು ಕಲಿಕೆಸಾಧಿಸಿದ್ದಾರೆಂದು ಬೋಧಕರು ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರಿಸದಿದ್ದರೂ ತಾವೇ ಎಡಗೈಯಿಂದ ಬರೆದು ಆ ವಿದ್ಯಾರ್ಥಿಗಳನ್ನು ಉತ್ತೀರ್ಣರಾಗಿಸುತ್ತಾರೆ. ಏಕೆಂದರೆ ಸರಕಾರದ ಆದೇಶದ ಪ್ರಕಾರ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಬೆಸಿಗೆಯಲ್ಲಿ ಅವರಿಗೆ ತರಬೇತಿಗೊಳಿಸಿ ಪುನಃ ಪರೀಕ್ಷೆ ನಡೆಸಬೇಕು. ಆಗಲೂ ವಿದ್ಯಾರ್ಥಿಗಳು ಅನುತ್ತೀರ್ಣಗೊಂಡರೆ ಅವರಿಗೆ ಪರಿಹಾರ ಬೋಧನೆಯನ್ನು ಶಾಲಾ ಅವಧಿಯ ನಂತರ ಅಥವಾ ಪೂರ್ವದಲ್ಲಿ ಬೋಧಿಸಬೇಕೆಂದು ಆದೇಶವಿರುವುದರಿಂದ ಬೋಧಕರು ಈ ಎಲ್ಲಾ

ಇಕ್ಕಟ್ಟಿನಿಂದ ಪಾರಾಗುವುದಕ್ಕಾಗಿ ಕಲಿಕೆ ಸಾಧಿಸದ ಮತ್ತು ಸಾಧಿಸಿದ ಎಲ್ಲಾ ವಿದ್ಯಾರ್ಥಿಗಳನ್ನು ಉತ್ತೀರ್ಣರಾಗಿಸುತ್ತಾರೆ.

ಅದೇ ರೀತಿಯಾಗಿ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನ ಈ ಮೇಲಿನ ಹಂತಕ್ಕೆ ಹೊರತಾಗಿಲ್ಲ. ಏಕೆಂದರೆ ಇಲ್ಲಿ ಮೂರು-ನಾಲ್ಕು ಮತ್ತು ಐದು ಅಂಕದ ಪ್ರಶ್ನೆಗಳು ವಾಕ್ಯರಚನೆ, ಪದಬಂಧ, ಭಾಷಾಶೈಲಿಗೆ ಸಂಬಂಧಿಸಿದಂತೆ ಉತ್ತರವನ್ನು ಗಮನಿಸಿ ಮೌಲ್ಯಮಾಪನ ಮಾಡಬೇಕು. ಆದರೆ ಇಲ್ಲಿ ಮೌಲ್ಯಮಾಪನ ಮಾಡುವ ಬೋಧಕರು ಅವೆಲ್ಲವನ್ನು ಗಮನಿಸದೆ ಮೌಲ್ಯಮಾಪನ ಮಾಡುತ್ತಾರೆ. ಏಕೆಂದರೆ ಕಡಿಮೆ ಅಂಕವನ್ನು ನೀಡಿದರೆ ವಿದ್ಯಾರ್ಥಿ ಮರುಮೌಲ್ಯಮಾಪನಕ್ಕೆ ಹಾಕುತ್ತಾರೆ. ಅದೇ ಹೆಚ್ಚು ಅಂಕ ನೀಡಿದರೆ ಯಾವ ಸಮಸ್ಯೆಯೂ ಇರುವುದಿಲ್ಲ. ಎಂಬ ನೀಲುವು ಒಂದು ಕಡೆಯಾದರೇ ಮರು ಮೌಲ್ಯಮಾಪನದಲ್ಲಿ ವಿದ್ಯಾರ್ಥಿ ಏನಾದರೂ ನಾಲ್ಕು ಅಂಕಗಳಿಗಿಂತ ಹೆಚ್ಚಿಗೆ ಅಂಕಗಳನ್ನು ತೆಗೆದುಕೊಂಡರೆ ಮೌಲ್ಯಮಾಪಕರಿಗೆ ದಂಡವಿದಿಸುವ ಕ್ರಮ ಜಾರಿಯಲ್ಲಿರುವುದರಿಂದ ಬೋಧಕರೂ ಸೂಕ್ಷ್ಮವಾಗಿ ಉತ್ತರ ಪತ್ರಿಕೆಯನ್ನು ಗಮನಿಸದೆ ಮೌಲ್ಯಮಾಪನ ಮಾಡುತ್ತಾರೆ. ಈ ರೀತಿಯಾಗಿ ಯಾರೋ ಒಬ್ಬರು ಮಾಡದೆ ಪ್ರತಿಯೊಬ್ಬ ಮೌಲ್ಯಮಾಪಕರು ಈ ಕ್ರಮವನ್ನೆ ಅನುಸರಿಸುತ್ತಾರೆ. ಇದನ್ನು ಮೌಲ್ಯಮಾಪನ ಕೇಂದ್ರ ನೋಬೆಲ್ ಶಾಲೆ ಕಲಬುರಗಿ ೨೦೧೪-೧೫ನೇ ಸಾಲಿನಲ್ಲಿ ಗಮನಿಸಲಾಗಿದೆ.

ಪ್ರಶ್ನೆಗಳು ಕಲಿಕಾರ್ಥಿಯ ಸ್ಮರಣ ಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿವೆ. ಇಲ್ಲಿ ಕೊಟ್ಟಂತಹ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಒಂದನ್ನು ಗುರುತಿಸಿದರೆ, ಇನ್ನೊಂದರಲ್ಲಿ ಸೂಕ್ತವಾದ ಹೊಂದಿಕೆ ಕ್ರಮವನ್ನು ಜೋಡಿಸುತ್ತಾರೆ. ಇನ್ನೂ ಎರಡನೆಯದರಲ್ಲಿ ಪದಗಳಿಗೆ ಸಂಬಂಧ ಕಲ್ಪಿಸುತ್ತಾರೆ.

ಆದರೆ ಬೋಧಕರಿಗೆ ಪ್ರಮುಖವಾಗಿ ಸಮಸ್ಯೆಯು ಸವಾಲಾಗುವುದು ಎಂದರೆ ಒಂದು ವಾಕ್ಯದ ಪ್ರಶ್ನೆಗಳಲ್ಲಿ. ಇಲ್ಲಿ ಕಲಿಕಾರ್ಥಿಯನ್ನು ಪರೀಕ್ಷೆಗೆ ಒಳಪಡಿಸಿದರೆ ಪ್ರಶ್ನೆಗಳಿಗೆ ಹೇಗೆ ಉತ್ತರಿಸುತ್ತಾನೆ ಎಂದರೆ?

ಪ್ರಶ್ನೆ ೧ – ಜಗತ್ತು ಯಾವುದರಲ್ಲಿ ಸಿಲುಕಿಕೊಂಡಿದೆ ಎಂದು ಕೋಗಿಲೆ ಹೇಳಿತು?

ಉತ್ತರ : ಕೃತಕತೆಯ ಜಾಲದಲಿ ಸಿಲುಕಿಕೊಂಡಿದೆ ಜಗವು

ಸರಯಾದ ಕ್ರಮ : ಜಗತ್ತು ಕೃತಕತೆಯ ಜಾಲದಲ್ಲಿ ಸಿಲುಕಿಕೊಂಡಿದೆ ಎಂದು ಕೋಗಿಲೆ ಹೇಳಿತು.

ಪ್ರಶ್ನೆ ೨ : ಕರೀಮ್ ಓದುತ್ತಿದ್ದ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದವರಾರು?

ಉತ್ತರ : ಶಂಕರಪ್ಪ

ಸರಿಯಾದ ಕ್ರಮ : ಕರೀಮ್ ಓದುತ್ತಿದ್ದ ಶಾಲೆಯಲ್ಲಿ ಶಂಕರಪ್ಪನವರು ಮುಖ್ಯೋಪಾಧ್ಯಾಯರಾಗಿದ್ದರು.

ಇದೇ ರೀತಿಯಾಗಿ ಎರಡು ಮೂರು ವಾಕ್ಯಗಳ ಪ್ರಶ್ನೆ ಮತ್ತು ಎಂಟು ಹತ್ತು ವಾಕ್ಯಗಳ ಪ್ರಶ್ನೆಗಳಿಗೆ ಕಲಿಕಾರ್ಥಿಯು ಉತ್ತರಿಸಬೇಕಾಗಿರುತ್ತದೆ. ಆದರೆ ಕಲಿಕಾರ್ಥಿಯನ್ನು ಕೇವಲ ಪರೀಕ್ಷಾ

ದೃಷ್ಟಿಯಿಂದ ಕನ್ನಡ ಭಾಷಾ ಬೋಧಕರು ತಮ್ಮ ಮೇಲಿನ ಜವಬ್ದಾರಿಯನ್ನು ಕಳೆದುಕೊಳ್ಳುವುದಕ್ಕಾಗಿ ವಾಕ್ಯಪೂರ್ಣವಾಗಿ ಬರೆಯದಿದ್ದರು, ಒಂದೊಂದು ಪದ ಬರೆದರೂ ಅದು ಸರಿ ಎಂದು ಒಂದು ಅಂಕವನ್ನು ನೀಡಲಾಗುತ್ತಿದೆ.

ಇದೆ ರೀತಿಯಾಗಿ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಬೇಕು. ಆಗ ಮಾತ್ರ ಮೂರು ಅಂಕ ನೀಡಬೇಕು ಆದರೆ ಕಲಿಕಾರ್ಥಿಯು

ಕವಿ : ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕಾಲ : ಕ್ರಿ.ಶ. ೧೯೦೪

ಸ್ಥಳ : ಹಾಸನ ಜಿಲ್ಲೆಯ ಗೊರೂರು

ಕೃತಿ : ಅಮೇರಿಕಾದಲ್ಲಿ ಗೊರೂರು, ಹೇಮಾವತಿ ತೀರದಲ್ಲಿ

ಪ್ರಶಸ್ತಿ : ಕೇಂದ್ರ ಸಾಹಿತ್ಯ ಅಕಾಡೆಮಿ.

ಕಲಿಕಾರ್ಥಿಯ ವಾಕ್ಯರಚನೆ ಮಾಡುವುದನ್ನು ಪರೀಕ್ಷಿಸುವ ಸಲುವಾಗಿ ಇಂತಹ ಪ್ರಶ್ನೆಗಳನ್ನು ಕೊಟ್ಟಿದ್ದರೆ ಕಲಿಕಾರ್ಥಿಯು ವಾಕ್ಯರೂಪದಲ್ಲಿ ಬರೆಯದೆ ಇದ್ದರೂ ಭಾಷಾ ಬೋಧಕರು ಕಲಿಕಾರ್ಥಿ ಬರೆದದ್ದೆ ಸರಿ ಎನ್ನುವ ರೀತಿಯಲ್ಲಿ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

ಜನ್ಮಸ್ಥಳ, ಕಾಲ
ಕೃತಿ, ಪ್ರಶಸ್ತಿ
ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ
ಒಟ್ಟು

ವಿ.ಕೃ. ಗೋಕಾಕ್

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ್ ಕ್ರಿ.ಶ. 1909ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಇವರು ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತಸಿಂಧುರಶ್ಮಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ದ್ಯಾವ ಪೃಥಿವೀ ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ಇವರಿಗೆ ಲಭಿಸಿದೆ. ಇವರ ಸಮಗ್ರಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿಗೂ ಭಾಜನರಾಗಿದ್ದು, ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ.

ಲಕ್ಷ್ಮೀಶ :

ಲಕ್ಷ್ಮೀಶ ಕವಿಯು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರಿಗೆ ಸೇರಿದವನು. ಈತನ ಕಾಲ ಕ್ರಿ.ಶ. 1550. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. ಇತನ ಕೃತಿ 'ಜೈಮಿನಿಭಾರತ'. ಕವಿ ಲಕ್ಷ್ಮೀಶನಿಗೆ ಉಪಮಾಲೋಲ, ಕರ್ನಾಟಕವಿಚೂತವನಚೈತ್ರ ಎಂಬ ಬಿರುದುಗಳಿದ್ದವು.

ಇದೇ ರೀತಿಯಾಗಿ ಭಾಷಾ ಶೈಲಿಗೆ ಸಂಬಂಧಿಸಿದಂತೆ ಪತ್ರ, ಪ್ರಬಂಧ, ಗಾದೆಮಾತನ್ನು ವಿಸ್ತರಿಸಿ ಬರೆಯುವುದು. ಇಲ್ಲಿ ವಾಕ್ಯರಚನೆ ಮತ್ತು ಬರವಣಿಗೆ ಕೌಶಲವನ್ನು ಗಮನಿಸಬೇಕು. ಉದಾಹರಣೆಗೆ: ವಯಕ್ತಿಕ ಪತ್ರವನ್ನು ಬರೆಯುವಾಗ ತಂದೆಗೆ ಪತ್ರ ಬರೆಯುತ್ತಿದ್ದರೆ ಪೂಜ್ಯ, ತೀರ್ಥರೂಪ ತಂದೆಯವರಿಗೆ ಎಂದು ಭಾಷೆಯನ್ನು ಬಳಸಬೇಕು. ಗೆಳೆಯ/ಗೆಳತಿಗೆ ಪತ್ರ ಬರೆಯುವಾಗ ಪ್ರೀತಿಯ, ಆತ್ಮೀಯ, ನಲ್ಮೆಯ ಗೆಳೆಯ/ಗೆಳತಿ, ಎಂಬ ಪದಗಳನ್ನು ಬಳಸಬೇಕು. ಇಂತಹ ಭಾಷಾ ಶೈಲಿಯನ್ನು ವಿದ್ಯಾರ್ಥಿ ಬರವಣಿಗೆಯಲ್ಲಿ ಬಳಸಿದರೆ ಅದಕ್ಕೆ ಒಂದು ಅಂಕವನ್ನು ನೀಡಬೇಕು. ಈ ರೀತಿಯಾಗಿ ಮೌಲ್ಯಮಾಪನ ವಿಧಾನವು ಭಾಷಾ ಶೈಲಿ, ಪದರಚನೆ, ವಾಕ್ಯರಚನೆ ಎಲ್ಲವನ್ನು ಒಳಗೊಂಡಿದೆ.

ಇಂತಹ ಮೌಲ್ಯಮಾಪನ ಕ್ರಿಯೆಯೂ ಬೋಧಕರಿಗೆ ದೊಡ್ಡ ಸಮಸ್ಯೆಯಾಗಿ ತಲೆದೋರಿದೆ. ಏಕೆಂದರೆ ಬೋಧನಾ ಪದ್ಧತಿಯು ಮತ್ತು ಸರಕಾರದ ಆದೇಶಗಳು ಹೊರೆಯಾಗುತ್ತಿವೆ. 'ಕಡ್ಡಾಯ ಶಿಕ್ಷಣ' ಮತ್ತು 'ಮಕ್ಕಳ ಹಕ್ಕು'ಗಳಡಿಯಲ್ಲಿ ಮಗುವನ್ನು ಬೈಯುವಂತಿಲ್ಲ, ಹೊಡೆಯುವಂತಿಲ್ಲ, ಗದರಿಸುವಂತಿಲ್ಲ ಹೀಗಾಗಿ ಈ ಎಲ್ಲಾ ತೊಡಕುಗಳ ಮಧ್ಯದಲ್ಲಿ ಬೋಧಕರು ಸಿಲುಕಿಕೊಂಡಿದ್ದಾರೆ. ಇಂತಹ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿ ಪರಿಹಾರಕಂಡುಕೊಳ್ಳದೆ ತನ್ನದೆಯಾದ ಕ್ರಮದಲ್ಲಿ ಮೌಲ್ಯಮಾಪನ ಮಾಡುತ್ತಿದ್ದಾರೆ.

ಇದೇ ರೀತಿಯಾಗಿ ಪ್ರತಿಯೊಂದು ಅಂಶವನ್ನು ಮೌಲಿಕರಿಸುತ್ತಿದ್ದಾರೆ. ಭಾಷೆಗೆ ಬೇಕಾಗಿರುವುದು ಪ್ರಮುಖವಾಗಿ 'ಸ್ಪಷ್ಟ ಓದು ಶುದ್ಧ ಬರಹ' ಈ ಸ್ಪಷ್ಟ ಓದು ಯಾವ ಕಲಿಕಾರ್ಥಿಗಳಿಗೆ ಬರುತ್ತದೆಯೋ ಅವರು ಶುದ್ಧವಾಗಿ ಬರೆಯುತ್ತಾರೆ. ಆದರೆ ಈ ಯಾವ ಅಂಶವನ್ನು ಇವತ್ತು ಗಮನಿಸಿದೆ ಮೌಲ್ಯಮಾಪನ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಹುಡುಕುವುದಾದರೆ ಇಡೀ ಶಿಕ್ಷಣ ವ್ಯವಸ್ಥೆ ಇಂದು Education, Examination, Employment ಎಂಬಂತೆ ಯಾಂತ್ರಿಕವಾಗಿದೆ. ಇದೇ ರೀತಿ ಮೌಲ್ಯಮಾಪನ ಎಂಬ ವ್ಯಾಪಕವಾದ ಪ್ರಕ್ರಿಯೆಯನ್ನು ಪರೀಕ್ಷೆ ಎಂಬ ಪರಿಕಲ್ಪನೆಗೆ ಸೀಮಿತಗೊಳಿಸಲಾಗಿದೆ. ಶಿಕ್ಷಣದ ಅತಿ ಮುಖ್ಯ ಕೆಲಸ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸುವಂತೆ ಕಲಿಕಾರ್ಥಿಗಳಿಗೆ ತರಬೇತಿ ನೀಡುವುದೇ ಆಗಿದೆ. ಬೋಧನೆ ಮತ್ತು ಕಲಿಕೆಯ ಗುಣಮಟ್ಟವನ್ನು ಸುಧಾರಿಸಲು ಸಹಾಯಕವಾಗಬೇಕಾಗಿದ್ದ ಮೌಲ್ಯಮಾಪನದ ಸಾಧನಗಳಾದ ಪರೀಕ್ಷೆಗಳು ಶಿಕ್ಷಣದ ಗುಣಮಟ್ಟ ಮತ್ತು ಮೌಲ್ಯ ಮಾಪನದ ಪಾವಿತ್ರ್ಯತೆಯನ್ನು ಹಾಳುಮಾಡುವ ಮಟ್ಟಕ್ಕೂ ಹೋಗಿವೆ. ನಮ್ಮ ಆಡಳಿತ ಪದ್ಧತಿ, ವೃತ್ತಿ ನೇಮಕಾತಿ ಪದ್ಧತಿಗಳಲ್ಲಿನ ಸ್ವರೂಪವು ಈ ಕೊರತೆಗಳಿಗೆ ಕಾರಣವಾಗಿದೆ ಎನ್ನಬಹುದು. ಒಟ್ಟಾರೆ ಮೌಲ್ಯಮಾಪನವು ಪರೀಕ್ಷೆಗೆ ಮಾತ್ರ ಸೀಮಿತ ಆಗುವ ಸ್ಥಿತಿ ಬಹುದೊಡ್ಡ ಅಪಾಯ.

ಇಂದು ಕಲಿಕಾರ್ಥಿ ಎಷ್ಟು ಕಲಿತಿದ್ದಾರೆ ಎಂಬುದನ್ನು ಪ್ರಧಾನವಾಗಿ ಮೌಲ್ಯ ಮಾಡಲಾಗುತ್ತಿದೆ. ಕಲಿಕಾರ್ಥಿಗಳು ವಿಷಯವನ್ನು ಹೇಗೆ ಕಲಿತಿದ್ದಾರೆ? ಯಾವ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಂಡಿದ್ದಾರೆ? ಕಲಿತ ವಿಷಯಗಳನ್ನು ಹೇಗೆ ಅನ್ವಯಮಾಡಿಕೊಳ್ಳಬಲ್ಲ ಎಂಬುದನ್ನು ಪರೀಕ್ಷಿಸಲು ಅತ್ಯಲ್ಪ ಅವಕಾಶಗಳಿವೆ.

ಮೌಲ್ಯಮಾಪನವು ಮಕ್ಕಳು ವಿಷಯದಲ್ಲಿ ಗಳಿಸಿರುವ ಪರಿಣಿತಿಯನ್ನು ಪ್ರಧಾನವಾಗಿ ಪರೀಕ್ಷಿಸುತ್ತಿದ್ದು ಮಕ್ಕಳು ಭಾಷಾ ಕೌಶಲಗಳಲ್ಲಿ ಪಡೆಯುವ ಸಾಮರ್ಥ್ಯಗಳನ್ನು ಪರಿಗಣಿಸುತ್ತಿಲ್ಲ. ಇದರಿಂದಾಗಿ ಭಾಷಾ ಸಾಮರ್ಥ್ಯ, ಸಾಹಿತ್ಯ ಅಭಿರುಚಿಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿವೆ.

ಈ ರೀತಿಯ ಮೌಲ್ಯಮಾಪನ ಕ್ರಿಯೆಗೆ ನೇರವಾಗಿ ಸರಕಾರವೇ ಹೊಣೆಯಾಗುತ್ತದೆ. ಉದಾಹರಣೆ : ಒಂದು ಶಾಲೆಯಲ್ಲಿ ನಲವತ್ತು ಜನ ಕಲಿಕಾರ್ಥಿಗಳು ಇದ್ದಿದರೆ ಆ ಶಾಲೆಯ ನಲವತ್ತು ಮಕ್ಕಳು ಒಂದು ವಿಷಯದಲ್ಲಿ ತೆಗೆದುಕೊಂಡ ಕನಿಷ್ಠ ಅಂಕದಿಂದ ಗರಿಷ್ಠ ಅಂಕದವರೆಗೆ ಕೂಡಿಸಿ ಪ್ರತಿಶತ ತೆಗೆದು ನೇರವಾಗಿ ಸರಕಾರವು ಬೋಧಕರ ಬೋಧನಾ ಪರಿಣಾಮ ಕುರಿತು ಪತ್ರ ಬರೆಯುವ ಜವಬ್ದಾರಿ ತೆಗೆದುಕೊಂಡಿದೆ. ಇದರಿಂದ ಬೋಧಕರ ಮನಸ್ಥಿತಿ ಸಧಾ ಭಯದಲ್ಲಿರುವಂತಾಗಿದೆ. ಹೀಗಾಗಿ ಬೋಧಕರು ಕಲಿಕಾರ್ಥಿಯು ಬರೆದಿರುವ ಉತ್ತರ ಸರಿಯಿರದಿದ್ದರು ಅದನ್ನು ಸರಿ ಎಂದು ಪರಿಗಣಿಸಿ ಅಂಕ ನೀಡಲಾಗುತ್ತಿದೆ.

ಇಂತಹ ಮನಸ್ಥಿತಿಯಿಂದ ಕನ್ನಡ ಭಾಷಾ ಬೋಧಕರು ಹೊರಗೆ ಬಂದು ಯಾವುದೇ ಸಮಸ್ಯೆ ಬಂದರು ಸವಾಲಾಗಿ ಸ್ವೀಕರಿಸಿ ಅದಕ್ಕೆ ಕ್ರೀಯಾ ಯೋಜನೆ ರಚಿಸಿಕೊಂಡು ಉತ್ತಮ ಬೋಧನೆ ಮತ್ತು ಮೌಲ್ಯಮಾಪನದತ್ತ ಗಮನಹರಿಸಬೇಕಿದೆ. ಇಲ್ಲದಿದ್ದರೆ ಎಷ್ಟೆ ಯೋಜನೆಗಳು ಕಲಿಕೆಯನ್ನು ಉತ್ತಮ ಪಡಿಸುವುದಕ್ಕಾಗಿ ಜಾರಿಯಾದರೂ ವ್ಯರ್ಥವಾಗುತ್ತವೆ. ಮೊದಲು 'ಸ್ಪಷ್ಟ ಓದು ಶುದ್ಧಬರಹ' ವಾಗಬೇಕಾದರೆ ಬೋಧಕ ಈ ಅಂಶವನ್ನು ಸವಾಲಾಗಿ ಸ್ವೀಕರಿಸಿದಾಗ ಮಾತ್ರ ಮುಂದಿನ ದಿನಗಳಲ್ಲಿ ಇದು ಯಶಸ್ವಿಯಾಗುವುದನ್ನು ಕಾಣಬಹುದು.

ಟಿಪ್ಪಣಿಗಳು

೧) ಮಹಾಬಲೇಶ್ವರರಾವ್, ೨೦೧೧, ***ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ,*** ಪುಟ ಸಂಖ್ಯೆ. ೯

೨) ಅದೇ ಪುಟ ಸಂಖ್ಯೆ. ೯

೩) ಅದೇ ಪುಸ್ತಕ, ಪುಟ ಸಂಖ್ಯೆ. ೧೦

೪) ಡಿ.ಎನ್.ಶಂಕರಭಟ್ಟ, ೨೦೦೬, ***ಕನ್ನಡ ಬರಹವನ್ನು ಸರಿಪಡಿಸೋಣ ಪು.ಸಂ.೬೪-೬೫***

೫) ಡಿ.ಎನ್.ಶಂಕರಭಟ್ಟ, ೨೦೦೬, ***ಕನ್ನಡ ಬರಹವನ್ನು ಸರಿಪಡಿಸೋಣ***

೬) ಡಿ.ಎಸ್.ಆರ್.ಟಿ, ೨೦೧೬, ***ಕನ್ನಡ ಕುಸುಮ,*** ಪುಟ ಸಂಖ್ಯೆ: ೧೩೪-೧೩೫

೭) ಅದೇ ಪುಸ್ತಕ, ಪುಟ ಸಂಖ್ಯೆ: ೧೧-೧೨

೮) ಅನಸೂಯ ವಿ ಪರಗಿ, ೨೦೦೭, ***ಮಾತೃಭಾಷೆ ಕನ್ನಡ ತತ್ವ ಮತ್ತು ಬೋಧನಾ ಮಾರ್ಗ,***
ಪುಟ ಸಂಖ್ಯೆ : - ೫೧೧

೯) ಎನ್.ಬಿ. ಕೊಂಗವಾಡರವರ, ೧೯೯೮-೯೯, ***ಭಾಷೆ ಮತ್ತು ಕನ್ನಡ ಬೋಧನೆ,***
ಪುಟ ಸಂಖ್ಯೆ : ೨೫೪

೧೦) ಅದೇ ಪುಸ್ತಕ, ಪುಟ ಸಂಖ್ಯೆ : ೨೫೪

೧೧) ಅದೇ ಪುಸ್ತಕ " " ೨೫೬-೨೫೮

೧೨) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ - ಬೆಂಗಳೂರು (ಅಂತರಜಾಲ)

* * *

ಅಧ್ಯಾಯ : ಐದು

ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳು

೫.೧. ಆಲಿಸುವಿಕೆಯ ಸಮಸ್ಯೆ

ಅ. ಉಕ್ತಲೇಖನ

೫.೨. ಓದುಗಾರಿಕೆಯ ಸಮಸ್ಯೆ

೫.೩. ಬರವಣಿಗೆಯ ಸಮಸ್ಯೆ

ಅ. ಶುದ್ಧಬರಹ

ಆ. ಸ್ವಂತ ಲೇಖನ

ಅಧ್ಯಾಯ : ಐದು

ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳು

"ಎನ್.ಸಿ.ಎಫ್. – ೨೦೦೫ ಹಾಗೂ ಆರ್.ಟಿ.ಇ – ೨೦೦೯ ಜಾರಿಗೆ ಬಂದ ನಂತರ ಶಿಕ್ಷಣದ ಪರಿಕಲ್ಪನೆಯೇ ಬದಲಾಗಿದೆ. ಶಿಕ್ಷಣದ ಪ್ರಕ್ರಿಯೆಯನ್ನು ಬದಲಿಸಿ, ಮಕ್ಕಳು ಪರೀಕ್ಷೆಯಲ್ಲಿ ತೆಗೆದುಕೊಳ್ಳುವ ಅಂಕಗಳು ಮಾತ್ರ ಶಿಕ್ಷಣ ಅಲ್ಲ. ಅದನ್ನು ಮೀರಿದ ಅಂಶಗಳು ಇದರಲ್ಲಿ ಸಮ್ಮಿಳಿತವಾಗಿವೆ ಎಂಬುದನ್ನು ಎತ್ತಿ ತೋರಿಸಿದೆ. ಅದೇ ರೀತಿ ಕರ್ನಾಟಕದ ಸಂದರ್ಭದಲ್ಲಿ ಕನ್ನಡ ಭಾಷಾ ಕಲಿಕೆ ಬಹುಮುಖ್ಯವಾಗುತ್ತದೆ. ಕನ್ನಡ ಕೇವಲ ಭಾಷೆಯಾಗಿ ಮಾತ್ರವಲ್ಲದೆ, ಅತಿ ಹೆಚ್ಚು ಮಕ್ಕಳು ಕಲಿಯುವ ಮಾಧ್ಯಮವಾಗಿಯೂ ಪಾತ್ರವಹಿಸುತ್ತಿದೆ. ಈ ನೆಲೆಯಲ್ಲಿ ಮಕ್ಕಳು ಭಾಷಾ ತರಗತಿಗಳಲ್ಲಿ ಏನನ್ನು ಕಲಿಯಬೇಕಾಗಿತ್ತು ಎಂಬುದನ್ನು ಗುರುತಿಸಿಕೊಂಡಿರುವ ನಾವು ಕಲಿಕೆಯ ಪ್ರಕ್ರಿಯೆಯಲ್ಲಿ ಅವರು ಏನನ್ನು ಕಲಿತ್ತಿದ್ದಾರೆ? ಕಲಿತ್ತಿದ್ದಕ್ಕೆ ಪೂರಕ ಅಂಶಗಳೇನು? ಕಲಿಯದಿದ್ದರೆ ಅದಕ್ಕೆ ಕಾರಣ ಏನು? ಯಾರು ಕಾರಣ? ಎಂಬುದನ್ನು ವಿವಿಧ ಆಯಾಮಗಳಲ್ಲಿ ಪರಿಶೀಲಿಸಿ ಅರ್ಥೈಸಿಕೊಂಡು[೧] ಕಲಿಕಾರ್ಥಿಗಳಲ್ಲಿನ ಕಲಿಕಾ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಕನ್ನಡ ಭಾಷಾ ಕಲಿಕಾರ್ಥಿಗಳು ಕನ್ನಡ ಓದುವಾಗ, ಬರೆಯುವಾಗ ಮತ್ತು ಆಲಿಸುವಾಗ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬುದು ಇಂದಿನ ದಿನಗಳಲ್ಲಿ ಕೇಳುತ್ತಿದ್ದೇವೆ. ಹಾಗಾದರೆ ಈ ಭಾಷಾ ಕಲಿಕೆಯ ಸಮಸ್ಯೆಯು ಎಲ್ಲಾ ವರ್ಗದ ಮಕ್ಕಳಲ್ಲಿಯು ಇದೇಯೆ? ಅಥವಾ ಕೆಲವು ವರ್ಗದ ಮಕ್ಕಳಲ್ಲಿ ಮಾತ್ರ ಈ ಸಮಸ್ಯೆ ಕಾಣುತ್ತಿದೆಯೆ? ಎಂಬುದನ್ನು ಗುರುತಿಸುವ ಸಲುವಾಗಿ ಮೂರು ಆಯಾಮಗಳಲ್ಲಿ ಕಲಿಕಾರ್ಥಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳನ್ನು ಪರಿಗಣಿಸಿ ಎಂತಹ ಹಿನ್ನೆಲೆಯ ಮಕ್ಕಳು ಹೆಚ್ಚಾಗಿ ಕಲಿಕಾ ಸಮಸ್ಯೆಯನ್ನು ಎದುರಿಸುತ್ತಿದ್ದಾರೆಂದು ಗುರುತಿಸಲಾಗಿದೆ.[೨]

ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಎಂದು ಹೇಳಬೇಕಾದರೆ ಕಲಿಕೆ ಎಂದರೇನು ಎಂಬುದು ತಿಳಿದುಕೊಳ್ಳಬೇಕಾಗಿರುವುದು ಅತಿ ಅವಶ್ಯಕ. ಈ ಕಲಿಕೆಯನ್ನು ಕುರಿತು ಪ್ರಮುಖ ವ್ಯಾಖ್ಯಾನಕಾರರು ಕಲಿಕೆ ಎಂದರೇನು? ಕಲಿಕೆ ಹೇಗೆ ಉಂಟಾಗುತ್ತದೆ ಎಂದು ಈ ಕೆಳಕಂಡಂತೆ ವ್ಯಾಖ್ಯಾನಿಸಿದ್ದಾರೆ.

ಕಲಿಕೆಯ ವ್ಯಾಖ್ಯೆಗಳು:

* **ಪೀಲ್ ರವರ ಪ್ರಕಾರ :**

"ಪರಿಸರದ ಬದಲಾವಣೆಗೆ ತಕ್ಕಂತೆ ವ್ಯಕ್ತಿಯಲ್ಲಿ ಉಂಟಾಗುವ ಪರಿವರ್ತನೆಯೇ ಕಲಿಕೆಯಾಗಿದೆ".

* **ಮ್ಯಾಕ್‌ಡ್ಯೂಗಲ್ ಪ್ರಕಾರ :**

"ಅಭ್ಯಾಸ ನಿರ್ವಹಣೆಯಲ್ಲಿ ಆಗುವ ಬದಲಾವಣೆಯೇ ಕಲಿಕೆ".

* **ಗಿಬ್ಸನ್ ಪ್ರಕಾರ :**

"ಕಲಿಕೆಯು ವ್ಯಕ್ತಿ ಹಾಗೂ ಪರಿಸರದ ನಡುವಣ ಪಾರಿಸ್ಪರಿಕ ಕ್ರಿಯೆಯಿಂದ ಉತ್ಪನ್ನವಾಗುವ ಬಹುಮಟ್ಟಿಗೆ ಶಾಶ್ವತ ಎನ್ನಬಹುದಾದ ವರ್ತನೆಯ ಪರಿವರ್ತನೆ".

* **ಕ್ರೌನ್‌ಬಾಕ್ ಪ್ರಕಾರ :**

"ತರಬೇತಿಯ ಮತ್ತು ಅಭ್ಯಾಸಿಗಳ ಮೂಲಕ ವರ್ತನೆಯ ಉಗಮ ಮತ್ತು ಮಾರ್ಪಾಡನ್ನುಂಟು ಮಾಡುವ ಪ್ರಕ್ರಿಯೆಯೇ ಕಲಿಕೆ"

* **ಸ್ಕಿನ್ನರ್ ಪ್ರಕಾರ :**

"ಜ್ಞಾನಾರ್ಜನೆ ಹಾಗೂ ಧಾರಣಾ ಶಕ್ತಿಗೆ ಸಂಬಂಧಿಸಿರುವುದೇ ಕಲಿಕೆ".[೩] ಮೇಲಿನ ವ್ಯಾಖ್ಯೆಗಳ ಅಧ್ಯಯನದಿಂದ ನಮಗೆ ಕಲಿಕೆ ಎಂದರೇನು? ಎಂಬುದರ ಬಗ್ಗೆ ತಿಳುವಳಿಕೆ ಉಂಟಾಗುತ್ತದೆ. ಕಲಿಕೆಯು ನುರಿತ .ತರಬೇತಿ ಮತ್ತು ಸತತ ಅಭ್ಯಾಸದಿಂದ ಸುಧಾರಣೆಗೊಳ್ಳುತ್ತದೆ.

ಮಾತೃಭಾಷೆ ಕನ್ನಡವಿದ್ದು, ಪರಿಸರದ ಭಾಷೆ ಮನೆಯಲ್ಲಿ ಮಾತನಾಡುವ ಭಾಷೆಯು ಕನ್ನಡವೇ ಆಗಿದ್ದು, ಶಾಲೆಯಲ್ಲಿಯು ಪ್ರಥಮ ಭಾಷೆಯಾಗಿ ಕನ್ನಡವನ್ನೆ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಕನ್ನಡ ಭಾಷೆಯನ್ನು ಓದುವಾಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಅದೇ ರೀತಿಯಾಗಿ ಬರೆಯುವಾಗಲೂ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಗಮನಿಸಲಾಗಿದೆ. ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಾಲೆಯ ಶಿಕ್ಷಣದವರೆಗೆ ಮಾತೃಭಾಷೆ ಕನ್ನಡದಲ್ಲೆ ಕಲಿಯುತ್ತಿದ್ದರು ಸಹ ಭಾಷಾ ಕಲಿಕೆಯಲ್ಲಿ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಅಧ್ಯಯನದ ವಿಶ್ಲೇಷಣೆ

ಮನೆಯ ಮಾತು ಕನ್ನಡ, ಕಲಿಕೆಯ ಭಾಷೆಯು ಕನ್ನಡವಿದ್ದು ಕನ್ನಡ ಭಾಷಾ ಕಲಿಕೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದು ಗಮನಾರ್ಹವಾಗಿದೆ. ಓದುಗಾರಿಕೆ, ಬರವಣಿಗೆ, ಆಲಿಸುವಿಕೆ ಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಕಲಿಕಾ ಸಮಸ್ಯೆಯನ್ನು ಗುರುತಿಸುವ ಸಲುವಾಗಿ ೫೦೦ (ಐದುನೂರು) ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಒಳಪಡಿಸಲಾಯಿತು.ಇವರಲ್ಲಿ ಇನ್ನೂರಾಐವತ್ತು

ಖಾಸಗಿ ಶಾಲೆಯ ಮಕ್ಕಳು, ಇನ್ನೂರಾ ಐವತ್ತು ಸರಕಾರಿ ಶಾಲೆಯ ಮಕ್ಕಳನ್ನು ಆಯ್ಕೆಮಾಡಿಕೊಳ್ಳಲಾಯ್ತು. ಮತ್ತು ಇನ್ನೂರಾ ಐವತ್ತರಲ್ಲಿ ಒಂದುನೂರಾ ಇಪ್ಪತ್ತೈದು ಗಂಡು ಮಕ್ಕಳು, ಒಂದುನೂರಾ ಇಪ್ಪತ್ತೈದು ಹೆಣ್ಣು ಮಕ್ಕಳನ್ನು, ಅಧ್ಯಯನಕ್ಕೆ ತೆಗೆದು ಕೊಳ್ಳಲಾಗಿತ್ತು.

ಈ ಎಲ್ಲಾ ವಿದ್ಯಾರ್ಥಿಗಳು ೮,೯ ಮತ್ತು ೧೦ನೇ ತರಗತಿಯ ಕನ್ನಡ ಭಾಷಾ ಕಲಿಕಾರ್ಥಿಗಳು, ಇವರಲ್ಲಿಯ ಭಾಷಾ ಕಲಿಕಾ ಸಮಸ್ಯೆಯನ್ನು ಗುರುತಿಸುವ ಸಲುವಾಗಿ ಇವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಯ ಹಿನ್ನೆಲೆಯನ್ನು ಪ್ರಶ್ನಾವಳಿಗಳ ಮೂಲಕ ತಿಳಿದುಕೊಳ್ಳಲಾಯ್ತು. ಏಕೆಂದರೆ ಭಾಷಾ ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಶೈಕ್ಷಣಿಕವಾಗಿ, ಸಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರೇ ಹೆಚ್ಚಾಗಿದ್ದಾರೆ.

<u>**ಶೈಕ್ಷಣಿಕವಾಗಿ**</u> ಎಂದರೆ ಕಲಿಕಾರ್ಥಿಗಳ ಮನೆಯಲ್ಲಿ ಶಿಕ್ಷಿತರು ಇಲ್ಲದಿರುವುದು.

<u>**ಸಾಮಾಜಿಕವಾಗಿ**</u> ಕಲಿಕಾರ್ಥಿಗಳು ತಮ್ಮ ಸುತ್ತ ಮುತ್ತಲಿನವರೊಡನೆ ಸಂವಹನ ಕ್ರೀಯೆ ಇಲ್ಲದಿರುವುದು.

<u>**ಆರ್ಥಿಕವಾಗಿ**</u> ಕಲಿಕಾರ್ಥಿಗಳ ಕೌಟುಂಬಿಕ ಪರಿಸ್ಥಿತಿಯು ಸುಸ್ಥಿತಿಯಲ್ಲಿಲ್ಲದಿರುವುದು.

ಈ ಮೂರು ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಕಲಿಕಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿಕೊಂಡು ಕೋಷ್ಟಕ ಮತ್ತು ಸ್ತಂಭಲೇಖ ಚಿತ್ರ ಹಾಗೆಯೇ ಪೈ ನಕ್ಷೆಯ ಮೂಲಕ ಪ್ರತಿಶತವನ್ನು ಗುರಿತಿಸಲಾಗಿದೆ. ಕಲಿಕಾರ್ಥಿಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಕೇಳಿದ ಪ್ರಶ್ನೆಗಳು.ಈ ಕೆಳಗಿನಂತಿವೆ,

೧. <u>**ವಿದ್ಯಾರ್ಥಿಗಳ ಪ್ರಶ್ನಾವಳಿಗಳು**</u>

ಅ) ವಯಕ್ತಿಕ ಪ್ರಶ್ನೆಗಳು :

೧. ಶಾಲೆಯ ಹೆಸರು <u>**ಕನ್ಯಾ ಪ್ರೌಢ ಶಾಲೆ ಜೇವರ್ಗಿ**</u> ಸರ್ಕಾರಿ/ ಖಾಸಗಿ

* ಮಾಧ್ಯಮ : <u>**ಕನ್ನಡ**</u>/ಇಂಗ್ಲಿಷ್
* ಮುಖ್ಯಗುರುಗಳ ಹೆಸರು : <u>**ವ್ಹಿಪಾಯ್ ಗುಡಮಿ**</u>
* ಕನ್ನಡ ಭಾಷಾ ಶಿಕ್ಷಕರ ಹೆಸರು: <u>**ಜಯಶ್ರೀ**</u>
* ವಿದ್ಯಾರ್ಥಿಯ ಹೆಸರು : <u>**ರೇಣುಕಾ**</u>
* ತರಗತಿ : ೧೦ನೇ (ಬಿ)
* ಲಿಂಗ : ಗಂಡು/<u>**ಹೆಣ್ಣು**</u>
* ವಯಸ್ಸು : <u>೧೬</u>
* ಜಾತಿ : <u>**ಪೂಜಾರಿ**</u>
* ವಿಳಾಸ : <u>**ಸಾಥಖೇಡ**</u>

೨) ತಂದೆಯ ಹೆಸರು ಮತ್ತು ವಿದ್ಯಾರ್ಹತೆ : ಹಣಮಂತ್ರರಾಯ

೩) ತಾಯಿಯ ಹೆಸರು ಮತ್ತು ವಿದ್ಯಾರ್ಹತೆ : ನಿಂಗಮ್ಮ

೪) ತಂದೆ/ತಾಯಿಯವರ ವಾರ್ಷಿಕ ಆದಾರ : ೧೦.೦೦೦

೫) ಮನೆಯಲ್ಲಿ ಯಾವ ಭಾಷೆ ಮಾತನಾಡುತ್ತೀರಿ? : **ಕನ್ನಡ ಭಾಷೆ**

೬) ನಿಮ್ಮ ತಂದೆ/ತಾಯಿ ಮೂಲತಹ ಕನ್ನಡಿಗರೇ? : **ಹೌದು**

೭) ಕನ್ನಡ ಭಾಷೆಯೊಂದಿಗೆ ಬೇರೆ ಯಾವ ಯಾವ ಭಾಷೆ ಬರುತ್ತವೆ? ಇಲ್ಲ

೮) ನಿಮ್ಮ ಮನೆಯ ಅಕ್ಕ ಪಕ್ಕ ಯಾವ ಭಾಷೆ ಮಾತನಾಡುವ ಜನರಿದ್ದಾರೆ?

ಕನ್ನಡ ಭಾಷೆ ಮಾತನಾಡುತ್ತಾರೆ

೯) ನಿಮ್ಮ ಗ್ರಾಮದಲ್ಲಿ ಹೆಚ್ಚು ಬಳಸುವ ಭಾಷೆ ಯಾವುದು? **ಕನ್ನಡ**

೧೦) ನೀನು ವಾಸವಾಗಿರುವ ಕುಟುಂಬ ವ್ಯವಸ್ಥೆ ಯಾವುದು?

ಅ) ಅವಿಭಕ್ತ ಕುಟುಂಬ ಆ) ವಿಭಕ್ತ ಕುಟುಂಬ

೧೧) ನಿಮ್ಮ ಮನೆಯಲ್ಲಿ ಓದುವವರ ಸಂಖ್ಯೆ ಎಷ್ಟಿದೆ?

ಅ) ೧ ಆ) ೨ ಇ) ೩ **ಈ) ೪**

೧೨) ನಿಮ್ಮ ಮನೆಯಲ್ಲಿ ನೀವು ಎಷ್ಟನೆಯವರು?

ಅ) ಪ್ರಥಮ ಆ) ದ್ವಿತೀಯ ಇ) ತೃತಿಯ ಈ) ಇನ್ನಾವುದೆ **೬ನೇ ಅವಳು**

೧೩) ಕುಟುಂಬದ ಪೋಷಕರು ಕೆಲಸಕ್ಕೆ ಹೋಗುವಾಗ ನಿನ್ನನ್ನು ಕರೆದುಕೊಂಡು ಹೋಗುತ್ತಾರೆಯೇ?

ಹೌದು / ಇಲ್ಲ

೧೪) ಕುಟುಂಬದ ಆರ್ಥಿಕ ಸ್ಥಿತಿ

ಅ) ಉತ್ತಮ ಆ) ಅತ್ಯುತ್ತಮ **ಇ) ಸಾಧಾರಣ**

೧೫) ಕುಟುಂಬದ ಸಾಮಾಜಿಕ ಸ್ಥಿತಿ

ಅ) ಉತ್ತಮ ಆ) ಅತ್ಯುತ್ತಮ **ಇ) ಸಾಧಾರಣ**

೧೬) ಕುಟುಂಬದ ಶೈಕ್ಷಣಿಕ ಸ್ಥಿತಿ

ಅ) ಉತ್ತಮ ಆ) ಅತ್ಯುತ್ತಮ **ಇ) ಸಾಧಾರಣ**

೧೭) ನೀವು ಎಂಥಹ ಪ್ರದೇಶದಿಂದ ಶಾಲೆಗೆ ಬರುತ್ತೀರಿ?

ಅ) ನಗರ ಆ) ಅರೆನಗರ **ಇ) ಗ್ರಾಮೀಣ** ಈ) ಇತರೆ

೧೮) ಕಲಿಕೆಯಲ್ಲಿ ನಿಮಗೆ ಆಸಕ್ತಿ ಇದೆಯೇ? <u>ಹೌದು</u>/ಇಲ್ಲ

ಇಲ್ಲವಾದರೆ ಕಾರಣ : ಅ) ಹುಷಾರಿಲ್ಲದ ಕಾರಣ____________

ಆ) ಬುದ್ಧಿವಂತಿಕೆ ಇಲ್ಲದ ಕಾರಣ____________

ಇ) ಬಡತನ ಹಾಗೂ ಇನ್ನಿತರ ಕಾರಣ__________

೧೯) ನೀವು ದಿನಾಲು ಶಾಲೆಗೆ ಹಾಜರಾಗುತ್ತಿರಾ? ಹೌದು/ಇಲ್ಲ

ಇಲ್ಲವಾದರೆ ಕಾರಣ : ಅ) ಮನೆಯಲ್ಲಿ ಕೆಲಸವಿರುವ ಕಾರಣ <u>ಹೌದು</u>

ಆ) ಕೂಲಿಕೆಲಸಕ್ಕೆ ಹೋಗುವ ಕಾರಣ __________

ಇ) ಇತರೆ ಬೇರೆ ಕಾರಣ __________

೨೦) ಮನೆಯಲ್ಲಿ ಓದುವುದಕ್ಕೆ ಬಿಡುವಿಲ್ಲದಷ್ಟು ಕೆಲಸದ ಒತ್ತಡವೇ? <u>ಹೌದು</u>/ಇಲ್ಲ

೨೧) ಕಲಿಕೆಯ ಬಗ್ಗೆ ನಿಮಗೆ ಕೀಳರಿಮೆ ಇದೇಯೇ? ಹೌದು/ಇಲ್ಲ

೨೨) ನಿಮಗೆ ಯಾವುದಾದರೂ ದೈಹಿಕ ದೋಷಗಳಿವೆಯೇ? ಹೌದು/<u>ಇಲ್ಲ</u>

೨೩) ನಿಮಗೆ ಖರ್ಚಿಗಾಗಿ "ಪಾಕೇಟ್ ಮನಿ" ಅಂತ ಹಣ ನೀಡುವರೆ? <u>ಹೌದು</u>/ಇಲ್ಲ

೨೪) ಕಲಿಕೆಯ ಬಗ್ಗೆ ನಿಮ್ಮ ಪೋಷಕರ ಅಭಿಪ್ರಾಯ ಹೇಗಿದೆ?

<u>ಅ) ಇಷ್ಟವಿದೆ</u> ಆ) ಇಷ್ಟವಿಲ್ಲ

ಆ) ಪಠ್ಯ ಪುಸ್ತಕ ಮತ್ತು ಬೋಧಕ ಪರಿಸರಕ್ಕೆ ಸಂಬಂಧಿಸಿದ ಪ್ರಶ್ನೆಗಳು.

೨೫) ಪಾಠಗಳು ಸರಿಯಾದ ಸಮಯಕ್ಕೆ ನಡೆಯುತ್ತವೆಯೇ? <u>ಹೌದು</u> / ಇಲ್ಲ

೨೬) ಕನ್ನಡ ಭಾಷಾ ಬೋಧನೆ ಯಾರಿಂದ ನಡೆಯುತ್ತದೆ?

ಅ) ಕನ್ನಡ ಭಾಷಾ ಶಿಕ್ಷಕರಿಂದ <u>ಹೌದು</u>

ಆ) ಇತರೆ ಶಿಕ್ಷಕರಿಂದ ____________________________________

೨೭) ಕನ್ನಡ ಭಾಷೆಯನ್ನು ಬೋಧಿಸುವಾಗ ಬೋಧನೋಪಕರಣಗಳನ್ನು ಬಳಸುತ್ತಾರೆಯೇ?

ಹೌದು/<u>ಇಲ್ಲ</u>

೨೮) ಕನ್ನಡ ಭಾಷಾ ಕಲಿಕೆಯು ನಿಮಗೆ ಕಷ್ಟಕರವಾಗಿದಿಯೇ? <u>ಹೌದು</u>/ಇಲ್ಲ

ಹೌದಾದರೆ: ಅ) ವಿಷಯ ಕಷ್ಟಕರವಾಗಿದಿಯೇ? ____________________

ಆ) ಬೋಧನಾ ಮಾಧ್ಯಮ ____________________

ಇ) ಶಿಕ್ಷಕರು ಚೆನ್ನಾಗಿ ಬೋಧಿಸಲಾರರು ____________________

೨೯) ನಿಮ್ಮ ಶಾಲೆಯ ಪರಿಸರ ಹಿತಕರವೆನಿಸುತ್ತದೆಯೇ? ಹೌದು / ಇಲ್ಲ

ಇಲ್ಲವಾದರೆ ಕಾರಣ:ಅ) ಕಠಿಣ ವೇಳಾಪಟ್ಟಿ ಮತ್ತು ಶಿಸ್ತು ____________

ಆ) ಗೆಳೆಯರೊಂದಿಗೆ ಕಿಳರಿಮೆ ____________

ಇ) ಮೂಲಭೂತ ಸೌಲಭ್ಯಗಳಿಲ್ಲದಿರುವುದು ____________

೩೦) ಮನೆಗೆಲಸ ಮಾಡದಿದ್ದಾಗ ಶಿಕ್ಷಕರು ನಿಮಗೆ ದಂಡಿಸುವರೇ? ಹೌದು/ಇಲ್ಲ

೩೧) ಶಾಲೆಯಲ್ಲಿ ಕೊಟ್ಟ ಮನೆಗೆಲಸ ಮಾಡಲು ತಂದೆ/ತಾಯಿ ಸಹಾಯ ಮಾಡುವರೇ? ಹೌದು/ಇಲ್ಲ

೩೨) ಪಠ್ಯಪುಸ್ತಕದಲ್ಲಿಯ ಪಾಠಗಳು ತುಂಬಾ ಹೊರೆಯಾಗಿವೆಯೇ? ಹೌದು/ಇಲ್ಲ

೩೩) ಶಿಕ್ಷಕರು ನಿಮ್ಮ ಕಲಿಕಾ ಸಮಸ್ಯೆಗೆ ಸಹಕರಿಸುವರೇ? ಹೌದು/ಇಲ್ಲ

೩೪) ಶಿಕ್ಷಕರು ಮನೆಗೆಲಸ ಹೆಚ್ಚು ಕೊಡುತ್ತಾರೆಯೇ? ಹೌದು/ಇಲ್ಲ

ಕುಟುಂಬದ ಆರ್ಥಿಕ ಪರಿಸ್ಥಿತಿ ಗುರುತಿಸಲು ಕೇಳಿದ ಪ್ರಶ್ನೆ ಹೀಗಿದೆ.

ಪ್ರಶ್ನೆ:೧ ಕುಟುಂಬದ ಆರ್ಥಿಕ ಸ್ಥಿತಿ ಹೇಗಿದೆ ?

ಅ) ಉತ್ತಮ ಆ) ಅತ್ಯುತ್ತಮ ಇ) ಸಾಧಾರಣ

ಉತ್ತಮ :– ಅನುಕೂಲಸ್ಥರು

ಅತ್ಯುತಮ :– ಹೆಚ್ಚಿನ ಅನುಕೂಲಸ್ಥರು

ಸಾಧಾರಣ :– ಬಡತನ ರೇಖೆಯ ಒಳಗಿರುವವರು.


ಹೀಗೆ ಕಲಿಕಾರ್ಥಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಆರ್ಥಿಕವಾಗಿ ಹಿಂದುಳಿದ ಕಲಿಕಾರ್ಥಿಗಳ ಪಟ್ಟಿ ಶೇಕಡಾ ರೂಪದಲ್ಲಿ

ಕೋಷ್ಟಕ–೧

	ಸರಕಾರಿ ಶಾಲೆಗಳು		ಖಾಸಗಿ ಶಾಲೆಗಳು	
	ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು
ಆರ್ಥಿಕವಾಗಿ	೫%	೬%	೪%	೮%

ಚಿತ್ರ– ೧



ಪ್ರಶ್ನೆ:–೨ ಕುಟುಂಬದ ಸಾಮಾಜಿಕ ಸ್ಥಿತಿ ಹೇಗಿದೆ ?

(ಸುತ್ತ ಮುತ್ತಲಿನ ಭಾಷಿಕ ಪರಿಸರ ಮತ್ತು ಶೈಕ್ಷಣಿಕ ಸ್ಥಿತಿಗತಿ ಕುರಿತು)


ಅ) ಉತ್ತಮ ಆ) ಅತ್ಯುತ್ತಮ ಇ) ಸಾಧಾರಣ.

ಉತ್ತರ ಪತ್ರಿಕೆಯ ಪಟ್ಟಿ ಪ್ರತಿಶತ ರೂಪದಲ್ಲಿ

ಕೋಷ್ಟಕ–೨

	ಸರಕಾರಿ ಶಾಲೆಗಳು		ಖಾಸಗಿ ಶಾಲೆಗಳು	
	ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು
ಸಾಮಾಜಿಕವಾಗಿ	೬%	೨%	–	–

ಚಿತ್ರ –೨



ಪ್ರಶ್ನೆ :–೩ ನಿಮ್ಮ ಕುಟುಂಬದ ಶೈಕ್ಷಣಿಕ ಸ್ಥಿತಿ ಹೇಗಿದೆ ?


(ಶಾಲೆ ಕಲಿತವರ ಸಂಖ್ಯೆ ಆಧರಿಸಿ)

ಅ) ಉತ್ತಮ ಆ) ಅತ್ಯುತ್ತಮ ಇ) ಸಾಧಾರಣ

ಕೋಷ್ಟಕ–೩

	ಸರಕಾರಿ ಶಾಲೆಗಳು		ಖಾಸಗಿ ಶಾಲೆಗಳು	
	ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು
ಶೈಕ್ಷಣಿಕವಾಗಿ	–	೭%	೦.೮%	೨%

ಚಿತ್ರ– ೩




ಈ ಮೇಲೆ ತಿಳಿಸಿದ ಕೋಷ್ಟಕ ೧.೨.೩.ಕ್ಕೆ ಸಂಬಧಿಸಿದಂತೆ ಕಲಿಕಾರ್ಥಿಗಳು ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಮತ್ತು ಆರ್ಥಿಕ ಸಾಮಾಜಿಕ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಪ್ರತಿಶತ ಹೀಗಿದೆ.

ಕೋಷ್ಠಕ–೪

ಸರಕಾರಿ ಶಾಲೆ

	ಶೈಕ್ಷಣಿಕ, ಸಾಮಾಜಿಕ		ಆರ್ಥಿಕ, ಶೈಕ್ಷಣಿಕ		ಸಾಮಾಜಿಕ, ಆರ್ಥಿಕ		ಆರ್ಥಿಕ, ಸಾಮಾಜಿಕ, ಶೈಕ್ಷಣಿಕ		
ಬಾಲಕರು	೭%		೨೦%		೫%			೧೨%	
ಬಾಲಕಿಯರು	೦		೧೫%		೧೫%			೧೬%	

ಚಿತ್ರ – ೪




ಖಾಸಗಿ ಶಾಲೆ

ಕೋಷ್ಟಕ–೫

	ಸಾಮಾಜಿಕ, ಶೈಕ್ಷಣಿಕ		ಶೈಕ್ಷಣಿಕ, ಆರ್ಥಿಕ		ಆರ್ಥಿಕ, ಸಾಮಾಜಿಕ		ಶೈಕ್ಷಣಿಕ, ಸಾಮಾಜಿಕ, ಆರ್ಥಿಕ		
ಬಾಲಕರು	೦%		೭%		೭%			೪%	
ಬಾಲಕಿಯರು	೦%		೦%		೬%			೦%	

ಚಿತ್ರ – ೫




ಈ ಮೇಲ್ಕಂಡ ಕೋಷ್ಟಕದಲ್ಲಿ ಖಾಸಗಿ ಶಾಲೆಯ ಕಲಿಕಾರ್ಥಿಗಳು ಸಾಮಾಜಿಕ – ಶೈಕ್ಷಣಿಕ, ಶೈಕ್ಷಣಿಕ – ಆರ್ಥಿಕ, ಆರ್ಥಿಕ – ಸಾಮಾಜಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಈ ಎಲ್ಲದರಲ್ಲೂ ಹಿಂದುಳಿದ ಮಕ್ಕಳ ಪ್ರತಿಶತವಿದೆ.

ಈ ಕೆಳಗಿನ ಕೋಷ್ಟಕದಲ್ಲಿ ಕಲಿಕಾರ್ಥಿಗಳು ಸಾಮಾಜಿಕ ಆರ್ಥಿಕ ಶೈಕ್ಷಣಿಕವಾಗಿ ಮೂರರಲ್ಲಿಯೂ ಉತ್ತಮ, ಅತ್ಯುತ್ತಮ ಇದ್ದವರ ಪ್ರತಿಶತ ಹೀಗಿದೆ.

ಕೋಷ್ಟಕ–೬

	ಸರಕಾರಿ ಶಾಲೆಗಳು		ಖಾಸಗಿ ಶಾಲೆಗಳು	
	ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು
ಉತ್ತಮ	೮%	೧೧%	೪೯%	೪೧%

ಚಿತ್ರ – ೬




ಈ ರೀತಿಯಾಗಿ ಕಲಿಕಾರ್ಥಿಗಳಲ್ಲಿನ ಸಮಸ್ಯೆಗಳನ್ನು ಗುರುತಿಸಿಕೊಂಡು ಹೆಚ್ಚು ಸರಕಾರಿ ಶಾಲೆಯ ಮಕ್ಕಳಲ್ಲಿ ಸಮಸ್ಯೆ ಕಂಡುಬರುತ್ತದಯೋ? ಅಥವಾ ಖಾಸಗಿ ಶಾಲೆಯ ಮಕ್ಕಳಲ್ಲಿ ಕಂಡುಬರುತ್ತದೆಯೋ ಎಂಬುವುದನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಪೈ ನಕ್ಷೆ ೧

	ವಿದ್ಯಾರ್ಥಿಗಳ ಸಂಖ್ಯೆ	ಪ್ರತಿಶತ
ಆರ್ಥಿಕ	೧೭	೬೧.೨
ಸಾಮಾಜಿಕ	೦೬	೨೧.೨
ಶೈಕ್ಷಣಿಕ	೦೫	೧೮
ಸಾಮಾಜಿಕ, ಶೈಕ್ಷಣಿಕ	೦೯	೩೨.೪
ಶೈಕ್ಷಣಿಕ, ಆರ್ಥಿಕ	೧೮	೬೪.೮
ಆರ್ಥಿಕ, ಸಾಮಾಜಿಕ	೧೬	೫೭.೬
ಸಾಮಾಜಿಕ, ಆರ್ಥಿಕ, ಶೈಕ್ಷಣಿಕ	೨೧	೭೫.೬
ಉತ್ತಮ	೦೮	೨೮.೮
	೧೦೦%	೩೬೦%

ಸರ್ಕಾರಿ ಪ್ರೌಢ ಶಾಲೆಯ ಬಾಲಕರು ಕನ್ನಡ ಭಾಷಾ ಕಲಿಕೆಯಲ್ಲಿ ಸಮಸ್ಯೆ ಎದುರಿಸುತ್ತಿರುವವರ ಪ್ರತಿಶತವನ್ನು ಈ ಕೆಳಗಿನಂತೆ ಪೈ ನಕ್ಷೆಯ ಮೂಲಕ ತೋರಿಸಲಾಗಿದೆ.



ನಕ್ಷೆ – ೧


ಆವರಣದ ಹೊರಗಿರುವ ಸಂಖ್ಯೆಗಳು ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುತ್ತವೆ. ಹಾಗೂ ಆವರಣದ ಒಳಗಿರುವ ಸಂಖ್ಯೆಗಳು ನಕ್ಷೆಯ ಪ್ರತಿಶತವನ್ನು ಸೂಚಿಸುತ್ತವೆ.



ಪೈ ನಕ್ಷೆ ೨

	ವಿದ್ಯಾರ್ಥಿನಿಯರ ಸಂಖ್ಯೆ	ಪ್ರತಿಶತ
ಆರ್ಥಿಕ	೧೮	೬೪.೮
ಸಾಮಾಜಿಕ	೦೬	೨೧.೬
ಶೈಕ್ಷಣಿಕ	೦೫	೧೮
ಸಾಮಾಜಿಕ, ಶೈಕ್ಷಣಿಕ	೦೫	೧೮
ಆರ್ಥಿಕ, ಶೈಕ್ಷಣಿಕ	೧೨	೪೩.೨
ಆರ್ಥಿಕ, ಸಾಮಾಜಿಕ	೧೮	೬೪.೮
ಸಾಮಾಜಿಕ, ಆರ್ಥಿಕ, ಶೈಕ್ಷಣಿಕ	೨೫	೯೦
ಉತ್ತಮ	೧೧	೩೯.೬
	೧೦೦%	೩೬೦%

ಸರ್ಕಾರಿ ಪ್ರೌಢ ಶಾಲೆಯ ಬಾಲಕಿಯರು ಕನ್ನಡ ಭಾಷಾ ಕಲಿಕೆಯಲ್ಲಿ ಸಮಸ್ಯೆ ಎದುರಿಸುತ್ತಿರುವವರ ಪ್ರತಿಶತವನ್ನು ಈ ಕೆಳಗಿನಂತೆ ಪೈ ನಕ್ಷೆಯ ಮೂಲಕ ತೋರಿಸಲಾಗಿದೆ.



ನಕ್ಷೆ – ೨


ಆವರಣದ ಹೊರಗಿರುವ ಸಂಖ್ಯೆಗಳು ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುತ್ತವೆ. ಹಾಗೂ ಆವರಣದ ಒಳಗಿರುವ ಸಂಖ್ಯೆಗಳು ನಕ್ಷೆಯ ಪ್ರತಿಶತವನ್ನು ಸೂಚಿಸುತ್ತವೆ.



ಪೈ ನಕ್ಷೆ ೩

	ವಿದ್ಯಾರ್ಥಿಗಳ ಸಂಖ್ಯೆ	ಪ್ರತಿಶತ
ಆರ್ಥಿಕ	೦೭	೨೫.೨
ಸಾಮಾಜಿಕ	೦೩	೧೦.೮
ಶೈಕ್ಷಣಿಕ	೦೫	೧೮
ಸಾಮಾಜಿಕ, ಶೈಕ್ಷಣಿಕ	೦೭	೨೫.೨
ಶೈಕ್ಷಣಿಕ, ಆರ್ಥಿಕ	೦೫	೧೮
ಸಾಮಾಜಿಕ,ಆರ್ಥಿಕ	೦೮	೨೮.೮
ಶೈಕ್ಷಣಿಕ,ಸಾಮಾಜಿಕ, ಆರ್ಥಿಕ	೧೬	೫೭.೬
ಉತ್ತಮ	೪೯	೧೭೬.೪
	೧೦೦%	೩೬೦%

ಕನ್ನಡ ಭಾಷಾ ಕಲಿಕೆಯಲ್ಲಿ ಹಿಂದುಳಿದ ಖಾಸಗಿ ಪ್ರೌಢ ಶಾಲೆಯ ಬಾಲಕ ಪ್ರತಿಶತವನ್ನು ಈ ಕೆಳಕಂಡಂತೆ ಪೈ ನಕ್ಷೆಯ ಮೂಲಕ ಗುರುತಿಸಲಾಗಿದೆ.




ನಕ್ಷೆ – ೩

ಆವರಣದ ಹೊರಗಿರುವ ಸಂಖ್ಯೆಗಳು ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುತ್ತವೆ. ಹಾಗೂ ಆವರಣದ ಒಳಗಿರುವ ಸಂಖ್ಯೆಗಳು ನಕ್ಷೆಯ ಪ್ರತಿಶತವನ್ನು ಸೂಚಿಸುತ್ತವೆ.

ಪೈ ನಕ್ಷೆ ೪

	ವಿದ್ಯಾರ್ಥಿನಿಯರ ಸಂಖ್ಯೆ	ಪ್ರತಿಶತ
ಆರ್ಥಿಕ	೧೫	೫೪
ಸಾಮಾಜಿಕ	೦೮	೨೮.೮
ಶೈಕ್ಷಣಿಕ	೦೭	೨೫.೨
ಸಾಮಾಜಿಕ, ಶೈಕ್ಷಣಿಕ	೦೫	೧೮
ಶೈಕ್ಷಣಿಕ, ಆರ್ಥಿಕ	೦೪	೧೪.೪
ಸಾಮಾಜಿಕ,ಆರ್ಥಿಕ	೧೩	೪೬.೮
ಶೈಕ್ಷಣಿಕ, ಸಾಮಾಜಿಕ, ಆರ್ಥಿಕ	೦೭	೨೫.೨
ಉತ್ತಮ	೪೧	೧೪೭.೬
	೧೦೦%	೩೬೦%

ಖಾಸಗಿ ಪ್ರೌಢ ಶಾಲೆಯ ಬಾಲಕಿಯರು ಕನ್ನಡ ಭಾಷಾ ಕಲಿಕೆಯಲ್ಲಿ ಸಮಸ್ಯೆ ಎದುರಿಸುತ್ತಿರುವರ ಪ್ರತಿಶತ ಈ ಕೆಳಕಂಡಂತೆ ಪೈ ನಕ್ಷೆಯ ಮೂಲಕ ತೋರಿಸಲಾಗಿದೆ.



ನಕ್ಷೆ – ೪

ಆವರಣದ ಹೊರಗಿರುವ ಸಂಖ್ಯೆಗಳು ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುತ್ತವೆ. ಹಾಗೂ ಆವರಣದ ಒಳಗಿರುವ ಸಂಖ್ಯೆಗಳು ನಕ್ಷೆಯ ಪ್ರತಿಶತವನ್ನು ಸೂಚಿಸುತ್ತವೆ.

ಹೀಗೆ ಕನ್ನಡ ಭಾಷಾ ಕಲಿಕೆಯಲ್ಲಿನ ಸಮಸ್ಯೆಯನ್ನು ಗುರುತಿಸಲು ಪರೀಕ್ಷೆಗೆ ಒಳಪಡಿಸಿದ ಕಲಿಕಾರ್ಥಿಗಳ ಒಟ್ಟು ಪ್ರತಿಶತವನ್ನು ಗುರುತಿಸಿಕೊಂಡು, ಕಲಿಕೆಯ ಸಮಸ್ಯೆ ಹೆಚ್ಚಾಗಿ ಹೆಣ್ಣು ಅಥವಾ ಗಂಡು ಮಕ್ಕಳಿಬ್ಬರಲ್ಲಿ ಯಾರು ಹೆಚ್ಚಿನ ಸಮಸ್ಯೆ ಎದುರಿಸುತ್ತಿದ್ದಾರೆಂದು ಕಂಡುಕೊಳ್ಳಲಾಯಿತು. ಭಾಷಾ ಕಲಿಕೆಯ ಸಮಸ್ಯೆಯನ್ನು ಎದುರಿಸುತ್ತಿರುವ ಕಲಿಕಾರ್ಥಿಗಳು ಓದುಗಾರಿಕೆ, ಬರವಣಿಗೆ, ಆಲಿಸುವಿಕೆಯಲ್ಲಿ ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂದು ಕಲಿಕಾರ್ಥಿಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಸಮಸ್ಯೆಯನ್ನು ಈ ಕೆಳಕಂಡಂತೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೫.೧. ಆಲಿಸುವಿಕೆ ಸಮಸ್ಯೆ

ಕನ್ನಡ ಭಾಷಾ ಕಲಿಕೆಯ ಕೌಶಲಗಳಲ್ಲಿ ಆಲಿಸುವಿಕೆಯು ಪ್ರಮುಖವಾದದ್ದು. ತರಗತಿಯಲ್ಲಿ ಬೋಧಕರು ಭಾಷೆಯನ್ನು ಬೋಧಿಸುವಾಗ ಕಲಿಕಾರ್ಥಿಗಳು ಆಲಿಸಿಕೊಂಡಾಗ ಮಾತ್ರ ಭಾಷಾ ಕಲಿಕೆಯಲ್ಲಿ ಸಮಸ್ಯೆ ಎದುರಿಸುವುದಿಲ್ಲ. ಒಂದು ವೇಳೆ ಕಲಿಕಾರ್ಥಿಗಳು ಬೋಧಿಸುವ ವಿಷಯವನ್ನು ತಪ್ಪಾಗಿ ಗ್ರಹಿಸಿಕೊಂಡರೆ ಕನ್ನಡ ಭಾಷಾ ಕಲಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಾರೆ.

ಇಂತಹ ಸಮಸ್ಯೆಯನ್ನು ಗುರುತಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ "ಉಕ್ತಲೇಖನ"ವನ್ನು ಬರೆಯಿಸಿ ಆಲಿಸುವಿಕೆಯ ಸಮಸ್ಯೆಯನ್ನು ಗುರುತಿಸಲಾಗಿದೆ.

೫.೧.೧. ಮಹಾಪ್ರಾಣ ಪದಗಳಿಗೆ ಅಲ್ಪಪ್ರಾಣ ಬಳಕೆ

ಮೂಲರೂಪ	ಬರವಣಿಗೆ ರೂಪ
ಭದ್ರವಾದ	ಬದ್ರವಾದ
ರಥ	ರತ
ಮಥನ	ಮತನ
ಭಿಕ್ಷುಕ	ಬಿಕ್ಷುಕ
ಭಾರತ	ಬಾರತ
ಪ್ರಬಂಧ	ಪ್ರಬಂದ
ಭಾಗಿ	ಬಾಗಿ
ಭಾಷಣ	ಬಾಷಣ
ಫಲಕ	ಪಲಕ
ಫಿರಂಗಿ	ಪಿರಂಗಿ

ಫಸಲು	ಪಸಲು
ಧೇಯ	ದೆಯ

ವಿಶ್ಲೇಷಣೆ :

- ಪರಿಸರ ಭಾಷೆಯಲ್ಲಿ ಮಹಾಪ್ರಾಣ ಅಕ್ಷರಗಳ ಬಳಕೆ ಇಲ್ಲದಿರುವುದು.
- ಬೋಧಕರು ಹೇಳುವಾಗ ಸರಿಯಾಗಿ ಗ್ರಹಿಸಿಕೊಳ್ಳದಿರುವುದು.
- ಅಲ್ಪಪ್ರಾಣ ಮತ್ತು ಮಹಾಪ್ರಾಣ ಅಕ್ಷರಗಳ ಬಳಕೆಯಿಂದ ಆಗುವ ಅರ್ಥವ್ಯತ್ಯಾಸವನ್ನು ಬೋಧಕರು ತಿಳಿಸದಿರುವುದು.

೫.೧.೨ 'ಣ'ಕಾರಕ್ಕೆ 'ನ'ಕಾರ

ಮೂಲರೂಪ	**ಬರವಣಿಗೆ ರೂಪ**
ವೇಣಾತಟ	ವೆನಾತಟ
ಸಂಕ್ರಮಣ	ಸಂಕ್ರಮನ
ಶೋಷಣೆ	ಶೋಷನೆ
ಗೋಕರ್ಣ	ಗೊಕರನ
ಕಠಿಣ	ಕಟಿನ
ಕರುಣಿಸು	ಕರುನಿಸು
ಕರುಣಾಮಯಿ	ಕರುನಾಮಯಿ

ವಿಶ್ಲೇಷಣೆ:

ಣ ಮತ್ತು ನ ಎರಡು ಅಕ್ಷರಗಳು ಅನುನಾಸಿಕ ಅಕ್ಷರಗಳಾಗಿದ್ದು ಬೋಧಕರು ಅಕ್ಷರವನ್ನು 'ಣ' ಎಂದು ಉಚ್ಚರಿಸಿದರು ಕಲಿಕಾರ್ಥಿಯು ಅದನ್ನು 'ನ' ಎಂದು ಆಲಿಸುವುದರಿಂದ ಈ ಸಮಸ್ಯೆ ಉಂಟಾಗುತ್ತದೆ. ಆದರೆ ಎಲ್ಲಾ 'ಣ' ಕಾರ ಪದಗಳನ್ನು 'ನ' ಕಾರವಾಗಿ ಬರೆಯುವುದಿಲ್ಲ ವ್ಯಕ್ತಿನಾಮಗಳನ್ನು ಬರೆಯುವಾಗ ಸರಿಯಾದ ಕ್ರಮವನ್ನೆ ಬರೆಯುತ್ತಾರೆ ಉದಾಹರಣೆಗೆ ಸಿದ್ದಣ್ಣ, ಅಂಬಣ್ಣ, ರಾಯಣ್ಣ ಇತ್ಯಾದಿ. ಕೇವಲ ವ್ಯಕ್ತಿನಾಮಗಳ ಪದಗಳನ್ನು ಮಾತ್ರವಲ್ಲದೆ ಅಣ್ಣ, ಬಣ್ಣ, ಕಣ್ಣು ಇಂತಹ ಪದಗಳನ್ನು ಬರೆಯಿಸಿದಾಗ ಒತ್ತಾಕ್ಷರ ಬರೆಯದಿದ್ದರೂ 'ಣ' ಕಾರವನ್ನು 'ಣ' ಕಾರವಾಗಿಯೇ ಬರೆದಿರುವುದನ್ನು ಗಮನಿಸಲಾಗಿದೆ. ಈ ಅಂಶವನ್ನು ಭಾಷಾ ವಿಜ್ಞಾನದ ದೃಷ್ಟಿಯಿಂದ ನೋಡಿದಾಗ ಕಲಿಕಾರ್ಥಿಗಳು ತಮಗೆ ಪರಿಚಯವಿರುವ ಪದಗಳನ್ನು ಸರಿಯಾಗಿ ಗ್ರಹಿಸಿ, ಪರಿಚಯವಿರದ ಪದಗಳನ್ನು ತಪ್ಪಾಗಿ ಗ್ರಹಿಸಿಕೊಂಡು ಬರೆದಿರುವುದು ಗಮನಿಸಲಾಗಿದೆ.

೫.೧.೩. ದ್ವಿತ್ವಾಕ್ಷರಗಳ ಸಮಸ್ಯೆ

ಮೂಲರೂಪ	ಬರವಣಿಗೆ ರೂಪ
ನುಗ್ಗಿ	ನುಗಿ
ಪಟ್ಟಣ	ಪಟಣ
ಹುಟ್ಟಿದು	ಹುಟಿದು
ಸ್ತೋತ್ರ	ಸೊತ್ರ
ರಸ್ತೆ	ರಸತೆ
ಲೆಕ್ಕಿಸದೆ	ಲೆಕಿಸದೆ
ಯತ್ನಿಸಿ	ಯತನಿಸಿ
ಮಕ್ಕಳ	ಮಕಳ
ಸಿರಿಗನ್ನಡ	ಸಿರಿಗನಡ
ಷಟ್ಪದಿ	ಷಟಪದಿ

ವಿಶ್ಲೇಷಣೆ :

- ಮಕ್ಕಳು ಸಾಮಾಜಿಕ ಪರಿಸರದಲ್ಲಿ ಯಾವ ರೀತಿಯಾಗಿ ಮಾತಾಡುತ್ತಾರೋ ಅದನ್ನೆ ಬರವಣಿಗೆಯಲ್ಲಿ ಬಳಸಿರುವುದು.
- ದ್ವಿತ್ವಗಳ ಮಹತ್ವ ಅರಿಯದಿರುವುದು.

ಪರಿಸರ ಭಾಷೆಯಲ್ಲಿ ಹೆಚ್ಚಾಗಿ ದ್ವಿತ್ವಾಕ್ಷರಗಳ ಪದಗಳು ಬಳಕೆಯಲ್ಲಿ ಇಲ್ಲ. ಪರಿಸರದ ಭಾಷೆಯಲ್ಲಿ ತೇಲಿಸಿ ಮಾತನಾಡುವುದು ರೂಢಿಯಾಗಿರುತ್ತದೆ. ಇದು ಕೂಡಾ ದ್ವಿತ್ವಾಕ್ಷರದ ಬರವಣಿಗೆ ಸಮಸ್ಯೆಗೆ ಕಾರಣವಾಗಿದೆ.

೫.೧.೪. 'ಹ'ಕಾರಕ್ಕೆ ಅ,ಉ,ಎ,ಕಾರ ಬಳಕೆ

ಮೂಲರೂಪ	ಬರವಣಿಗೆ ರೂಪ
ಹಚ್ಚಿಕೊಂಡು	ಅಚ್ಚಿಕೊಂಡು
ಹೇಳಿದಂತೆ	ಏಳಿದಂತೆ
ಹುಟ್ಟಿದನು	ಉಟ್ಟಿದನು.

ವಿಶ್ಲೇಷಣೆ :

ವರ್ಗೀಯ ವ್ಯಂಜನಾಕ್ಷರವಾಗಲಿ ಅವರ್ಗೀಯ ವ್ಯಂಜನಾಕ್ಷರವಾಗಲಿ ಗುಣಿತಾಕ್ಷರ ರೂಪ ಪಡೆದುಕೊಂಡಾಗ ಅಲ್ಲಿ ಸ್ವರಗಳು ಸೇರಲೇ ಬೇಕು ಅಂದರೆ

ಹ+ಅ=ಹ

ಹ+ಎ=ಹೆ

ಹ+ಉ=ಹು ಹೀಗೆ ಬರುವುದರಿಂದ ಅವರ ಉಚ್ಚರಣೆಯ ಕ್ರಮದಲ್ಲೂ ಸ್ವರಗಳೆ ಮೋದಲು ಉಚ್ಚರಿಸಿದಂತಾಗಿ ಬರವಣಿಗೆ ಕ್ರಮದಲ್ಲಿ 'ಹ'ಕಾರ ಸಮಸ್ಯೆ ಕಾಣುತ್ತದೆ.

೫.೧.೫. 'ಋ' ಒತ್ತಾಕ್ಷರಕ್ಕೆ 'ರ' ಒತ್ತಾಕ್ಷರ

ಮೂಲರೂಪ	ಬರಹ ರೂಪ
ಬೃಹತ್	ಬ್ರಹತ
ಶೃತಿ	ಶ್ರುತಿ
ಬೃಹಸ್ಪತಿ	ಬ್ರಹಸಪತಿ
ಅಮೃತಾ	ಅಂಬ್ರುತಾ
ಕೃತಿ	ಕ್ರುತಿ
ಗೃಹ	ಗ್ರಹ
ಗೃಹಿಣಿ	ಗ್ರುಹಿಣಿ
ಮೃದಂಗ	ಮುರದಂಗ
ಪಿತೃ	ಪಿತ್ರು

ವಿಶ್ಲೇಷಣೆ :

ಕೃ ಒಂದು ಒತ್ತಕ್ಷರ ಎಂದು ಬಾವಿಸದೆ ಇರುವುದು.

ಕೃ, ರ, ಎರಡರ ವ್ಯತ್ಯಾಸವನ್ನು ಗುರುತಿಸದಿರುವುದು.

ಬೋಧಕರಲ್ಲಿಯೆ ಇವೆರಡರ ಕುರಿತು ಗೊಂದಲ ಇರುವುದರಿಂದ.

ಬರವಣಿಗೆಯಲ್ಲಿ ಎರಡು ರೂಪ ಬಳಕೆಯಲ್ಲಿರುವುದು. ಈಗಾಗಲೆ 'ೃ' (ಋ) ಒತ್ತಾಕ್ಷರವನ್ನು ಕುರಿತು ಭಾಷಾ ತಜ್ಞರು ಈ ಅಕ್ಷರ ಇಲ್ಲದಿದ್ದರೂ ಸರಿಯಾದ ಕ್ರಮವನ್ನು ಬರೆಯಬಹುದು ಎಂದು

ಡಿ.ಎನ್.ಶಂಕರಭಟ್ಟ, ಕೆ.ವಿ.ನಾರಾಯಣ, ಬಸವರಾಜ ಕೊಡಗುಂಟೆರವರುಗಳು ತಮ್ಮ ಬರವಣಿಗೆಯಲ್ಲಿ (ಖ) ಒತ್ತಕ್ಷರ ಬಳಸದೆ ಎರಡನೆ ರೂಪದಂತೆ ಪದಗಳನ್ನು ರಚಿಸಿರುವುದನ್ನು ಗಮನಿಸಲಾಗಿದೆ. ಅದೇ ರೀತಿಯಾಗಿ ಆಡುಮಾತಿನಲ್ಲಿ ಬೋಧಕರು ಮತ್ತು ಕಲಿಕಾರ್ಥಿಗಳು ಎರಡನೇ ರೂಪವನ್ನೆ ಬಳಸುತ್ತಾರೆ. ಆದರೆ ಪಠ್ಯಪುಸ್ತಕದ ಭಾಷೆ ಎಲ್ಲರೂ ಒಪ್ಪಿಕೊಂಡ ಭಾಷೆ, ಅದೇ ಸರಿಯಾದ ಬರವಣಿಗೆ ಕ್ರಮ. ಆದ್ದರಿಂದ ಇಲ್ಲಿ ಎರಡನೇ ರೂಪವನ್ನು ತಪ್ಪು ಎಂದು ಗುರುತಿಸಲಾಗಿದೆ. ಪಠ್ಯಪುಸ್ತಕಗಳ ಭಾಷೆ ಒಂದನೇ ರೂಪವನ್ನು ಒಪ್ಪಿಕೊಂಡಿದೆ.

೫.೧.೬. 'ಐ'ತ್ವಕ್ಕೆ 'ಯ'ಕಾರ ಬಳಕೆ

ಮೂಲರೂಪ	ಬರಹ ರೂಪ
ದೈಹಿಕ	ದಯಿಕ
ದೈತ್ಯ	ದಯಿತ್ಯ
ಮೈದಾನ	ಮಯಿದಾನ
ಕೈಲಾಸ	ಕಯಿಲಾಸ
ತೈಲ	ತಯಿಲ
ಕೈಯಾರೆ	ಕಯಾರೆ
ಕೈಮುಗಿ	ಕಯಿಮುಗಿ
ವೈವಾಹಿಕ	ವಯಿವಾಹಿಕ

ವಿಶ್ಲೇಷಣೆ :

'ಐ'ತ್ವದ ಸಮಸ್ಯೆಯು ಹೆಚ್ಚಾಗಿ ಪದಾದಿಯಲ್ಲಿ ಮಾತ್ರ ಇರುವುದನ್ನು ಗಮನಿಸಲಾಗಿದೆ.

ಆಲಿಸುವಿಕೆಯ ಕ್ರಮದಲ್ಲಿ ಕಲಿಕಾರ್ಥಿಗಳು 'ಐತ್ವ' ಎಂದು ಗ್ರಹಿಸದೆ 'ಯ' ಕಾರವೇ ಇರಬಹುದೆಂದು ತಿಳಿದಿರುವುದರಿಂದ, ಈ ರೀತಿಯಾಗಿ ಶ್ರವಣದೋಷ ಇಲ್ಲದಿದ್ದರೂ ಉಕ್ತಲೇಖನವನ್ನು ಹೇಳುವಾಗ ಕಲಿಕಾರ್ಥಿಗಳು ತಮ್ಮ ಪರಿಸರದ ಭಾಷೆಯಂತೆ ಗ್ರಹಿಸಿಕೊಂಡಿರುತ್ತಾರೆ. ಅವರು ಹೇಗೆ ಗ್ರಹಿಸಿರುತ್ತಾರೋ ಹಾಗೆ ಬರೆಯುವುದರಿಂದ ಬರವಣಿಗೆಯಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ.

೫.೨. ಓದುಗಾರಿಕೆಯಲ್ಲಿನ ಸಮಸ್ಯೆಗಳು

ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳು ಇನ್ನು ಅಕ್ಷರ ಕಲಿಕಾ ಹಂತದಲ್ಲಿರುತ್ತಾರೆ. ಇನ್ನೂ ಅವರಿಗೆ ಭಾಷಾ ಪ್ರೌಢಿಮೆ ಬೆಳೆದಿರುವುದಿಲ್ಲ. ಹಾಗಾಗಿ ಅವರು ಸ್ವರಗಳು, ವ್ಯಂಜನಗಳು, ಗುಣಿತಾಕ್ಷರ, ಮತ್ತು ಒತ್ತಾಕ್ಷರಗಳ ನಡುವಿನ ವ್ಯತ್ಯಾಸಗಳನ್ನು ಗ್ರಹಿಸಿಕೊಳ್ಳುವುದಕ್ಕೆ ಆಗಿರುವುದಿಲ್ಲ. ಇದ ಕಾರಣ

ಪ್ರಾಥಮಿಕ ಹಂತದ ಮಕ್ಕಳು ಭಾಷಾಕಲಿಕೆಯಲ್ಲಿ ಸಮಸ್ಯೆಗಳನ್ನು ಎದುರಿಸುವುದು ಸಾಮಾನ್ಯವಾದ ಸಂಗತಿಯಾಗಿರುತ್ತದೆ.

ಆದರೆ ಅದೇ ಮಗು ಪ್ರೌಢ ಶಾಲಾ ಹಂತಕ್ಕೆ ಅಂದರೆ ೮,೯,೧೦ನೇ ತರಗತಿಗೆ ಬರುವಷ್ಟಕ್ಕೆ ಭಾಷೆಯ ಪ್ರೌಢಿಮೆ ಬೆಳೆದಿರುತ್ತದೆ. ಅಕ್ಷರಗಳ ಕಲಿಕೆ ಮೂಡಿರುತ್ತದೆ. ಒಂದು ಹಂತಕ್ಕೆ ಭಾಷಾ ರಚನೆಯಲ್ಲಿ ಅಥವಾ ಕಲಿಕೆಯಲ್ಲಿ ಸ್ಪಷ್ಟತೆ ಕಂಡುಕೊಂಡಿರುತ್ತಾರೆ.

ಆದರೂ ಸಹ ಪ್ರೌಢ ಶಾಲೆಯ ಕಲಿಕಾರ್ಥಿಗಳು ಕನ್ನಡ ಭಾಷೆಯನ್ನು ಗ್ರಹಿಸಿಕೊಂಡು ಓದುವಾಗ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗಮನಿಸಲಾಗಿದೆ ಅವುಗಳೆಂದರೆ,

* ಸ್ವರಾಕ್ಷರಗಳ ಪದ ಬಳಕೆಯಲ್ಲಿನ ಸಮಸ್ಯೆ.
* ವ್ಯಂಜನಾಕ್ಷರಗಳ ಪದಗಳನ್ನು ಓದುವಾಗಿನ ಸಮಸ್ಯೆ.
* ಗುಣಿತಾಕ್ಷರಗಳ ಪದಗಳನ್ನು ಓದುವಾಗಿನ ಸಮಸ್ಯೆ.
* ಒತ್ತಕ್ಷರಗಳ ಪದಗಳನ್ನು ಓದುವಾಗಿನ ಸಮಸ್ಯೆ.
* ಲೇಖನ ಚಿಹ್ನೆಗಳನ್ನು ಗಮನಿಸದೆ ಓದುವುದು.

೫.೨.೧. ವ್ಯಂಜನಾಕ್ಷರಗಳ ಸಮಸ್ಯೆ :

* **ಮಹಾಪ್ರಾಣಾಕ್ಷರಗಳ ಪದಗಳನ್ನು ಓದುವಾಗಿನ ಸಮಸ್ಯೆ**

ಮೂಲ ರೂಪ	ಓದುವ ರೂಪ
ಅಸಂಖ್ಯೆ	ಆಸಂಕ್ಯೆ
ಭಯಂಕರ	ಬಯಕರ
ಮಥನ	ಮತನ
ಮೇಘ	ಮೆಗ
ಛತ್ರಿ	ಚತ್ರಿ
ಥಡಿ	ತಡಿ
ಭೂಮಿ	ಬೂಮಿ
ಧನ	ದನ
ಫಲ	ಪಲ
ಪಾಠ	ಪಾಟ
ಪ್ರಾರ್ಥನೆ	ಪ್ರಾತನೆ

ವಿಶ್ಲೇಷಣೆ :

* ಪ್ರಾದೇಶಿಕ ಕನ್ನಡ ಭಾಷೆಯ ಭಿನ್ನತೆಯಿರುವ ಭಾಷಾ ಬೋಧಕರು ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ವರ್ಣಮಾಲೆಯನ್ನು ಓದಿಸುವಾಗ ಕಲಿಸುವಾಗ ಇ, ಈ ಅಕ್ಷರಗಳ ಉಚ್ಚರಣೆಯಂತೆ ಅ, ಅ ಎಂತಲೂ ಆ, ಆ ಎಂತಲೂ ಉಚ್ಚರಿಸುತ್ತಾರೆ. ಹಿಂದಿನ ಬೋಧನಾ ಪದ್ಧತಿಯಲ್ಲಿ ಅ, ಆ, ಇ, ಈ, ಉ, ಊ ಎಂದು ಗಟ್ಟಿಯಾಗಿ ಬೋಧಕರು ಕಲಿಕಾರ್ಥಿಗಳಿಂದ ಹೇಳಿಸುತ್ತಿದ್ದರು.ಆದರೆ ಇಂದಿನ ಬೋಧನಾ ಪದ್ಧತಿಯಾದ ನಲಿ-ಕಲಿಯಲ್ಲಿ ರ.ಗ.ಸ.ದ ಮಾದರಿಯಲ್ಲಿ ಅಕ್ಷರಾಭ್ಯಾಸ ಮಾಡಿಸುತ್ತಿದ್ದಾರೆ.

* ಮಹಾಪ್ರಾಣಗಳನ್ನು ಉಚ್ಚರಿಸುವಾಗ ಭಾಷಾ ಕಲಿಕಾರ್ಥಿಯೂ ಪದಾದಿ, ಮತ್ತು ಪದ ಮಧ್ಯದಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಕಾರಣ ಈ ರೀತಿ ಕಂಡುಕೊಳ್ಳಬಹುದು.

* ಆಡು ಮಾತಿನಲ್ಲಿ ಮಹಾಪ್ರಾಣ ಅಕ್ಷರಗಳ ಬಳಕೆಯಿಲ್ಲದಿರುವುದು.

* ಕಲಿಕಾರ್ಥಿಗಳ ಸಾಮಾಜಿಕ ಪರಿಸರದಲ್ಲೂ ಮಹಾಪ್ರಾಣಯುಕ್ತ ಪದಗಳ ಬಳಕೆ ಇಲ್ಲದಿರುವುದು.

* ಮಹಾಪ್ರಾಣ ಮತ್ತು ಅಲ್ಪಪ್ರಾಣ ಅಕ್ಷರಗಳಿಗೆ ವ್ಯತ್ಯಾಸವನ್ನು ಗ್ರಹಿಸಿಕೊಳ್ಳದಿರುವುದು.

* ಕಲಿಕಾರ್ಥಿಗಳು ತರಗತಿಯಲ್ಲಿ ಓದುವಾಗ ಬೋಧಕರು ತಪ್ಪನ್ನು ಗುರುತಿಸಿ ಸ್ಪಷ್ಟತೆ ನೀಡದಿರುವುದು.

* ಪ್ರಾಥಮಿಕ ಹಂತದಿಂದಲೂ ರೂಢಿಯಾಗಿರುವಂತಹುದು.

* ಮನೆಯ ಪರಿಸರದಲ್ಲಿ ಶಿಷ್ಟ ಭಾಷೆಯ ಗ್ರಂಥಸ್ಥ ಪದ ಬಳಕೆ ಮಾಡದಿರುವುದು.

* ಬೋಧಕರಲ್ಲಿಯೂ ಅಲ್ಪಪ್ರಾಣ ಮಹಾಪ್ರಾಣಾಕ್ಷರಗಳ ಸಮಸ್ಯೆ ಇರುವುದರಿಂದಲೂ

ಕಲಿಕಾರ್ಥಿಗಳು ಈ ರೀತಿಯ ಸಮಸ್ಯಗಳನ್ನು ಎದುರಿಸುತ್ತಿದ್ದಾರೆ. ಅದೇ ರೀತಿಯಾಗಿ ಕನ್ನಡ ಭಾಷಾ ವಿಜ್ಞಾನಿಗಳು ಮಹಾಪ್ರಾಣ ಅಕ್ಷರಗಳನ್ನು ಕನ್ನಡ ವರ್ಣಮಾಲೆಯಿಂದ ತೆಗೆದು ಹಾಕಬೇಕೆಂದು ಈಗಾಗಲೇ ಚರ್ಚೆ ನಡೆದಿದೆ. ಏಕೆಂದರೆ ಭಾಷಾ ವಿಜ್ಞಾನಿಗಳ ಪ್ರಕಾರ ಕೆಲವೊಂದು ಪದಗಳು ಬಿಟ್ಟರೆ ಬೇರೆ ಯಾವ ಪದಗಳು ಅರ್ಥ ಅನರ್ಥವಾಗುವುದಿಲ್ಲವೆಂದಿದ್ದಾರೆ. ಉದಾಹರಣೆಗೆ ಧನ-ದನ, ಫಲ-ಪಲ ಇತ್ಯಾದಿ ಪದಗಳು ಇಲ್ಲಿ

* ಧನ : ಹಣ : : ದನ : ಪ್ರಾಣಿ, ಹಸು

* ಫಲ : ಹಣ್ಣು : : ಪಲ : ಒಂದು ತೂಕದ ಪ್ರಮಾಣ ಎಂಬರ್ಥವನ್ನು ಕೊಡುತ್ತವೆ. ಆದರೆ ಸಾಮಾಜಿಕ ಹಿನ್ನೆಲೆಯಾಗಿ ಭಾಷೆಯನ್ನು ಗಮನಿಸಿದಾಗ ಅಲ್ಲಿ ಮಹಾಪ್ರಾಣಗಳ ಬಳಕೆ ಇಲ್ಲ. ಶಾಲಾ ಪರಿಸರದಲ್ಲಿ ಬೋಧಕರು ಕೆಲವು ಸಂದರ್ಭಗಳನ್ನು ಬಿಟ್ಟರೆ ಅಲ್ಪಪ್ರಾಣಗಳ ಬಳಕೆಯೆ ಹೆಚ್ಚಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸಮಾಜೋಭಾಷಿಕ ಹಿನ್ನೆಲೆಯಿಂದ ನೋಡಿದಾಗ ಕಲಿಕಾರ್ಥಿಗಳಿಗೆ ತಾವು ಓದುವುದು ಸರಿಯಾದ ಕ್ರಮವೆಂದೆ ಭಾವಿಸಿ ಓದುತ್ತಾರೆ. ಆದರೆ ಪರಿಸರ

ಭಾಷೆಯಲ್ಲಿ ಇಲ್ಲದ ಮಹಾಪ್ರಾಣ ಅಕ್ಷರಗಳು ಪಠ್ಯಪುಸ್ತಕದಲ್ಲಿರುವುದರಿಂದ ಕಲಿಕಾರ್ಥಿಗಳು ಮಹಾಪ್ರಾಣಾಕ್ಷರಗಳ ಸಮಸ್ಯೆ ಎದುರಿಸವಂತಾಗಿದೆ.

೫.೨.೨. 'ಶ' ಕಾರಯುಕ್ತ ಪದಗಳಿಗೆ 'ಸ' ಕಾರವಾಗಿ ಓದುವುದು

ಮೂಲರೂಪ	**ಓದುವ ರೂಪ**
ಪಶುಪತಿ	ಪಸುಪತಿ
ಶಿವಾ	ಸಿವಾ
ಶ್ರಮ	ಸ್ರಮ
ಶುಕ್ರಚಾರ್ಯ	ಸುಕ್ರಾಚಾರ
ಮಹೇಶ್ವರ	ಮಯೇಸ್ವರ
ನಾಶಪಡಿಸು	ನಾಸಪಡಿಸು
ಶೃತಿ	ಸ್ರುತಿ
ನಶೀಬ	ನಸಿಬು
ನಶಿಸು	ನಸಿಸು
ರಶ್ಮಿ	ರಸಿಮಿ
ರಶೀದಿ	ರಸೀದಿ
ರಾಶಿ	ರಾಸಿ
ಕಾಶಿಗೆ	ಕಾಸಿಗೆ

ವಿಶ್ಲೇಷಣೆ :

'ಶ' ಕಾರಯುಕ್ತ ಪದಗಳ ಸಮಸ್ಯೆಯು ಹೆಚ್ಚಾಗಿ ಪದಾದಿಯಲ್ಲಿಯೆ ಕಂಡುಬರುತ್ತದೆ.ಕೆಲವೊಮ್ಮೆ ಮಾತ್ರ ಪದಮಧ್ಯದಲ್ಲಿ 'ಶ'ಕಾರ 'ಸ'ಕಾರವಾಗಿ ಓದುವುದನ್ನು ಗಮನಿಸಲಾಗಿದೆ.ಆದರೆ ಪದಾದಿಯಲ್ಲಿಯೆ 'ಶ' ಕಾರ ಓದುವುದಕ್ಕೆ ಸಮಸ್ಯೆ ಇದೆ. ಈ ರೀತಿ ವ್ಯತ್ಯಾಸಕ್ಕೆ ಕಾರಣವೆಂದರೆ,

* ಶ, ಷ, ಸ. ಕಾರಗಳ ಸ್ಪಷ್ಟವಾದ ಕಲ್ಪನೆ ಇಲ್ಲದಿರುವುದು
* ಮನೆ ಪರಿಸರದಲ್ಲಿ ಸಂವಾಹನ ಕ್ರಿಯೆಯಲ್ಲಿ ಹೆಚ್ಚಾಗಿ ಶ 'ಷ' ಅಕ್ಷರಗಳು ಬಳಸದೆ ಇರುವುದು.
* ಬೋಧಕರಲ್ಲಿಯೂ ಶ,ಷ,ಸ ಅಕ್ಷರ ಸಮಸ್ಯೆ ಇರುವುದು.
* ಬೋಧಕರು ಬೋಧಿಸುವಾಗ ಶ,ಸ, ಅಕ್ಷರಗಳ ಕಲ್ಪನೆ ಮೂಡಿಸದಿರುವುದು.
* ಶ, ಷ, ಸ ಅಕ್ಷರಗಳ ಮಧ್ಯದಲ್ಲಿನ ಅಲ್ಪ ವ್ಯತ್ಯಾಸ ಗುರುತಿಸದೆ ಓದುವುದು.

* 'ಶ' ಕಾರಕ್ಕೆ ಶಂಕರ, 'ಷ' ಕಾರಕ್ಕೆ ಷಟ್ಪದಿ, 'ಸ' ಕಾರಕ್ಕೆ ಸಕ್ಕೆ ಈ ರೀತಿ ಬೋಧಿಸುವಾಗ ಅಲ್ಪ ವ್ಯತ್ಯಾಸ ಗಮನಿಸದೆ ಬೋಧಿಸುವುದು.

೫.೨.೩. ಅರ್ಕಾವತ್ತಿನ ಪದಗಳ ಸಮಸ್ಯೆ

ಮೂಲರೂಪ	**ಓದುವ ರೂಪ**
ಮೂರ್ಛೆ	ಮೂರಚೆ
ಆಶೀರ್ವಾದ	ಆಸಿರವಾದ
ನಿರ್ಧಾರ	ನಿರದಾರ
ಕರ್ಣ	ಕರಣ
ಕರ್ಪೂರ	ಕರಪೂರ
ಪ್ರಾರ್ಥನೆ	ಪ್ರಾತನೆ
ವರ್ಷ	ವರಷ
ಕರ್ಮ	ಕರಮ
ನಿರ್ಣಯ	ನಿರಣಯ
ತೀರ್ಥ	ತಿರತ
ಡೆನ್‌ಮಾರ್ಕ್	ಡೆನಮಾರಕ

ವಿಶ್ಲೇಷಣೆ :

ಪದರಚನೆಯಲ್ಲಿ ಅರ್ಕಾವತ್ತು ಪದಾದಿ, ಪದಮಧ್ಯ, ಪದಾಂತ್ಯ ಪರಿಸರದಲ್ಲಿ ಎಲ್ಲೆ ಬಂದರೂ ಕಲಿಕಾರ್ಥಿಗಳು ಓದುವಾಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇಂತಹ ಸಮಸ್ಯೆಗೆ ಕಾರಣಗಳೆಂದರೆ,

* ಅರ್ಕಾವತ್ತು ಸಾಮಾನ್ಯ ಭಾಷಾ ಬಳಕೆಯಲ್ಲಿ ಬಳಸದಿರುವುದು.

* 'ರ' ರೇಫಾಕ್ಷರ 'ೄ' ಅರ್ಕಾವತ್ತು ಅಕ್ಷರಕ್ಕಿಂತ ಉಚ್ಚರಿಸುವುದಕ್ಕೆ ಸರಳವಾಗಿರುವುದರಿಂದ.

* ಬರವಣಿಗೆ ರೂಪದಲ್ಲಿ ಅರ್ಕಾವತ್ತು ಅಕ್ಷರಗಳ ನಂತರ ಬಂದರೆ ಓದುವಾಗ ಅರ್ಕಾವತ್ತು ಮೊದಲು ಬರುತ್ತದೆ ಹಾಗಾಗಿ ಕಲಿಕಾರ್ಥಿಗಳು 'ರ' ಅಕ್ಷರವನ್ನು ಉಚ್ಚರಿಸುತ್ತಾರೆ.

* ಕಲಿಕಾರ್ಥಿಯ ಪರಿಸರದ ಭಾಷೆಯಲ್ಲಿ ಅರ್ಕಾವತ್ತು ಇರುವ ಪದಗಳ ಬಳಕೆಯಿಲ್ಲದಿರುವುದು.

* ತನ್ನ ಮನೆಯ ಪರಿಸರದಲ್ಲಿ ಯಾವ ರೀತಿ ಭಾಷೆಯನ್ನು ಬಳಸುತ್ತಾರೆಯೋ ಅದೇ ರೀತಿ

ಓದುವಾಗ ಉಚ್ಚರಿಸುತ್ತಾನೆ. ಉದಾಹರಣೆಗೆ: ಆಶಿರವಾದ ಮಾಡಿ, ಕರಪೂರತಾ, ಇಂತಹ ಭಾಷಾ ಬಳಕೆಯಿಂದಾಗಿ ಓದುವಾಗ ಸಮಸ್ಯೆಯನ್ನು ಎದುರಿಸುತ್ತಾರೆ.

೫.೨.೪. ಅನುಸ್ವರಯುಕ್ತ ಪದಗಳ ಸಮಸ್ಯೆ

ಮೂಲರೂಪ	**ಓದುವ ರೂಪ**
ಮಂದರ	ಮದರ
ಕಿಂಕರ	ಕಿಕರ
ಸಂತಸ	ಸತಸ
ಅಂಕುರ	ಅಕುರ
ನಂತರ	ನತರ
ಭಯಂಕರ	ಬಯಕರ
ಕಳಂಕ	ಕಲಕ
ಅಂಶ	ಅಮಸ
ಲಾಂಚನ	ಲಾಚನ
ಕಂಬಳ	ಕಬಳ
ಸಂಸಾರ	ಸಮಸರ
ವಂಚನೆ	ವಚನೆ
ತುರಂಗ	ತುರಗ
ಡಾಂಭಿಕ	ಡಾಬಿಕ

ವಿಶ್ಲೇಷಣೆ :

ಅನುಸ್ವರಯುಕ್ತ ಪದಗಳ ಸಮಸ್ಯೆಯು ಪದಾದಿಯಲ್ಲಿ ಅನುಸ್ವರವಿರುವ ಪದಗಳನ್ನು ಓದುವಾಗ ಹೆಚ್ಚಿನ ಸಮಸ್ಯೆ ಇರುವುದನ್ನು ಗಮನಿಸಲಾಗಿದೆ. ಮತ್ತು ಪದಮಧ್ಯದಲ್ಲಿ ಹೆಚ್ಚಾಗಿ ಅನುಸ್ವರದ ಸಮಸ್ಯೆಯು ಕಂಡುಬರುವುದಿಲ್ಲ. ಇಂತಹ ಒಂದು ಸಮಸ್ಯೆಯು ಕಂಡುಬರುವುದಕ್ಕೆ ಕಾರಣಗಳೆಂದರೆ,

* 'ಅನುಸ್ವರ' ಒಂದು ಅಕ್ಷರ ಎಂದು ಬೋಧಕರು ಒತ್ತುಕೊಟ್ಟು ಕಲಿಸದೆ ಇರುವುದು. ಏಕೆಂದರೆ ಕನ್ನಡ ವರ್ಣಮಾಲೆಯಲ್ಲಿ 'ಂ' ಈ ಅಕ್ಷರಕ್ಕೆ ಏನೆಂದು ಕರೆಯುತ್ತಾರೆ ಎಂದರೆ ಪೂಜಿ ಎಂದು ಕರಿಯುತ್ತಾರೆ ಎಂಬ ಉತ್ತರ ಕಲಿಕಾರ್ಥಿಗಳಿಂದ ಬಂದಿರುವುದನ್ನು ಗಮನಿಸಲಾಗಿದೆ.

* ಅನುಸ್ವರ ಒಂದು ಅಕ್ಷರ ಎಂದು ಗಮನಿಸದೆ ಇರುವುದರಿಂದ.

* ದಿನ ಬಳಕೆಯಲ್ಲಿ ಹೆಚ್ಚಾಗಿ ಅನುಸ್ವರ ಪದಗಳ ಬಳಕೆ ಇಲ್ಲದೆ ಇರುವುದು.

* ಪ್ರಾರಂಭದಿಂದಲೆ ಭಾಷಾ ಬೋಧಕರು ಕಲಿಕಾರ್ಥಿಗಳ ಅನುಸ್ವರ ಪದಗಳ ಉಚ್ಚರಣೆ ಸಮಸ್ಯೆ ಗುರುತಿಸಿ ಅಭ್ಯಾಸ ಮಾಡಿಸದಿರುವುದು.
* ಅನುಸ್ವರ ಪದಗಳಿಗೆ ಪರಿಸರದ ಭಾಷೆಯಲ್ಲಿ ಬಳಸುವ ಪದಗಳು

ಉದಾಹರಣೆ : ಸಂತಸ – ಕುಸಿ

ನಂತರ – ಆಮೇಲೆ

ಭಯಂಕರ – ಅಜಿಕಿ

ಈ ರೀತಿ ಅನುಸ್ವರ ಪದಗಳ ಬಳಕೆ ಹೆಚ್ಚು ಇಲ್ಲದಿರುವುದರಿಂದ ಕಲಿಕಾರ್ಥಿಗಳು ಅನುಸ್ವರ ಪದಗಳನ್ನು ಓದುವಾಗ ಸಮಸ್ಯೆ ಎದುರಿಸುತ್ತಿದ್ದಾರೆ.

ಈ ಸಮಸ್ಯೆಯು ಹೆಚ್ಚಾಗಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಮಕ್ಕಳಲ್ಲಿ ಕಂಡುಬಂದಿರುತ್ತದೆ. ಈ ಮಕ್ಕಳಲ್ಲಿಯೇ ಈ ಸಮಸ್ಯೆ ಇರುವುದಕ್ಕೆ ಕಾರಣ ಇವರು ಸತತವಾಗಿ ಶಾಲೆಗೆ ಬರದೆ ಇರುವುದರಿಂದ ಇವರು ಹೆಚ್ಚಾಗಿ ಪರಿಸರದ ಭಾಷೆಯನ್ನು ಉಚ್ಚರಿಸುತ್ತಾರೆ.

೫.೨.೫. 'ಕ್ಷ' ವರ್ಣ ಪದಗಳ ಸಮಸ್ಯೆ

ಮೂಲರೂಪ	**ಓದುವ ರೂಪ**
ಕ್ಷೀರ ಸಾಗರ	ಚೀರಸಾಗರ
ಕ್ಷತ್ರೀಯ	ಚತ್ರಿಯ
ಅಕ್ಷರ	ಅಕ್ಚರ
ಸಮಕ್ಷಯ	ಸಮಚಯ
ಅಕ್ಷಯ	ಅಕಚಯ
ನಕ್ಷತ್ರ	ನಚ್ಚತ್ರ
ಪಕ್ಷಿ	ಪಕ್‌ಸಿ
ಸಾಕ್ಷರ	ಸಾಕ್ಸರ.

'ಕ್ಷ' ವರ್ಣ ಪದಗಳ ಸಮಸ್ಯೆ ಪದಾದಿ, ಪದಮಧ್ಯಂತ ಪರಿಸರದಲ್ಲಿ ಎಲ್ಲೆ ಬಂದರು ಕಲಿಕಾರ್ಥಿಗಳು ಓದುವಾಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.ಇಂತಹ ಸಮಸ್ಯೆಗೆ ಕಾರಣವೆಂದರೆ,

* 'ಕ್ಷ' ವರ್ಣವನ್ನು ಕನ್ನಡ ವರ್ಣಮಾಲೆಯಿಂದ ತೆಗೆದಿರುವುದರಿಂದ ಬೋಧಕರು ಅದನ್ನು ಕಲಿಸದಿರುವುದು.
* 'ಕ್ಷ' ವರ್ಣದಲ್ಲಿ ಉಚ್ಚರಿಸುವಾಗ ವ್ಯಂಜನಾಕ್ಷರವಾದ 'ಚ' ಅಕ್ಷರ ಇರುವುದರಿಂದ.

* 'ಕ್ಷ' ಅಕ್ಷರ ಉಚ್ಚರಿಸುವಾಗ ಧ್ವನ್ಯಾಂಗ ಸಹಾಯಕ್ಕೆ ಬರದಿದ್ದಾಗ 'ಚ' ಅಕ್ಷರ ಬೇಗ ನಾಲಿಗೆ ತುದಿಗೆ ಬರುತ್ತದೆ.
* 'ಕ್ಷ' ಮತ್ತು 'ಚ' ಉಚ್ಚರಿಸುವಾಗ ಒಂದೇ ರೀತಿ ಕೇಳಿಸುವುದರಿಂದ.

೫.೨.೬. ದ್ವಿತ್ವ ಅಕ್ಷರಗಳ ಪದಗಳ ಸಮಸ್ಯೆ

ಮೂಲರೂಪ	ಓದುವ ರೂಪ
ಪರ್ವತ	ಪರತ್ವ
ಬೃಹಸ್ಪತಿ	ಬ್ರಹಸಪತಿ
ತಮ್ಮೆಲ್ಲರ	ತಮೆಲರ
ಅದನ್ನು	ಅದನು
ಅದಕ್ಕಾಗಿ	ಅದಕಾಗಿ
ಕಪ್ಪಾದ	ಕಪಾದ
ಸ್ತೋತ್ರ	ಸೋತ್ರ
ಸಾತ್ವಿಕ	ಸಾತವಿಕ
ಅಡ್ಡಗಾಲು	ಅಡಗಾಲು
ಅಶ್ಲೀಲ	ಅಸಲೀಲಾ
ಕಟ್ಟುಕಥೆ	ಕಟುಕತೆ
ಮುಟ್ಟಿಸು	ಮುಟಿಸು
ಆದ್ದರಿಂದ	ಆದರಿಂದ
ಕತ್ತರಿಸು	ಕತರಿಸು
ರೈಲುಗಾಡಿ	ರೆಲುಗಾಡಿ

ವಿಶ್ಲೇಷಣೆ :

ಸಾಮಾನ್ಯವಾಗಿ ದ್ವಿತ್ವಾಕ್ಷರಗಳ ಪದಗಳು ಎಲ್ಲೆ ಬರಲಿ ಅಂದರೆ ಪದಾದಿ, ಪದಮಧ್ಯ, ಪದಾಂತ್ಯ ಪರಿಸರದಲ್ಲಿ ಓದುವಾಗ ಕಲಿಕಾರ್ಥಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಇದಕ್ಕೆ ಕಾರಣಗಳೆಂದರೆ

* ಮನೆ ಪರಿಸರದಲ್ಲಿ ಕನ್ನಡ ಭಾಷೆಯನ್ನು ಬಳಸುವಾಗ ಸರಿಯಾದ ಮತ್ತು ತಪ್ಪಾದ ಕ್ರಮವಿರುವುದಿಲ್ಲ.
* ಹೆಚ್ಚಾಗಿ ಪರಿಸರ ಭಾಷೆಯು ಗ್ರಂಥಸ್ಥ ಭಾಷೆಗಿಂತ ಭಿನ್ನವಾಗಿರುತ್ತದೆ. ಕಲಿಕಾರ್ಥಿಗಳಿಗೆ ಹೆಚ್ಚಾಗಿ ಪರಿಸರ ಭಾಷೆಯ ಪ್ರಭಾವ ಇರುತ್ತದೆ. ಆದ್ದರಿಂದ ಪಠ್ಯದ ಭಾಷೆ ಉಚ್ಚರಿಸುವಾಗ ಪರಸರ ಭಾಷೆಯಂತೆ ಸಹಜವಾಗಿ ಉಚ್ಚರಿಸುತ್ತಾರೆ.

* ದ್ವಿತ್ವಾಕ್ಷರ ಪದಗಳ ಉಚ್ಚಾರಣ ಅಭ್ಯಾಸ ಇಲ್ಲದಿರುವುದು.

* ಬೋಧಕರು 'ದ್ವಿತ್ವ' ಅಕ್ಷರಗಳಿಗೆ ಒತ್ತು ಕೊಟ್ಟು ಪದಗಳ ಗ್ರಹಿಕೆ ಮೂಡಿಸದಿರುವುದು.

* ಪರಿಸರ ಭಾಷೆ ಪ್ರಭಾವ ಕಲಿಕಾರ್ಥಿಗೆ ಹೆಚ್ಚು ಇರುವುದರಿಂದ ಗ್ರಂಥಸ್ಥ ಭಾಷೆಯ ಉಚ್ಚಾರಣೆಯಲ್ಲಿ ನಾಲಿಗೆ ಸಹಾಯಕ್ಕೆ ಬರದಿರುವುದು.

೫.೨.೭. 'ಹ' ಕಾರಂತ ಪದಗಳ ಸಮಸ್ಯೆ

ಮೂಲರೂಪ	ಓದುವ ರೂಪ
ಹೀಗೆ	ಇಗೆ
ಹೋದಳು	ಓದಳು
ಸಹಾಯ	ಸಾಯ
ಗ್ರಹಿಸಿ	ಗಯಿಸಿ
ಹೊಸಗನ್ನಡ	ಹೊಸಕನ್ನಡ

ವಿಶ್ಲೇಷಣೆ :

ಕಲಿಕಾರ್ಥಿಗಳು 'ಹ' ಕಾರ ಪದಗಳಲ್ಲಿ 'ಹ' ಕಾರವನ್ನು ಲೋಪಮಾಡಿ **'ಸ್ವಕಾರ'** ಅಥವಾ ವ್ಯಂಜನಾಕ್ಷರಗಳನ್ನು ಕೂಡಿಸಿ ಓದುವಂತಹ ಸಮಸ್ಯೆ ಕಾಣಲಾಗಿದೆ. ಇದಕ್ಕೆ ಕಾರಣಗಳೆಂದರೆ,

* ಕಲಿಕಾರ್ಥಿಯ ಪರಿಸರ ಭಾಷೆಯಲ್ಲಿ 'ಹ' ಕಾರವನ್ನು ಬಳಸದಿರುವುದು ಉದಾಹರಣೆಗೆ : 'ಹಣ ಸಹಾಯ ಮಾಡಿದ್ದಾರೆ' ಎನ್ನುವ ಗ್ರಂಥಸ್ಥ ಭಾಷೆಗೆ ಪರಿಸರ ಭಾಷೆಯಲ್ಲಿ "ರೊಕ್ಕಾ ಸಾಯ ಮಾಡ್ಯಾರ" ಎಂದು ಬಳಸುತ್ತಾರೆ. ಹೀಗಾಗಿ 'ಸಹಾಯ' ಪದದಲ್ಲಿರುವ 'ಹ' ಕಾರ ಲೋಪವಾಗಿ 'ಸಾಯ' ಎಂದು ಉಚ್ಚರಿಸುತ್ತಾರೆ. ಇದಕ್ಕೆ ಕಾರಣ ಪರಿಸರ ಭಾಷೆಯ ಪ್ರಭಾವ ಮತ್ತು 'ಹ' ಕಾರ ಗಮನಿಸದೆ ಓದುವುದು.

* ಸ್ವರಾಕ್ಷರ ಮತ್ತು 'ಹ' ಅಕ್ಷರದ ಮಧ್ಯೆ ಸಾಮ್ಯತೆ ಏಕರೂಪದಿಂದ ಕೂಡಿರುವದರಿಂದ 'ಹ' ಕಾರಾಂತ ಸಮಸ್ಯೆ ಕಾಣುತ್ತೇವೆ.

ಈ ಮೇಲಿನ ಎಲ್ಲಾ ಮೂಲ ರೂಪ ಮತ್ತು ಓದುವ ರೂಪವನ್ನು ಗಮನಿಸಿದಾಗ ಭಾಷಾ ವಿಜ್ಞಾನಿಗಳ ಪ್ರಕಾರ ಸಂಸ್ಕೃತ ಪದಗಳ ಕನ್ನಡ ಉಚ್ಚಾರಣೆಯಲ್ಲಿ ಸಮಸ್ಯೆಯಿರುವುದನ್ನು ಗುರುತಿಸಿದ್ದಾರೆ. ಓದುವ ಮತ್ತು ಮಾತನಾಡುವ ಕೌಶಲ್ಯಗಳಿಗೆ ಸಂಬಂಧಿಸಿ ನಿರ್ದಿಷ್ಟ ವರ್ಗದ ಮಕ್ಕಳು ಉಚ್ಚರಣೆಯನ್ನು ಸರಿಯಾಗಿ ಮಾಡುವುದಿಲ್ಲ. ಎನ್ನುವ ಮಾತು ಕಲಿಕೆಯ ಹಂತದಿಂದ ಕಲಿಕೆ ಮುಗಿಸಿ ವ್ಯಕ್ತಿ ಕನ್ನಡವನ್ನು ಔಪಚಾರಿಕವಾಗಿ ಬಳಸುವ ಎಲ್ಲಾ ಸಂದರ್ಭಗಳ ಹಿನ್ನೆಲೆಯಲ್ಲಿಯೂ ಇದೇ ಅಭಿಪ್ರಾಯವನ್ನು ಮಂಡಿಸಲಾಗುತ್ತಿದೆ. ಈ ಸಮಸ್ಯೆಯ ಕಾರಣಗಳನ್ನು ಮುಖ್ಯವಾಗಿ ಎರಡು ನೆಲೆಗಳಲ್ಲಿ ಗುರುತಿಸಲಾಗುತ್ತದೆ. ಬೋಧಕರು ಸರಿಯಾಗಿ ಕಲಿಸುವುದಿಲ್ಲ ಎನ್ನುವುದು ಒಂದು ನೆಲೆಯಾದರೆ ಕಲಿಕಾರ್ಥಿಗಳ ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ಸರಿಯಾಗಿ ಕಲಿಯುವುದಿಲ್ಲ ಎನ್ನುವುದು ಇನ್ನೊಂದು ನೆಲೆ, ಕನ್ನಡವನ್ನು

ಓದುವಾಗ ಮತ್ತು ಬರೆಯುವಾಗ ಕಲಿಕಾರ್ಥಿಗಳು ಮಾಡುವ ತಪ್ಪುಗಳು ಯಾವ ಬಗೆಯವು, ಯಾವ ಧ್ವನಿ, ಪದರಚನೆಗಳ ಉಚ್ಚರಣೆಯಲ್ಲಿ ತೊಡಕುಗಳು ಸಂಭವಿಸುತ್ತಿವೆ ಮುಖ್ಯವಾಗಿ ಊಷ್ಮಧ್ವನಿಗಳ ಉಚ್ಚರಣೆ 'ಶ' ಕಾರ ಬದಲಿಗೆ 'ಸ' ಕಾರ ಬಳಸುವುದು ಹಾಗೆಯೇ 'ಹ' ಕಾರದ ಬದಲಿಗೆ 'ಅ : ವ, ಓ, ಎ' ಕಾರಗಳನ್ನು ಬಳಸುವುದು ಮಹಾಪ್ರಾಣಯುಕ್ತ ಧ್ವನಿಗಳನ್ನು ಅಲ್ಪಪ್ರಾಣಯುಕ್ತವಾಗಿ ಉಚ್ಚರಿಸುವುದು ಪದಾದಿಯ ವಿಜಾತಿ ದ್ವಿತ್ವಕ್ಷರಗಳನ್ನು ಬಿಡಿಸಿ ಓದುವುದು ಹೀಗೆ ನಿರ್ದಿಷ್ಟ ವಲಯಗಳಲ್ಲಿಯೇ ಕಾಣಿಸಿಕೊಳ್ಳುವ ಕಲಿಕೆಯ ಸಮಸ್ಯೆಗಳ ಹಿಂದಿನ ತಾತ್ವಿಕ ವಿಚಾರಗಳನ್ನು ಡಾ. ಡಿ.ಎನ್.ಶಂಕರಭಟ್, ಪ್ರೊ.ಕೆ.ವಿ.ನಾರಾಯಣರಂತಹ ಭಾಷಾ ವಿಜ್ಞಾನಿಗಳು ವಿವರಿಸಿದ್ದಾರೆ.

ಈ ಎಲ್ಲಾ ಪದರಚನೆಗಳು ಸಮಾಜೋಭಾಷಿಕ ಹಿನ್ನೆಲೆಯಿಂದ ಸರಿಯಾದ ಕ್ರಮವೆನಿಸಿದರೂ ಎಲ್ಲರೂ ಒಪ್ಪಿಕೊಂಡಂತಹ ಸರಕಾರ ರಚಿಸಿರುವ ಪಠ್ಯಪುಸ್ತಕದ ಭಾಷೆಯ ಹಿನ್ನೆಲೆಯಲ್ಲಿ ಸಾಮಾಜಿಕ ಭಾಷೆಯು ತಪ್ಪೆನಿಸುವುದು. ವಿದ್ಯಾರ್ಥಿಗಳ ಬರವಣಿಗೆಯ ಮಾದರಿಯನ್ನು ಗಮನಿಸುವುದಕ್ಕಾಗಿ ಯಥಾಪ್ರಕಾರ ಸ್ಕ್ಯಾನ್ ಮಾಡಿ ಹಾಕಲಾಗಿದೆ.

೫.೨.೮. ಲೇಖನ ಚಿಹ್ನೆಗಳನ್ನು ಗಮನಿಸದೆ ಓದುವುದು

ಲೇಖನ ಚಿಹ್ನೆಗಳು ಓದುವಾಗ ಮತ್ತು ಬರೆಯುವಾಗ ಪ್ರಮುಖ ಪಾತ್ರ ವಹಿಸುತ್ತವೆ. ಒಂದು ಭಾಷೆಗೆ ಪರಿಪೂರ್ಣವಾದ ಅರ್ಥ ಸಿಗಬೇಕು ಎಂದರೆ ಅಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳು ಅತಿ ಮಹತ್ವವಾದವು. ಅದೇ ರೀತಿಯಾಗಿ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಮುಖ್ಯವಾದುದು. ಲೇಖನ ಚಿಹ್ನೆಗಳಿಲ್ಲದ ಬರವಣಿಗೆ ಸ್ಪಷ್ಟಾರ್ಥವನ್ನು ಕೊಡದೆ ತೊಡಕುಗಳಿಗೆ ಕಾರಣವಾಗುವುದುಂಟು. ಹಾಗೂ ಲೇಖನ ಚಿಹ್ನೆಗಳು ಅತ್ಯಂತ ಅವಶ್ಯಕ. ಲೇಖನ ಚಿಹ್ನೆಗಳೆಂದರೆ ಪೂರ್ಣವಿರಾಮ, ಅರ್ಧವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ, ವಾಕ್ಯವೇಷ್ಟನ, ಆವರಣ, ವಿವರಣಾತ್ಮಕ ಚಿಹ್ನೆಗಳು. ಈ ಚಿಹ್ನೆಗಳು ಓದುವಾಗ ಮತ್ತು ಬರೆಯುವಾಗ ಮಹತ್ವದ ಪಾತ್ರ ವಹಿಸುತ್ತವೆ.

ಉದಾಹರಣೆಗೆ : "ಅಂಗುಲೀಮಾಲ : ರಾಜ್ಯವೇ? ಎಲ್ಲವನ್ನು ಮೀರಿರುವ ರಾಜ್ಯವೇ?

ನಾ ಕಾಣದಿರುವೊಂದು ರಾಜ್ಯವೇ? ಉತ್ತರಕ್ಕೆ ದಕ್ಷಿಣಕ್ಕೆ
ಪೂರ್ವ ಪಶ್ಚಿಮಗಳಿಗೆ ದಿಗ್ವಿಜಯ ಯಾತ್ರೆಯನು
ಮುಗಿಸಿ ಬಂದಿಹೆ ನಾನು! ನನ್ನ ಭಯವಾಳದಿಹ
ನೆಲವುಂಟೆ ಓ ಭಿಕ್ಷು?
ಬುದ್ಧ : ಇದೆ ಕಂದ."

ಈ ವಾಕ್ಯವನ್ನು ಗಮನಿಸಿದಾಗ ಇಲ್ಲಿ ವಿವರಣಾತ್ಮಕ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ ಮತ್ತು ಪೂರ್ಣವಿರಾಮ ಚಿಹ್ನೆಗಳನ್ನು ಒಳಗೊಂಡಿದೆ. ಭಾವಸೂಚಕ ಮತ್ತು ಪ್ರಶ್ನಾರ್ಥಕ ಚಿಹ್ನೆಗಳನ್ನು ಗಮನಿಸದೆ ಓದಿದರೆ ಭಾವನೆಗೆ ತಕ್ಕಂತೆ ಅರ್ಥ ಸ್ಪಷ್ಟತೆ ಬರುವುದಿಲ್ಲ. ಇಂತಹ ಸಮಸ್ಯೆಗೆ ಕಾರಣಗಳೆಂದರೆ,

* ಲೇಖನ ಚಿಹ್ನೆಗಳ ಪರಿಜ್ಞಾನವನ್ನು ಕಲಿಕಾರ್ಥಿಗಳಿಗೆ ಮೂಡಿಸದೆ ಇರುವುದು.
* ಓದುವ ಕೌಶಲ ಇಲ್ಲದಿರುವುದು.
* ಕಲಿಕಾರ್ಥಿಗಳಿಗೆ ಬೋಧಕರು ಪ್ರತಿನಿತ್ಯ ಓದಿಸದೆ ಇರುವುದು.
* ಬೋಧಕರು ತರಗತಿಯಲ್ಲಿ ಗಟ್ಟಿ ವಾಚನ ಮಾಡಿ ಬೋಧಿಸದೆ ಕಲಿಕಾರ್ಥಿಗಳಿಂದಲೆ ಓದಿಸಿ ವಿವರಿಸುವುದು.

೫.೩ ಬರವಣಿಗೆಯ ಸಮಸ್ಯೆಗಳು

ಭಾಷೆಯನ್ನು ಕಲಿಸುವಾಗ ಪ್ರಮುಖವಾಗಿ ನಾವು ನಾಲ್ಕು ಭಾಷಾ ಕೌಶಲಗಳಾದ ಮಾತನಾಡುವಿಕೆ, ಆಲಿಸುವಿಕೆ, ಓದುವಿಕೆ, ಬರೆಯುವಿಕೆಗಳನ್ನು ಗಮನಿಸುತ್ತೇವೆ. ಇವುಗಳಲ್ಲಿ ಪ್ರಮುಖವಾದ ಕೌಶಲ ಎಂದರೆ ಬರವಣಿಗೆ ಕೌಶಲ. ಕಲಿಕಾರ್ಥಿಗಳು ಏನನ್ನು ಆಲಿಸಿರುತ್ತಾರೋ ಅದನ್ನೆ ಬರೆಯುತ್ತಾರೆ. ಯಾವುದನ್ನು ಗ್ರಹಿಸಿಕೊಳ್ಳುತ್ತಾರೆ, ಅದನ್ನೆ ಬರವಣಿಗೆಯ ಮೂಲಕ ಅಭಿವ್ಯಕ್ತಗೊಳಿಸುತ್ತಾರೆ.

ಇಂತಹ ಬರವಣಿಗೆಯ ಸಮಸ್ಯೆಗಳನ್ನು ಗುರುತಿಸುವ ಸಲುವಾಗಿ ಕಲಿಕಾರ್ಥಿಗಳಿಗೆ ಒಂದು ಸ್ವಂತ ಲೇಖನ ಮತ್ತು ಒಂದು ಶುದ್ದ ಬರಹ ಅಂದರೆ ನೋಡಿ ಬರೆಯುವಂತಹದು.

ಈ ಎರಡು ಬರವಣಿಗೆ ಕ್ರಮವನ್ನು ಇಟ್ಟುಕೊಂಡು ಕಲಿಕಾರ್ಥಿಗಳಲ್ಲಿನ ಬರವಣಿಗೆಯ ಸಮಸ್ಯೆಗಳನ್ನು ಗುರುತಿಸಲಾಗಿದೆ.

ಕಲಿಕಾರ್ಥಿಗಳ ಸ್ವಂತ ಲೇಖನದ ಬರವಣಿಗೆಯಲ್ಲಿ ಕಂಡು ಬಂದ ಸಮಸ್ಯೆಗಳು

೫.೩.೧. 'ಹ'ಕಾರ ಪದಗಳಲ್ಲಿ 'ಅ,ಆ' ಕಾರ ಬಳಕೆ

ಮೂಲರೂಪ	ಬರವಣಿಗೆ ರೂಪ
ಹಾಗಾದರೆ	ಆಗಾದರೆ
ಹಲ್ಲಿ	ಅಲ್ಲಿ
ಹಬ್ಬಕ್ಕೆ	ಅಬ್ಬಕ್ಕೆ
ಹತ್ತಿ	ಅತಿ
ಹಾಗೆ	ಆಗೆ
ಹಲ್ಲಿನಿಂದ	ಅಲ್ಲಿನಿಂದ

ಕಲಿಕಾರ್ಥಿಯು ಕೇವಲ 'ಹ' ಕಾರಾಂತ ಪದಗಳನ್ನು ಪದಾದಿಯಲ್ಲಿ ಮಾತ್ರ 'ಅ.ಆ'ಕಾರವಾಗಿ ಬಳಕೆಯಾಗಿರುವುದನ್ನು ಕಾಣಬಹುದು. ಇಂತಹ ಸಮಸ್ಯೆಗೆ ಪ್ರಮುಖ ಕಾರಣಗಳೆಂದರೆ,

* ಹ.ಕಾರಕ್ಕೂ ಅ,ಆ, ಕಾರಕ್ಕೂ ವ್ಯತ್ಯಾಸ ಗಮನಿಸದಿರುವುದು.
* ಪರಿಸರ ಭಾಷೆಯಲ್ಲಿ 'ಹ'ಕಾರದ ಬಳಕೆ ಇಲ್ಲದಿರುವುದು.

* ಬೋಧಕರಲ್ಲಿಯೆ 'ಹ'ಕಾರದ ಸಮಸ್ಯೆ ಇರುವುದು.

* ಕಲಿಕಾರ್ಥಿಗಳಲ್ಲಿ ಪದಾದಿಯಲ್ಲಿ ಮಾತ್ರ ಹೆಚ್ಚಾಗಿ 'ಹ' ಕಾರ ಸಮಸ್ಯೆ ಕಂಡುಬರುತ್ತದೆ.

೫.೩.೨. 'ಇ' ಕಾರಕ್ಕೆ 'ಹ'ಕಾರ ಬಳಕೆ

ಮೂಲರೂಪ	**ಬರವಣಿಗೆ ರೂಪ**
ಇಟ್ಟಿದಂತಹ	ಹಿಟ್ಟಿದಂತಹ
ಇತ್ತು	ಹಿತ್ತು
ಇವತ್ತು	ಹಿವತು

'ಹ' ಕಾರಕ 'ಇ' ಕಾರ ಬಳಕೆ

ಮೂಲರೂಪ	**ಬರವಣಿಗೆ ರೂಪ**
ಹಿಡಿಯಲು	ಇಡಿಯಲು
ಹಿಡಿಯುತ್ತೇವೆ	ಇಡಿಯುತ್ತೇವೆ
ಹಿಡಿದು	ಇಡಿದು

• ಇಂತಹ ಸಮಸ್ಯೆಗೆ ಕಾರಣವೆಂದರೆ 'ಹಿ' ಅಕ್ಷರವನ್ನು ಉಚ್ಚರಿಸುವಾಗ 'ಇ' ಎಂದೆ ಕೇಳುತ್ತದೆ. ಮತ್ತು ಪದಾದಿ ಪರಿಸರದಲ್ಲಿ 'ಹ' ಕಾರ ಸಮಸ್ಯೆ ಕಾಣುವುದರಿಂದ ಕಲಿಕಾರ್ಥಿಯ ಪರಿಸರದ ಭಾಷೆಯಲ್ಲಿ ಪದಾದಿ ಪರಿಸರದಲ್ಲಿ 'ಹ' ಅಕ್ಷರ ಬಳಸದಿರುವುದು ಈ ಸಮಸ್ಯೆಗೆ ಕಾರಣವಾಗಿದೆ.

೫.೩.೩. 'ಹ'ಕಾರಕ್ಕೆ 'ಒ ಮತ್ತು ಎ' ಕಾರ ಬಳಕೆ

ಮೂಲರೂಪ	**ಬರವಣಿಗೆ ರೂಪ**
ಹೋಗಿ	ಓಗಿ
ಹೋದ	ಓದ
ಹೊಡೆದು	ಒಡೆದು
ಹೋದಾಗ	ಒದಾಗ
ಹೊಲ	ವಲ
ಹೊಯಿತು	ವಯಿತು
ಹೋಗುತ್ತಾನೆ	ಒಗುತ್ತಾನೆ
ಹೇಳುತ್ತಿದ್ದರು	ಎಳುತ್ತಿದ್ದರು

ಹೋಗುತ್ತಿರಿ ಒಗುತಿರಿ


ಹೇಳಿದರು ಎಳಿದರು

ಕಲಿಕಾರ್ಥಿಗಳಲ್ಲಿ 'ಹ' ಕಾರದ ಸಮಸ್ಯೆಯು ಪದಾದಿಯಲ್ಲಿಯೆ ಇರುವುದನ್ನು ಗುರುತಿಸಲಾಗಿದೆ ಇದಕ್ಕೆ ಸೂಕ್ತ ಕಾರಣವೆಂದರೆ,

* 'ಹ'ಕಾರ ಅಕ್ಷರವು ಗುಣಿತಾಕ್ಷರವಾಗುತ್ತಾ ಹೋದಂತೆ ಸ್ವರಾಕ್ಷರಗಳ ಸಹಾಯ ಬೇಕಾಗುತ್ತದೆ. ಆಗ 'ಹ'ಕಾರಕ್ಕು ಸ್ವರಾಕ್ಷರಕ್ಕೂ ಇರುವಂತಹ ವ್ಯತ್ಯಾಸವನ್ನು ಕಲಿಕಾಥಿಯು ಗಮನಿಸದೆ ಇರುವುದು.

* ಮನೆಯಲ್ಲಿ ಹೆಚ್ಚಾಗಿ 'ಹ' ಕಾರಾಂತ ಪದಗಳ ಬಳಕೆ ಇಲ್ಲದಿರುವುದು.

ಕಲಿಕಾರ್ಥಿಗಳ ಬರವಣಿಗೆಯಲ್ಲಿನ ಹಕಾರ ಸಮಸ್ಯೆಯ ಒಂದು ಮಾದರಿಯನ್ನು ಯಥಾ ಪ್ರಕಾರ ಸ್ಕ್ಯಾನ್ ಮಾಡಿ ಹಾಕಲಾಗಿದೆ.



* ಯಥಾ ಪ್ರಕಾರ 'ಹ' ಕಾರ ಸಮಸ್ಯೆಯನ್ನು ಗುರುತಿಸುವುದಕ್ಕಾಗಿ ಎರಡು ಬರವಣಿಗೆ ಮಾದರಿಗಳನ್ನು ಮೇಲ್ಕಂಡಂತೆ ಸ್ಕ್ಯಾನ್ ಮಾಡಿ ಹಾಕಿರುವುದನ್ನು ಗಮನಿಸಬಹುದು. 'ಹ' ಕಾರದ ಸಮಸ್ಯೆಯು ಕಲಿಕಾರ್ಥಿಗಳ ಬರವಣಿಗೆಯಲ್ಲಿ ವ್ಯಕ್ತಿಗತವಾಗಿರದೆ ಪ್ರತಿಶತ ೫೦%ರಷ್ಟು ಮಕ್ಕಳಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣ ಸಾಮಾಜಿಕ ಪರಿಸರ ಪ್ರಭಾವವಿರುವುದು ಗಮನಿಸಲಾಗಿದೆ. ಆದರೆ ಈ ಸಮಸ್ಯೆ ಹೆಚ್ಚಾಗಿ ಇರುವುದು ಸರಕಾರಿ ಶಾಲೆಯ ಮಕ್ಕಳಲ್ಲಿ ಏಕೆಂದರೆ ಸರಕಾರಿ ಶಾಲೆಗಳು ಹೆಚ್ಚಾಗಿ ಗ್ರಾಮೀಣ ಭಾಗದಲ್ಲಿಯೇ ಇರುವುದರಿಂದ ಇಲ್ಲಿನ ಕಲಿಕಾರ್ಥಿಗಳ ಭಾಷೆಯ ಮೇಲೆ ಪರಿಸರದ ಭಾಷೆಯ ಪ್ರಭಾವ ಹೆಚ್ಚಾಗಿರುತ್ತದೆ. ಆದ್ದರಿಂದ ಇಲ್ಲಿನ ಕಲಿಕಾರ್ಥಿಗಳಲ್ಲಿ 'ಹ' ಕಾರದ ಸಮಸ್ಯೆ ದೊಡ್ಡ ಸವಾಲಾಗಿದೆ.

೫.೩.೪. ಒ.ಓ ಕಾರಂತ ಪದಗಳಿಗೆ 'ವ'ಕಾರ ಬಳಕೆ

ಮೂಲರೂಪ	**ಬರವಣಿಗೆ ರೂಪ**
ಓಡಿದ	ವೋಡಿದ
ಒಗೆಯುತ್ತಿದ್ದರು	ವಗೆಯುತ್ತಿದರು
ಒಲಿದ	ವಲಿದ
ಒಕ್ಕಲಿಗ	ವಕ್ಕಲಿಗ
ಒಡೆದು	ವಡೆದು
ಓಲಗ	ವೊಲಗ
ಒಗ್ಗರಣೆ	ವಗರಣೆ
ಒಕ್ಕಲುತನ	ವಕಲತನ
ಒಡವೆ	ವಡವೆ
ಒಸಡು	ವಸಡಿ
ಓಡು	ವೋಡು
ಓಲೆಕಾರ	ವೊಲೆಕಾರ

ವಿಶ್ಲೇಷಣೆ :

ಒ, ಓ ಕಾರಕ್ಕೆ 'ವ' ಕಾರ ಬಳಕೆಗೆ ಪ್ರಮುಖ ಕಾರಣ ಈ ಮೂರು ಅಕ್ಷರಗಳಲ್ಲಿ ಒಂದೇ ರೀತಿಯ ಧ್ವನಿ ಬಳಕೆಯಿರುವುದು.'ಓ'ಕಾರಂತ ಪದಗಳಿಗೆ 'ಒ, ಓ' ಕಾರದ ಬದಲಾಗಿ 'ವ' ಕಾರ ಪದಗಳನ್ನು ಬಳಸಿದಾಗ ಅರ್ಥ ವ್ಯತ್ಯಾಸ ಕಾಣದಿರುವುದು.

೫.೩.೫. 'ಓ' ಕಾರಂತ ಪದಗಳಿಗೆ 'ಒ' ಕಾರ ಬಳಕೆ

ಮೂಲರೂಪ	ಬರವಣಿಗೆ ರೂಪ
ಓದು	ಒದು
ಓಡಿ	ಒಡಿ
ಓರ್ವ	ಒರವ
ಓಡು	ಒಡು
ಓಲಗ	ಒಲಗ
ಓಡಾಟ	ಒಡಾಟ
ಓಣಿ	ಒಣಿ

ಒ,ಓ,ಕಾರಗಳ ಸಮಸ್ಯೆಯು ಕಲಿಕಾರ್ಥಿಗಳಲ್ಲಿ ಪದಾದಿ ಪರಿಸರದಲ್ಲಿ ಮಾತ್ರ ಹೆಚ್ಚಾಗಿರುವುದನ್ನು ಗಮನಿಸಬಹುದು. ಇಂತಹ ಸಮಸ್ಯೆಗೆ ಮುಖ್ಯ ಕಾರಣವೆಂದರೆ.

* ಒ,ಓ,ವ, ಅಕ್ಷರಗಳ ವ್ಯತ್ಯಾಸವನ್ನು ಗಮನಿಸದಿರುವುದು.
* ಒ,ಓ,ವ, ಅಕ್ಷರಗಳ ಮಧ್ಯದ ವ್ಯತ್ಯಾಸವನ್ನು ಬೋಧಕರು ಸ್ಪಷ್ಟಪಡಿಸದಿರುವುದು.
* ಈ ಮೂರು ಅಕ್ಷರಗಳ ಮಧ್ಯೆ ವ್ಯತ್ಯಾಸವೇನು ಇಲ್ಲವೆಂದು ಕಲಿಕಾರ್ಥಿಗಳು ತಿಳಿದಿರುವುದು.

೫.೩.೬. ಪದ ಮಧ್ಯದಲ್ಲಿ 'ಹ'ಕಾರ ಲೋಪ

ಮೂಲರೂಪ	ಬರವಣಿಗೆ ರೂಪ
ಮಹಾಲಕ್ಷ್ಮೀ	ಮಾಲಚಮಿ
ಮಹಾದ್ವಾರ	ಮಾದ್ವಾರ
ಮಹಾದೇವ	ಮಾದೇವ
ಮಹಾನವಮಿ	ಮಾನೌಮಿ
ಮಹಾನದಿ	ಮಾನದಿ

'ಹ'ಕಾರವು ಪದ ಮಧ್ಯದಲ್ಲಿ ಲೋಪಗೊಂಡಿರುವುದಕ್ಕೆ ಪ್ರಮುಖ ಕಾರಣಗಳೆಂದರೆ,

- ಕಲಿಕಾರ್ಥಿಗಳು ಬರವಣಿಗೆಯಲ್ಲಿ ಆಡು ಭಾಷೆಗೆ ಹೆಚ್ಚಿನ ಗಮನ ಕೊಟ್ಟಿರುವುದು.
- 'ಹ'ಕಾರ ಬಳಸದಿದ್ದರು ಆ ಪದದ ಮೂಲಾರ್ಥಕ್ಕೆ ಭಂಗ ಬರದಿರುವುದು.
- 'ಹಾ' ಅಕ್ಷರದಲ್ಲಿ 'ಆ' ಸ್ವರಾಕ್ಷರವಿದ್ದು ಇದನ್ನು ಕಲಿಕಾರ್ಥಿಗಳು ಬರವಣಿಗೆಯಲ್ಲಿ ಬಳಸುವಾಗ 'ಮ' ಅನುನಾಸಿಕ ಅಕ್ಷರಕ್ಕೆ ದೀರ್ಘ ಸ್ವರ ಸೇರಿಸಿ ಬರೆಯುತ್ತಾರೆ. ಈ ಸಮಸ್ಯೆಯು 'ಮ' ಅನುನಾಸಿಕ ಅಕ್ಷರದ ಮುಂದೆ 'ಹಾ' ಅಕ್ಷರ ಬಂದಾಗ ಮಾತ್ರ ಕಂಡುಬರುತ್ತದೆ.

೫.೩.೭. ಪರಿಸರ (ಆಡು) ಭಾಷೆಯ ಪದಗಳ ಬಳಕೆ

ಮೂಲರೂಪ	ಬರಹರೂಪ
ಅವರಿಗೆ	ಅವ್ರಿಗೆ
ಇರುತ್ತಾರೆ	ಇರ್ತಾರೆ
ರೇಷನ್	ರಾಸನ್ನ
ಒಗಿಯುತ್ತಾರೆ	ವಗಿತಾರೆ
ಹೆಂಡತಿಗೆ	ಹೆಣತಿಗೆ/ಹೆಣ್ತಿಗೆ
ಕುಡಿಸುತ್ತಾನೆ	ಕುಡಸ್ತಾನ
ಬರುತ್ತಾನೆ	ಬರತಾನೆ
ಬಿಡುತ್ತಾನೆ	ಬಿಡತಾನೆ
ಹೋಗಿತ್ತು	ಹೊತು
ಬಡವರು	ಬಡುರು
ಊರಿನಲ್ಲಿ	ಊರಾಗ
ಎರಡು	ಎಡ್ಡು

ವಿಶ್ಲೇಷಣೆ :

ಬರವಣಿಗೆಯಲ್ಲಿ ಕಲಿಕಾರ್ಥಿಗಳು ಹೆಚ್ಚಾಗಿ ಪರಿಸರದ ಭಾಷೆಯನ್ನೆ ಬಳಸುವುದಕ್ಕೆ ಪ್ರಮುಖ ಕಾರಣಗಳೆಂದರೆ,

* ಗ್ರಂಥಸ್ಥ ಭಾಷೆಗಿಂತ ಪರಿಸರ ಭಾಷೆಯೊಡನೆ ಹೆಚ್ಚಾಗಿ ಸಂವಹನ ಕ್ರಿಯೆ ಮಾಡುವುದರಿಂದ.
* ಕಲಿಕಾ ಮಟ್ಟಕ್ಕೆ ತಕ್ಕಂತಹ ಪದಗಳನ್ನು ಬಳಸುವುದು.
* ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳು ಹೆಚ್ಚಾಗಿ ಪರಿಸರದ ಅಥವಾ ತಮ್ಮ ಮನೆಯಲ್ಲಿ ಬಳಸುವ ಪದಗಳನ್ನು ಬರವಣಿಗೆಯಲ್ಲು ಬಳಸುತ್ತಾರೆ.

೫.೩.೮. ಬರವಣಿಗೆಯಲ್ಲಿ ದ್ವಿತ್ವಾಕ್ಷರಗಳ ಸಮಸ್ಯೆ

ಮೂಲರೂಪ	ಬರವಣಿಗೆ ರೂಪ
ಕೇಳುತ್ತಾನೆ	ಕೆಳತಾನೆ
ಆಸ್ಥಾನಕ್ಕೆ	ಆಸತಾನಕೆ
ಉಕ್ಕಿಸಿ	ಉಕಿಸಿ

ವಯಸ್ಸು	ವಯಸು
ಬರುತ್ತಿವಿ	ಬರುತಿವಿ
ಹೊಲಕ್ಕೆ	ಹೊಲಕೆ
ನೆಲದಲ್ಲಿ	ನೆಲದಲಿ
ಪುಟವನ್ನು	ಪುಟವನು
ಐತಿಹ್ಯ	ಐತಿಯ
ಚಿಮ್ಮಿತು	ಚಿಮಿತು
ನ್ಯಾಯ	ನಾಯ

ವಿಶ್ಲೇಷಣೆ :

* ಸಾಮಾನ್ಯವಾಗಿ ಕಲಿಕರ್ಥಿಯು ಮನೆಯ ಪರಿಸರದಲ್ಲಿ ಪದಗಳನ್ನು ತೇಲಿಸಿ ಮಾತನಾಡುವುದರಿಂದ.
* ಕಲಿಕಾರ್ಥಿಗೆ ತಾನು ಬರೆಯುತ್ತಿರುವುದು ತಪ್ಪೋ ಸರಿಯೋ ಎಂದು ಸ್ಪಷ್ಟತೆ ಇಲ್ಲದಿರುವುದು.
* ಪರಿಸರದಲ್ಲಿ ಆಡುವ ಭಾಷೆಯು ಬರವಣಿಗೆಯಲ್ಲಿಯೂ ಬಳಕೆಯಾಗುವುದರಿಂದ ಬರವಣಿಗೆಯಲ್ಲಿ ಸಮಸ್ಯೆಯನ್ನು ಎದಿರಿಸುತ್ತಾರೆ.

೫.೩.೧೦. ತಲೆಕಟ್ಟಿನ ಸಮಸ್ಯೆ

ಮೂಲರೂಪ	**ಬರವಣಿಗೆ ರೂಪ**
ಕೇಳು	ಕೀಳು
ಕೊಳ್ಳು	ಕೂಳ್ಳು
ಮನೆಗೆ	ಮನೆಗ
ಹೆಮ್ಮೆ	ಹೆಮ್ಮ
ಕತ್ತಲೆ	ಕತಲ
ಬಗೆಗೆ	ಬಗೆಗ
ಮೊಳಕೆ	ಮೂಳಕೆ

ವಿಶ್ಲೇಷಣೆ :

* ಕಲಿಕಾರ್ಥಿಗಳಲ್ಲಿ ತಲೆಕಟ್ಟಿನ ಬಗೆಗೆ ಇರುವ ಸೂಕ್ಷ್ಮ ವ್ಯತ್ಯಾಸ ಗಮನಿಸದೆ ಇರುವುದು.
* ತಿಳಿದು ತಿಳಿಯದೋ ಬರವಣಿಗೆಯಲ್ಲಿ ತಲೆಕಟ್ಟನ್ನು ಬಳಸದಿರುವುದು.

* ಪರಿಸರ ಭಾಷೆಯಲ್ಲಿ 'ಎ' ಕಾರ ಪದಗಳನ್ನು 'ಇ' ಕಾರವಾಗಿ ಬಳಸುವುದರಿಂದ ಬರವಣಿಗೆಯಲ್ಲಿ ಕಲಿಕಾರ್ಥಿಯು ಇಂತಹ ಸಮಸ್ಯೆ ಎದುರಿಸುತ್ತಾನೆ.
* ಅವಸರದ ಬರವಣಿಗೆ.

೫.೩.೧೧. ದೀರ್ಘಾಕ್ಷರ ಕೊಂಬಿನ ಸಮಸ್ಯೆ

ಮೂಲರೂಪ	ಬರವಣಿಗೆ ರೂಪ
ದೇವೇಂದ	ದೆವೇಂದ್ರ
ಕೇಳು	ಕೆಳು
ಹೋಗು	ಹೊಗು
ಜೀವನ	ಜಿವನ
ಎತ್ತಲೇಬೇಕು	ಎತಲೆಬೇಕು
ಮೇರು	ಮೆರು
ಮೋಡಿ	ಮೊಡಿ
ಸೀತಾ	ಸಿತಾ
ಮೋಹನ	ಮೊಹನ
ನೇಸರ	ನೆಸರ
ನೇರ	ನೆರ

ದೀರ್ಘಾಕ್ಷರ ಕೊಂಬಿನ ಸಮಸ್ಯೆಯು ಪದಾದಿ, ಪದಮಧ್ಯ, ಪದಾಂತ್ಯ ಎಲ್ಲಾ ಕಡೆಗಳಲ್ಲೂ ಕಾಣುತ್ತೇವೆ ಇಂತಹ ಸಮಸ್ಯೆಗೆ ಪ್ರಮುಖ ಕಾರಣವೆಂದರೆ,

* ಕಲಿಕಾರ್ಥಿಗಳಲ್ಲಿ ಹ್ರಸ್ವಕ್ಕೂ ದೀರ್ಘಕ್ಕೂ ವ್ಯತ್ಯಾಸ ಇಲ್ಲದಿರುವುದು.

೫.೩.೧೨. ಅರ್ಕಾವತ್ತು 'ೕ' ಅಕ್ಷರದ ಸಮಸ್ಯೆ

ಮೂಲರೂಪ	ಬರವಣಿಗೆ ರೂಪ
ನಿರ್ವಹಿಸು	ನಿರವಹಿಸು
ಕಾರ್ಮೋಡ	ಕಾರಮಾಡ
ಕರ್ಣ	ಕರಣ
ಖರ್ಚು	ಕರಚು
ಅರ್ಥ	ಅರತ
ದರ್ಪಣ	ದರಪಣ

ಪೆರ್ಮರ	ಪೆರಮರ
ವರ್ಣನೆ	ವರಣನೆ
ಧರ್ಮ	ಧರಮ
ಸಂಸರ್ಗ	ಸಸರಗ

ವಿಶ್ಲೇಷಣೆ :

* ಕಲಿಕಾರ್ಥಿಗಳಿಗೆ ಅರ್ಕಾವತ್ತು ಮತ್ತು ರೇಫೆಯ ಮಧ್ಯ ವ್ಯತ್ಯಾಸ ಅನಿಸದಿರುವುದು.
* ಬರವಣಿಗೆಯಲ್ಲಿ ಮಾತ್ರ ಅರ್ಕಾವತ್ತು ವ್ಯಂಜನದ ಮುಂದೆ ಬರುತ್ತದೆ ಆದರೆ ಉಚ್ಚರಣೆಯಲ್ಲಿ ವ್ಯಂಜನಾಕ್ಷರದ ಹಿಂದೆ ಬರುವುದರಿಂದ ರೇಫೆಯನ್ನು ಬಳಸುತ್ತಾರೆ.
* ಪರಿಸರ ಭಾಷೆಯಲ್ಲಿ ಅರ್ಕಾವತ್ತು ಬಳಸದಿರುವುದು.

೫.೩.೧೩. 'ಶ,ಷ' ಕಾರಕ್ಕೆ 'ಸ'ಕಾರ ಬಳಕೆ

ಮೂಲರೂಪ	**ಬರವಣಿಗೆ ರೂಪ**
ಶಿವ	ಸಿವ
ಶೀಲವಂತ	ಸಿಲವಂತ
ಶೂರ	ಸೂರ
ಶೂನ್ಯ	ಸೂನ್ಯ
ಷರಾ	ಸರಾ
ಷಟ್ಕೋನ	ಷಟಕೊನ

ವಿಶ್ಲೇಷಣೆ :

ಶ,ಷ, ಕಾರಕ್ಕೆ ಪದಬಳಕೆಯಲ್ಲಿ 'ಸ' ಅಕ್ಷರ ಬರುವುದಕ್ಕೆ ಕಾರಣ

* ಆಡುಭಾಷೆಯಲ್ಲಿ ಶ,ಷ,ಕ್ಕೆ ಹೆಚ್ಚಿನ ಬಳಕೆಯಿಲ್ಲದಿರುವುದು
* ಶ,ಷ,ಸ ಈ ಮೂರು ವರ್ಣಗಳಿಗೆ ಅರ್ಥವ್ಯತ್ಯಾಸವಿಲ್ಲದಿರುವುದು.
* ಶ,ಷ,ಸ ಗಳ ಉಚ್ಚಾರಣೆಯ ಒಂದೇ ರೀತಿಯಾಗಿ ಕೇಳುವುದರಿಂದ

ಅನುಸ್ವರಾಕ್ಷರ ಪದಬಳಕೆಯಲ್ಲಿ ಲೋಪ

ಮೂಲರೂಪ	**ಬರವಣಿಗೆ ರೂಪ**
ಅಂಬರ	ಅಬರ
ಏಕದಂತ	ಎಕದತ
ಅಂಕುರ	ಅಕುರ

ಕಿಂಕರ	ಕಿಕರ
ಕಾರಂಜಿ	ಕಾರಜಿ
ಎಂಜಲು	ಎಜಲು
ಇಂಧನ	ಇದನ
ಇಂದ್ರಾಣಿ	ಇದರಾಣಿ
ಆಂಗಿಕ	ಆಗಿಕ
ಅಂಟಿಸು	ಅಟಿಸು

ವಿಶ್ಲೇಷಣೆ :

ಅನುಸ್ವರ ಒಂದು ಅಕ್ಷರ ಎಂದು ಪರಿಗಣಿಸದೆ ಇರುವುದು.ಮತ್ತು ಪ್ರಾಥಮಿಕ ಹಂತದಿಂದಲೆ ಅನುಸ್ವರಯುಕ್ತ ಪದಗಳ ಅಭ್ಯಾಸ ಮಾಡದಿರುವುದು.

೫.೩.೧೪. ಪದಾಂತ್ಯ ವ್ಯಂಜನಲೋಪ

ಮೂಲರೂಪ	**ಬರವಣಿಗೆ ರೂಪ**
ಭೋಸ್	ಬೋಸ
ಬೊರೆಲ್	ಬೊರೆಲ
ಪ್ಯಾರಿಸ್	ಪ್ಯಾರಿಸ
ಬೆಳಗಲ್	ಬೆಳಗಲ
ಕಂಗಳ್	ಕಗಳ
ನೆಯ್ದಿಲ್	ನೆಯಿದಿಲ
ಮರಳ್	ಮರಳ
ಮಹತ್	ಮಹತ

ವಿಶ್ಲೇಷಣೆ :

* ಪದಾಂತ್ಯ ವ್ಯಂಜನಾಕ್ಷರಗಳು ಆಡು ಮಾತಿನ ಬಳಕೆಯಲ್ಲಿ ಇಲ್ಲದಿರುವುದು.
* ಪದಾಂತ್ಯದಲ್ಲಿ ವ್ಯಂಜನಾಕ್ಷರ ಇಲ್ಲದಿದ್ದರೂ ಅರ್ಥಕ್ಕೆ ಬಾದೆ ಬರದೆಯಿರುವುದು.
* ವ್ಯಂಜನಾಕ್ಷರಗಳ ಅಭ್ಯಾಸದ ಕೊರತೆ.
* ಪಠ್ಯದಲ್ಲಿರುವ ವ್ಯಂಜನಾಕ್ಷರಗಳನ್ನು ಕಲಿಕಾರ್ಥಿಗಳು ಗಮನಿಸದಿರುವುದು.
* ಪದಾಂತ್ಯದಲ್ಲಿನ ವ್ಯಂಜನಾಕ್ಷರದ ಪರಿಜ್ಞಾನವನ್ನು ಬೋಧಕರು ಕಲಿಕಾರ್ಥಿಗಳಿಗೆ ಮೂಡಿಸದೆ ಇರುವುದು.


ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ವ್ಯಂಜನಾಂತ್ಯ ಪದ ಬಳಕೆ ಕಡಿಮೆಯಿರುವುದರಿಂದ ಕಲಿಕಾರ್ಥಿಗಳು ವ್ಯಂಜನಾಂತ್ಯ ಪದಸಮಸ್ಯೆ ಎದುರಿಸುತ್ತಿದ್ದಾರೆ. ಈ ಪದಗಳ ಬರವಣಿಗೆ ಕ್ರಮವನ್ನು

ಗುರುತಿಸುವ ಸಲುವಾಗಿ ಪದಗಳನ್ನು ಹೇಳಿದಾಗ ಕಲಿಕಾರ್ಥಿಗಳು ಆಲಿಸಿ ಆ ಪದಗಳನ್ನು ಪದದ ಅಂತ್ಯದಲ್ಲಿ ವ್ಯಂಜನ ಲೋಪ ಮಾಡಿ ಬರೆದಿದ್ದಾರೆ ಇದಕ್ಕೆ ಪ್ರಮುಖ ಕಾರಣ ಅವರ ಪರಿಸರದ ಭಾಷೆಯಾಗಿದೆ.

ಕನ್ನಡ ಭಾಷಾ ಕಲಿಕಾರ್ಥಿಯಲ್ಲಿನ ಬರವಣಿಗೆ ಸಮಸ್ಯೆಯನ್ನು ಗುರುತಿಸುವ ಸಲುವಾಗಿ ಸ್ವಂತ ಲೇಖನವನ್ನು ಬರೆಸಿಕೊಳ್ಳಲಾಯಿತು. ಸ್ವಂತ ಲೇಖನ ಎಂದರೆ ಕಲಿಕಾರ್ಥಿ ತಿಳಿದುಕೊಂಡ ಒಂದು ಕತೆಯನ್ನು ಬರೆದುಕೊಡುವುದು. ಈ ಬರವಣಿಗೆಯಲ್ಲಿನ ಸಮಸ್ಯೆ ಹೇಗಿರುತ್ತದೆ ಎಂಬುದಕ್ಕೆ ಕಲಿಕಾರ್ಥಿಯ ಬರವಣಿಗೆಯನ್ನು ಉದಾಹರಣೆ ಅಥವಾ ಮಾದರಿಗಾಗಿ ಸ್ಕ್ಯಾನ್ ಮಾಡಿ ತೋರಿಸಲಾಗಿದೆ.

ಕಲಿಕಾರ್ಥಿಗಳಲ್ಲಿನ ವಾಕ್ಯ ರಚನೆ :

ಒಂದು ಪ್ರದೇಶದಲ್ಲಿ ಬಳಸುವಂತಹ ಪ್ರಾದೇಶಿಕ ಪದಗಳನ್ನು ಅಲ್ಲಿನ ಕಲಿಕಾರ್ಥಿಗಳು ತಮ್ಮ ಬರವಣಿಗೆಯಲ್ಲಿ ಹೇಗೆ ಬಳಸುತ್ತಾರೆಂಬುದನ್ನು ಗಮನಿಸಲಾಗಿದೆ. ಅದೇ ರೀತಿಯಾಗಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಕಲಿಕಾರ್ಥಿಗಳ ವಾಕ್ಯ ರಚನೆ ಕ್ರಮವನ್ನು ತಿಳಿದುಕೊಳ್ಳಲು ಅವರಿಂದ ಒಂದು ಸ್ವಂತ ಲೇಖನವನ್ನು ಬರೆಯಿಸಿಕೊಳ್ಳಲಾಯಿತು. ಬರವಣಿಗೆಯ ಒಂದು ಮಾದರಿಯನ್ನು ಯಥಾ ಪ್ರಕಾರ ಸ್ಕ್ಯಾನ್ ಮಾಡಿ ಹಾಕಲಾಗಿದೆ.



ಈ ಬರವಣಿಗೆ ಕ್ರಮ ಹೀಗೆದೆ "ನಾ ಮುಂಜಾನಿ ಎದ್ದು ಸಂಡಸ್ಕ ಒಗತ್ತಿನಿ ಒಗಿ ಬಂದಮ್ಯಾಗ ಎಂಡಕಸ ಮಾಡತ್ತಿನಿ. ಎಂಡಕಸ ತಿಪಿಗೆ ಚೆಲ್ಲಿಬರತ್ತಿನಿ ಬಂದ ಮ್ಯಾಗ ಅಲ್ಲ ತಿಕ್ಕತ್ತಿನಿ ಚಾ ಕುಡಿತಿನಿ. ನಮ್ಮ ಅವ್ವಗಕೆಳತ್ತಿನೀ ಯಾವ ಊಟಾ ಕೊಡು ಟೆಮ ಆಯಿತು ಸಾಲಿಗೆ ಹೋಗಬೇಕು" ಕಲಿಕಾರ್ಥಿಯ ಬರವಣಿಗೆ ಕ್ರಮ ಯಥಾ ಪ್ರಕಾರ ಸ್ಕ್ಯಾನ್ ಮಾಡಿ ಹಾಕಲಾಗಿದೆ.

* ನಾ ಮುಂಜಾನೆ ಎದ್ದು ಸಂಡಸ್ಕ ಓಗುತ್ತಿನಿ
* ಬಂದಮ್ಯಾಗ ಎಂಡಕಸ ಮಾಡತ್ತೀನಿ
* ಯಾವ ಊಟಾ ಕ್ವೊಡು

ಈ ಬರವಣಿಗೆ ಕ್ರಮದಲ್ಲಿ ಹೆಚ್ಚಾಗಿ ಮ್ಯಾಗ ಎಂಡಕಸ, ಯಾವ (ಅವ್ವ) ಈ ರೀತಿಯ ಪದಗಳನ್ನು ದಲಿತ (ಹಿಂದುಳಿದ) ಮಕ್ಕಳ ಭಾಷೆಯಲ್ಲಿ ಕಾಣಲಾಗಿದೆ. ಈ ಕಲಿಕಾರ್ಥಿಯು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದುದಲ್ಲದೆ ಒಬ್ಬ ದಲಿತ ವಿದ್ಯಾರ್ಥಿಯಾಗಿದ್ದಾನೆ. ಇವನ ಬರವಣಿಗೆ ಕ್ರಮದಲ್ಲಿಯು ತನ್ನ ಪರಿಸರದ ಭಾಷೆಯನ್ನು ಬಳಸಿದ್ದಾನೆ.

ದಲಿತೇತರ ಒಬ್ಬ ವಿದ್ಯಾರ್ಥಿಯ ಬರವಣಿಗೆ ಕ್ರಮವನ್ನು ಗಮನಿಸೋಣ.

"ನಾನು ಮುಂಜಾನೆ ಎದ್ದ ಮೇಲೆ ಹಾಸಗಿ ಮಡುಚುತ್ತಿನಿ ಆ ಮೇಲೆ ಹಲ್ಲ ತಿಕತ್ತಿನಿ ಹಲ್ಲು ತಿಕದ ಮೇಲೆ ಜಳಕ ಮಾಡತ್ತಿನಿ ಜಳಕ ಮಾಡದ ಮೇಲೆ ದೇವರ ಪೂಜೆ ಮಾಡತ್ತಿನಿ ಪೂಜೆ ಮಾಡಿದ ಮೇಲೆ ಸಾಲಿಗೆ ಬರುತ್ತೇನೆ."

ಇಲ್ಲಿ ದಲಿತ ಮತ್ತು ದಲಿತೇತರ ಎರಡು ವಾಕ್ಯ ರಚನೆಯನ್ನು ಗಮನಿಸಿದಾಗ ದಲಿತ ವಿದ್ಯಾರ್ಥಿಯ ಭಾಷೆಯಲ್ಲಿ 'ಮ್ಯಾಗ' ಎನ್ನುವ ಪದ ಬಳಕೆಯಾದರೆ ದಲಿತೇತರ ವಿದ್ಯಾರ್ಥಿ ಭಾಷೆಯಲ್ಲಿ ಮೇಲೆ ಎಂಬ ಪದ ಬಳಕೆಯಾಗಿದೆ. ದಲಿತ ವಿದ್ಯಾರ್ಥಿ ಸಾಲಿಗೆ ವೂಗತ್ತಿನಿ ಎಂದು ಹೇಳಿದರೆ, ಮತ್ತೋರ್ವ ವಿದ್ಯಾರ್ಥಿ ಸಾಲಿಗೆ ಬರುತ್ತೇನೆ ಎಂದು ಹೇಳಿರುವುದನ್ನು ಅವರವರ ಬರವಣಿಗೆಯಲ್ಲಿ ಗಮನಿಸಲಾಗಿದೆ.

ಈ ಎರಡು ವಿದ್ಯಾರ್ಥಿಗಳ ಬರವಣಿಗೆ ಕ್ರಮವನ್ನು ಗಮನಿಸಿದಾಗ ಒಬ್ಬ ವಿದ್ಯಾರ್ಥಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಕ್ಕೆ ಸೇರಿದವನು ಇನ್ನೊಬ್ಬ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಮುಂದುವರೆದ ಕುಟುಂಬಕ್ಕೆ ಸೇರಿದವನು ಇವರಿಬ್ಬರ ಬರವಣಿಗೆಯಲ್ಲಿ ಹೆಚ್ಚಾಗಿ ತಮ್ಮ ತಮ್ಮ ಕುಟುಂಬದ ಮತ್ತು ಪರಿಸರದ ಭಾಷೆಯ ಪ್ರಭಾವ ಹೆಚ್ಚಾಗಿರುವುದನ್ನು ಗಮನಿಸಲಾಗಿದೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು.

'ಇಂದಿನ ಹೊಸ ತಲೆಮಾರಿನ ದಲಿತ ಬರಹಗಾರರು ಯಾವ ಮಾದರಿಯ ಭಾಷೆಯನ್ನು ಬಳಸಬೇಕು ಎಂಬುದು ಮುಖ್ಯ ಪ್ರಶ್ನೆ. ಏಕೆಂದರೆ ಮೇಲ್ವರ್ಗದ ಭಾಷೆಯನ್ನು ನಾವು ಒಪ್ಪಿಕೊಂಡು ದಲಿತಬರಹ ಮಾಡಿದರೆ ಏನಾಗುತ್ತದೆ. ಅಂದರೆ ಭಾಷೆಯ ಜೊತೆಗೆ ಆ ವರ್ಗದ ಮೌಲ್ಯಗಳನ್ನು ಒಪ್ಪಿಕೊಂಡು ಅದೇ ಬರಹದಲ್ಲಿ ಮೂಡಬಹುದು ಮತ್ತು ಮೇಲ್ವರ್ಗದ ನಂಬಿಕೆಗಳು ಮೂಡಿಬರುವ

ಸಾಧ್ಯತೆಯಿರುತ್ತದೆ. ಭಾಷೆಯ ಮಾದರಿ ಬಳಕೆಯ ಜೊತೆಗೆ ಅವರ ಸಂಸ್ಕೃತಿಯೂ ಪ್ರವೇಶ ಪಡೆಯಬಹುದು ಆದ್ದರಿಂದ ಮೇಲ್ವರ್ಗದ ಭಾಷೆಯಲ್ಲಿ ಕೆಳವರ್ಗದ ಮೌಲ್ಯಗಳನ್ನು ಸಂಸ್ಕೃತಿಯನ್ನು ಹೇಳಲು ಸಾಧ್ಯವಾಗುತ್ತಿಲ್ಲ ಈ ಸಮಸ್ಯೆಯನ್ನು ನಮ್ಮ ಹೊಸ ತಲೆಮಾರಿನ ದಲಿತ ವಗ್ಗದ ಬರಹಗಾರರು ಚಿಂತಿಸಬೇಕಾಗಿದೆ ಎಂದು 'ಕನ್ನಡ ನುಡಿ ಬಳಕೆಯ ನೆಲೆಗಳು' ಈ ಕೃತಿಯಲ್ಲಿ ಪಿ. ಮಹಾದೇವಯ್ಯನವರು ಅಭಿಪ್ರಾಯಪಡುತ್ತಾರೆ. ಅದೇ ರೀತಿಯಾಗಿ 'ಕನ್ನಡ ಬರಹವನ್ನು ಸರಿಪಡಿಸೋಣ'? ಕೃತಿಯಲ್ಲಿ ಡಿ.ಎನ್. ಶಂಕರಭಟ್ ಅವರು ಕನ್ನಡ ಬರಹ ಎಲ್ಲಾ ವರ್ಗದ ಸೊತ್ತಾಗಬೇಕಾಗಿದೆ. ಇಲ್ಲಿಯವರೆಗೆ ಕೆಲವು ದಲಿತ ಮತ್ತು ಬಂಡಾಯ ಬರಹಗಾರರು ಸಂಸ್ಕೃತ ಪದಗಳ ಅತಿಯಾದ ಬಳಕೆಯಿಂದ ಸಾಮಾಜಿಕ ಸಂವಹನದಲ್ಲಿ ಏರುಪೇರಾಗಿರುವುದು ಕಂಡುಬರುತ್ತದೆ ಎಂದಿದ್ದಾರೆ.

ಈ ಚಿಂತಕರ ಅಭಿಪ್ರಾಯವನ್ನು ಗಮನಿಸಿದರೆ ಮೊದಲಿನಿಂದಲೂ ದಲಿತ ಭಾಷೆ ಮತ್ತು ಮೇಲ್ವರ್ಗದ ಭಾಷೆಯಲ್ಲಿ ವ್ಯತ್ಯಾಸ ಇರುವುದನ್ನು ಗುರುತಿಸಿದ್ದಾರೆ. ಅದೇ ರೀತಿಯಾಗಿ ಶಾಲಾ ಪರಿಸರದಲ್ಲಿಯೂ ಕಲಿಕಾರ್ಥಿಯ ಬರವಣಿಗೆಯ ಕ್ರಮವನ್ನು ಗಮನಿಸಿದರೆ ದಲಿತ ಭಾಷೆ ಮತ್ತು ಮೇಲ್ವರ್ಗದ ಭಾಷೆಯಲ್ಲಿ ವ್ಯತ್ಯಾಸವಿರುವುದನ್ನು ಗಮನಿಸಲಾಗಿದೆ.


ಶುದ್ಧಬರಹದ ಸಮಸ್ಯೆ

"ನೋಡಿ ಬರೆಯುವ (ಶುದ್ಧ) ಬರಹದಲ್ಲಿನ ಸಮಸ್ಯೆ"

ಮೂಲರೂಪ	**ಬರವಣಿಗೆ ರೂಪ**
ಮೇಲೆ	ಮೇಲ
ಮೊದಲಿಕೆ	ಮೂದಲಿಕೆ
ಕೊನೆಗೆ	ಕೊನಗೆ
ಹೊಲಕ್ಕೆ	ಹೂಲಕ್ಕೆ
ಕಾಡಿಗೆ	ಕಾಡಿಗ
ಬೆಳೆ	ಬೆಳ
ಖಡ್ಗ	ಖದ್ಗ
ಮೂರು	ಮಾರು
ಅಥವಾ	ಅಧವಾ
ಔಷದ	ಔಪದ
ಹನ್ನೊಂದು	ಹನ್ನೂಂದು

ಗಂಟೆ	ಗಂಟಾ
ಕರೆದು	ಕರೆದ
ಹಿಂದೆ	ಹಿಂದ

ಶುದ್ಧಬರಹದ ಒಂದು ಮಾದರಿ ಯಥಾ ಪ್ರಕಾರ ಸ್ಕ್ಯಾನ್ ಮಾಡಿ ಹಾಕಲಾಗಿದೆ.



ವಿಶ್ಲೇಷಣೆ :

ನೋಡಿ ಬರೆಯುವ ಬರಹದಲ್ಲಿಯೂ ಕಲಿಕಾರ್ಥಿಯು ಕೆಲವೊಂದು ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗುರುತಿಸಲಾಗಿದೆ. ಈ ಸಮಸ್ಯೆಗೆ ಕಾರಣಗಳು,

* ಕಲಿಕಾರ್ಥಿಯ ಆಲಸ್ಯ, ಬೇಗ ಬರೆದು ಮುಗಿಸಬೇಕು ಎಂಬ ಆತುರ, ಬೇರೆ ಕಡೆ ಲಕ್ಷ ವಹಿಸಿ ಬರೆಯುವುದರಿಂದ.

* ದೀರ್ಘಾಕ್ಷರಗಳಾದ ಮೊ,ಮಾ ಎರಡು ಒಂದೇ ರೀತಿ ಇದ್ದು ತಲೆಕಟ್ಟು ಮಾತ್ರ 'ಮೊ' ಅಕ್ಷರಕ್ಕೆ ಇರುತ್ತದೆ. ಇವೆರಡರಲ್ಲಿನ ವ್ಯತ್ಯಾಸ ಗಮನಿಸದಿರುವುದು.

* ಔ,ಜಾ ಅಕ್ಷರಗಳು ನೋಡುವುದಕ್ಕೆ ಒಂದೇ ರೀತಿ ಇದ್ದು ಅಲ್ಪ ವ್ಯತ್ಯಾಸ ಹೊಂದಿರುವುದರಿಂದ.

* ಥ,ಧ ಅಕ್ಷರಗಳು ಒಂದೇ ಹೋಲಿಕೆ ಇದ್ದು 'ಥ'ದಲ್ಲಿ ಒಂದು ಚುಕ್ಕೆ ಮಾತ್ರ ಇರುವುದನ್ನು ನಿರ್ಲಕ್ಷಿಸಿರುವುದರಿಂದ ಎರಡು ಒಂದೇ ಎನ್ನಿಸುತ್ತವೆ.

* ಆಡು ಭಾಷೆಯಲ್ಲಿ ಮೇಲ, ಕೆಳಗ ಬಳಕೆಯಿರುವುದರಿಂದ ತಲೆಕಟ್ಟು ಗಮನಿಸದೆ ಬರೆಯುವುದು.

ಈ ಸವಾಲನ್ನು ಎದುರಿಸುತ್ತಿರುವ ಕಲಿಕಾರ್ಥಿಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಇವರ ಓದುಗಾರಿಕೆ, ಬರವಣಿಗೆ, ಆಲಿಸುವಿಕೆಯಲ್ಲಿನ ಸಮಸ್ಯೆಗಳನ್ನು ಗಮನಿಸುವುದಾದರೆ ಎಲ್ಲಾ ಕಡೆ ಒಂದೇ ರೀತಿಯ ಸಮಸ್ಯೆ ಇರುವುದು ಕಂಡು ಬರುತ್ತದೆ.

ಇಂತಹ ಸಮಸ್ಯೆಗೆ ಮೂಲ ಕಾರಣ ಏನಿರಬಹುದು? ಎಂಬ ಪ್ರಶ್ನೆಗೆ ಸಿಕ್ಕ ಉತ್ತರ ಅವರವರ ಶೈಕ್ಷಣಿಕ ಸ್ಥಿತಿಗತಿ. ಆದರೆ ಈ ಕಲಿಕಾ ಸಮಸ್ಯೆಯು ಹೆಚ್ಚಾಗಿ ಕಂಡುಬಂದಿದ್ದು ಸರಕಾರಿ ಪ್ರೌಢ ಶಾಲೆಗಳಲ್ಲಿ. ಸರಕಾರಿ ಪ್ರೌಢಶಲೆಗಳಲ್ಲೆ ಏಕೆ ಕಲಿಕಾ ಸಮಸ್ಯೆ ಹೆಚ್ಚಾಗಿದೆ ಎಂದರೆ ಇಲ್ಲಿಯ ಮಕ್ಕಳ ಪಾಲಕರು ಆರ್ಥಿಕವಾಗಿ ಹಿಂದುಳಿದಿರುವುದು ಹಳ್ಳಿಯಲ್ಲಿಯೆ ಜೀವನ ಮಾಡುವುದರಿಂದ. ಅವರ ಮನೆಯಲ್ಲಿಯೂ ಅಷ್ಟೊಂದು ಶಿಕ್ಷಣವಂತರೂ ಇಲ್ಲದಿರುವುದು. ಹಾಗೂ ಇದರಿಂದ ಪಾಲಕರು ಮಕ್ಕಳನ್ನು ಶಾಲೆ ಬಿಡಿಸಿ ಹೊಲದ ಕೆಲಸಕ್ಕೆ ಕೂಲಿ ಕೆಲಸಕ್ಕೆ ಹೆಚ್ಚಾಗಿ ಕರೆದುಕೊಂಡು ಹೋಗುತ್ತಾರೆ. ಹೀಗೆ ಶಾಲೆಗೆ ಸತತ ಗೈರು ಹಾಜರಾಗುವ ಮಗುವಿನ ಭಾಷೆಯ ಮೇಲೆ ಹೆಚ್ಚಾಗಿ ಸಾಮಾಜಿಕ ಪರಿಸರದ ಭಾಷೆಯ ಪ್ರಭಾವ ಬೀರುತ್ತದೆ. ಹೀಗಾಗಿ ಇಂತಹ ಮಕ್ಕಳು ಭಾಷಾ ಕಲಿಕೆಯಲ್ಲಿ ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಾರೆ.

ಆದರೆ ಖಾಸಗಿ ಶಾಲೆಗಳು ಹಾಗಲ್ಲ. ಇಲ್ಲಿ ಪಾಲಕರು ಶಾಲೆಗೆ ಹೆಚ್ಚಿನ ಹಣಕಟ್ಟಿ ಮಕ್ಕಳಿಗೆ ಒಂದು ದಿನವೂ ಶಾಲೆ ಬಿಡಿಸದಂತೆ ಕಳುಹಿಸುತ್ತಾರೆ. ಹಾಗಾಗಿ ಇಲ್ಲಿಯ ಮಕ್ಕಳಲ್ಲಿ ಭಾಷಾ ಕಲಿಕಾ ಸಮಸ್ಯೆ ಕಡಿಮೆ ಪ್ರಮಾಣದಲ್ಲಿದೆ.

ಮಕ್ಕಳ ಭಾಷಾ ಕಲಿಕಾ ಸಮಸ್ಯೆ ಕುರಿತು.

ಖಾಸಗಿ ಶಾಲೆಗಳಿಗೂ ಸರಕಾರಿ ಶಾಲೆಗಳಿಗೂ ಇರುವ ನಡುವಿನ ವ್ಯತ್ಯಾಸಗಳು

ಸರಕಾರಿ ಶಾಲೆಗಳು	– ಖಾಸಗಿ ಶಾಲೆಗಳು
* ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಪಾಲಕರು ಆರ್ಥಿಕ ಪರಿಸ್ಥಿತಿಯಿಂದ	– * ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಪಾಲಕರ ಜವಬ್ದಾರಿ ಹೆಚ್ಚು.
* ಬೋಧಕರಿಗೆ ಬೋಧಿಸುವದಕ್ಕಿಂತ ಬೇರೆ ಬೇರೆ ಕೆಲಸಗಳ ಜವಬ್ದಾರಿ.	– * ಬೋಧಿಸುವುದೊಂದೆ ಜವಬ್ದಾರಿ.
* ಮಕ್ಕಳು ಹೆಚ್ಚಾಗಿ ಶಾಲೆ ತಪ್ಪಿಸುತ್ತಾರೆ.	– * ತಪ್ಪಿಸುವುದಿಲ್ಲ.
* ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಸಂಖ್ಯೆ ಹೆಚ್ಚಾಗಿರುತ್ತದೆ.	– * ಕಡಿಮೆಯಾಗಿರುತ್ತದೆ.
* ಗ್ರಾಮಿಣ ಪ್ರದೇಶದಲ್ಲಿರುವಂತಹ ಶಾಲೆಗಳು	– * ನಗರ ಪ್ರದೇಶದಲ್ಲೆ ಹೆಚ್ಚಾಗಿ ಇರುವಂತಹ ಶಾಲೆಗಳು.
* ಪರಿಸರದ ಭಾಷೆಯನ್ನೇ ಹೆಚ್ಚಾಗಿ ಬರೆಯುವುದರಲ್ಲಿ ಬಳಸುತ್ತಾರೆ.	– * ಪರಿಸರದ ಭಾಷೆಗಿಂತ ಗ್ರಂಥಸ್ಥ ಓದುವುದರಲಿ ಭಾಷಾ ಬಳಕೆ ಹೆಚ್ಚಾಗಿದೆ.
* ಕಲಿಕಾ ಪರಿಸರ ಇಲ್ಲದಿರುವುದು	– * ಕಲಿಕಾ ಪರಿಸರಕ್ಕೆ ಅನೂಕೂಲ ಮಾಡಿಕೊಡುತ್ತಾರೆ.
* ಬೋಧಕರ ಬೇಜವಬ್ದಾರಿತನ ಅಂದರೆ ಪಾಠ ಮಾಡಿದರೂ ಸಂಬಳ ಸಿಗುತ್ತೆ	– * ಜವಬ್ದಾರಿಯಿಂದ ಬೋಧಿಸುವಿಕೆ ಇಲ್ಲದಿದ್ದರೆ ಕೆಲಸದಿಂದ ತೆಗೆಯುವ ಭಯ
* ಮಕ್ಕಳು ಕಲಿತರೆ ಕಲಿಯಲಿ ಬಿಟ್ಟರೆ ಬಿಡಲಿ ಎನ್ನುವ ಮನೋಭಾವನೆ ಪಾಲಕರಲ್ಲಿ.	– * ಕಲಿಯಲೆ ಬೇಕು ಎನ್ನುವ ಒತ್ತಡದಿಂದ ಮನೆಯಲ್ಲಿ ಅಭ್ಯಾಸ ಮಾಡಿಸುತಾರೆ.
* ಕಲಿಕಾರ್ಥಿಗಳು ಕಲಿಯಲಿ ಬಿಡಲಿ ಮುಂದಿನ ತರಗತಿಗೆ ಉತ್ತಿರ್ಣ ಮಾಡಿ ಕಳುಹಿಸುವುದು.	– * ಕಲಿಕೆ ಸಾಧಿಸಿದ ಮಕ್ಕಳು ಮಾತ್ರ ಮುಂದಿನ ತರಗತಿಗೆ ಉತ್ತೀರ್ಣರಾಗುತ್ತಾರೆ.
* ಮನೆಗೆಲಸ ಬೋಧಕರು ಹೆಚ್ಚಾಗಿ ನೀಡದಿರುವುದು.	– * ಮನೆಗೆಲಸ ಹೆಚ್ಚಾಗಿ ನೀಡುವುದು.
* ಮನೆಯಲ್ಲಿ ಅಭ್ಯಾಸ ಮಾಡುವುದಕ್ಕೆ ಸೂಕ್ತ ಪರಿಸರ ಇಲ್ಲದಿರುವುದು.	– * ಓದುವುದಕ್ಕೆ ಸೂಕ್ತ ಪರಿಸರ ಕಲ್ಪಿಸುವುದು.

* ಬೋಧಕರಲ್ಲಿಯೂ ಕಲಿತರೆ ಕಲಿಯಲಿ ಬಿಟ್ಟರೆ – * ಕಲಿಸಲೇಬೇಕು ಎನ್ನುವ ಮನೋಭಾವ
ಬಿಡಲಿ ಎನ್ನುವ ಮನೋಭಾವ.

ಈ ರೀತಿಯಾಗಿ ಕಲಿಕಾ ಪ್ರಗತಿಯಲ್ಲಿ ಖಾಸಗಿ ಶಾಲೆಗಳು ಸರಕಾರಿ ಶಾಲೆಗಿಂತ ಉನ್ನತ ಸ್ಥಾನಗಳಲ್ಲಿರುವುದು. ಈ ಅಧ್ಯಯನದ ಸಮೀಕ್ಷೆಯ ಪ್ರಕಾರವೂ ಸರಕಾರಿ ಶಾಲೆಯ ಮಕ್ಕಳಿಗಿಂತ ಖಾಸಗಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಲ್ಲಿ ಕನ್ನಡ ಭಾಷಾ ಕಲಿಕೆಯ ಸಮಸ್ಯೆಯು ಕಡಿಮೆ ಪ್ರಮಾಣದಲ್ಲಿರುವುದನ್ನು ಗುರುತಿಸಲಾಗಿದೆ.ಇಂತಹ ವ್ಯತ್ಯಾಸಕ್ಕೆ ಪ್ರಮುಖ ಕಾರಣ ಕಲಿಕಾರ್ಥಿಗಳು ವಾಸಿಸುವ ಸುತ್ತಮುತ್ತಲಿನ ಪರಿಸರದ ಭಾಷೆಯ ಪ್ರಭಾವವು ಇಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅದೇ ರೀತಿಯಾಗಿ ಪಠ್ಯ ಪುಸ್ತಕಗಳಲ್ಲಿ ಪ್ರಾದೇಶಿಕ ಭಾಷಾ ಭಿನ್ನತೆಗೆ ಸಮಾನ ಸ್ಥಾನವನ್ನು ಒದಗಿಸದೆ ಇರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಖಾಸಗಿ ಶಾಲೆಯ ಭಾಷಾ ಕಲಿಕಾರ್ಥಿಗಳು ನಗರ ಭಾಷೆಯ ಪ್ರಭಾವಕ್ಕೆ ಒಳಗಾಗಿರುತ್ತಾರೆ. ನಗರಗಳ ಭಾಷೆಯು ಪಠ್ಯಪುಸ್ತಕದ ಭಾಷೆಗೆ ಹತ್ತಿರದ ಸಂಬಂಧವನ್ನು ಹೊಂದಿರುತ್ತದೆ.

ಹೀಗೆ ಕನ್ನಡ ಭಾಷಾ ಕಲಿಕಾರ್ಥಿಗಳು ಆಲಿಸುವಿಕೆ, ಓದುಗಾರಿಕೆ ಮತ್ತು ಬರವಣಿಗೆ ಕ್ರಮಗಳಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿದಾಗ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು.

ಟಿಪ್ಪಣಿಗಳು

೧. ಡಿಎಸ್‌ಇಆರ್‌ಟಿ, ೨೦೧೬, ***ಕನ್ನಡ ಕುಸುಮ,***

೨. ಎಸ್.ಬಿ.ಯಾದವಾಡ, ೨೦೦೭, ***ಶಿಕ್ಷಣ,*** ಪುಸ್ತಕ ಪುಟ ಸಂಖ್ಯೆ – ೩೪

೩. ಅದೇ ಪುಸ್ತಕ ಪುಟ ಸಂಖ್ಯೆ – ೩೪–೩೫

* * *

ಅಧ್ಯಾಯ : ಆರು

ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಪಠ್ಯಗಳ ಪಾತ್ರ

೬.೧. ಪಠ್ಯದ ಅರ್ಥ ಮತ್ತು ವ್ಯಾಖ್ಯೆಗಳು

೬.೨. ಪಠ್ಯಪುಸ್ತಕದ ಲಕ್ಷಣ ಮತ್ತು ಪ್ರಾಮುಖ್ಯತೆ

೬.೩. ವ್ಯಾಕರಣ ಕಲಿಕೆಯಿಂದ ಭಾಷಾ ಬೋಧನೆ

೬.೪. ಪ್ರಾದೇಶಿಕ ಭಾಷೆಗಳನ್ನು ಪರಿಚಯಿಸುವಲ್ಲಿ ಪಠ್ಯಗಳ ಪಾತ್ರ

೬.೫. ಪ್ರಸ್ತುತ ಪಠ್ಯಗಳ ಭಾಷೆಯ ಸ್ಥೂಲ ನೋಟ

೬.೬. ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆಯ ನಡುವಿನ ವ್ಯತ್ಯಾಸ

೬.೭. ಪಠ್ಯ ಪುಸ್ತಕ ರಚನೆಯಲ್ಲಿರುವ ಸಮಸ್ಯೆಗಳು

೬.೮. ಪಠ್ಯದ ಭಾಷೆಯಲ್ಲಿ ಇತಿ – ಮಿತಿಗಳು

ಅಧ್ಯಾಯ : ಆರು

ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಪಠ್ಯಗಳ ಪಾತ್ರ

ಶಿಕ್ಷಣದಲ್ಲಿ ಪಠ್ಯಪುಸ್ತಕ ಒಂದು ವಿಶಿಷ್ಟ ಸಾಧನ. ಪ್ರಾಥಮಿಕ, ಮಾಧ್ಯಮಿಕ ಹಂತಗಳಲ್ಲಿ ಪಠ್ಯ ಪುಸ್ತಕಗಳು ವ್ಯಾಪಕವಾಗಿ ಬಳಕೆಯಲ್ಲಿವೆ. ವಿವಿಧ ತರಗತಿಯಲ್ಲಿ ಬೋಧಿಸಲು ವ್ಯವಸ್ಥಿತ ರೀತಿಯಲ್ಲಿ ವಿಷಯ ಸೂಚಿಗಳನ್ನು ಹೊಂದಿಕೊಂಡಿರುವ ಪುಸ್ತಕಗಳಿಗೆ ಪಠ್ಯಪುಸ್ತಕಗಳೆಂದು ಕರೆಯುವರು. ಅವುಗಳ ಮುಖಾಂತರ ಶಿಕ್ಷಕರು ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡಲು ಸಾಧ್ಯವಿದೆ. ಪ್ರಾಚೀನ ಕಾಲದ ಕಲಿಕಾ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳಿಲ್ಲದೆ ಬಾಯ್ದೆರೆಯಾಗಿ ಶಿಷ್ಯಂದಿರು ತಮ್ಮ ಗುರುಗಳ ಸಮ್ಮುಖದಲ್ಲಿ ವಿದ್ಯೆಯನ್ನು ಕಲಿಯುತ್ತಿದ್ದರು. ಅಲ್ಲಿ ಯಾವುದೇ ರೀತಿಯ ನಿಯಮವಿರಲಿಲ್ಲ. ಎಷ್ಟು ಕಲಿಸಬೇಕು ಹೇಗೆ ಕಲಿಸಬೇಕೆಂಬ ನಿಯಮವಿರಲಿಲ್ಲ. ಅಂದಿನ ಅನೌಪಚಾರಿಕ ಶಿಕ್ಷಣ ಮಾಯವಾಗಿ ಇಂದಿನ ಔಪಚಾರಿಕ ಶಿಕ್ಷಣ ಪದ್ಧತಿಯಲ್ಲಿ ಮುದ್ರಣ ಸೌಕರ್ಯಗಳು ಬಳಕೆಗೆ ಬಂದಂತೆ ಎಲ್ಲಾ ವಿಷಯಗಳಲ್ಲಿಯು ಪುಸ್ತಕಗಳು ಮುದ್ರಣವಾಗಿ ಬಳಕೆಗೆ ಬಂದವು.

ಪಠ್ಯಪುಸ್ತಕ ಎಂದಾಕ್ಷಣ ನಾವು ನೋಡುವ ಎಲ್ಲಾ ಪುಸ್ತಕಗಳು ಪಠ್ಯಪುಸ್ತಕಗಳಾಗುವುದಿಲ್ಲ. ಸಮಾಜದ ಅನುಭವಗಳನ್ನೊಳಗೊಂಡ ಸಾಹಿತ್ಯ ಕೃತಿಗಳೆಲ್ಲ ಪಠ್ಯಪುಸ್ತಕಗಳಾಗುವುದಿಲ್ಲ. ತರಗತಿಯಲ್ಲಿ ಉಪಯೋಗಿಸುವುದಕ್ಕಾಗಿ ಪರಿಣಿತರು ಎಚ್ಚರಿಕೆಯಿಂದ ಸಿದ್ದಪಡಿಸಿದ ಮತ್ತು ಬೋಧನೆಗೆ ಅವಶ್ಯಕವಾದ ಸಹಾಯಕ ಸಾಮಗ್ರಿ, ವಿಷಯಗಳನ್ನೊಳಗೊಂಡ ಪುಸ್ತಕವೆ ಪಠ್ಯಪುಸ್ತಕ. ಶಿಕ್ಷಣದ ಧ್ಯೇಯ ಉದ್ದೇಶಗಳಿಗನುಗುಣವಾಗಿ ಒಂದು ನಿರ್ದಿಷ್ಟ ತರಗತಿಗೆ ನಿರ್ದಿಷ್ಟ ವಿಷಯಗಳನ್ನು ಪರಿಣಿತರು ವ್ಯವಸ್ಥಿತವಾಗಿ, ಕ್ರಮಬದ್ದವಾಗಿ ಸಂಗ್ರಹಿಸಿ ಸಿದ್ದಪಡಿಸಿರುವ ಹೊತ್ತಿಗೆಯನ್ನು ಪಠ್ಯಪುಸ್ತಕ ಎನ್ನಬಹುದು.

೬.೧. ಪಠ್ಯದ ಅರ್ಥ ಮತ್ತು ವ್ಯಾಖ್ಯೆಗಳು

ಅರ್ಥ :

ಪಠ್ಯಕ್ರಮವನ್ನು ಇಂಗ್ಲಿಷ್‌ನಲ್ಲಿ Curriculum ಎಂದು ಕರೆಯುತ್ತೇವೆ. 'ಕರಿಕ್ಯೂಲಮ್' ಎಂಬ ಪದವು ಲ್ಯಾಟಿನ್ ಭಾಷೆಯ Currer ಎಂಬ ಶಬ್ದದಿಂದ ಬಂದಿದೆ. ಅಂದರೆ ಗುರಿಯನ್ನು ಮುಟ್ಟಲು ಓಡುವ ವಿಧಾನ ಅಥವಾ ಪಥ ಎಂಬ ಅರ್ಥವಿದೆ. ಇಂತಹ

ವ್ಯಾಖ್ಯೆಗಳು:

*** ರ್‍ಯಾಡಂ ಹೌಸ್ ಡಿಕ್ಷನರಿಯ ಪ್ರಕಾರ :**

"ಪಠ್ಯಪುಸ್ತಕ ಎಂದರೆ ಪಠ್ಯಪುಸ್ತಕವು ಒಂದು ನಿರ್ದಿಷ್ಟ ವಿಷಯದ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳು ಉಪಯೋಗಿಸುವಂತಹ ಉತ್ತಮ ಗುಣಮಟ್ಟದ ಪುಸ್ತಕವಾಗಿರುತ್ತದೆ" ಎನ್ನಲಾಗಿದೆ. ಅಂದರೆ ಒಂದು ನಿರ್ದಿಷ್ಟ ತರಗತಿಗಳಿಗೆ ಮಕ್ಕಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿ ಪಠ್ಯಗಳು ರಚನೆಗೊಂಡಿರುತ್ತವೆ. ಅಂತಹ ಪುಸ್ತಕಗಳು ಬೋಧನೆಗೆ ಮತ್ತು ಅಧ್ಯಯನಕ್ಕೆ ಸಹಾಯಕವಾಗುತ್ತವೆ.

*** ಕ್ರೋ ಮತ್ತು ಕ್ರೋ ರವರ ಪ್ರಕಾರ :**

"ಮಕ್ಕಳ ಅನುಭವಗಳನ್ನು ವೃದ್ಧಿಗೊಳಿಸಿ ಆ ಮೂಲಕ ಭೌತಿಕ, ಮಾನಸಿಕ, ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳನ್ನು ಬೆಳೆಸುವುದೇ ಪಠ್ಯವಸ್ತು" ಎಂದಿದ್ದಾರೆ. ಈ ಮೇಲಿನ ಎಲ್ಲಾ ಅಂಶಗಳು ಪಠ್ಯವು ಬೆಳೆಸುವುದರೊಂದಿಗೆ ಕಲಿಕಾರ್ಥಿಯಲ್ಲಿ ಪ್ರಮುಖವಾಗಿ ಭಾಷಾ ಪ್ರೌಢಿಮೆಯನ್ನು ಪಠ್ಯ ಪುಸ್ತಕ ಬೆಳೆಸುತ್ತದೆ.

*** ಕಾರ್ಟರ್ ವಿಗುಡ್‌ರ ಪ್ರಕಾರ :**

"ಬೋಧನಾ ವಿಷಯಗಳನ್ನು ಸಮರ್ಪಕ ರೀತಿಯಲ್ಲಿ ಅಳವಡಿಸಿ ವ್ಯಕ್ತಿಯ ಜೀವನೋಪಾಯಕ್ಕೆ ಅನುಕೂಲವಾದ ವ್ಯಕ್ತಿಯನ್ನವಲಂಬಿಸುವಂತೆ ಮಾಡುವ ಶಿಕ್ಷಣ ವ್ಯವಸ್ಥೆಯೇ ಪಠ್ಯವಸ್ತು".

*** ಕ್ಯಾರೆನ್ ಕುಕ್ಸ್ ರವರ ಪ್ರಕಾರ :**

"ಮಕ್ಕಳ ವಯಸ್ಸು ಮತ್ತು ಕಲಿಯುವ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಯೋಜನಾಬದ್ಧವಾಗಿ ರೂಪಿಸಿದಂತಹ ವಿಷಯಗಳ ಸಮೂಹವೆ ಪಠ್ಯವಸ್ತು".

*** ಜಾನ್ ಡ್ಯೂಯಿರವರ ಪ್ರಕಾರ :**

"ಕೌಟುಂಬಿಕ ಜೀವನದ ಇಂದಿನ ಅಗತ್ಯಗಳಿಗೆ ಅನುಗುಣವಾಗಿ ಅನೇಕ ವಿಷಯಾಂಶಗಳನ್ನು ಒಳಗೊಂಡಿದ್ದು, ಅದು ಮಕ್ಕಳ ಮುಂದಿನ ಭವಿಷ್ಯ ರೂಪಿಸಲು ಸಹಾಯವಾಗುವುದೇ ಪಠ್ಯವಸ್ತು".

*** ರಾಜೇಶ ಇ.ಬೆಳ್ಳೇರ್ ರವರ ಪ್ರಕಾರ :**

"ಜ್ಞಾನದ ಎಲ್ಲಾ ವಲಯವನ್ನು ನೀಡುವ ಮತ್ತು ಮಕ್ಕಳ ಪೂರ್ಣ ಬೆಳವಣಿಗೆಗೆ ಪ್ರೇರಣೆಯನ್ನು ಒದಗಿಸುವ ಒಟ್ಟು ಮೊತ್ತವೆ ಪಠ್ಯವಸ್ತು".[೧]

೬.೨. ಪಠ್ಯಪುಸ್ತಕದ ಲಕ್ಷಣ ಮತ್ತು ಪ್ರಾಮುಖ್ಯತೆ

* ಪಠ್ಯಕ್ರಮವು ಸಮಾಜದ ಫಲಾಪೇಕ್ಷೆಯನ್ನು ಮತ್ತು ಅವಶ್ಯಕತೆಗಳನ್ನು ಒಳಗೊಂಡಿರಬೇಕು.

* ಪಠ್ಯಕ್ರಮವು ಕೇವಲ ಸಾಂಪ್ರದಾಯಿಕ ಬೋಧನಾ ವಿಷಯಗಳ ಬದಲು ಮಕ್ಕಳ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ರಚನೆಯಾಗಬೇಕು.

* ಪಠ್ಯಪುಸ್ತಕವು ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಬೇಕು.
* ಪಠ್ಯಪುಸ್ತಕವು ಭಾಷಾ ತರಬೇತಿ ನೀಡುವ ಮತ್ತು ಪಠ್ಯೇತರ ಹಾಗೂ ಪಠ್ಯಪೂರಕ ವಿಷಯಗಳ ಅಭ್ಯಾಸವನ್ನು ಒಳಗೊಂಡಿರಬೇಕು.
* ಪಠ್ಯಪುಸ್ತಕವು ಕಲಿಕಾರ್ಥಿಗಳಿಂದ ಕಲಿಕಾರ್ಥಿಗಳಿಗೆ ವ್ಯತ್ಯಾಸ ಹೊಂದಿರಬೇಕು.
* ಪಠ್ಯಪುಸ್ತಕವು ಕಲಿಯುವವರ ಮತ್ತು ಬೋಧಿಸುವವರ ಮಾರ್ಗದರ್ಶಿಯಾಗಿರಬೇಕು.
* ಪಠ್ಯಕ್ರಮವು ಕಲಿಕಾರ್ಥಿಗಳಿಗೆ, ಬೋಧಕರಿಗೆ ಜ್ಞಾನದ ಚೌಕಟ್ಟನ್ನು ನೀಡಿ ಬೋಧನೆ ಮತ್ತು ಕಲಿಕೆಗೆ ಸೂಕ್ತ ಸಂಪನ್ಮೂಲಗಳನ್ನು ಒದಗಿಸುತ್ತದೆ.
* ಬೋಧಕ ವರ್ಗದವರಿಗೆ ಇದು ಕೈಪಿಡಿಯಾಗಿ ಕಾರ್ಯನಿರ್ವಹಿಸುತ್ತದೆ.
* ತರಗತಿಯ ಒಳಗೆ ಭಾಷಾ ವಿಷಯಗಳನ್ನು ಶಿಸ್ತು ಬದ್ಧವಾಗಿ ಚರ್ಚೆಯಾಗಲು ಪ್ರೇರೇಪಿಸುತ್ತದೆ.
* ಪಠ್ಯಪುಸ್ತಕವು ಕಲಿಕಾರ್ಥಿಗಳಿಗೆ ಕುತೂಹಲ ಮನೋಭಾವನೆಯನ್ನು ಬೆಳೆಸುವಂತಿರಬೇಕು.[೨]

ಇಂತಹ ಲಕ್ಷಣ ಮತ್ತು ಪ್ರಾಮುಖ್ಯತೆಯನ್ನು ಒಳಗೊಂಡಂತಹ ಪಠ್ಯಪುಸ್ತಕಗಳು ಭಾಷೆಯನ್ನು ಕಲಿಸುವಲ್ಲಿ ವ್ಯಾಕರಣ ಸಹಾಯದೊಂದಿಗೆ ಬೋಧಕರು ಭಾಷೆಯನ್ನು ಹೇಗೆ ಬೋಧಿಸುತ್ತಾರೆ ಎಂಬುದನ್ನು ಈ ಲಕ್ಷಣಗಳು ಅರ್ಥೈಸುತ್ತವೆ.

೬.೩. ವ್ಯಾಕರಣ ಕಲಿಕೆಯಿಂದ ಭಾಷಾ ಬೋಧನೆ

ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇವರ ಮನೆಮಾತು ಕನ್ನಡವೇ ಆಗಿದ್ದರೂ ಅದು ಪರಿಸರ ಭಾಷೆಯಾಗಿರುತ್ತದೆ. ಪರಿಸರದ ಭಾಷೆಗೂ ಪಠ್ಯದ ಭಾಷೆಗೂ ವ್ಯತ್ಯಾಸವಿರುವುದರಿಂದ ಗ್ರಂಥಸ್ಥ ರೂಪದ ವ್ಯಾಕರಣ ಕಲಿಸಬೇಕಾಗುತ್ತದೆ. ಇದರಿಂದ ಕಲಿಕಾರ್ಥಿಗಳಲ್ಲಿನ ಭಾಷಾ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಹಾಗೆಂದು ಪರಿಸರದ ಕನ್ನಡ ಭಾಷೆಯಲ್ಲಿ ವ್ಯಾಕರಣ ಇಲ್ಲವೇ? ಎಂದು ಕೇಳಬಹುದು ಪರಿಸರ ಭಾಷೆಯಲ್ಲಿಯೂ ವ್ಯಾಕರಣವಿದ್ದರೂ ಅದು ಕಲಿಕಾರ್ಥಿಗಳಿಗೆ ತಿಳಿಯವುದಿಲ್ಲ. ಉದಾಹರಣೆಗೆ : 'ನಾ ಸಾಲಿಗಿ ಹೋಗತ್ತಿನಿ' ಈ ವಾಕ್ಯದಲ್ಲಿ ಕರ್ತೃ, ಕರ್ಮ ಕ್ರಿಯೆ ಮೂರು ಪದಗಳೂ ಇವೆ. ಆದರೆ ಇದೆ ಕರ್ತೃ, ಕರ್ಮ, ಕ್ರಿಯೆ ಎಂದು ತಿಳಿಸಿಕೊಡುವುದು ಪಠ್ಯ ಪುಸ್ತಕದಲ್ಲಿರುವ ವ್ಯಾಕರಣಾಂಶವೆಂದು ಹೇಳಬಹುದು. ಈ ವಾಕ್ಯರಣಾಂಶ ಕಲಿಸುವುದರಿಂದ ಕಲಿಕಾರ್ಥಿಗಳಿಗೆ ವಾಕ್ಯರಚನೆಯ ನಿಯಮ ಮತ್ತು ಗ್ರಂಥಸ್ಥ ಭಾಷೆಯನ್ನು ಪರಿಚಯಿಸುವುದು ವ್ಯಾಕರಣ ಕಲಿಕೆಯ ಉದ್ದೇಶವಾಗಿದೆ.

೮, ೯ ಮತ್ತ ೧೦ನೇ ತರಗತಿಗಳಿಗೆ ನಿಗಧಿಪಡಿಸಿರುವ ಕನ್ನಡ ಭಾಷಾ ಪಠ್ಯ ಪುಸ್ತಕದ ಒಳಗೆ ಪ್ರತಿ ಪಾಠ ಮತ್ತು ಪದ್ಯದ ಹಿಂದೆ ಭಾಷಾಭ್ಯಾಸವನ್ನು ನೀಡಲಾಗಿದೆ. ಈ ಭಾಷಾಭ್ಯಾಸದಲ್ಲಿ ವ್ಯಾಕರಣದ ಅಂಶವನ್ನು ಬೋಧಿಸಲು ತಿಳಿಸಲಾಗಿದೆ.

ಆದ್ದರಿಂದ ವ್ಯಾಕರಣವನ್ನು ಕಲಿಕಾರ್ಥಿಗಳಿಗೆ ಬೋಧಿಸುವಾಗ ಭಾಷೆಯ ಒಳ ತಿರುಳು ಹೇಗಿದೆ ಎಂಬುದನ್ನು ಬಿಡಿ ಬಿಡಿಯಾಗಿ ಬೋಧಿಸಲು ಅನುಕೂಲವಾಗುತ್ತದೆ. ಅಂತಹ ಅಂಶಗಳನ್ನು ಈ ಕೆಳಕಂಡಂತೆ ಅರ್ಥೈಸಲಾಗಿದೆ.

ತತ್ಸಮ	**ತತ್ಭವ**
ಮೂರ್ತಿ	ಮೂರುತಿ
ಮುಖ	ಮೊಗ
ಕಾವ್ಯ	ಕಬ್ಬ
ಭೂಮಿ	ಬುವಿ
ಜನ್ಮ	ಜನುಮ
ವರ್ಷ	ವರುಷ
ಕ್ಷಣ	ಚಣ

ಭಾಷೆಯನ್ನು ಬೋಧಿಸುವಾಗ ವ್ಯಾಕರಣಾಂಶ ಗುರುತಿಸಿ ಕಲಿಕಾರ್ಥಿಗಳಿಗೆ ಬೋಧಿಸುವುದು, 'ತತ್ಸಮ' ಎಂದರೆ ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಶಬ್ದಗಳು. 'ತತ್ಭವ' ಎಂದರೆ ಸಂಸ್ಕೃತ ಶಬ್ದ ಕನ್ನಡದಲ್ಲಿ ಬಳಕೆಯಲ್ಲಿ ಬಂದ ರೂಪ.

ತತ್ಸಮ ಪದಗಳನ್ನು ಕನ್ನಡ ಭಾಷೆಯ ಪದಗಳೊಂದಿಗೆ ಸೇರಿಸಿ ಹೇಳುವ ಪದಗಳು ಎಂದು ಕರೆದರೆ ತಪ್ಪಾಗಲಾರದು. ಉದಾಹರಣೆಗೆ ಕನ್ನಡ ಭಾಷಾ ಕಲಿಕಾರ್ಥಿಯು ಒಂದು ವಾಕ್ಯವನ್ನು ಹೀಗೆ ಹೇಳುತ್ತಾನೆ. 'ನಾನು ಹಾವು ನೋಡಿ ಒಂದು ಕ್ಷಣ ಭಯಗೊಂಡೆ'. ಇಲ್ಲಿ ಗೆರೆ ಎಳೆದಿರುವ ಪದ 'ಸಂಸ್ಕೃತ' ಇಂತಹ ಹಲವಾರು ಸಂಸ್ಕೃತ ಪದಗಳು ಕನ್ನಡ ಭಾಷೆಯಲ್ಲಿ ದಿನನಿತ್ಯ ಬಳಕೆಯಾಗುತ್ತಿವೆ. 'ಕ್ಷಣ'ದ ತತ್ಭವ ರೂಪ 'ಚಣ' ಇದು ಗ್ರಾಂಥಿಕ ರೂಪದಲ್ಲಿ ಪುಸ್ತಕಕ್ಕೆ ಮಾತ್ರ ಸೀಮಿತಗೊಂಡಿದೆ. ಇಂತಹ ಹಲವಾರು ತತ್ಭವ ಕನ್ನಡ ಪದಗಳು ಕನ್ನಡ ಭಾಷೆಯಲ್ಲಿ ಬಳಕೆಯಾಗದೆ ಕೇವಲ ಪುಸ್ತಕಕ್ಕೆ ಮಾತ್ರ ಸಿಮಿತವಾಗಿ ಕನ್ನಡ ಭಾಷೆಯಲ್ಲಿ ಕನ್ನಡ ಪದಗಳು ಮರೀಚಿಕೆಯಾಗುತ್ತಿವೆ. ಇಂತಹ ಪದಗಳನ್ನು ಗುರುತಿಸಿ ಭಾಷಾ ಬೋಧಕರು ಬೋಧನೆಯಲ್ಲಿ ಹೆಚ್ಚಾಗಿ ಕನ್ನಡ ಪದಗಳನ್ನು ಬಳಸಿದಾಗ ಕಲಿಕಾರ್ಥಿಗಳ ಮೇಲೆ ಕನ್ನಡ ಭಾಷೆಯ ಪ್ರಭಾವ ಹೆಚ್ಚಾಗಿ ಬೀರುತ್ತದೆ.

ಸಮನಾರ್ಥಕ ಪದಗಳು :

ಸಮನಾರ್ಥಕ ಪದಗಳು ಎಂದರೆ ಒಂದು ಪದಕ್ಕೆ ಸಮನಾಗಿ ಬೇರೆ ಬೇರೆ ರೀತಿಯಲ್ಲಿ ಕರೆಯುವುದಕ್ಕೆ ಸಮನಾರ್ಥಕ ಪದಗಳು ಎಂದು ಕರೆಯುತ್ತಾರೆ. ಉದಾಹರಣೆಗೆ,

ಪದಗಳು	=	**ಸಮಾನಾರ್ಥ ಪದಗಳು**
ಶಿವ	=	ಈಶ್ವರ, ಹರ, ಮಹಾದೇವ
ಸಮುದ್ರ	=	ಕಡಲು, ಸಾಗರ, ಮುನ್ನಿರು
ಅರಣ್ಯ	=	ಕಾಡು, ಅಡವಿ, ಕಾನನ
ಚಪ್ಪರ	=	ಗುಡಿಸಲು, ಹಂದರ, ಮೇಲು ಛಾವಣಿ

ಈ ರೀತಿಯಾಗಿ ಕಲಿಕಾರ್ಥಿಗಳಿಗೆ ಎಲ್ಲಾ ಪದಗಳ ಪರಿಚಯ ಇಲ್ಲದಿದ್ದರು ಕೆಲವೊಂದು ಪದಗಳ ಪರಿಚಯ ಇದ್ದೆ ಇರುತ್ತದೆ. ಆಗ ಕನ್ನಡ ಭಾಷಾ ಬೋಧಕರಾದವರು ಪಠ್ಯವನ್ನು ಬೋಧಿಸುವಾಗ ಒಂದು ಪದಕ್ಕೆ ಇರುವ ನಾನಾರ್ಥಗಳನ್ನು ವಿವರಿಸಿ ಹೇಳಿದಾಗ ಕಲಿಕಾರ್ಥಿಯು ಅರ್ಥೈಸಿಕೊಳ್ಳುತ್ತಾನೆ. ಆಗ ಭಾಷೆಯು ಬಲಿಷ್ಟಗೊಳ್ಳುತ್ತದೆ.

ನಾಮಪದಗಳು :

ನಾಮಪದಗಳನ್ನುಂಟು ಮಾಡುವ ಮೂಲರೂಪವೇ 'ನಾಮಪ್ರಕೃತಿ' ಅಥವಾ 'ಪ್ರಾತಿಪದಿಕ' ಎನಿಸುವುದು. ಇಂತಹ ನಾಮ ಪ್ರಕೃತಿಗಳು ಮುಂದೆ ನಾಮ ವಿಭಕ್ತಿ ಪ್ರತ್ಯಯಗಳು ಸೇರಿದಾಗ ನಾಮಪದಗಳಾಗುತ್ತವೆ. ನಾಮಪದಗಳು ಮನುಷ್ಯ, ಪ್ರಾಣಿ, ವಸ್ತು, ಮೊದಲಾದವುಗಳ ಹೆಸರು ಹೇಳುವ ಶಬ್ದಗಳಾಗಿವೆ. ಇಂತಹ ನಾಮಪದಗಳನ್ನು ಪಠ್ಯದಲ್ಲಿ ಬೋಧಿಸುವಾಗ ಬೋಧಕರು ಯಾವ ರೀತಿಯಾಗಿ ಬೋಧಿಸಿದರೆ ಕಲಿಕಾರ್ಥಿಗಳು ಅರ್ಥೈಸಿಕೊಳ್ಳುತ್ತಾರೆ ಎಂಬುದನ್ನು ಪಠ್ಯದಲ್ಲಿರುವ ವ್ಯಾಕರಣಾಂಶವು ತಿಳಿಸಿಕೊಡುತ್ತದೆ. ಉದಾಹರಣೆಗೆ ವಸ್ತುವಾಚಕ ನಾಮಪದಗಳಲ್ಲಿ ಮೂರು ಪ್ರಕಾರಗಳು.

೧) ರೂಢನಾಮ ೨) ಅಂಕಿತನಾಮ ೩) ಅನ್ವರ್ಥಕನಾಮ

೧) ರೂಢನಾಮ ಎಂದರೆ ರೂಢಿಯಿಂದ ಬಂದಂತಹ ಹೆಸರುಗಳಿಗೆ ರೂಢನಾಮ ಎಂದು ಕರೆಯುತ್ತೇವೆ.

ಉದಾಹರಣೆಗೆ : ಗುಡ್ಡ, ಬೆಟ್ಟ, ನದಿ, ಪರ್ವತ, ಇತ್ಯಾದಿ.

೨) ಅಂಕಿತನಾಮ : ವ್ಯವಹಾರಕ್ಕಾಗಿ ಅಥವಾ ಗುರುತಿಸಲು ಇಟ್ಟ ಹೆಸರುಗಳು.

ಉದಾಹರಣೆಗೆ: ಕಾವೇರಿ, ನಕುಲ, ಹಿಮಾಲಯ, ಶಿವ ಇತ್ಯಾದಿ.

೩) ಅನ್ವರ್ಥನಾಮ : ಅರ್ಥಕ್ಕೆ, ಅನುಗುಣವಾಗಿ ರಚನೆಯಾದ ಹೆಸರುಗಳು.

ಉದಾ : ವ್ಯಾಪಾರಿ, ರೋಗ, ಕುರುಡ, ಕುಂಟ ಇತ್ಯಾದಿ.

ಇದೇ ರೀತಿಯಾಗಿ ಗುಣವಾಚಕ, ಸಂಖ್ಯಾವಾಚಕ, ಭಾವನಾಮ, ಪರಿಮಾಣವಾಚಕ, ದಿಗ್ವಾಚಕ, ದರ್ಶಕ ನಾವಾಚಾಕಗಳನ್ನು ತಿಳಿದುಕೊಳ್ಳಬಹುದು. ಈ ಎಲ್ಲಾ ನಾಮವಾಚಕಗಳು ದಿನನಿತ್ಯ ಕಲಿಕಾರ್ಥಿಯು ತನ್ನ ಪರಿಸರ ಭಾಷೆಯಲ್ಲಿಯೆ ಆಗಲಿ, ಶಾಲಾ ಪರಿಸರದಲ್ಲಿಯೇ ಆಗಲಿ ಬಳಸುತ್ತಿರುತ್ತಾನೆ. ಆದರೆ ವ್ಯಾಕರಣಾಂಶ ಪದಗಳು ಇವೆ ಎಂದು ತಿಳಿದಿರುವುದಿಲ್ಲ. ಹಾಗಾಗಿ ಪಠ್ಯದ ಭಾಷೆಯನ್ನು ಕಲಿಕಾರ್ಥಿಯ ಭಾಷೆಗೆ ಹೋಲಿಸಿ ತಿಳಿಸಿಕೊಡುವ ಕಾರ್ಯ ಬೋಧಕರದ್ದಾಗಿದೆ.

ನಾಮ ವಿಭಕ್ತಿಗಳು, ಪ್ರತ್ಯಯ, ಕಾರಕಗಳು :

ನಾಮಪದಗಳಿಗೆ ಸೇರಿದ ಪ್ರತ್ಯಯಗಳಿಗೆ 'ನಾಮವಿಭಕ್ತಿ ಪ್ರತ್ಯಯ'ಗಳೆನ್ನುವರು. ಈ ಪ್ರತ್ಯಯಗಳಿಗೆ ಸ್ವತಂತ್ರ ಅರ್ಥ ಇರುವುದಿಲ್ಲ. ಆದರೆ ಇವು ವಾಕ್ಯದಲ್ಲಿಯ ನಾಮಪದ ಕ್ರಿಯಾಪದ ಮತ್ತು ಇತರ ಎಲ್ಲಾ ಪದಗಳಿಗೆ ಇರುವ ಸಂಬಂಧಾರ್ಥವನ್ನು ತಿಳಿಸುತ್ತವೆ. ಈ ಪ್ರತ್ಯಯಗಳು ವಸ್ತುವಾಚಕ ನಾಮಗಳಿಗಲ್ಲದೇ ಸರ್ವನಾಮ, ವಿಶೇಷಣ. ಭಾವನಾಮಗಳಿಗೂ ಸೇರುತ್ತವೆ.

ಸಂ.	ವಿಭಕ್ತಿಗಳು	ಕಾರಕಗಳು	ಹೊಸಗನ್ನಡ ಪ್ರತ್ಯಯಗಳು
೦೧	ಪ್ರಥಮಾ	ಕರ್ತೃ	ಉ
೦೨	ದ್ವಿತೀಯ	ಕರ್ಮ	ಅನ್ನು
೦೩	ತೃತೀಯಾ	ಕರಣ	ಇಂದ
೦೪	ಚತುರ್ಥೀ	ಸಂಪ್ರದಾನ (ಸಾಧನ)	ಗೆ, ಇಗೆ, ಕ್ಕೆ, ಅಕ್ಕೆ
೦೫	ಪಂಚಮೀ	ಅಪದಾನ (ಅಗಲುವಿಕೆ)	ದೆಸೆಯಿಂದ
೦೬	ಷಷ್ಠೀ	ಸಂಬಂಧ	ಅಂ
೦೭	ಸಪ್ತಮೀ	ಅಧಿಕರಣ	ಅಲ್ಲಿ

ಬೋಧಕರು ವಿಭಕ್ತಿ ಪ್ರತ್ಯಯ ಮತ್ತು ಕಾರಕಗಳನ್ನು ಬೋಧಿಸುವಾಗ ಕಲಿಕಾರ್ಥಿಯಲ್ಲಿ ಭಾಷಾ ಪ್ರೌಢಿಮೆ ಹೆಚ್ಚಾಗುತ್ತದೆ. ಉದಾಹರಣೆ ಕನ್ನಡ ಭಾಷಾ ಕಲಿಕಾರ್ಥಿಗಳು ಪ್ರತಿನಿತ್ಯ ಕನ್ನಡ ಭಾಷೆಯನ್ನೆ ಮಾತನಾಡಿದರು ಅದರಲ್ಲಿರುವಂತಹ ವ್ಯಾಕರಣಾಂಶವನ್ನು ಗುರುತಿಸಲು ಅಸಮರ್ಥರಾಗಿರುತ್ತಾರೆ. ಏಕೆಂದರೆ ಭಾಷೆ ಮತ್ತು ವ್ಯಾಕರಣದ ಬಗ್ಗೆ ಸಂಪೂರ್ಣ ಜ್ಞಾನ ಇಲ್ಲದಿರುವುದರಿಂದ. ಈ ಎರಡು ಅಂಶಗಳನ್ನು ತಿಳಿಸಿಕೊಡುವುದೆ ಕನ್ನಡ ಭಾಷಾ ಪಠ್ಯ ಪುಸ್ತಕ. ವಿಭಕ್ತಿಯನ್ನು ವಿವರಿಸಿ ಹೇಳುವುದಾದರೆ ಒಂದು ದಿನ ಶಾಲೆಗೆ ಇಬ್ಬರು ವಿದ್ಯಾರ್ಥಿಗಳು ತಡವಾಗಿ ಆಗಮಿಸುತ್ತಾರೆ. ಆಗ ಬೋಧಕರು

ತಡವೇಕೆ ಎಂದು ಒಬ್ಬನಿಗೆ ಪ್ರಶ್ನೆ ಮಾಡಿದಾಗ ಇವನಿಂದ ನನಗೂ ತಡವಾಯಿತು ಎಂದು ಹೇಳುತ್ತಾನೆ. ಆಗ ಬೋಧಕರು ಇವನಿಂದ ಎನ್ನುವ ಪದನ್ನು ಕಪ್ಪು ಹಲಗೆಯ ಮೇಲೆ ಬರೆದು ಇದು 'ತೃತಿಯ' ವಿಭಕ್ತಿ ಪ್ರತ್ಯಯವಾಗಿದೆ ಎಂದು ಬೋಧಿಸಬೇಕು. ಇದೆ ರೀತಿಯಾಗಿ ನಾವು ಆಡುವ ಭಾಷೆಯಲ್ಲಿ ಎಲ್ಲಾ ರೀತಿಯ ಪ್ರತ್ಯಯಗಳನ್ನು ಬಳಸುತ್ತೇವೆ. ನೀವು ಗುರುತಿಸಿ ಎಂದು ತಿಳಿಸುವುದು. ಅದೆ ರೀತಿಯಾಗಿ 'ಕಾರಕ' ಪದಗಳು ಭಾಷೆಯಲ್ಲಿ ಒಳಗೊಂಡಿರುತ್ತವೆ ಎಂಬುದಕ್ಕೆ ಉದಾಹರಣೆ ಸಹಿತ ವಿವರಿಸುವುದು.

ಉದಾ : * ಸೀತಾ ಹಣ್ಣನ್ನು ತಿಂದಳು.

* ರವಿ ಶಾಲೆಗೆ ಹೋದನು.

* ನೀಲಾ ನೀರು ತರುತ್ತಿದ್ದಾಳೆ. ಈ ವಾಕ್ಯಗಳಲ್ಲಿ

ವಿಭಕ್ತಿ	**ಕಾರಕ**	**ಪ್ರತ್ಯಯ/ಕ್ರಿಯೆ**
ಕರ್ತೃ	**ಕರ್ಮ**	**ಕ್ರೀಯೆ**
ರವಿ	ಶಾಲೆ	ಹೋದನು
ಸೀತೆ	ಹಣ್ಣು	ತಿಂದಳು (ಕ್ರಿಯಾಪದ)
ನೀಲಾ	ನೀರು	ತರುತ್ತಿದ್ದಾಳೆ

ಈ ರೀತಿಯಾಗಿ ಭಾಷೆಯನ್ನು ಬಿಡಿ ಬಿಡಿಯಾಗಿ ವಿಭಕ್ತಿ ಕಾರಕ ಪ್ರತ್ಯಯ ಪದಗಳನ್ನು ಬೋಧಿಸುವಾಗ ವಿವರಿಸಲಾಗುವುದು.[೩]

ಇದೇ ರೀತಿಯಾಗಿ ಕನ್ನಡ ಭಾಷಾ ಬೋಧಕರಾದವರು ಇನ್ನಿತರ ವ್ಯಾಕರಣಾಂಶಗಳಾದ ಸಂಧಿಗಳು, ಸಮಾಸಗಳು, ಕರ್ತರಿ ಪ್ರಯೋಗ, ಕರ್ಮಣಿ ಪ್ರಯೋಗ, ದ್ವಿರುಕ್ತಿ, ಅನುಕರಣೆ, ಜೋಡುನುಡಿ ಪದಗಳು, ಸರ್ವನಾಮಗಳು, ಲಿಂಗಗಳು, ವಚನಗಳು, ನುಡಿಗಟ್ಟು, ಗಾದೆ ಮಾತು, ಸ್ವಂತವಾಕ್ಯದಲ್ಲಿ ಪದ ಪ್ರಯೋಗ, ವಾಕ್ಯರಚನೆ ಇತ್ಯಾದಿ ಅಂಶಗಳನ್ನು ಬೋಧಿಸುವಾಗ ವಿವರಿಸಿ ಹೇಳುವಾಗ ಕಲಿಕಾರ್ಥಿಗಳಲ್ಲಿ ಕನ್ನಡ ಭಾಷಾ ರಚನೆಯ ಸ್ವರೂಪವನ್ನು ತಿಳಿಸುವಲ್ಲಿ ಕನ್ನಡ ಪಠ್ಯದಲ್ಲಿರುವ ವ್ಯಾಕರಣಾಂಶ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ.

೬.೪. ಪ್ರಾದೇಶಿಕ ಭಾಷೆಗಳನ್ನು ಪರಿಚಯಿಸುವಲ್ಲಿ ಪಠ್ಯಗಳ ಪಾತ್ರ

ಭೌಗೋಳಿಕ ಪ್ರದೇಶ, ಸಾಮಾಜಿಕ ಸಾಂಸ್ಕೃತಿಕ ಅಂಶಗಳು ಹಾಗೂ ಪರಭಾಷಾ ಪ್ರಭಾವ ಇವುಗಳಿಂದಾಗಿ ಕನ್ನಡ ಭಾಷೆಯಲ್ಲಿ ಉಪಭಾಷೆಗಳು, ಪ್ರಭೇದ ಭಾಷೆಗಳು ಹುಟ್ಟಲು ಕಾರಣವಾದವು. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಕನ್ನಡ ಭಾಷೆಯಲ್ಲಿಯೇ ಎರಡು ವಿಭಾಗಗಳಿವೆ.

ಅನಂತರ ಕರಾವಳಿ ಭಾಗದ ಕನ್ನಡ ಭಾಷೆಯು ದಕ್ಷಿಣ ಕರ್ನಾಟಕದ ಕನ್ನಡಕ್ಕಿಂತ ಭಿನ್ನವಾಗಿ ತೋರುವುದರಿಂದ ಅದನ್ನು ಪ್ರತ್ಯೇಕಿಸಿ ಹೇಳಲಾಗಿದೆ. ಹಾಗೆಯೇ ಉತ್ತರ ಕರ್ನಾಟಕದ ಕನ್ನಡ ಭಾಷೆಯಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಭಾಷೆ ಉಳಿದ ಭಾಗದಲ್ಲಿ ಬಳಕೆಯಲ್ಲಿರುವ ಕನ್ನಡಕ್ಕಿಂತ ಭಿನ್ನವಾಗಿ ತೋರುವುದರಿಂದ ಅದನ್ನು ಬೇರೆಯಾಗಿ ಹೇಳಬಹುದಾಗಿದೆ. ಕೆಲವು ಕಡೆ ಮಿಶ್ರ ಕನ್ನಡ ಭಾಷೆಯು ಬಳಕೆಯಲ್ಲಿದೆ. ಆದ್ದರಿಂದ ಬಹಳ ನಿಖರವಾಗಿ ಕನ್ನಡದ ಪ್ರಾದೇಶಿಕ ಉಪಭಾಷೆಗಳ ಬಳಕೆಯ ಪ್ರದೇಶವನ್ನು ಗುರುತಿಸುವುದು ಸುಲಭವಲ್ಲ. ಸದ್ಯದ ಮಟ್ಟಿಗೆ ಕನ್ನಡ ಪ್ರಾದೇಶಿಕ ಉಪಭಾಷೆಗಳನ್ನು ವಿದ್ವಾಂಸರು ಹೀಗೆ ಗುರುತಿಸಿದ್ದಾರೆ.

ಧಾರವಾಡ ಕನ್ನಡ :

ಧಾರವಾಡ, ಬೆಳಗಾವಿ, ವಿಜಾಪುರ ಹಾಗೂ ಉತ್ತರ ಕನ್ನಡ ಜಿಲ್ಲೆ ಹಾಗೂ ಬಳ್ಳಾರಿಯ ಕೆಲವು ಪ್ರದೇಶಗಳು.

ಮೈಸೂರು ಕನ್ನಡ :

ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆ ಮತ್ತು ಚಿಕ್ಕಮಂಗಳೂರು ಜಿಲ್ಲೆಯ ಕೆಲವು ಪ್ರದೇಶಗಳು.

ಕರಾವಳಿ ಕನ್ನಡ :

ಮಂಗಳೂರು, ಮಡಿಕೇರಿ ಹಾಗೂ ಕಾರವಾರ ಚಿಕ್ಕಮಂಗಳೂರು ಜಿಲ್ಲೆಯ ಕೆಲವು ಪ್ರದೇಶಗಳು.

ಕಲಬುರಗಿ ಕನ್ನಡ :

ಬೀದರ, ಕಲಬುರಗಿ, ರಾಯಚೂರು ಜಿಲ್ಲೆಯ ಕೆಲವು ಪ್ರದೇಶಗಳು ವಿಜಾಪುರ ಜಿಲ್ಲೆಯ ಉತ್ತರ-ಪಶ್ಚಿಮದ ಕೆಲವು ಪ್ರದೇಶಗಳು.[೪]

ಈ ರೀತಿಯಾಗಿ ಕನ್ನಡ ಪ್ರಾದೇಶಿಕ ಭಾಷಾವಾರು ಜಿಲ್ಲೆಗಳನ್ನು ವಿಂಗಡಿಸಲಾಗಿದೆ. ಈ ವಿಂಗಡನೆಯನ್ನು ಗಮನಿಸಿದ ಮೇಲೆ ೨೦೦೨ ರಲ್ಲಿ ಮುದ್ರಣಗೊಂಡ ೮, ೯ ಮತ್ತು ೧೦ನೇ ತರಗತಿಗಳ ಕನ್ನಡ ಭಾಷಾ ಪಠ್ಯ ಪುಸ್ತಕವನ್ನು ಗಮನಿಸಿದ ಮೇಲೆ ಮತ್ತು ೨೦೧೨ ರಲ್ಲಿ DSERT ಪ್ರಕಟಿಸಿದ ೮, ೯ ಮತ್ತು ೧೦ನೇ ತರಗತಿಗಳ ಬದಲಾವಣೆಗೊಂಡ ಕನ್ನಡ ಭಾಷಾ ಪಠ್ಯ ಪುಸ್ತಕಗಳನ್ನು ಗಮನಿಸಿದ ಮೇಲೆ ೨೦೧೨ ರ ಪಠ್ಯ ಪುಸ್ತಕಗಳಲ್ಲಿ DSERTಯು ಪ್ರಾದೇಶಿಕ ಭಾಷಾ ಭಿನ್ನತೆಯುಳ್ಳ ಪಾಠಗಳನ್ನು ಅಳವಡಿಸಲು ವಿಫಲಗೊಂಡಿರುವುದನ್ನು ಗಮನಿಸಬಹುದು. ಉತ್ತರ ಕರ್ನಾಟಕದ ಒಬ್ಬ ಲೇಖಕರ ಪಾಠಗಳು ಯಾವುದೇ ತರಗತಿಯ ಪಠ್ಯಗಳಲ್ಲಿ ಅಳವಡಿಸಿಲ್ಲ. ಕೇವಲ ದಕ್ಷಿಣ ಕನ್ನಡ, ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಹಾಸನ, ದಾವಣಗೆರೆ, ಉಡುಪಿ,

ಕಾಸರಗೂಡು, ಬಿಜಾಪುರ, ಮಂಡ್ಯ, ಮೈಸೂರು, ಚಿಕ್ಕಮಂಗಳೂರು ಭಾಗದ ಲೇಖಕರ ಪಾಠಗಳನ್ನು ಕಾಣಬಹುದು. ಪಠ್ಯದಲ್ಲಿ ಗದ್ಯಗಳನ್ನು ಮಾತ್ರ ಗಮನಿಸಲಾಗಿದೆ. ಏಕೆಂದರೆ ಗದ್ಯಗಳು ಭಾಷೆಯ ಸಂಪೂರ್ಣ ವ್ಯಾಪ್ತಿಯನ್ನು ಹೊಂದಿರುತ್ತವೆ. ಪದ್ಯಗಳು ಕೇವಲ ಭಾವನೆಯ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ.

೨೦೦೨ ರಲ್ಲಿ DSERTಯು ಪ್ರಕಟಿಸಿದಂತಹ ೮,೯,೧೦ ನೇ ತರಗತಿಯ ಕನ್ನಡ ಪಠ್ಯಪುಸ್ತಕಗಳಲ್ಲಿನ ಕೆಲವೊಂದು ಪಾಠಗಳ ಮೂಲ ಆ ಭಾಗದ ಭಾಷೆಯು ಈ ಕೆಳಕಂಡಂತೆ ಗಮನಿಸಬಹುದು.

• ೮ನೇ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲಿ ರಾಯಚೂರಿನವರಾದ ಅಮರೇಶ ನುಗಡೋಣಿಯವರ "ಬಸಯ್ಯ ಮತ್ತು ಜೇನುಗೂಡು" ಪಾಠವನ್ನು ಉತ್ತರ ಕರ್ನಾಟಕದ ಕಲಿಕಾರ್ಥಿಗಳೂ ಮತ್ತೇ ಕನ್ನಡ ಭಾಷಾ ಬೇಧಕರಿಗೆ ಓದಿದ ತಕ್ಷಣ ಬೇಗನೆ ಅರ್ಥವಾಗುತ್ತದೆ. ಅದೇ ದಕ್ಷಿಣ ಕರ್ನಾಟಕದ ಕಲಿಕಾರ್ಥಿಗಳಿಗೆ ಮತ್ತು ಆ ಭಾಗದ ಬೋಧಕರಿಗೆ ಈ ಭಾಷೆಯು ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಮಸ್ಯೆಯಾಗಬಹುದು. ಏಕೆಂದರೆ ಗ್ರಂಥಸ್ಥ ಭಾಷೆ ಮತ್ತು ಪರಿಸರ ಭಾಷೆಯಲ್ಲಿನ ವ್ಯತ್ಯಾಸ ಹಾಗೂ ಪ್ರದೇಶದಿಂದ ಪ್ರದೇಶದ ಭಾಷಾ ಭಿನ್ನತೆ ಇಲ್ಲಿರುವುದನ್ನು ಗಮನಿಸಬಹುದು.

• ಉದಾಹರಣೆಗೆ "ಎರಡು ದಿನದಿಂದ ಯಾಕೆ ಬರಲಿಲಲ್ಲ? ನಿನಗೆ ನಾನು ಸುಮ್ಮನೆ ಬಯ್ದಿಲ್ಲ. ಇಲ್ಲಿ ಈಗ ಬುತ್ತಿ ಕೊಡ್ತಿನಿ ತಗೊಂಡು ಹೊಲಕ್ಕೆ ಹೋಗು ಎರಡು ದಿನದಿಂದ ಹೊಲದ ಕಡೆ ಯಾರೂ ಹೋಗಿಲ್ಲ. ಯಜಮಾನ್ರು ನಿನ್ನ ನಂಬಿಕೊಂಡು ಕುಂತಾರ" ಈ ಮೇಲ್ಕಂಡ ಭಾಷೆಯಲ್ಲಿ ಬಳಕೆಗೊಂಡ ಕೆಲವು ಪದಗಳು ದಕ್ಷಿಣ ಕರ್ನಾಟಕದ ಭಾಷೆಯಲ್ಲಿ ಬಳಕೆಯಲಿಲ್ಲ ಉದಾ: ಯಾಕ, ಬಯ್ದಿಲ್ಲ, ತಗೊಂಡು ಕುಂತಾರ, ಕೊಡ್ತೀನಿ ಇತ್ಯಾದಿ ಪದಗಳು.

ಯಾಕ	–	ಏಕೆ
ತಗೊಂಡು	–	ತೆಗೆದುಕೊಂಡು
ಕುಂತಾರ	–	ಕುಳಿತಾರೆ ಈ ರೀತಿಯಾಗಿ ವ್ಯತ್ಯಾಸ ಕಾಣುತ್ತೇವೆ.

ಅದೇ ರೀತಿಯಾಗಿ ಗೀತಾ ನಾಗಭೂಷಣ ರವರು ಬರೆದಿರುವ 'ಅವ್ವ' ಪಾಠ ೯ನೇ ತರಗತಿಗೆ ೨೦೦೨ ರ ಪಠ್ಯಕ್ರಮದಲ್ಲಿ DSERT ಅಳವಡಿಸಿತ್ತು. ಈ ಪಾಠವು ಅಶ್ಲೀಲತೆಯಿಂದ ಕೂಡಿದೆ ಎಂಬ ಹೇಳಿಕೆ ಆಧಾರದ ಮೇಲೆ ಪಠ್ಯದಿಂದ ಈ ಪಾಠವನ್ನು ತೆಗೆದುಹಾಕಲಾಗಿದೆ.

ಉದಾ: "ಆದಷ್ಟು ಜಲ್ದಿ ಈ ಔಷಧಿ ಇಂಜಕ್ಷನ್ ತಗೊಂಡು ಬಾ ನಿನ್ ಮಗುವಿಗೆ ಬೇಕು ಅವಳು ಕಕ್ಕಾಬಿಕ್ಕಿಯಾದಳು" ಯಪ್ಪಾ.... ಹಾಂಗಂದರ ಸಾಪ್ರೆ.. ಇದು ಸರಕಾರಿ ದವಖಾನಿ ಅದ

ಅಲ್ರೀ... ಬಡೂರಿಗೆಲ್ಲ ಪುಗಸಟ್ಟೆ ಅಗಸುದ್ಯಾ ಕುಡತಾರಂತಲ್ರಿ... ನನ ಬಳಿ ರೊಕ್ಕಾ ರುಪ್ಯೆ ಏನೂ ಇಲ್ಲ ಯಪ್ಪಾ...

ಈ ಭಾಷೆಯನ್ನು ಗಮನಿಸಿದಾಗ ಉತ್ತರ ಕರ್ನಾಟಕದವರು ಅರ್ಥ ಮಾಡಿಕೊಂಡಂತೆ ದಕ್ಷಿಣ ಕರ್ನಾಟಕದವರು ಈ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಅರ್ಥವಾದರೂ ಭಾವನೆಗೆ ತಕ್ಕಂತೆ ಉಚ್ಚಾರಣೆ ಮಾಡಲು ಆಗುವುದಿಲ್ಲ.

ಜಲ್ದಿ – ಬೇಗ

ಯಪ್ಪಾ – ಅಪ್ಪ

ಸಾಬ್ರೆ – ಸಾಹೇಬರೆ

ಪುಗಸಟ್ಟೆ – ಉಚಿತ

ಅಗಸುದ್ಯಾ – ಔಷಧಿ

ಈ ರೀತಿಯಾಗಿ ಪ್ರತಿಯೊಂದು ಪದದ ಅರ್ಥಗೊತ್ತಿದ್ದಾಗ ಮಾತ್ರ ಅರ್ಥವು ಸನ್ನಿವೇಶಕ್ಕೆ ತಕ್ಕಂತೆ ಧ್ವನಿಯು ಹೊರಹೊಮ್ಮುತ್ತದೆ.

ಅದೇ ರೀತಿಯಾಗಿ ಎಚ್.ಜಿ.ಲಕ್ಕಪ್ಪಗೌಡರವರು ಹಾಸನ ಜಿಲ್ಲೆಯವರು ಇವರು ಬರೆದಿರುವ 'ತ್ಯಾಗಮಯಿ' ಪಾಠವನ್ನು ೨೦೦೨ರ ೧೦ನೇ ತರಗತಿ ಪಠ್ಯಪುಸ್ತಕದಲ್ಲಿ ಅಳವಡಿಸಿದ್ದಾರೆ. ಈ ಪಾಠದ ಭಾಷೆ "ನನಗೆ ನಿನಗೆ ಪ್ರಾಣಕೊಟ್ಟ ದೇವತೆ ಕನೊ ಕೆಂಪ ಇವಳು ಇಲ್ಲಿಗಂಟ ನಮ್ಮ ಸಲುವಾಗಿ ದುಡ್ದು ದುಡ್ದು ತನ್ನ ಪ್ರಾಣ ತೇದು ನಮ್ಮ ಬದುಕಿಸವಳೇ ಕನೋ ಈ ಪುಣ್ಯವಂತೆ". ಈ ಭಾಷೆಯಲ್ಲಿ ಕನೊ, ಇಲ್ಲಿಗಂಟ, ತೇದು ಇತ್ಯಾದಿ ಪದಗಳ ಭಾವ ಬೋಧಕರಿಗೆ ಗೊತ್ತಿದ್ದಾಗ ಮಾತ್ರ ಬೋಧನೆಯಲ್ಲಿ ಸಮಸ್ಯೆಯಾಗುವುದಿಲ್ಲ. ಇಲ್ಲದಿದ್ದರೆ ಬೋಧಕರ ಓದುಗಾರಿಕೆಯಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ.

ಕನೊ – ಕಣೊ

ಇಲ್ಲಿಗಂಟ – ಇಲ್ಲಿತನಕ/ಇಲ್ಲಿವರೆಗೆ ಇಷ್ಟುದಿನ

ತೇದು – ಜೀವ ಸವೇಸಿ, ಜೀವನ ಪೂರ್ತಿ, ಪ್ರಾಣ ಇರುವವರೆಗೆ, ಎಂದು ಅರ್ಥೈಸಬಹುದು.

ಇನ್ನೂ ಕಾಸರಗೋಡಿನವರಾದ ಸಾರಾ ಅಬೂಬಕರ ರವರು ಬರೆದ 'ಪ್ರಾಮಾಣಿಕತೆ' ಎನ್ನುವ ಪಾಠವನ್ನು ೨೦೧೨ರ ಹೊಸ ಕನ್ನಡ ಪಠ್ಯಪುಸ್ತಕ ೮ನೇ ತರಗತಿಗೆ ಅಳವಡಿಸಿದ್ದಾರೆ ಈ ಕತೆಯಲ್ಲಿ ಮೂಡಿ ಬಂದ ಭಾಷೆಯನ್ನು ಗಮನಿಸುವುದಾದರೆ,

"ನನ್ನ ಮನೆಯಾಗಿದ್ದರೆ ಬಿಟ್ಟಿಕುಳು ತಿನ್ನಲು ಬಂದವರನ್ನು ಹೊಡೆದು ಹೊರಗೆ ಹಾಕುತ್ತಿದ್ದೆ! ತಾನು ಯಾರೊಡನೆ ವಾದಿಸುತ್ತಿರುವೆನೆಂಬ ಅರಿವಿಲ್ಲದವನಂತೆ". ಈ ವಾಕ್ಯವನ್ನು ಗಮನಿಸಿದಾಗ ಇದರಲ್ಲಿ ಬರುವ **ಬಿಟ್ಟಿಕೊಳು** ಪದದ ಅರ್ಥ ಉತ್ತರ ಕರ್ನಾಟಕದಲ್ಲಿ ಹೀಗೆ ಬಳಕೆಯಲ್ಲಿದೆ. ಬಿಟ್ಟಿ ಎಂದರೆ ಪುಗಸಟ್ಟೆ ಅಥವಾ ಪುಕ್ಕಟ್ಟೆ, ಕೂಳು ಎಂದರೆ ವ್ಯಕ್ತಿ ಸತ್ತ ಮೂರು ದಿನಕ್ಕೆ ಇಡುವ ಎಡೆ ಎಂದಾಗಿದೆ. ಈ ಪದವನ್ನು ಹೇಗೆ ಬಳಸುತ್ತಾರೆ ಎಂದರೆ 'ಕೂಳಾಗೀಳಾ ತಿಂದಿ ಇಲ್ಲಾ' ಎಂದು ಜೋಡು ನುಡಿಯಲ್ಲಿ ಒಳಕೆಯಲ್ಲಿದೆ.

ಈ ರೀತಿಯಾಗಿ ಪಠ್ಯದ ಭಾಷೆಯನ್ನು ಗಮನಿಸಿದಾಗ ಕರ್ನಾಟಕದಾದ್ಯಂತ ಬಹುಪಾಲು ಜನರು ಕನ್ನಡ ಭಾಷೆಯನ್ನೇ ಮಾತನಾಡಿದರೂ ಒಂದು ಪ್ರದೇಶದ ಕನ್ನಡ ಬೇರೊಂದು ಪ್ರದೇಶದ ಕನ್ನಡಕ್ಕಿಂತ ಭಿನ್ನತೆಯನ್ನು ಕಾಣುತ್ತೇವೆ. ಕೆಲವು ಸಲ ಒಂದು ಪ್ರದೇಶದ ಕನ್ನಡದ ಪದಗಳು ಬೇರೊಂದು ಪ್ರದೇಶದ ಕನ್ನಡಿಗರಿಗೆ ಸಂಪೂರ್ಣವಾಗಿ ಅರ್ಥವಾಗದೇ ಹೋಗುವ ಸಾಧ್ಯತೆಯುಂಟು. ಹೀಗೆ ಆಗಲು ಅನೇಕ ಕಾರಣಗಳಿವೆ. ಕರ್ನಾಕಟದ ಗಡಿ ಪ್ರದೇಶದಲ್ಲಿ ತೆಲುಗು, ತಮಿಳು, ಮಲಯಾಳಿ, ಮರಾಠಿ ಭಾಷೆ ಮಾತನಾಡುವ ಜನರಿದ್ದಾರೆ. ಕನ್ನಡಿಗರು ಇಂಥ ಗಡಿ ಪ್ರದೇಶದಲ್ಲಿ ಹತ್ತಿರದ ಬೇರೆ ಭಾಷಿಕರೊಂದಿಗೆ ಹತ್ತು ಹಲವು ಸಂದರ್ಭದಲ್ಲಿ ವ್ಯವಹರಿಸಬೇಕಾಗುತ್ತದೆ. ಹಾಗಾಗಿ ತಾವು ಮಾತನಾಡುವ ಭಾಷೆಯಲ್ಲೂ ಸಹಜವಾಗಿಯೆ ಕೊಡುಕೊಳೆ ನಡೆಯುತ್ತದೆ. ಇಂತಹ ಸಂದರ್ಭದ ಕಾಲಾಂತರದಲ್ಲಿ ಒಂದು ಭಾಷೆ ತನ್ನ ಭಾಷೆಯ ಹಲವಾರು ಪದಗಳು, ವಾಕ್ಯ ರಚನೆಯ ನಿಯಮಗಳು ಮತ್ತೊಂದು ಭಾಷೆಗೆ ವರ್ಗಾಯಿಸುವ ಅಥವಾ ತನ್ನದಾಗಿಸುವ ಕ್ರಿಯೆ ನಡೆಯುತ್ತದೆ. ಈ ಕ್ರಿಯೆಯಿಂದ ಭಾಷೆಯು ಪ್ರದೇಶದಿಂದ ಪ್ರದೇಶಕ್ಕೆ ಹಲವಾರು ರೂಪಗಳನ್ನು ಪಡೆದುಕೊಳ್ಳಬಹುದು. ಇಂತಹ ಸಂದರ್ಭದಲ್ಲಿ ಭಾಷೆಯನ್ನು ಬೋಧಿಸುವ ಬೋಧಕರು ಸಮಸ್ಯೆಯನ್ನು ಸವಲಾಗಿ ಸ್ವೀಕರಿಸಬೇಕಾಗುತ್ತದೆ. ಒಂದು ಪ್ರದೇಶದ ಭಾಷೆಯನ್ನು ಇನ್ನೊಂದು ಪ್ರದೇಶದ ಬೋಧಕರಿಗೆ ಬೋಧಿಸಲು ಕಷ್ಟವೆನಿಸುತ್ತದೆ. ಕನ್ನಡ ಭಾಷೆ ಒಂದೇ ಎನ್ನಿಸಿದರು ಉಚ್ಚರಣೆಯ ರೂಪ, ವಾಕ್ಯರೂಪ, ಪದ ಪ್ರಯೋಗಗಳು ಬೇರೆ ಬೇರೆಯಾಗಿರುತ್ತವೆ. ಹೀಗಾಗಿ ರಾಷ್ಟ್ರೀಯ ಪಠ್ಯಕ್ರಮವು ಪ್ರಾದೇಶಿಕ ಸಮತೋಲನ ಕಾಪಾಡುವ ದೃಷ್ಟಿಯಿಂದ ಭಿನ್ನ ಭಾಷಾ ಶೈಲಿಯ ಪಾಠಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ.

೬.೫. ಪ್ರಸ್ತುತ ಪಠ್ಯಗಳ ಭಾಷೆಯ ಸ್ಥೂಲ ನೋಟ

೧) ಜನಪದ ಭಾಷಾ ಶೈಲಿ.

೨) ಪ್ರವಾಸ ಕಥನದ ಭಾಷಾ ಶೈಲಿ.

೩) ನಾಟಕದ ಭಾಷಾ ಶೈಲಿ.

೧) ಜನಪದ ಭಾಷಾ ಶೈಲಿ :

ಗ್ರಾಂಥಿಕ ಸಾಹಿತ್ಯ ಭಾಷೆಗೆ ಮೂಲ ತಾಯಿ ಬೇರು ಎಂದರೆ ಜನಪದ ಭಾಷೆ ಎಂದು ಇತಿಹಾಸಕಾರರು ಹೇಳಿರುವುದನ್ನು ಸ್ಮರಿಸಬಹುದು. ಜನಪದ ಭಾಷೆ ಎಂದರೆ ಜನರು ತಮಗೆ ತಿಳಿದಂತೆ ಮತ್ತು ತಮ್ಮ ಗುಂಪಿನವರೊಂದಿಗೆ ಮಾತನಾಡುವುದು, ಹಾಡುವುದು, ಕತೆ ಹೇಳುವುದು ಇತ್ಯಾದಿ ಸಾಹಿತ್ಯ ಭಾಷಾ ಅಂಶಗಳನ್ನು ಕಾಣಬಹುದು.

ಉದಾಹರಣೆಗೆ: 'ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ದುಂಡು ಮಾದೇವನ ಕುದರೆ ಕುಣಿಯುತ್ತ ಬರುವನು ಮಾದೇವ'. (೯ನೇ ತರಗತಿ ಕನ್ನಡ ಭಾಷಾ ಪಠ್ಯ ಪುಸ್ತಕ)

ಈ ರೀತಿಯಾಗಿ ಜನಪದ ಭಾಷೆಯಲ್ಲಿ ಬರುವಂತಹ ಕ್ರಿಯಾಪದಗಳು, ನಾಮಪದ, ಧಾತು ಇತ್ಯಾದಿ ಅಂಶಗಳನ್ನು ಗಮನಿಸಿದರೆ ಭಾಷೆಯ ವಿಶೇಷತೆ ಅರ್ಥವಾಗುತ್ತದೆ. ಉದಾಹರಣೆಗೆ: ಏಳ್ಮಲೆ–ಏಳುಪರ್ವತ, ಹೆತ್ತಯ್ಯ–ಹೆತ್ತವರು, ಮಾದೇವನ–ಮಹಾದೇವನ ಇತ್ಯಾದಿ.

೨) ಪ್ರವಾಸ ಕಥನದ ಭಾಷಾ ಶೈಲಿ

"ದೇಶ ಸುತ್ತಿ ನೋಡು ಕೋಶ ಓದಿ ನೋಡು" ಎಂಬ ಗಾದೆಯಂತೆ ದೇಶ ಸುತ್ತಿ ಬಂದಿದ್ದನ್ನು ತನಗೆ ತಿಳಿದಂತೆ ಕತೆಯ ರೂಪದಲ್ಲಿ ವಿಶೇಷವಾಗಿ ಹೇಳುವ ಸಾಹಿತ್ಯರೂಪವೇ ಪ್ರವಾಸ ಕಥನವಾಗಿದೆ. ಈ ಪ್ರವಾಸ ಕತೆಯ ಭಾಷೆಯು ಸರಳತೆಯಿಂದ ಕೂಡಿರುವಂತಹುದು. ಕಂಡದ್ದನ್ನು ಕಂಡಂತೆ ಬರವಣಿಗೆಯ ಮೂಲಕ ಭಾವನೆಯನ್ನು ಬಿಚ್ಚಿಡುತ್ತಾ ಸಾಗುವಂತಹುದು ಪ್ರವಾಸ ಕಥನವಾಗಿದೆ. ಶಿವರಾಮ ಕಾರಂತರು ಬರೆದಿರುವಂತಹ ಬೆಡಗಿನ ತಾಣ ಜಯಪುರ ಕತೆಯಾಗಿದೆ. ಕರಾವಳಿಯ ಭಾಗದವರಾದರೂ ಸರಳ ಭಾಷೆಯಲ್ಲಿಯೆ ಪ್ರವಾಸ ಕತೆಯನ್ನು ಹೇಳಿದ್ದಾರೆ. "ಜಯಪುರದ ಮುಖ್ಯ ಬೀದಿಗಳು ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿದ್ದವು" ಈ ವಾಕ್ಯವನ್ನು ಗಮನಿಸಿದರೆ ಎಲ್ಲವೂ ಸಂಪೂರ್ಣ ಗ್ರಾಂಥಿಕ ಭಾಷೆಯ ಪದಗಳನ್ನು ಬಳಸಿರುವುದನ್ನು ಕಾಣಬಹುದು.

ಹೀಗೆ ಪ್ರವಾಸ ಕತೆಗೂ ಸಾಮಾನ್ಯ ಕತೆಗಳಿಗೂ ಭಾಷೆಯಲ್ಲಿರುವ ವ್ಯತ್ಯಾಸವನ್ನು ಮತ್ತು ಬರವಣಿಗೆಯ ವ್ಯತ್ಯಾಸವನ್ನು ಗಮನಿಸುವುದಾದರೆ ಸಾಮಾನ್ಯ ಕತೆಗಳು ಜನಪದ ಸೊಗಡಿನಿಂದ ಕೂಡಿದ ಕತೆಗಳು ಉದಾಹರಣೆ: ಹಿಗೊಂದು ಊರಿನಲ್ಲಿ ರಾಜ ಇದ್ದ ಅವನಿಗೆ ಇಬ್ಬರು ಹೆಂಡ್ತಿರು ಇದ್ದರು.

ಈ ರೀತಿಯಾಗಿ ಸಾಮಾನ್ಯ ಕತೆಗಳ ಭಾಷೆ ಪ್ರಾರಂಭವಾಗುತ್ತದೆ. ಪ್ರವಾಸ ಕತೆಗಳ ಭಾಷಾ ಶೈಲಿಯೇ ಬೇರೆಯಾಗಿರುವುದನ್ನು ಗಮನಿಸಬಹುದು.

೩) ನಾಟಕದ ಭಾಷಾ ಶೈಲಿ:

ನಾಟಕಗಳ ಭಾಷೆಯನ್ನು ಕುರಿತು ಹೇಳುವುದಾದರೆ ನಾಟಕಗಳಲ್ಲಿಯೇ ಮೂರು ಪ್ರಕಾರಗಳನ್ನು ಕಾಣುತ್ತೇವೆ ಅವುಗಳೆಂದರೆ,

೧) ಗೀತ ನಾಟಕ.

೨) ಆಧುನಿಕ ನಾಟಕ.

೩) ಪೌರಾಣಿಕ ನಾಟಕ.

೧) ಗೀತ ನಾಟಕ ಭಾಷಾ ಶೈಲಿ:

ಹೆಸರೆ ಸೂಚಿಸುವಂತೆ ಗೀತನಾಟಕಗಳಲ್ಲಿ ಭಾಷೆಯು ಹಾಡಿನ ರೂಪದಲ್ಲಿರುತ್ತದೆ ಉದಾಹರಣೆಗೆ: "ಬಭ್ರುವಾಹನನ ಕಾಳಗ" ಮತ್ತು ಪ್ರಸ್ತುತ ೧೦ನೇ ತರಗತಿಗೆ ಪುತಿನ ರವರು ಬರೆದಿರುವ 'ಶಬರಿ' ಗದ್ಯಪಾಠ. ಪ್ರಭುಶಂಕರ ರವರ "ಮನ ಪರಿವರ್ತನೆ" (ಬುದ್ದ ಮತ್ತು ಅಂಗುಲಿಮಾಲನ ಕುರಿತು ಪಾಠ) ಇವೆಲ್ಲವು ಗೀತ ನಾಟಕದ ಪ್ರಕಾರಗಳಾಗಿವೆ. ಇಲ್ಲಿ ಸಂಭಾಷಣೆಯು ಹಾಡಿನ ಮೂಲಕ ಸಾಗುತ್ತದೆ ಉದಾಹರಣೆಗೆ–

ಶಬರಿ: ನಿಂತಲ್ಲಿಯೆ ನಾ ನಿಂತಿರುವೆ ! ರಾಮ ನೀನೆಂದೈತರುವೆ

ನೀನಹುದೆಲ್ಲೋ ನಾನರಿಯೇ! ನಿನ್ನೆಡೆಗೈದುವ ಬಳಿಯರಿಯೆ.

ನೀ ಬಹೆ ಎನ್ನುವ ನೆಚ್ಚಿನೊಳು । ನಾನಿಹೆ ಬಯಕೆಯ ಹುಚ್ಚಿನೊಳು !! ನಿಂತಲ್ಲಿಯೇ...

ರಾಮ: ದೊರೆವಳೇ ಸೀತೆ! ಭೂಮಿಜಾತೆ ಆತ್ಮ ಕಾಮಕಲ್ಪಲತೆ

ದೊರೆವಳೇ ಚಲುವೆ? । ಎರೆವೆ ಎರೆವೆ ಗಿರಿವನವೇ ಪೇಳಿರಿ ನಾನೆರೆವೆ

ದೊರೆವಳೇ? ದೊರೆಯಳೇ?

ಅವಳ ನೆಲೆ ಯಾರು ಅರಿಯಿರೇ, ಪೇಳಿ ಎನ್ನರಸಿ ದೊರೆಯಳೇ?

ಈ ಬೇಗೆ ಕೆಡದಲಾ । ನನ್ನೆದೆಯ ಬಿಡದಲಾ ಈ ಜಗವ ಸುಡದಲಾ । ಹಾ! ಹಾ । ಹಾ!

ಈ ರೀತಿಯಾಗಿ ಗೀತನಾಟಕದ ಭಾಷೆಯಲ್ಲಿ ಯತಿ, ಪ್ರಾಸ, ಮತ್ತು ಪ್ಲುತ ಸ್ವರಗಳನ್ನು ಹೆಚ್ಚಾಗಿ ಗುರುತಿಸಬಹುದು. ಇಂತಹ ಭಾಷೆಯನ್ನು ಪರಿಚಯಿಸುವುದಕ್ಕೆ ಪಠ್ಯ ಪುಸ್ತಕ ಒಂದು ಮಾರ್ಗದರ್ಶಿಯಿದ್ದಂತೆ.

೨) ಆಧುನಿಕ ನಾಟಕ ಭಾಷಾ ಶೈಲಿ:

ಆಧುನಿಕ ನಾಟಕಗಳ ಭಾಷಾ ಶೈಲಿಯು ಗ್ರಾಂಥಿಕ ಭಾಷಾ ಸ್ವರೂಪವನ್ನು ಪಡೆದುಕೊಂಡಿರುತ್ತವೆ. ಈ ನಾಟಕಗಳ ಭಾಷೆಯು ಕಲಿಕಾರ್ಥಿಗಳಿಗೆ ೮ನೇ ತರಗತಿಯ ಪಠ್ಯಪುಸ್ತಕದಲ್ಲಿ ಸಂಸ್ಕೃತ ನಾಟಕಕಾರನಾದ ಭಾಸ ಕವಿಯ 'ಮಧ್ಯಮ ವ್ಯಾಯೋಗ' ನಾಟಕವನ್ನು ಕನ್ನಡಕ್ಕೆ ಸಮಾಗಮ ಎಂದು ಅನುವಾದಿಸಿಕೊಳ್ಳಲಾಗಿದೆ ಮತ್ತು ಈ 'ಸಮಾಗಮ' ನಾಟಕದ ಭಾಷೆ ಹೀಗಿದೆ.

ಸೂತ್ರದಾರ: ಓ ವಿಜ್ಞಾಪಿಸಿಕೋಬೇಕು ಅಂತ ಇರೋವಷ್ಟರಲ್ಲಿ ಅಲ್ಲಿ ಯಾರೋ ಕೂಗುತ್ತ ಗದ್ದಲ ಮಾಡುತ್ತಿದ್ದಾರೆ ಅದೇನು ನೋಡುತ್ತೀನಿ".

ವಯಸ್ಸಿಗ : ಅಯ್ಯೋ ದೇವರೆ ಇವನಾರೋ ಕಾಣೆನಲ್ಲ!

ಹಿರಿಮಗ : ಕರಿಯ ಮೋಡದ ಹಾಗೆ ಬರುತ್ತಿದ್ದಾನೆ.

ನಡುಮಗ : ಅಪ್ಪ ಅವನು ಯಾರು ?

ಆನೆ ಮರಿಯ ದಂತದಂಥ ದಾಡೆಯವನು, ನೇಗಿಲಂಥ ಮೂಗಿನವನು, ಮದಿಸಿದಾನೆ ಸುಂಡಿಲಂಥ ತೋಳಿನವನು, ಕರಿಯ ಮುಗಿಲ ಬಣ್ಣದವನು.

ಈ ರೀತಿಯಾಗಿ ಆದುನಿಕ ನಾಟಕದ ಭಾಷೆಯು ಪೌರಾಣಿಕ ಕತೆಯ ಪ್ರಸಂಗವನ್ನು ಇಟ್ಟುಕೊಂಡಿದ್ದರೂ ಭಾಷೆಯು ಸರಳತೆಯಿಂದ ಕೂಡಿರುತ್ತದೆ. ವ್ಯಾಕರಣ ಬದ್ದವಾದ ಭಾಷೆಯ ಸ್ವರೂಪ ಆಧುನಿಕ ನಾಟಕಗಳದ್ದಾಗಿದೆ. ಇಲ್ಲಿ ಗ್ರಂಥಸ್ಥ ಭಾಷೆಯ ಪದಗಳ ಬಳಕ್ಕೆ ಹೆಚ್ಚಾಗಿ ಕಾಣುತ್ತೇವೆ ಮತ್ತು ಪ್ರಾದೇಶಿಕ ಭಾಷಾ ಭಿನ್ನತೆಯಿರುವ ಬೋಧಕರಿಗೂ ಅರ್ಥವಾಗುತ್ತದೆ.

೩) ಪೌರಾಣಿಕ ನಾಟಕಗಳ ಭಾಷೆ:

ಪೌರಾಣಿಕ ನಾಟಕಗಳು ಮಹಾಕಾವ್ಯಗಳ ಅಥವಾ ಪುರಾಣಗಳ ಕತೆಗಳನ್ನು ಇಟ್ಟುಕೊಂಡು ರಚಿತವಾಗಿರುತ್ತವೆ. ಇಂತಹ ನಾಟಕಗಳ ಭಾಷೆಯು ಹೆಚ್ಚು ವರ್ಣನೆಯಿಂದ ಕೂಡಿದ್ದು, ಆಶ್ಚರ್ಯ ಭಾವನೆಯಿಂದ ಭಾಷೆಯು ಹೊಂದಿರುತ್ತದೆ.

ಉದಾಹರಣೆಗೆ:

ರಾವಣ "ಆಹಾ! ಪಶುಪತಿ! ಇದೇನು ನಿನ್ನ ಲೀಲೆ? ಈ ತಾಣ ಅದೆಷ್ಟು ಸೊಗಸಾಗಿದೆ! ಚಿಲಿಪಿಲಿಗುಟ್ಟುವ ಪಕ್ಷಿಗಳ ಗುಂಪು, ತಣ್ಣನೆ ತೀಡಿಬರುವ ತಂಗಾಳಿ... ಪಶ್ಚಿಮ ಸಮುದ್ರದಲ್ಲಿ ಮುಳುಗುತ್ತಿರುವ ಸೂರ್ಯ ಓಹ್! ಸಂಧ್ಯಾಕಾಲ ಬರುತ್ತಿದೆ. ನನ್ನ ಅನುಷ್ಠಾನಕ್ಕೆ ಸಮಯ ಮೀರುವುದಿಲ್ಲ! ಏನು ಮಾಡಲಿ! ಈ ಆತ್ಮಲಿಂಗವನ್ನು ಯಾರ ಕೈಯಲ್ಲಿ ಒಪ್ಪಿಸಲಿ?

ಓೀಗೆ ಪೌರಾಣಿಕ ನಾಟಕಗಳ ಭಾಷೆಯು ಆಹಾ! ಓ ಹೋ! ಭಲೆ ಭಲೆ! ಎಂಬ ಭಾವಸೂಚಕ ಪದಗಳಿಂದ ಕೂಡಿದ ಭಾಷೆ ಆಗಿರುತ್ತದೆ. ಅಷ್ಟೆ ಅಲ್ಲದೆ ಭಾಷೆಯು ಹೆಚ್ಚು ವರ್ಣನೆಗೆ ಒಳಪಟ್ಟಿರುತ್ತದೆ.

ಉದಾಹರಣೆಗೆ: ತಣ್ಣನೆ ತೀಡಿಬರುವ ತಂಗಾಳಿ, ತಂಪಾದ ಗಾಳಿಯು ಇಲ್ಲಿ ವರ್ಣನೆಗೆ ಒಳಪಟ್ಟಿರುವುದನ್ನು ಪೌರಾಣಿಕ ನಾಟಕದ ಭಾಷೆಯಲ್ಲಿ ಗಮನಿಸಬಹುದು.

ಈ ರೀತಿಯಾಗಿ ೨೦೦೨ ಮತ್ತು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿರುವ ೮,೯,೧೦ನೇ ತರಗತಿಯ ಪಠ್ಯಪುಸ್ತಕಗಳಲ್ಲಿ ಬಳಸಿಕೊಂಡಂತಹ ಕನ್ನಡ ಭಾಷಾ ಸಾಹಿತ್ಯವು ಭಿನ್ನ ಭಿನ್ನ ಭಾಷೆ ಮತ್ತು ಧ್ವನಿ ವ್ಯತ್ಯಾಸವನ್ನು ಗುರುತಿಸುವಂತಹ ಪಠ್ಯಗಳಾಗಿವೆ. ಈ ಪಠ್ಯಗಳು ಬೋಧಕ ಮತ್ತು ಕಲಿಕಾರ್ಥಿಯ ನಡುವೆ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತದೆ. ಬೋಧಕರು ಭಾಷೆಯನ್ನು ಬೋಧಿಸುವಾಗ ಧ್ವನಿ ವ್ಯತ್ಯಾಸವನ್ನು ಗುರುತಿಸಿ ಭಾಷೆಯನ್ನು ಬೋಧಿಸಬೇಕು. ಇಲ್ಲದಿದ್ದರೆ ಕಲಿಕಾರ್ಥಿಯು ಭಾಷಾ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

೬.೬. "ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆಯ ನಡುವಿನ ವ್ಯತ್ಯಾಸ"

ಆಡು ಮಾತಿನಲ್ಲಿ ಬಳಸುವಂತಹ ವಾಕ್ಯಗಳಿಗೂ ಗ್ರಾಂಥಿಕ ಭಾಷೆಯಲ್ಲಿ ಒಳಗೊಂಡ ವಾಕ್ಯಗಳಿಗೂ ಇರುವ ವ್ಯತ್ಯಾಸವನ್ನು ಗುರುತಿಸುವಲ್ಲಿ ಬೋಧಕ ಮತ್ತು ಕಲಿಕಾರ್ಥಿಗಳಿಗೆ ಪಠ್ಯ ಪುಸ್ತಕಗಳು ಸಹಾಯವಾಗುತ್ತವೆ. ಮತ್ತು ಮಾರ್ಗದರ್ಶಿಯಂತೆ ಕಾರ್ಯ ನಿರ್ವಹಿಸುತ್ತವೆ. ಗ್ರಾಂಥಿಕ ರೂಪದಲ್ಲಾಗಲಿ ಆಡು ಭಾಷೆಯ ರೂಪದಲ್ಲಾಗಲಿ ವಾಕ್ಯ ಪ್ರಭೇದಗಳಲ್ಲಿ ಒಟ್ಟು ಮೂರು ಪ್ರಕಾರಗಳನ್ನು ಗುರುತಿಸುತ್ತೇವೆ.

೧) ಸಾಮಾನ್ಯ ವಾಕ್ಯ:

ಒಂದು ಪೂರ್ಣ ಅರ್ಥಕೊಡುವ ಕ್ರಿಯಾಪದದಿಂದ ಕೂಡಿದ ಸ್ವತಂತ್ರ ವಾಕ್ಯಕ್ಕೆ ಸಾಮಾನ್ಯ ವಾಕ್ಯ ಎನ್ನುತ್ತಾರೆ.

ಉದಾಹರಣೆಗೆ: ಶಿವಮ್ಮ ಗಂಡು ಮಗುವಿಗೆ ಜನ್ಮ ನೀಡಿದಳು.

೨) ಸಂಯೋಜಿತವಾಕ್ಯ:

ಎರಡು ಸ್ವತಂತ್ರ ವಾಕ್ಯಗಳು ಒಂದು ಪೂರ್ಣವಾದ ಅಭಿಪ್ರಾಯವನ್ನು ಕೊಟ್ಟರೆ ಅದು ಸಂಯೋಜಿತ ವಾಕ್ಯ ಎನಿಸುತ್ತದೆ.

ಉದಾಹರಣೆಗೆ: ನಾನು ಚಿಕ್ಕಂದಿನಲ್ಲೆ ಗೀಜುಗನ ಗೂಡು ನೋಡಿದ್ದೆನು ಆದರೆ ಅದನ್ನು ಸವಿವರವಾಗಿ ಅಭ್ಯಾಸ ಮಾಡಿದ್ದು ಶಿವಮೊಗ್ಗಾದಲ್ಲಿ.

೩) ಮಿಶ್ರವಾಕ್ಯ:

"ಒಂದು ಪ್ರಧಾನ ವಾಕ್ಯದೊಂದಿಗೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಅಧೀನ ವಾಕ್ಯಗಳು ಸೇರಿದ್ದರೆ ಅಂತಹ ವಾಕ್ಯವನ್ನು ಮಿಶ್ರವಾಕ್ಯ" ಎನ್ನುವರು.[೬]

ಉದಾ: "ಮಕ್ಕಳಿಗೆ ಮದುವೆಯಾಗಲು ಇನ್ನೂ ಕಾಲವಿದೆಯೆಂದು ಗಾಂಧೀಜಿ ತಮ್ಮ ಪತ್ನಿಗೆ ತಿಳಿಸಿದರು" ಈ ವಾಕ್ಯದಲ್ಲಿ ಗಾಂಧೀಜಿ ತಮ್ಮ ಪತ್ನಿಗೆ ತಿಳಿಸಿದರು ಎಂಬುದು ಪ್ರಧಾನ ವಾಕ್ಯ ಮಕ್ಕಳಿಗೆ ಮದುವೆಯಾಗಲು ಇನ್ನೂ ಕಾಲವಿದೆ ಎಂಬುದು ಅಧೀನ ವಾಕ್ಯ.

ಹೀಗೆ ಈ ಮೂರು ವಾಕ್ಯ ಪ್ರಭೇದಗಳನ್ನು ಕನ್ನಡ ಭಾಷಾ ಕಲಿಕಾರ್ಥಿಗಳು ತನ್ನ ದಿನನಿತ್ಯ ಭಾಷಾ ಬಳಕೆಯಲ್ಲಿ ಬಳಸುತ್ತಾರೆ ಆದರೆ ವ್ಯಾಕರಣ ಬದ್ದವಾಗಿ ತಿಳಿದಿರುವುದಿಲ್ಲ. ಅಂತಹ ವ್ಯಾಕರಣ ಬದ್ದ ಗ್ರಾಂಥಿಕ ಭಾಷೆಯನ್ನು ಕಲಿಕಾರ್ಥಿಯು ಪ್ರೌಢ ಶಾಲೆಯ ಕನ್ನಡ ಭಾಷಾ ಬೋಧನೆಯಲ್ಲಿ ಮಾತ್ರ ಕಲಿಯಲು ಸಾಧ್ಯವಾಗುತ್ತದೆ. ಆಡು ಭಾಷೆಯ ಕೆಲವು ವಾಕ್ಯಗಳನ್ನು ಮತ್ತು ಗ್ರಂಥಸ್ಥ ಭಾಷೆಯ ಕೆಲವು ವಾಕ್ಯಗಳನ್ನು ಈ ಕೆಳಕಂಡಂತೆ ತಿಳಿಯೋಣ.

ಪ್ರಸ್ತುತ ೮ನೇ, ೯ನೇ, ೧೦ನೇ ತರಗತಿಗಳ ಪಠ್ಯಪುಸ್ತಕಗಳಲ್ಲಿ ಗಮನಿಸಿದಂತೆ ಆಡುಭಾಷೆಯ ವಾಕ್ಯಗಳ ರೂಪ, ಗ್ರಂಥಸ್ಥ ಭಾಷೆಯ ವಾಕ್ಯಗಳ ರೂಪ, ಮತ್ತು ಪಠ್ಯಪುಸ್ತಕದಲ್ಲಿರುವಂತಹ ಕೆಲವು ಪದಗಳಿಗೆ ಬೋಧಕರು ಅರ್ಥೈಸುವ ಕನ್ನಡ ಭಾಷಾ ಪದಗಳು ಈ ಎಲ್ಲಾ ಅಂಶಗಳನ್ನು ಈ ರೀತಿ ಗಮನಿಸಬಹುದು. ಆಡು ಭಾಷೆ ಮತ್ತು ಗ್ರಂಥಸ್ಥ ಭಾಷೆಯಲ್ಲಿ ನಾಮಪದ ಮಾತ್ರ ಒಂದೇ ಆಗಿರುತ್ತದೆ ಉಳಿದ ಸರ್ವನಾಮ ಕ್ರಿಯಾಪದಗಳಲ್ಲಿ ವ್ಯತ್ಯಾಸ ಕಾಣುತ್ತೇವೆ.

ಆಡು ಭಾಷೆಯ ವಾಕ್ಯಗಳು		**ಗ್ರಾಂಥಿಕ ಭಾಷಾ ವಾಕ್ಯಗಳು**
* ಶಿವಮ್ಮ ಗಂಡಸ ಮಗ ಹಡದಾಳ	–	ಶಿವಮ್ಮ ಗಂಡು ಮಗುವಿಗೆ ಜನ್ಮನೀಡಿದಳು
* ರಾಘಣ್ಣ ಹೊಲಕ ಹೊದಂವ ಬರಲಿಲ್ಲ ಅದಕ್ಕ ನಾ ಹೋತಿನಿ	–	ರಾಘಣ್ಣನು ಹೊಲಕ್ಕೆ ಹೋದವನು ಇನ್ನೂ ಬರಲಿಲ್ಲ ಅದಕ್ಕೆ ನಾನು ಹೋಗುತ್ತೇನೆ.
* "ಅದ್ಯಾಕಜ್ಜಾ ಅಳ್ತಿ ಉಣ್ಣಾಕಿಲ್ವ ಹಿಟ್ಟಾರಿ ಹೋಯ್ತಾದೆ ಉಣ್ಣು".	–	ಅದು ಏಕೆ ಅಜ್ಜ ಅಳ್ತಾ ಇದ್ದಿ ಊಟಾ ಮಾಡುವುದಿಲ್ಲವೇ? ಹಿಟ್ಟು ತಣ್ಣಗಾಗುತ್ತೆ ಊಟಾ ಮಾಡು.

ಈ ಆಡು ಭಾಷೆಯ ವಾಕ್ಯಗಳನ್ನು ಗಮನಿಸಿದಾಗ ಆಯಾ ಪರಿಸರದ ಪ್ರಭಾವವಿರುವ ಕನ್ನಡ ಭಾಷೆಯ ವಾಕ್ಯಗಳಾಗಿರುತ್ತವೆ. ಎಲ್ಲಾ ಪರಿಸರದ ಭಾಷೆಗೆ ಒಂದೇ ರೀತಿಯ ಭಾಷೆ ಎಂದರೆ ಅದು ಗ್ರಂಥಸ್ಥ ಭಾಷೆ ಇದು ವ್ಯಾಕರಣ ಬದ್ಧವಾದ ಭಾಷೆಯನ್ನು ಒಳಗೊಂಡಿರುತ್ತದೆ. ಗ್ರಂಥಸ್ಥ ಭಾಷೆ ಎಂದರೆ ಏಕರೂಪದ ಭಾಷೆಯನ್ನು ಒಳಗೊಂಡಿರುತ್ತದೆ. ಇಲ್ಲಿ ಯಾವುದೇ ಪರಿಸರದ ಭಾಷೆಯ ಪ್ರಭಾವ ಇರುವುದಿಲ್ಲ. ಪರಿಸರದ ಭಾಷೆ ಎಂದರೆ ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿ ಅವರವರ ನೇರೆಹೊರೆಯ ಪರಿಸರದ ಭಾಷೆಯ ಕನ್ನಡ ಪ್ರಭಾವ ಭಾಷೆಯ ಮೇಲೆ ಆಗಿ ಅಲ್ಲಿಯ ಸಮಾಜದಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷೆ. ಈ ಗ್ರಂಥಸ್ಥ ಭಾಷೆಯನ್ನು ಬೋಧಕರು ತರಗತಿಗಳಲ್ಲಿ ಅರ್ಥೈಸುವ ಭಾಷಾ ರೂಪವನ್ನು ತಿಳಿಯುವುದಾದರೆ ಇಲ್ಲಿ ಕೇವಲ ಪಠ್ಯಪುಸ್ತಕದಲ್ಲಿನ ಆಡು ಭಾಷೆಯ

ವಾಕ್ಯಗಳಿಗೆ ಗ್ರಂಥಸ್ಥ ವಾಕ್ಯಗಳನ್ನು ಮಾತ್ರ ಗುರುತಿಸಲಾಗಿದೆ. ಆದರೆ ಗ್ರಂಥಸ್ಥ ಪದಗಳಿಗೆ ಬೋಧಕರು ಯಾವ ರೀತಿಯಾಗಿ ಪದಗಳನ್ನು ಅರ್ಥೈಸುತ್ತಾರೆ ಎಂದರೆ ಪಠ್ಯ ಎನ್ನುವುದು ಕನ್ನಡ ಭಾಷಾ ಬೋಧಕರ ಕೈಗನ್ನಡಿ ಇದ್ದಂತೆ ಪಠ್ಯಪುಸ್ತಕದಲ್ಲಿ ಏನೇನು ಇದೆಯೋ ಅದನ್ನು ಕನ್ನಡ ಭಾಷಾ ಬೋಧಕರು ಬೋಧಿಸುವುದು ಇವರ ಕರ್ತವ್ಯವಾಗಿದೆ. ಪಠ್ಯದಲ್ಲಿರುವಂತಹ ಕೆಲವು ಪದಗಳಿಗೆ ಬೋಧಕರು ಅರ್ಥೈಸುವ ಪದಗಳು ಈ ಕೆಳಗಿನಂತಿವೆ.

ಪಠ್ಯದ ಪದಗಳು		**ಬೋಧಕರು ಅರ್ಥೈಸುವ ಪದಗಳು**
ಧನವಂತ	:	ಸಾವುಕಾರ
ಪೂರ್ವಜರು	:	ಹಿಂದಿನ ಜನ, ಹಿಂದಿನ ಕಾಲದವರು
ಉತ್ಸಾಹ	:	ಖುಷಿ
ಮುಸುಕು ಮುಸುಕಾಗಿ	:	ಮಂಜ ಮಂಜ
ಅಕಸ್ಮಾತ	:	ಅಚಾನಕ
ಮಗ್ಗಲು	:	ಬಾಜು, ಪಕ್ಕದಲ್ಲಿ
ಬಿಟ್ಟಿ	:	ಪುಗಸಟ್ಟೆ
ಮೂರ್ಛೆ	:	ಚಕ್ರಬರುತ್ತೆ
ಮಹಾದ್ವಾರ	:	ಅಗಸಿಬಾಗಿಲು
ಅಡ್ಡಬಾಯಿ	:	ನಡಬರಕ ಮಾತನಾಡುವುದು
ಹಬ್ಬಿ	:	ಹರಡಿ
ತಿಕ್ಕಿ ತಿಕ್ಕಿ	:	ವರಸಿ ವರಸಿ
ಗುಜು ಗುಜು	:	ಪಿಸು ಪಿಸು

ಈ ರೀತಿಯಾಗಿ ಪಠ್ಯ ಪುಸ್ತಕದಲ್ಲಿರುವ ಪದಗಳಿಗೆ ಪಠ್ಯದಲ್ಲೆ ಕೊಟ್ಟಿರುವ ಅರ್ಥಗಳ ಜೋತೆಗೆ ಆಯಾ ಪ್ರದೇಶ ಪರಿಸರಕ್ಕೆ ತಕ್ಕ ಭಾಷೆಯ ಪದಗಳನ್ನು ಹೇಳಿದಾಗ ಮಾತ್ರ ಕಲಿಕಾರ್ಥಿಗಳು ಅರ್ಥೈಸಿಕೊಳ್ಳುತ್ತಾರೆ. ಈ ಅನುಕರಣ ಪದಗಳನ್ನು ಗಮನಿಸುವುದಾದರೆ ಪರಿಸರದಿಂದ ಪರಿಸರಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯಿರುವ ಭಾಷಾ ಪದಗಳನ್ನು ಗುರುತಿಸಬಹುದು. ಇಲ್ಲಿ ಇರುವಂತಹ ಮುಸುಕು ಮುಸುಕು ಪದವನ್ನು ಮಂಜ ಮಂಜ, ಮತ್ತು ತಿಕ್ಕಿ ತಿಕ್ಕಿ ತೊಳೆಯಿರಿ ಅನ್ನುವ ಪದಕ್ಕೆ ವರಸಿ ವರಸಿ ಅನ್ನುವುದನ್ನು ಬಳಸುತ್ತಾರೆ. ಈ ತಿಕ್ಕಿ ತಿಕ್ಕಿ ಮತ್ತು ವರಸಿ ವರಸಿ

ಶಬ್ದಗಳಲ್ಲಿ ಅಲ್ಪ ವ್ಯತ್ಯಾಸವಿದ್ದರು ಎರಡು ಒಂದೆ ಎಂಬಂತೆ ಆಯಾ ಪರಿಸರಕ್ಕೆ ತಕ್ಕಂತೆ ಪದಗಳು ಬಳಕೆಯಲ್ಲಿವೆ.

ಪಠ್ಯದಲ್ಲಿರುವ ಕನ್ನಡ ಪದಗಳಿಗೆ ಬೋಧಕರು ಬಳಸುವ ಆಗ್ಲ ಪದಗಳು

ಕನ್ನಡ ಪದ		ಆಂಗ್ಲ ಪದ
ವಿರಾಮ	:	ಇಂಟ್ರವೆಲ್ಲ
ಮಂದಗತಿ	:	ಸ್ಲೋ
ವಿಜ್ಞಾಪನೆ	:	ರಿಕ್ವೆಸ್ಟ್
ಸಾಧಾರಣ	:	ಸಿಂಪಲ್ಲ
ಶುಭರಾತ್ರಿ	:	ಗುಡ್‌ನೈಟ್
ಉದ್ಯಾನವನ	:	ಗಾರ್ಡನ್
ಮಾಸ್ತಾರ	:	ಸರ್
ಶಸ್ತ್ರ ಚಿಕಿತ್ಸೆ	:	ಆಪ್ರೇಶನ್
ಅತಿಥಿಗೃಹ	:	ಗೆಸ್ಟ್‌ಹೌಸ್
ಕಾಲುಚೀಲ	:	ಸಾಕ್ಸ್
ಬಂದು ಮಾಡು	:	ಸ್ವಿಚ್ ಆಫ್
ತಂತ್ರ	:	ಪ್ಲ್ಯಾನ್
ಸರಕಾರ	:	ಗವ್ಹರ್ನ್‌ಮೆಂಟ್
ಹತೋಟಿ	:	ಕಂಟ್ರೋಲ
ಪ್ರವಾಸ	:	ಟೂರ್
ಕಾರ್ಖಾನೆ	:	ಪ್ಯಾಕ್ಟರಿ
ಶಿಷ್ಯವೇತನ	:	ಸ್ಕಾಲರ್‌ಶಿಪ್
ಪದವಿ	:	ಡಿಗ್ರಿ
ಸಿದ್ಧವಾಗು	:	ರೆಡಿಯಾಗು

ಸ್ವಯಂಚಾಲಿತ : ಅಟೋಮೆಟಿಕ್

ನೃತ್ಯ : ಡ್ಯಾನ್ಸ್

ನಾಟಕ : ಡ್ರಾಮಾ

ಪಠ್ಯದಲ್ಲಿರುವ ಪದಾರ್ಥಗಳಿಗೆ ಬೋಧಕರು ಅರ್ಥೈಸಿ ಹೇಳುವಾಗ ಬಳಸುವಂತ ಪದಗಳು

ಪದ	**ಅರ್ಥ**	**ಬೋಧಕರು ಅರ್ಥೈಸುವುದು**
ಪರರು	– ಅನ್ಯರು	– ಬೆರೆಯವರು
ಗ್ರಾಮಿಣಿ	– ಹಳ್ಳಿಯ ಮುಖ್ಯಸ್ಥ	– ಹೆಡ್ / ಲೀಡರ್
ಹರಿಕಾರ	– ಮುಂದಾಳು	– ನಾಯಕ, ಲೀಡರ್
ಸಮಯ	– ವೇಳೆ	– ಟೈಮ್

ಈ ಪದಗಳನ್ನು ಕನ್ನಡ ಭಾಷಾ ಬೋಧಕರು ಬೇಕು ಅಂತ ಅರ್ಥೈಸುವುದಿಲ್ಲ ಪ್ರಸ್ತುತ ಪರಿಸರದಲ್ಲಿ ಬಳಕೆಯಿರುವ ಭಾಷೆ ಬೇಗ ನಾಲಿಗೆ ತುದಿಗೆ ಬರುತ್ತದೆ. ಮತ್ತು ಕಲಿಕಾರ್ಥಿಯು ಬೇಗ ಅರ್ಥೈಸಿಕೊಳ್ಳುತ್ತಾನೆ. ಕಲಿಕಾರ್ಥಿಗಳು ಆಂಗ್ಲ ಪದಗಳನ್ನು ಬೇಗ ಅರ್ಥೈಸಿಕೊಳ್ಳುವುದಕ್ಕೆ ಕಾರಣ ಇಂದಿನ ಸಮೂಹ ಮಾಧ್ಯಮಗಳ ಭಾಷಾ ಪ್ರಭಾವವು ಅವನ ಮೇಲೆ ಹೆಚ್ಚಾಗಿ ಪ್ರಭಾವಿಸಿರುವುದಾಗಿದೆ.

ಈ ಮೇಲಿನ ಪದಗಳನ್ನು ಗಮನಿಸಿದಾಗ ಕನ್ನಡ ಭಾಷಾ ಪ್ರೌಢಿಮೆಯ ಸಮಸ್ಯೆ ಇರುವುದು ತೋರುತ್ತದೆ. ಇಂತಹ ಸಮಸ್ಯೆಗಳಿಗೆ ಕಾರಣ ವೇಗವಾಗಿ ಬೆಳೆಯುತ್ತಿರುವಂತಹ ನಗರೀಕರಣ, ದೂರದರ್ಶನದ ಪ್ರಭಾವ, ಆಂಗ್ಲ ಪದಗಳ ಬಳಕೆಯಿಂದ ತಮ್ಮ ಪ್ರತಿಷ್ಠೆ ಹೆಚ್ಚುತ್ತದೆ ಎಂಬ ಭಾವನೆ. ಹಾಗೆ ಕನ್ನಡ ಭಾಷೆಯ ಪದಗಳಿಗೆ ಸಮಾನ ಅರ್ಥವಿರುವ ಪದಗಳು ನೆನಪಿಗೆ ಬರದೆ ಇದ್ದಾಗ ಆಂಗ್ಲ ಪದಗಳನ್ನು ಬಳಸುವುದು ಹಾಗೂ ಕಲಿಕಾರ್ಥಗಳಿಗೆ ಆಂಗ್ಲ ಭಾಷೆಯ ಪದಗಳಲ್ಲಿ ಹೇಳಿದಾಗ ಬೇಗ ಅರ್ಥವಾಗುತ್ತದೆ ಎಂಬ ಭಾವನೆ. ಈ ಎಲ್ಲಾ ಕಾರಣಗಳಿಂದ ಇಂದಿನ ಬೋಧಕರು ಕನ್ನಡ ಭಾಷೆಯನ್ನು ಬೋಧಿಸುವಾಗ ಆ ಪರಿಸರದ ಭಾಷೆಯೊಂದಿಗೆ ಆಂಗ್ಲಭಾಷೆಯ ಪದಗಳನ್ನು ಕೂಡಾ ಕಲಿಕಾರ್ಥಗಳಿಗೆ ಅರ್ಥೈಸುವುದಕ್ಕಾಗಿ ಬಳಸುತ್ತಿರುವುದು ಒಂದು ಸತ್ಯ ಸಂಗತಿ. ಇಂತಹ ಭಾಷೆಯನ್ನು ಕಲಿಕಾರ್ಥಿಯು ಅರ್ಥೈಸಿಕೊಂಡು ತನ್ನ ಬರವಣಿಗೆಯಲ್ಲಿ ಪರಿಸರದ ಭಾಷೆ ಮತ್ತು ಆಂಗ್ಲ ಭಾಷೆಯ ಪದಗನ್ನು ಬಳಸುತ್ತಿರುವುದರಿಂದ ಕನ್ನಡ ಭಾಷೆಯು ಕಲಿಕೆಯಲ್ಲಿ ಹೆಚ್ಚು ಸಮಸ್ಯೆ ಕಾಣುವುದಕ್ಕೆ ಇದು ಒಂದು ಕಾರಣ ಎನ್ನಬಹುದು.

ಈ ರೀತಿಯಾಗಿ ಕನ್ನಡ ಭಾಷಾ ಕಲಿಕೆ ಮತ್ತು ಬೋಧನೆಯಲ್ಲಿ ಸಮಸ್ಯೆ ಕಾಣುವುದಕ್ಕೆ ಕಾರಣ ಪ್ರಚಲಿತದಲ್ಲಿರುವ ಪಠ್ಯಪುಸ್ತಕ ಮತ್ತು ಹಿಂದಿನ ಪಠ್ಯಪುಸ್ತಕ ಪ್ರಸ್ತುತದ ಭಾಷಾ ವಾತಾವರಣವೆ ಕಾರಣವೆಂದು ಗುರುತಿಸಬಹುದು. ಕನ್ನಡ ಭಾಷೆಯ ಸಮಸ್ಯೆಯನ್ನು ಹೋಗಲಾಡಿಸುವ ಕನ್ನಡ ಭಾಷಾ ಪಠ್ಯಪುಸ್ತಕದ ರಚನೆಯ ಒಳಗಡೆಯೇ ಕೆಲವೊಂದು ಸಮಸ್ಯೆಗಳಿರುವುದನ್ನು ಗಮನಿಸಲಾಗಿದೆ.

೬.೭. ಕನ್ನಡ ಪಠ್ಯಪುಸ್ತಕ ರಚನೆಯಲ್ಲಿನ ಸಮಸ್ಯೆಗಳು

ಕರ್ನಾಟಕ ಸರಕಾರ ಶಿಕ್ಷಣ ಕ್ಷೇತ್ರವನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಕನ್ನಡ ಪಠ್ಯಪುಸ್ತಕಗಳನ್ನು ವೈಜ್ಞಾನಿಕವಾಗಿ ರಚನೆಮಾಡುತ್ತಾ ಬಂದಿದೆ. ಮಕ್ಕಳ ಕಲಿಕೆ ಮತ್ತು ಬೋಧನೆಯ ಗುಣಮಟ್ಟವನ್ನು ಸಂವರ್ಧನೆಗೊಳಿಸುವ ಉದ್ದೇಶದಿಂದ ಪಠ್ಯಪುಸ್ತಕಗಳ ರಚನೆಗೆ ಅನುಕೂಲವಾಗುವಂತೆ ವಿವಿಧ ಕಾರ್ಯಗಾರಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಅದೇ ರೀತಿ ಸಂಶೋಧನಾ ಮನಸ್ಸುಗಳುಳ್ಳ ಮನಸ್ಸಿನಿಂದ ಪಠ್ಯಗಳನ್ನು ರಚನೆ ಮಾಡಲಾಗಿದೆ. ಪಠ್ಯಪುಸ್ತಕದಲ್ಲಿ ಮುಖ್ಯವಾಗಿ ಆಧುನೀಕರಣ ಪ್ರಕ್ರಿಯೆಗೆ ಒತ್ತು ನೀಡಲಾಗಿದೆ. ೧೦ನೇ ತರಗತಿಯ ಪಠ್ಯಪುಸ್ತಕದಲ್ಲಿರುವ ಗೊರುರೂರವರ ಪ್ರವಾಸ ಕಥನ "ಅಮೇರಿಕಾದಲ್ಲಿ ಗೋರುರೂ" ಗದ್ಯಪಾಠವನ್ನು ಗಮನಿಸಬಹುದು. ವಿಶೇಷವಾಗಿ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ೮ನೇ, ೯ನೇ, ೧೦ನೇ ತರಗತಿಯ ಪಠ್ಯಪುಸ್ತಕಗಳು ರಚನೆಗೊಂಡರು ಕಲಿಕಾರ್ಥಿಯ ಬೌದ್ಧಿಕ ಮಟ್ಟಕ್ಕೆ ಅಷ್ಟೆ ಅಲ್ಲ ಬೋಧಕರ ತರ್ಕಕ್ಕೂ ಅರ್ಥೈಸಿಕೊಳ್ಳಲಾಗದಂತಹ ಕೆಲವು ಗದ್ಯಗಳನ್ನು ಅಳವಡಿಸಲಾಗಿದೆ. ೧೦ನೇ ತರಗತಿಯ ಪಠ್ಯಪುಸ್ತಕದಲ್ಲಿ ಜೀವನದೃಷ್ಟಿ ಮತ್ತು ಧರ್ಮ ಸಮದೃಷ್ಟಿ ಪಾಠಗಳನ್ನು ಪ್ರಸ್ತುತ ವರ್ಷದಿಂದ ಕೈಬಿಡಬೇಕೆಂದು ಬೋಧಕರ ಬೇಡಿಕೆಯಾಗಿರುವುದನ್ನು ಶಿಕ್ಷಕರ ತರಬೇತಿ ಕಾರ್ಯಗಾರಗಳಲ್ಲಿ ನಡೆದಿರುವ ಚರ್ಚೆಯ ಮೂಲಕ ಗಮನಿಸಲಾಗಿದೆ. ಕಲಿಕಾರ್ಥಿಗಳ ವಯೋಮಾನಕ್ಕೆ ತಕ್ಕಂತೆ ಪಠ್ಯದಮಾದರಿ ವಿನ್ಯಾಸ, ಅಭ್ಯಾಸ ಚಟುವಟಿಕೆ, ಭಾಷಾಭ್ಯಾಸ, ಭಾಷಾಚಟುವಟಿಕೆ ಕಲಿಕಾ ಸಾಮರ್ಥ್ಯ ಮತ್ತು ಬೋಧನಾ ಸ್ಥರಗಳು ಸಹಜವಾಗಿ ಪ್ರಯೋಗ ಆಗಿವೆ. ಆದರೆ ಪ್ರಾದೇಶಿಕತೆಯ ಭಾಷೆಗಳಿಗೆ ಹೆಚ್ಚು ಮಾನ್ಯತೆಯನ್ನು ನೀಡಿಲ್ಲ.

ಪ್ರಜಾವಾಣಿ ಪ್ರತಿಕೆಯಲ್ಲಿ ಪ್ರಕಟಗೊಂಡ "(ಪಠ್ಯವಿವಾದ) ಪಠ್ಯರಾಜಕೀಯ" ಲೇಖಕರ ಅಭಿಪ್ರಾಯದಂತೆ (ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕರು ಹೆಸರು ಹೇಳಿಲ್ಲ.) ಎಂಬ ಲೇಖನದಲ್ಲಿನ "ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ೨೦೦೦ನೇಯ ಇಸ್ವಿಯಲ್ಲಿ ಪಠ್ಯಕ್ರಮ ಕುರಿತು ಪ್ರಕಟಗೊಂಡ ನಂಬಿಕೆಗಳು ಮಣ್ಣುಪಾಲಾಗುವುದಕ್ಕೆ ಬಿಜೆಪಿ ಸರ್ಕಾರವೆ ಕಾರಣ. ಏಕೆಂದರೆ ತನಗೆ ಇಷ್ಟಬಂದಂತೆ ೨೦೦೫ರಲ್ಲಿ ನೂತನ ಪಠ್ಯಪುಸ್ತಕ ರಚನೆಗೆ ಮುಂದಾಯಿತು. ಇದರಲ್ಲಿ ಪಠ್ಯಪುಸ್ತಕ ರಚನಾಕಾರರು ಮಾಹಿತಿ ತುರಕಿದಾರೆ ಹೊರತು ಜ್ಞಾನವಲ್ಲ. ಎಲ್ಲವನ್ನು ಒಮ್ಮೆಲೆ ಹೇಳುವ ತವಕ ಬಹಳ ಬೋಧಿಸುವುದು, ಕಲಿಕೆ ಮಾತ್ರ ಕಡಿಮೆ ಇದಕ್ಕೆ ಪರೀಕ್ಷೆಗಳ ವೈಭವೀಕರಣಕ್ಕೆ ಪಠ್ಯಪುಸ್ತಕ ಕೊಡುಗೆ ನೀಡಿದಂತಿವೆ' ಎನ್ನುತ್ತಾರೆ.

ಪ್ರಸ್ತುತದಲ್ಲಿರುವ ಒಟ್ಟಾರೆ ಪಠ್ಯ ಪುಸ್ತಕಗಳು ಬಿಜೆಪಿ ಸರಕಾರವನ್ನು ಬೆಂಬಲಿಸುವಂತಹ ವಿಷಯಾಂಶಗಳನ್ನು ಒಳಗೊಂಡಿವೆ. ಆದ ಕಾರಣ ಈ ಪಠ್ಯಪುಸ್ತಕಗಳನ್ನು ರದ್ದುಗೊಳಿಸಿ ೨೦೧೭-೧೮ನೇ ಸಾಲಿನಲ್ಲಿ ಹೊಸ ಪಠ್ಯಪುಸ್ತಕಗಳು ಜಾರಿಯಾಗಲಿವೆ ಎಂಬ ಹೇಳಿಕೆ ಒಂದು ಕಡೆಯಾದರೆ. ಈಗಾಗಲೇ ಪ್ರಚಲಿತದಲ್ಲಿರುವ ಪಠ್ಯಗಳು ಸಮಗ್ರ ವಿಷಯಾಂಶವನ್ನು ಒಳಗೊಂಡಿಲ್ಲ ಮತ್ತು ಕೇಂದ್ರದ ಮಾದರಿಯಲ್ಲಿ ರಾಜ್ಯದ ಪಠ್ಯಪುಸ್ತಕಗಳು ರಚನೆಗೊಳ್ಳುವ ಉದ್ದೇಶದಿಂದ ಬರಗೂರು ರಾಮಚಂದ್ರಪ್ಪರವರ ನೇತೃತ್ವದಲ್ಲಿ ಸಮಿತಿ ರಚಿಸಿ ಪಠ್ಯಪುಸ್ತಕ ಬದಲಾವಣೆಗೆ ತರಲಾಗುತ್ತಿದೆ ಎನ್ನಲಾಗಿದೆ. ಆದರೆ ಒಂದು ವರ್ಷದ ಮಟ್ಟಿಗೆ ಮಾತ್ರ ಮತ್ತೆ ೨೦೧೮-೧೯ನೇ ಸಾಲಿನಲ್ಲಿ ಕೇಂದ್ರ ಸರಕಾರವೆ ರಾಷ್ಟ್ರದ್ಯಂತ ಏಕರೂಪ ಮಾದರಿಯ ಪಠ್ಯಪುಸ್ತಕ ಜಾರಿ ಮಾಡಲು ಮುಂದಾಗಿದೆ. ಆದರೆ ರಾಜ್ಯ ಸರಕಾರ ಕೇವಲ ಒಂದು ವರ್ಷಕ್ಕಾಗಿ ಕೊಟ್ಯಾಂತರ ರೂಪಾಯಿ ಖರ್ಚು ಮಾಡಿ ಹೊಸ ಪಠ್ಯಪುಸ್ತಕ ಜಾರಿಗೆ ತಂದರು ಅದನ್ನು ಅರ್ಥೈಸಿಕೊಂಡು ಬೋಧಕರು ಬೋಧಿಸುವಷ್ಟರಲ್ಲಿ ಒಂದು ವರ್ಷ ಮುಗಿದೇ ಹೋಗುತ್ತದೆ. ಇಲ್ಲಿ ಬೋಧಕ ಮತ್ತು ಕಲಿಕಾರ್ಥಿಗಳ ಮನಸ್ಥಿತಿಯನ್ನು ಅರಿಯದೆ ಸರಕಾರ ಇಂತಹ ತೀರ್ಮಾನ ಕೈಗೊಂಡಿರುವುದು ಶೋಚನಿಯ ಸ್ಥಿತಿಯಾಗಿದೆ. ಇಂತಹ ಚರ್ಚೆಯಿಂದ ತಿಳಿಯುವುದೇನೆಂದರೆ ಪಠ್ಯಪುಸ್ತಕ ಬೇಕಾಗಿರುವುದು ಬೋಧಕರಿಗೋ? ಕಲಿಕಾರ್ಥಿಗಳಿಗೋ? ಇಲ್ಲ ರಾಜಕೀಯಕ್ಕೋ? ಅಥವಾ ನಮ್ಮ ಸರಕಾರಕ್ಕೊ? ಎಂಬ ಪ್ರಶ್ನೆ ಕಾಡುತ್ತದೆ.

ಈ ಮೇಲಿನ ಲೇಖನದ ಪ್ರಕಾರ ಅಂಶವನ್ನು ಗಮನಿಸಿದಾಗ ಪಠ್ಯಪುಸ್ತಕ ರಚನೆ ಆಗಬೇಕಾಗಿದ್ದು ವಿಶೇಷ ಭಾಷಾ ತಜ್ಞರು, ಸಾಹಿತ್ಯಕಾರರಿಂದ. ಆದರೆ ಪಠ್ಯಪುಸ್ತಕ ರಚನೆಗೊಳ್ಳುವುದು ರಾಜಕೀಯ ಪ್ರಭಾವದಿಂದ. ಆದಕಾರಣ ಇಂದಿನ ಪಠ್ಯಪುಸ್ತಕಗಳಲ್ಲಿ ಏಕರೂಪತೆ ಇಲ್ಲದಂತಾಗಿದೆ.

ಪಠ್ಯದ ರಚನೆಯಲ್ಲಿ ಏಕರೂಪತೆ ಕಾಪಾಡುವುದು ಬಹಳ ಮುಖ್ಯ. ಭಾಷಾ ಶಿಷ್ಟೀಕರಣದ ದೃಷ್ಟಿಯಿಂದ ಇದು ಒಳ್ಳೆಯದು. ಪ್ರಥಮ ಭಾಷೆ ಸಿರಿ ಕನ್ನಡ ೯–೨೦೧೪ರ ಕನ್ನಡ ಪಠ್ಯದ ಗದ್ಯ ಭಾಗದಲ್ಲಿ ೫ನೇ ಪಾಠದಲ್ಲಿ 'ಸಮಾಗಮ' ಅನುವಾದಿತ ನಾಟಕದಲ್ಲಿ ನಡುಮಗ ಎಂದರೆ ಮಹಾಭಾರತದಲ್ಲಿ ಬರುವ ಭೀಮ ಎಂದು ಚಿತ್ರಿಸಲಾಗಿದೆ. ಮೂಲ ಮಹಾಭಾರತದಲ್ಲಿ ಮಧ್ಯಮ ಪಾಂಡವ ಎಂದರೆ ಅರ್ಜುನ ಎಂದು ಇದೆ. ಇಂತಹ ಗೊಂದಲಗಳಿರುವುದು ಪಠ್ಯದಲ್ಲಿ ಎಷ್ಟರ ಮಟ್ಟಿಗೆ ಸರಿ? ಮತ್ತು ೮ನೇ, ೯ನೇ, ಹಾಗೂ ೧೦ನೇ ತರಗತಿಯ ೨೦೦೮, ೦೯, ೧೦ನೇ ವರ್ಷದಲ್ಲಿಯ ಮತ್ತು ೨೦೧೨ ರ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಕವಿ ಮತ್ತು ಕವಯತ್ರಿಯರ ಪರಿಚಯಿಸುವಾಗ ಹಳೆಗನ್ನಡ ನಡುಗನ್ನಡದ ಕವಿಗಳು ವಚನಕಾರರನ್ನು ಏಕವಚನ, ಸರ್ವನಾಮ ಪದಗಳಿಂದ ಸಂಬೋಧಿಸಿದರೆ, ಆಧುನಿಕ ಕಾಲದ ಕವಿ ಮತ್ತು ಕವಯತ್ರಿಯರನ್ನು ಬಹುವಚನದ ಸರ್ವನಾಮದಿಂದ ಸಂಬೋಧಿಸಿದ್ದಾರೆ. ಉದಾಹರಣೆ ವಚನಕಾರರಾದ ಅಕ್ಕಮಹಾದೇವಿಯುವರನ್ನು ಪರಿಚಯಿಸುವಾಗ ಈಕೆಯ ಕಾಲ ಈಕೆಯ ಸ್ಥಳ ಎಂದು ಪದ ಬಳಸಿದರೆ ಅದೇ ಪುರುಷವಾಚಕವಾದರೆ ಇವನ ಕಾಲ ಇವನ ಸ್ಥಳ

ಇತ್ಯಾದಿ. ಆಧುನಿಕ ಕವಿಗಳಿಗಾದರೆ ಇವರ ಕಾಲ, ಇವರ ಕೃತಿಗಳು ಎಂದು ಬರೆಯಲಾಗಿದೆ. ಇಂತಹ ಪದಗಳನ್ನು ಕಲಿಕಾರ್ಥಿಗಳು ಪ್ರಶ್ನೆಮಾಡಿದರೆ ಅದಕ್ಕೆ ಬೋಧಕರಲ್ಲಿ ಉತ್ತರ ಸಿಗುವುದಿಲ್ಲ. ೨೦೧೨ರ 'ಸಿರಿ ಕನ್ನಡ' ೮ನೇ ತರಗತಿ ಪುಸ್ತಕದ ಪುಟ ಸಂಖ್ಯೆ: ೬೮ರಲ್ಲಿ ಗುಂಪಿಗೆ ಸೇರದ ಪದವನ್ನು ಆಯ್ಕೆ ಮಾಡಿ ಬರೆಯಿರಿ ಎಂದು ಬಿಸಿಯಾದ, ಒಬ್ಬೊಬ್ಬ ಸಮೀಪವಾದುದು, ಗಾಯವಾಗು ಎಂಬ ಪದಗಳನ್ನು ಗದ್ಯದ ಒಳಗಿನ ವಾಕ್ಯಗಳಿಗೆ ಸಂಬಂಧಿಸಿದ ಪದಗಳನ್ನು ಕೊಟ್ಟಿದ್ದಾರೆ. ಸಾಮನ್ಯವಾಗಿ ಮೂರು ಪದಗಳು ಒಂದೇ ರೀತಿಯಾಗಿದ್ದು ಒಂದು ಮಾತ್ರ ಬೇರೆ ಇರುವಂತಹ ಪದಗಳನ್ನು ಕೊಟ್ಟಾಗ ಮಗುವಿನ ಕಲಿಕೆಯಲ್ಲಿ ಸಮಸ್ಯೆಯಾಗುವುದಿಲ್ಲ. ಇಲ್ಲದಿದ್ದರೆ ಕಲಿಕಾರ್ಥಿಯು ಗೊಂದಲಕ್ಕಿಡಾಗುತ್ತಾರೆ.

ಪ್ರೌಢ ಶಾಲೆಯಲ್ಲಿ ಕಲಿಕಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡ ಕನ್ನಡ ಪಠ್ಯಪುಸ್ತಕದಲ್ಲಿ ಬಳಸಿದಂತಹ ಭಾಷೆಯು ಎಷ್ಟು ಸೂಕ್ತ ಎಂಬುದನ್ನು ಪರಿಶೀಲಿಸುವುದಾದರೆ, ೨೦೧೨ ರ 'ಕನ್ನಡ ಸಿರಿ' ೮ನೇ ತರಗತಿ ಪಠ್ಯ ಪುಸ್ತಕದಲ್ಲಿನ 'ಬಿಲ್ಲಹಬ್ಬ' ಪಾಠದ ಕೊನೆಯಲ್ಲಿ ಕೊಟ್ಟಂತಹ ಎರಡು ಪ್ರಶ್ನೆಗಳನ್ನು ಗಮನಿಸೋಣ

೧. ಕೃಷ್ಣನ ಕೈಯಲ್ಲಿ ಸಿಕ್ಕ ಧೇನುಕ ಏನಾದ?

೨. ಕೃಷ್ಣ ಯಾರ ಸೊಂಟವನು ಮುರಿದ?

ಈ ಏನಾದ? ಮತ್ತು ಮುರಿದ? ಎನ್ನುವ ಪದಗಳು ಏನಾದನು? ಮುರಿದನು? ಎಂದಾದರೆ ಸ್ಪಷ್ಟತೆಯಿರುತ್ತದೆ. ಇಂತಹ ಎಷ್ಟೊ ಅಸ್ಪಷ್ಟತೆಯಿರುವ ವಾಕ್ಯಗಳು ಅಲ್ಲಲ್ಲಿ ಪಠ್ಯದಲ್ಲಿ ಕಂಡುಬರುತ್ತವೆ. ಅದೇ ರೀತಿಯಾಗಿ ಆಂಗ್ಲ ಭಾಷೆಯ ಪದಗಳು ಹೆಚ್ಚಾಗಿ ಪಠ್ಯ ಮುಸ್ತಕದಲ್ಲಿ ಬಳಕೆಯಾಗಿವೆ.

ಆಂಗ್ಲ ಪದದ ಬಳಕೆಯ ಬದಲಾಗಿ ಕನ್ನಡ ಭಾಷೆಯ ಪದಗಳನ್ನೇ ಬಳಸಿದ್ದರೆ ಕನ್ನಡ ಭಾಷೆಯ ಶಬ್ದ ಸಂಪತ್ತಿನ ತಿಳವಳಿಕೆ ಇನ್ನೂ ಹೆಚ್ಚಾಗುತಿತ್ತು. ಈ ಆಂಗ್ಲ ಭಾಷೆಯ ಪದಗಳು ಪ್ರವಾಸ ಕಥನ ಮತ್ತು ವ್ಯಕ್ತಿ ಚಿತ್ರ ಮತ್ತು ೯ನೇ ತರಗತಿಯ ಪಾಠಕ್ಕೆ ಸಂಬಂಧಿಸಿದಂತೆ 'ಅಚ್ಚರಿಯ ಜೀವಿ ಇಂಬಳ' ಇನ್ನಿತರ ಪಾಠಗಳಲ್ಲಿ ಕೆಲವು ಆಂಗ್ಲ ಪದಗಳನ್ನು ಕಾಣುತ್ತೇವೆ.

ಉದಾಹರಣೆಗೆ :

* ಸಾರ್ಥಕ ಬದುಕಿನ ಸಾಧಕ ೮ನೇ ತರಗತಿ ಪಠ್ಯ ಪುಸ್ತಕದಲ್ಲಿ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರವರ ವ್ಯಕ್ತಿ ಚಿತ್ರ ಪಾಠದಲ್ಲಿ 'ಡಿ.ವಿ.ಜಿ ಯವರೇನು ದೊಡ್ಡದೊಡ್ಡ ಡಿಗ್ರಿ ಪಡೆದವರಲ್ಲ ಎಂದಿದ್ದಾರೆ. 'ಡಿಗ್ರಿ' ಎಂಬ ಪದದ ಬದಲಾಗಿ 'ಪದವಿ' ಎಂಬ ಕನ್ನಡ ಪದ ಬಳಸಬಹುದಿತ್ತು.

* ಸಾರಾ ಅಬೂಬಕ್ಕರ್ ರವರ 'ಪ್ರಾಮಾಣಿಕತೆ' ಗದ್ಯದಲ್ಲಿ. ಟೆಂಡರ್, ಕಂಟ್ರಾಕ್ಟರ್, ಕಂಟ್ರಾಕ್ಟ್, ಅರ್ಜೆಂಟ್, ಅಡ್ವಾನ್ಸ್ ಎಂಬ ಆಂಗ್ಲ ಪದಗಳ ಬಳಕೆ ಇದೆ. ಇವುಗಳ ಬದಲಾಗಿ ಆವರಣ ಚಿಹ್ನೆಯಲ್ಲಾದರು ಕನ್ನಡ ಭಾಷೆಯ ಪದಗಳನ್ನು ಬಳಸಬೇಕಿತ್ತು.

* ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರ 'ಅಮೆರಿಕಾದಲ್ಲಿ ಗೊರೂರು ಪ್ರವಾಸ ಕಥನದಲ್ಲಿ ಆಫ್, ಸ್ವಿಚ್, ಪ್ರೈಮರಿ ಶಾಲೆ, ಟೆನ್ನಿಸ್ ಹಾಲ್, ಇನ್ನಿತರ ಆಂಗ್ಲ ಭಾಷೆಯ ಪದಗಳ ಬಳಕೆ ಹೆಚ್ಚಾಗಿದೆ.

ಆಂಗ್ಲ ಪದಗಳು	–	**ಬಳಸಬೇಕಿದ್ದ ಕನ್ನಡ ಪದಗಳು**
ಟೆಂಡರ್	–	ನಿವೇದನೆ ಸಲ್ಲಿಸುವುದು ಅಥವಾ ಇಂತಷ್ಟು ದರಕ್ಕೆ ಕೆಲಸ ಮಾಡುವೆನೆಂದು ದರಖಾಸ್ತು ಮಾಡುವುದು
ಕಂಟ್ರಾಕ್ಟ್	–	ಕರಾರು, ಗುತ್ತಿಗೆ, ಮುಚ್ಚಳಿಕೆ.
ಅರ್ಜೆಂಟ್	–	ಅವಸರ, ತರಾತುರಿ, ಜರೂರು
ಆಫ್	–	ತೆಗೆದು ಹಾಕು
ಸ್ವಿಚ್	–	ಒತ್ತು ಗುಂಡಿ ವಿದ್ಯುತ ಶಕ್ತಿಯನ್ನು
ಪ್ರೈಮರಿ ಶಾಲೆ	–	ಪ್ರಾಥಮಿಕ ಶಾಲೆ
ಟೆನ್ನಿಸ್ ಹಾಲ್	–	ಟೆನ್ನಿಸ್ ಸಭಾಂಗಣ
ಕಂಟ್ರಾಕ್ಟರ್	–	ಗುತ್ತಿಗೆದಾರ

ಈ ಪದಗಳನ್ನು ಪರಿಚಯಿಸುವುದಕ್ಕೆ ಕಾರಣವಿದೆ. ಕನ್ನಡ ಭಾಷಾ ಬೋಧಕರು ತರಗತಿಯಲ್ಲಿ ಈ ಆಂಗ್ಲ ಭಾಷೆಯ ಪದಗಳಿಗೆ ಪರ್ಯಾಯವಾಗಿ ಕನ್ನಡ ಪದಗಳನ್ನು ಅರ್ಥೈಸಿ ಹೇಳದಿದ್ದರು ಕಲಿಕಾರ್ಥಿಗಳಿಗೆ ಹಾಗೆಂದರೇನು ಎಂದು ತಿಳಿದಿರುತ್ತದೆ. ಈ ಎಲ್ಲಾ ಆಂಗ್ಲ ಪದಗಳು ನಮ್ಮ ಕನ್ನಡ ಭಾಷೆಯ ಪದಗಳೆ ಎಂಬಂತೆ ಇವತ್ತಿನ ದಿನಗಳಲ್ಲಿ ಬಳಸುತ್ತಿದ್ದೆವೆ.

ಆದ್ದರಿಂದ ಇನ್ನಾದರೂ ಭಾಷೆಯ ಸಮೃದ್ಧಿಯನ್ನು ಹೆಚ್ಚಿಸುವುದಕ್ಕೆ ಒಳ್ಳೆ ಒಳ್ಳೆಯ ಪ್ರಾದೇಶಿಕ ಭಾಷಾ ಭಿನ್ನತೆಯಿರುವ ಪಾಠಗಳನ್ನು ಪಠ್ಯದಲ್ಲಿ ಅಳವಡಿಸಬೇಕು. ಆದರೆ ಪ್ರಸ್ತುತ ಪಠ್ಯಗಳಲ್ಲಿರುವ ಕೆಲವು ಪಾಠಗಳು ಎಂದರೆ ೧೦ನೇ ತರಗತಿಯ ಪಾಠಗಳಾದ ಜೀವನದೃಷ್ಟಿ ಧರ್ಮಸಮದೃಷ್ಟಿ. ೯ನೇ ತರಗತಿಯ ಕನ್ನಡ ಸಿರಿಯಲ್ಲಿರುವ ಅಚ್ಚರಿಯ ಜೀವಿ ಇಂಬಳ, ಪರಿಸರ ಸಮತೋಲನ ಈ ಪಾಠಗಳಲ್ಲಿ ಇಂಬಳ ಮತ್ತು ಪರಿಸರ ಸಮತೋಲನ ಪಾಠಗಳನ್ನು ಈಗಾಗಲೇ ವಿಜ್ಞಾನ ಪುಸ್ತಕದಲ್ಲಿ

ಅಧ್ಯಯನ ಮಾಡಿರುತ್ತಾರೆ. ಕನ್ನಡ ಪಠ್ಯಗಳಲ್ಲಿ ಇವುಗಳ ಅವಶ್ಯಕತೆ ಇಲ್ಲಾ ಎನಿಸುತ್ತದೆ. ಹಾಗೆಯೇ ಜೀವನದೃಷ್ಟಿ ಮತ್ತು ಧರ್ಮ ಸಮದೃಷ್ಟಿ ಗದ್ಯಗಳು ಇವುಗಳಲ್ಲಿ ಅಡಕವಾಗಿರುವ ಅಂಶವನ್ನು ಸ್ಪಷ್ಟವಾಗಿ ಬೋಧಿಸುವದಕ್ಕೆ ಆಗುವುದಿಲ್ಲ. ಗೊಂದಲದಿಂದ ಕೂಡಿದ ಗದ್ಯಗಳಾಗಿವೆ. ಅದೇ ರೀತಿಯಾಗಿ ೧೦ನೇ ತರಗತಿಯ ಪಠ್ಯಪುಸ್ತಕದಲ್ಲಿ (೨೦೧೪) 'ಅಮೇರಿಕಾದಲ್ಲಿ ಗೋರುರೂ' ಪಾಠದಿಂದ ಮಕ್ಕಳಿಗೆ ಹೆಚ್ಚಾಗಿ ಕನ್ನಡ ಪದಗಳಿಗಿಂತ ಆಂಗ್ಲಭಾಷೆಯ ಪದಗಳಿಂದಲೆ ಈ ಪಾಠ ಬೋಧಿಸಬೇಕಾಗುತ್ತದೆ. ಆದ್ದರಿಂದ ಇಂತಹ ಪಾಠಗಳು ಪಠ್ಯಗಳಲ್ಲಿ ಅಳವಡಿಸಿದ್ದರಿಂದ ಕನ್ನಡ ಭಾಷೆಯ ಕಲಿಕೆಯಲ್ಲಿ ಕನ್ನಡ ಭಾಷಾ ಸಮೃದ್ಧಿ ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ.

ಈ ರೀತಿಯಾಗಿ ಕನ್ನಡ ಭಾಷಾ ಬೋಧನೆಯಲ್ಲಿ ಕನ್ನಡ ಭಾಷಾ ಪಠ್ಯಪುಸ್ತಕಗಳು ಭಾಷಾ ಪ್ರೌಢಿಮೆ ಬೆಳೆಸುವುದರಲ್ಲಿ, ಭಾಷಾ ವ್ಯತ್ಯಾಸ ಗುರುತಿಸುವಲ್ಲಿ, ಅನ್ಯ ಭಾಷೆಯ ಪದಗಳ ಬಳಕೆಯ ಸಂದರ್ಭದಲ್ಲಿ ಪಠ್ಯಪುಸ್ತಕಗಳು ತಮ್ಮದೆಯಾದಂತಹ ಪ್ರಮುಖ ಪಾತ್ರವಹಿಸುತ್ತವೆ.

೬.೮. ಪಠ್ಯದ ಭಾಷೆಯಲ್ಲಿ ಇತಿ ಮಿತಿ

೮, ೯, ೧೦ನೇ ತರಗತಿಯ ಪಠ್ಯಪುಸ್ತುಕಗಳನ್ನು ಗಮನಿಸಿದಾಗ ಕೆಲವೊಂದು ಗದ್ಯ ಮತ್ತು ಪದ್ಯಗಳಲ್ಲಿ ಬೋಧಕರಿಗೆ ಬೋಧಿಸುವಾಗ ಬಿಚ್ಚು ಮನಸ್ಸಿನಿಂದ ಹೇಳಲಾಗದ ಕೆಲವೊಂದು ಸಂದರ್ಭಗಳು ಇವೆ. ಬೋಧಕರು ಕಲಿಕಾರ್ಥಿಗಳಿಗೆ ಈ ಅಂಶವನ್ನು ನಾನು ಹೇಗೆ ಹೇಳಬೇಕು. ಕಲಿಕಾರ್ಥಿಗಳು ಕೇಳುವ ಪ್ರಶ್ನೆಗಳಿಗೆ ನಾನು ಹೇಗೆ ಉತ್ತರಿಸಲಿ, ಇದನ್ನು ವಿವರಿಸುವುದಕ್ಕೆ ನನಗೆ ಮುಜುಗರವಾಗುತ್ತದೆ. ಅಂತಹ ಕೆಲವೊಂದು ಸನ್ನಿವೇಶಗಳು ಈ ರೀತಿಯಾಗಿವೆ.

೮ನೇ ತರಗತಿಯ ಪ್ರಥಮ ಭಾಷೆ ಪಠ್ಯಪುಸ್ತಕದಲ್ಲಿ ಕವಿ ಚಾಮರಸರ 'ಅಲ್ಲಮ ನಟಿಸಿ ನಿಂದನು' ಪದ್ಯಭಾಗವನ್ನು ಗಮನಿಸಿದಾಗ 'ಅಲ್ಲಮ ತನ್ನ ನಿಜರೂಪವನ್ನು ಮರೆ ಮಾಚಿ ಕಾಮನ ರೂಪವನ್ನು ಧರಿಸಿ ಮದ್ದಳಿಗನಾಗುತ್ತಾನೆ. ಇಲ್ಲಿ ಮದ್ದಳಿಗ ಅಲ್ಲಮನ ಚೆಲುವು ಮಧುರ ನಿನಾದಕ್ಕೆ ಆನಂದ ಭರಿತವಾಗಿ ನಲಿಯುವ ನವಿಲಿನಂತೆ ಮಾಯಾದೇವಿ ಮನಸೋಲುತ್ತಾಳೆ. ಈ ಸನ್ನಿವೇಶವನ್ನು ವಿವರಿಸಬೇಕೆಂದರೆ ಸ್ವಲ್ಪ ಕಷ್ಟವೆನಿಸುತ್ತದೆ. ಇಲ್ಲಿ ಮಾಯಾದೇವಿ ಅಲ್ಲಮನ ಚೆಲುವು ಮತ್ತು ಮದ್ದಳೆಯ ನಿನಾದಕ್ಕೆ ಮನಸೋತಿದ್ದಾಳೆ ಅಂದರೆ ಪ್ರೀತಿ ಹುಟ್ಟಿದೆ ಎನ್ನುವ ಭಾವದಲ್ಲಿ ಇದನ್ನು ವಿವರಿಸಬೇಕಾಗುತ್ತದೆ. ಇನ್ನು ವಿವರಿಸುವುದಕ್ಕೆ ಬೋಧಕರಿಗೆ ಕಷ್ಟವೆನಿಸುತ್ತದೆ.

ಅದೇ ರೀತಿಯಾಗಿ ೯ನೇ ತರಗತಿಯ ಕನ್ನಡ ಪಠ್ಯಪುಸ್ತಕ ೨೦೦೮ ಗೀತಾ ನಾಗಭೂಷಣ್‌ರವರ 'ಅವ್ವ' ಉತ್ತರ ಕರ್ನಾಟಕದ ಪಾಠವನ್ನು ಒಳಗೊಂಡಿದ್ದು ಈ ಪಾಠವು ಅಶ್ಲೀಲತೆಯಿಂದ ಕೂಡಿದೆ. ಇದನ್ನು ಪಠ್ಯಪುಸ್ತಕದಿಂದ ತೆಗೆದು ಹಾಕಬೇಕು. ಇಲ್ಲದಿದ್ದರೆ ಅಶ್ಲೀಲತೆ ಒಳಗೊಂಡ ಸನ್ನಿವೇಶವನ್ನಾದರು ಪಾಠದಿಂದ ತೆಗೆಯಬೇಕೆಂದು DSERT ಗೆ ದೂರು ನೀಡಿದಾಗ ಪಠ್ಯಪುಸ್ತಕದಿಂದ ಆ ಪಾಠವನ್ನೇ

ತೆಗೆದು ಹಾಕಲಾಯಿತು. ಹಾಗಾದರೆ ಆ ಪಾಠದಲ್ಲಿ ಅಂತಹ ಅಶ್ಲೀಲತೆ ಏನಿದೇ? ಆ ಅಶ್ಲೀಲತೆ ಅಂಶವನ್ನು ಇಲ್ಲಿ ಗಮನಿಸೋಣ.

"ಯಾರದು ಅಲ್ಲಿ?"

"ನಾನ್ರೀಯಪ್ಪಾ... ಗಂಗಾ... ಹಳ್ಳಿಯಿಂದ ಬಂದೀನ್ರಿ ಬಾಬಾ... ನನ್ ಕೂಸಿಗೆ ದವಾಖನ್ಯಾಗ ಸೇರ್ಕಿ ಮಾಡೀನ್ರಿ... ಇಂಜಿಶನ ಅಗಸುದ್ಧ್ಯಾ ಬರಕೊಟ್ಟಿದ್ರು ಡಾಕದರ ಸಾಬ್ರು... ಯಾವುದೋ ಆವೇಶದಿಂದೆಂಬಂತೆ ಪಟ ಪಟನೆ ನುಡಿದವಳು ತಟ್ಟನೆ ಮಾತು ನಿಲ್ಲಿಸಿದಳು. ಆ ಆಗುಂತಕ ಸಿರಿವಂತ ಮುಂದೆ ನಡೆದು ಬಂದ ಅವಳು ಎದ್ದು ನಿಂತಳು.

"ಹೂಂ...ಏನಂದ್ರು ಡಾಕ್ಟರು?"

ಅವನು ಕೇಳಿದ.

"ಇಂಜಿಶನ ಬರ್ದು ಕೊಟ್ಟಾರ್ರಿ... ನನ್ ಬಲ್ಲಿ ರೊಕ್ಕಾ ಇರಲಿಲ್ಲ ಆ ದುಕಾನದವ್ರು ಕುಡಲಿಲ್ಲರಿ...

"ಎಷ್ಟು ರೂಪಾಯಿ ಬೇಕಾಗಿತ್ತು ಅದಕ್ಕ?"

"ಚಾಳಿಸರ ಮ್ಯಾಲ ನಾಕು ರುಪೈ ಮತ್ತು ಅಠಾಣೇರಿ ಸಾಬ್ರೇ...

"ಹೂಂ... ರಾತ್ರಿ ಹತ್ತು ಗಂಟೆಯವರೆಗೆ ಈ ಔಷಧಿ ಅಂಗಡಿ ತೆರೆದಿರ್ತಾರ, ನಾ ನಿನಗ ಪನ್ನಾಸು ರುಪೈ ಕುಡ್ತಿನಿಂತ ನನ್ ಸಂಗಾಟ ಬಾ"

"ಎಲ್ಲಿಗ್ರೀ ಸಾಬ್ರೆ?"

ಅವಳು ಆಸೆ ಬೆರೆತ ದನಿಯಲ್ಲಿ ಕೇಳಿದಳು.

"ಬದುಕಬೇಕ್ರಿಯಪ್ಪಾ... ನನ್ಮಗಾ ಜರೂರ, ಜರೂರ ಬದುಕಬೇಕ್ರಿ ಸಾಬ್ರೆ..."

"ಹಾಗಿದ್ರ ಬಾ ನನ್ ಜೊತೆ"

ಅವಳು ಜೀವ ಗಟ್ಟಿ ಮಾಡಿಕೊಂಡಳು ಆದದ್ದಾಗಲಿ ಅಂತ ಬಿರಬಿರನೆ ಅವನ ಹಿಂದೆ ಹೊರಟಳು. ಅವನು ಮುಂದೆ ಬಂದು ತನ್ನ ಕಾರಿನ ಬಾಗಿಲು ತೆರೆದ 'ಕೂಡು' ಎಂದ ಅವಳು ಹೆದರುತ್ತಲೇ ಕುಳಿತಳು ಕಾರು ಕತ್ತಲೆಯಲ್ಲಿ ದೂರ ದೂರ ಸರಿಯಲಾರಂಭಿಸಿತು. ಗಂಗಾ ಕಾರು ಹತ್ತಿ ಇಳಿಯುವ ಭರಾಟೆಯಲ್ಲಿ ಉಟ್ಟಿದ್ದ ಸೀರೆಯ ಸೆರಗು ಜಾರಿ ಹರಿದಿತ್ತು ಇದ್ದದ್ದು ಅದೊಂದೆ ಸೀರೆ!

ಈ ಸಿರಿವಂತ ಮತ್ತು ಗಂಗಾಳ ಸಂಭಾಷಣೆ ಓದಿದರೆ ಎಲ್ಲಿ ಅಶ್ಲೀಲತೆ ಎನ್ನುವುದು ಅಡಗಿದೆ. ಗಂಗಾ ಆ ವ್ಯಕ್ತಿಯ ಜೊತೆ ಹೊರಟ ಸಂದರ್ಭವೋ? ಇಲ್ಲ ಅವಳು ಭಯದಿಂದ ಕಾರಿನ ಒಳಗೆ

ಕುಳಿತಿರುವುದೋ? ಅಥವಾ ಕತ್ತಲೆಯಲ್ಲಿ ದೂರಕ್ಕೆ ಕಾರು ಚಲಿಸಿದ್ದೋ? ಇಲ್ಲಾ ಗಂಗಾ ಕಾರು ಇಳಿಯುವ ಆತುರದಲ್ಲಿ ಉಟ್ಟಿದ್ದ ಸೀರೆಯ ಸೆರಗು ಜಾರಿ ಹರಿದಲ್ಲಿಯೋ? ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಅವರವರ ಭಾವನೆಯಲ್ಲಿ ಅಶ್ಲೀಲತೆ ಎನ್ನುವುದು ಅಡಗಿದೆ ಎನಿಸುತ್ತದೆ. ಯಾವ ಬೋಧಕರು ಈ ಪಾಠದಲ್ಲಿ ಅಶ್ಲೀಲತೆ ಇದೆ ಎಂದು ದೂರು ನೀಡಿದ್ದಾರೆಯೋ ಅಂತಹ ಬೋಧಕರು ಈ ಸನ್ನಿವೇಶವನ್ನು ತೇಲಿಸಿ ಹೇಳಬಹುದಿತ್ತು. ಹೇಗೆಂದರೆ "ಗಂಗಾ ತನ್ನ ಮಗುವನ್ನು ಉಳಿಸಿಕೊಳ್ಳುವ ಅವಸರದಲ್ಲಿ ಕಾರಿನಿಂದ ಇಳಿಯುವಾಗ ಅವಳ ಸೀರೆ ಹರಿಯಿತು. ಇಲ್ಲಾ ಗಂಗಾಳ ಹೀನ ಸ್ಥಿತಿಗೆ ಮರುಗಿ ಅವಳಿಗೆ ಏನು ಮಾಡದೆ ಹಣಕೊಟ್ಟು ಕಳುಹಿಸಿದ ಎಂದು ತಿಳಿಸಬಹುದಿತ್ತು. ಆದರೆ ಪುಸ್ತಕದಿಂದ ಈ ಪಾಠವನ್ನೆ ತೆಗೆದು ಹಾಕಿರುವುದು ಎಷ್ಟು ಸಮಂಜಸ ಇದರಿಂದಲೆ ಗೊತ್ತಾಗುತ್ತದೆ ಸನ್ನಿವೇಶಕ್ಕೆ ತಕ್ಕಂತೆ ಒಬ್ಬ ಶಿಕ್ಷಕ ಬೋಧಿಸುವುದು ಕಷ್ಟವಾಗುತ್ತದೆಂದು ತಿಳಿಯುತ್ತದೆ.

ಇಲ್ಲಿ ಅಶ್ಲೀಲತೆ ಎಂದರೆ ಯಾವುದು? ಅಶ್ಲೀಲತೆ ಎನ್ನುವುದು ನೋಡುವವರ ನೋಟದಲ್ಲಿರುತ್ತದೆಯೋ? ಓದುವ ಭಾಷೆಯಲ್ಲಿರುತ್ತದೆಯೋ? ಅರ್ಥೈಸಿಕೊಳ್ಳುವವರ ಭಾವನೆಯಲ್ಲಿರುತ್ತದೆಯೋ? ನಮ್ಮ ಪ್ರಕಾರ ಯಾವ ಅಂಶವನ್ನು ಬೋಧಕರು ಕಲಿಕಾರ್ಥಿಗಳೊಂದಿಗೆ ಬಿಚ್ಚು ಮನಸ್ಸಿನಿಂದ ವಿವರಿಸುವುದಕ್ಕೆ ಆಗುವುದಿಲ್ಲವೋ ಕಲಿಕಾರ್ಥಿಯು ಕೇಳುವ ಪ್ರಶ್ನೆಗೆ ಮುಂದೆ ನಿನಗೆ ತಾನೆ ತಿಳಿಯುತ್ತದೆ ಎಂದು ಹಾರಿಕೆ ಉತ್ತರ ನೀಡುತ್ತಾನೆಯೋ, ಅದು ಅಶ್ಲೀಲತೆಯಿಂದ ಕೂಡಿದ್ದು ಎಂದರ್ಥ.

ಅಶ್ಲೀಲ ಪದದ ಅರ್ಥ – ಅಸಭ್ಯ, ಸಭ್ಯವಲ್ಲದ, ತಕ್ಕುದಲ್ಲದ, ಕೀಳ, ನೀಚ ಸಮಾಜಕ್ಕೆ ಹೊರತಾದ ಒರಟಾದ ಎಂಬ ಅರ್ಥಗಳು ಆಯಾ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗುತ್ತವೆ.

ಈ ಅವ್ವ ಪಾಠದಲ್ಲಿ ಅಶ್ಲೀಲತೆ ಇದೆ ಎಂದ ಬೋಧಕರಿಗೆ ಜನ್ನನ ಯಶೋಧರ ಚರಿತೆಯಲ್ಲಿ ಅಶ್ಲೀಲತೆ ಕಾಣಲಿಲ್ಲವೆ? ಜನ್ನ ಕವಿಯ ಯಶೋಧರ ಚರಿತೆ ಕೃತಿಯಾ ಆಯ್ದ ಭಾಗ "ಬಲಿಯನಿತ್ತೊಡೆ ಮುನಿವೆಂ" ಪದ್ಯದಲ್ಲಿ ಪೂರ್ವಕತೆಯ ಭಾಗದಲ್ಲಿ 'ಅತ್ಯಂತ ಚೆಲುವ, ಸುಂದರ, ಸಕಲ ವಿದ್ಯಾಪಾರಂಗತ ಹಾಗೂ ಸುಸಂಕೃತನಾದ ಯಶೋಧರನ ತೋಳ್ಗಳ ಉಯ್ಯಾಲೆಯಲ್ಲಿ ನಿದ್ರಾವಶಳಾಗಿದ್ದ ಅಮೃತಮತಿಯು ಕುರೂಪಿಯಾದ ಅಷ್ಟಾವಂಕ ಮಾವಟಿಗನ ಗಾನಮಾಧುರ್ಯಕ್ಕೆ ಮನಸೋತು ಪತಿಗೆ ದ್ರೋಹ ಬಗೆಯುವಳು. ಪತ್ನಿಯ ಹೇಯಕೃತ್ಯವನ್ನು ಕಣ್ಣಾರೆ ಕಂಡ ಯಶೋಧರ ಅತ್ಯಂತ ಖಿನ್ನನಾಗುವನು. ಈ ಸನ್ನಿವೇಶದಲ್ಲಿ ಅಶ್ಲೀಲ, ಅಸಭ್ಯ ಇಲ್ಲವೇ? ಹೇಯ ಕೃತ್ಯವನ್ನು ಕಣ್ಣಾರೆ ಕಂಡು ಎಂದರೆ ಯಾವ ಹೇಯ ಕೃತ್ಯ, ಅಮೃತಮತಿ ಅಷ್ಟಾವಂಕನ ಜೊತೆ ಮಲಗಿದ್ದಳೇ? ಇಲ್ಲಾ ಅವನ ಜೊತೆ ಪ್ರೇಮ ಸಲ್ಲಾಪದಲ್ಲಿ ತೊಡಗಿದ್ದಳೇ? ಯಾವ ಸನ್ನಿವೇಶ ಎಂದು ಬೋಧಕರು ವಿವರಿಸಿ ಹೇಳಲೆ ಬೇಕಾಗುತ್ತದೆ. ಆಗ ಬೋಧಕರು ವಿವರಿಸಿ ಹೇಳುವಾಗ ಹಿಂಜರಿಕೆಯುಂಟಾಗುತ್ತದೆ. ಅದೇ ರೀತಿಯಾಗಿ ಇಂತಹದ್ದೆ ಇನ್ನೊಂದು ಸಂದರ್ಭ ೯ನೇ ತರಗತಿ ಪಠ್ಯದಲ್ಲಿರುವ ಹರಿಹರ ಕವಿಯ ಹರಲೀಲೆ ಗದ್ಯಸಾಹಿತ್ಯದಲ್ಲಿದೆ.

"ಕೈಲಾಸದಲ್ಲಿರುವ ಉದ್ಯಾನವನದಲ್ಲಿ ಇಬ್ಬರು ರುದ್ರಕನ್ನಿಕೆಯರು ಹೂ ಬಿಡಿಸುತ್ತಿದ್ದರು. ಇದನ್ನು ರುದ್ರಗಣದ ಸದಸ್ಯರುಗಳಲ್ಲೊಬ್ಬನಾದ ಪುಷ್ಪದತ್ತ ಗಮನಿಸಿ ಅವರನ್ನು ಅನುರಾಗ ಭಾವದಿಂದ ನೋಡಿದನು. ಪುಷ್ಪದತ್ತನನ್ನು ಕಂಡ ರುದ್ರಕನ್ನಿಕೆಯರು ಅವನನ್ನು ಅದೇ ಭಾವದಿಂದ ನೋಡುತ್ತಿರುವುದನ್ನು ಶಿವ ಗಮನಿಸಿದ ಮತ್ತು ಅಸಮಾಧಾನ ಹೊಂದಿದ". ಇಂತಹ ಒಂದು ಸನ್ನಿವೇಶದಿಂದ ಶಿವನಿಗೆ ತಪ್ಪು ಎಂದು ಅನಿಸಿದರೆ ಇದನ್ನು ಬೋಧಕರು ಯಾವ ರೀತಿಯಾಗಿ ವಿವರಿಸಿ ಹೇಳಲು ಸಾಧ್ಯ. ಇಲ್ಲಿ ಅನುರಾಗ ಭಾವನೆ ಎಂದರೆ ಏನು? ಪುಷ್ಪದತ್ತ ಮತ್ತು ರುದ್ರಕನ್ನಿಕೆಯರ ಮಧ್ಯೆ ಪ್ರೇಮಾಂಕುರವಾಯಿತು ಎಂದರೆ ಇಲ್ಲಿ ಕಲಿಕಾರ್ಥಿಗಳಿಗೆ ಅರ್ಥವಾಗುವುದಿಲ್ಲ. ಅದರ ಬದಲಾಗಿ ಅವರಿಬ್ಬರ ಮಧ್ಯೆ ಲವ್ ಆಯ್ತು ಎಂದರೆ ಕಲಿಕಾರ್ಥಿಯು ಬೇಗ ಅರ್ಥೈಸಿಕೊಳ್ಳುತ್ತಾರೆ.

ಇಂತಹ ಸಂದರ್ಭಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಬೋಧಕರು ಕಲಿಕಾರ್ಥಿಗಳಿಗೆ ಅರ್ಥೈಸಿ ಹೇಳುವಲ್ಲಿ ಸಮಸ್ಯೆಯಾಗುತ್ತದೆ. ಇನ್ನೂ ತಾರುಣ್ಯಾವಸ್ಥೆಗೆ ಕಾಲಿಡದ ಮಕ್ಕಳಲ್ಲಿ ಕಾಮ ಪ್ರೇಮದ ನವರಸಗಳನ್ನು ಬೋಧಿಸಬೇಕಾದರೆ ತರಗತಿಯಲ್ಲಿ ಮುಜುಗರದ ವಾತಾವರಣ ಉಂಟಾಗುತ್ತದೆ. ಕಾಲೇಜು ಹಂತದಲ್ಲಿ ಓದುವ ಹುಡುಗ–ಹುಡುಗಿಯರಿಗೆ ಇಂತಹ ಪ್ರಸಂಗಗಳನ್ನು ತೇಲಿಸಿ ಹೇಳಿದರೆ ಬೇಗ ಅರ್ಥಮಾಡಿಕೊಳ್ಳುತ್ತಾರೆ. ಪ್ರೌಢ ಶಾಲೆಯ ಮಕ್ಕಳಿಗೆ ಅರ್ಥೈಸುವುದು ಸ್ವಲ್ಪ ಕಷ್ಟ.

ಹೀಗೆ ಮೇಲಿನ ಎಲ್ಲಾ ಸಂದರ್ಭಗಳನ್ನು ಗಮನಿಸಿದಾಗ ಪಠ್ಯಪುಸ್ತಕ ರಚನಾ ಸಮಿತಿಯೂ ಎಲ್ಲಾ ವಿಷಯಗಳನ್ನು ಸಂದರ್ಭಗಳನ್ನು ಗಮನಿಸಿಯೇ ಪಠ್ಯ ಪುಸ್ತಕ ರಚನೆ ಮಾಡಿರುತ್ತಾರೆ ಎನಿಸುತ್ತದೆ. 'ಅವ್ವ' ಪಾಠದಲ್ಲಿ ಅಮಾಯಕ ಹೆಣ್ಣಿನ ಪಾತ್ರವನ್ನು ಪರಿಚಯಿಸುವುದಕ್ಕೆ ಈ ಗದ್ಯವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿದ್ದರೆ ಎನಿಸುತ್ತದೆ. ಅದೇ ರೀತಿಯಾಗಿ ಸಮಕಾಲಿನ ಸಂದರ್ಭವನ್ನು ಗಮನಿಸಿದಾಗ ಮಾಧ್ಯಮಗಳ ಪ್ರಭಾವಗಳಿಂದ ಪ್ರೀತಿ ಪ್ರೇಮ ವಿಷಯಗಳ ಬಗ್ಗೆ ಒಂದನೇ ತರಗತಿಯಿಂದ ೧೦ನೇ ತರಗತಿಯ ಮಕ್ಕಳವರೆಗೆ ತಿಳಿದುಕೊಂಡಿರುತ್ತಾರೆ. ಆದ್ದರಿಂದ ಪ್ರೀತಿ, ಪ್ರೇಮ ಕುರಿತು ವಿವರಿಸುವಾಗ ಬೋಧಕರು ಮುಜುಗುರಕ್ಕೆ ಒಳಗಾದರೂ ಸಹ ಬೋಧಿಸಬೇಕಾಗಿರುವಂತಹ ಪಠ್ಯದ ಆಶಯ ಬೋಧಿಸಲೆಬೇಕು. 'ಹರಲೀಲೆ ಮತ್ತು ಬಲಿಯನಿತ್ತೋಡೆ ಮುನಿವೆಂ' ಕಾವ್ಯಭಾಗಗಳು ಹರಿಹರ ಮತ್ತು ಜನ್ನ ಕವಿಯ ಕೃತಿಯ ಆಯ್ದ ಭಾಗಗಳಾಗಿದ್ದು ಇಲ್ಲಿನ ಪ್ರಮುಖವಾದ ಅಂಶವೆಂದರೆ ಕಾಮ ಮತ್ತು ಪ್ರೇಮಗಳನ್ನು ಕುರಿತು ಹೇಳುವುದಲ್ಲ. ಪ್ರಮುಖವಾಗಿ ಜೈನ ಧರ್ಮದಲ್ಲಿ ಅರಿಷಡ್ವರ್ಗಗಳನ್ನು ಪಾಲಿಸದಿದ್ದರೆ ಏನಾಗುತ್ತದೆಂಬ ಅಂಶವನ್ನು ಚಿತ್ರಿಸುತ್ತವೆ.

ಅರಿಷಡ್ವರ್ಗಗಳು ಎಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು. ಈ ಆರು ಅಂಶಗಳನ್ನು ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ಅರಿಷಡ್ವರ್ಗಗಳನ್ನು ಮೀರಿ ನಡೆದವರಿಗೆ ಬಂದೊದಗುವ ಆಪತ್ತನ್ನು ಕುರಿತು ಜೈನಧರ್ಮದ ಕತೆಗಳು ತಿಳಿಸುತ್ತವೆ. ಕತೆಯು ಒಳಗೊಂಡ ವಿಷಯಾಂಶ ಒಳೆಯದಾದರೂ ಕೂಡಾ ಬೋಧಕರು ಬೋಧಿಸುವಾಗ

ಮುಜುಗರಕ್ಕೆ ಒಳಪಡುವ ಸನ್ನಿವೇಶ ಈ ಕತೆಗಳಲ್ಲಿವೆ. ಆದ್ದರಿಂದ ಕೆಲವೊಂದು ಇತಿ–ಮಿತಿಗಳನ್ನು ಪಠ್ಯಪುಸ್ತಕಗಳು ಒಳಗೊಂಡಿರಬೇಕು.

ಹಾಗೇ ಪಠ್ಯಪುಸ್ತಕಗಳಲ್ಲಿನ ಭಾಷೆಯು ಜನಭಾಷೆ, ಜನಪದ ಭಾಷೆ, ವಚನ ಸಾಹಿತ್ಯದ ಭಾಷೆ, ಹೊಸಗನ್ನಡ ಭಾಷೆ, ಮತ್ತು ಎಲ್ಲಾ ಭಾಗದ ಭಾಷಾ ಸಾಹಿತ್ಯಕ್ಕೆ ಪ್ರಾತಿನಿದ್ಯ ಸಿಕ್ಕಿದೆಯಾ ಎನ್ನುವುದನ್ನು ಪರಿಗಣಿಸಬೇಕು. ಏಕೆಂದರೆ ವಚನ ಸಾಹಿತ್ಯದ ಭಾಷೆಯನ್ನು ತೆಗೆದುಕೊಂಡಾಗ ಒಬ್ಬ ವಚನಕಾರರ ನಾಲ್ಕೈದು ವಚನಗಳನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸಿರುತ್ತಾರೆ. ಇಷ್ಟೆ ವಚನಗಳಿಂದ ವಚನ ಸಾಹಿತ್ಯದ ಭಾಷಾ ಪ್ರೌಢಿಮೆ ಕಲಿಕಾರ್ಥಿಗಳಲ್ಲಿ ಬೆಳೆಸುವುದಕ್ಕೆ ಆಗುತ್ತದೆಯೇ? ಇದೇ ರೀತಿಯಾಗಿ ಜನಪದ ಭಾಷೆಯ ಒಂದು ಸಾಹಿತ್ಯ ಕೊಟ್ಟಾಗ ಇಡೀ ಜನಪದ ಭಾಷಾ ಸೊಗಡನ್ನು ತಿಳಿಸುವುದಕ್ಕೆ ಆಗುತ್ತದೆಯೇ? ಆದಕಾರಣ ಪ್ರೌಢ ಹಂತದಲ್ಲಿ ಪಠ್ಯಪುಸ್ತಕ ರಚನಾ ಸಮಿತಿಯೂ ಮಾಡಬೇಕಾದದ್ದು ಎಂದರೆ ಒಂದೊಂದು ಕಾಲಘಟ್ಟದ ಸಾಹಿತ್ಯವನ್ನು ಒಂದೊಂದು ತರಗತಿಗೆ ಬೋಧಿಸುವಂತೆ ರಚನೆಯಾಗಬೇಕು. ಅಂದಾಗ ಮಾತ್ರ ಕಲಿಕಾರ್ಥಿಗಳಿಗೆ ಹೊಸಗನ್ನಡದಿಂದ – ಹಳೆಗನ್ನಡ ಅಥವಾ ಹಳೆಗನ್ನಡದಿಂದ – ಹೊಸಗನ್ನಡದ ವರೆಗಿನ ಭಾಷಾ ಪ್ರೌಢಿಮೆಯನ್ನು ಬೋಧಿಸಲು ಸಾಧ್ಯವಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಪುಸ್ತಕದಲ್ಲಿ ಪರಿಪೂರ್ಣವಾಗಿ ಪಠ್ಯಪುಸ್ತಕ ರಚನಾ ಸಮಿತಿಯು ಅನುಸರಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಮುಂಬರುವ ದಿನಗಳಲ್ಲಿ ಈ ಅಂಶಗಳನ್ನು ಗಮನಿಸಿ ಪಠ್ಯಪುಸ್ತಕಗಳನ್ನು ರಚನೆ ಮಾಡಿದರೆ ಪಠ್ಯಪುಸ್ತಕಗಳು ಇನ್ನೂ ಗಟ್ಟಿಯಾಗುತ್ತವೆ.

ಟಿಪ್ಪಣಿಗಳು

೧. ರಾಜೇಶ ಇ. ಬೆಳ್ಳೇರ್, ೨೦೦೬, ***ಪಠ್ಯಕ್ರಮ ಸಂವಹನ ತತ್ವಗಳು*** ಪು.ಸಂ. ೨

೨. ರಾಜೇಶ ಇ. ಬೆಳ್ಳೇರ್, ೨೦೦೬, ***ಪಠ್ಯಕ್ರಮ ಸಂವಹನ ತತ್ವಗಳು*** ಪು.ಸಂ. ೩

೩. ಅರಳಗುಪ್ಪಿ, ೨೦೦೯, ***ಹೊಸಗನ್ನಡ ವ್ಯಾಕರಣ,*** ಪುಟ ಸಂ. ೪೭

೪. ಸಂಗಮೇಶ ಸವದತ್ತಿಮಠ, ೨೦೦೫, ***ಕನ್ನಡ ಭಾಷಾ ಸ್ವರೂಪ*** ಪು.ಸಂ. ೪೬–೪೭

* * *

ಅಧ್ಯಾಯ : ಏಳು

ಸಮಾರೋಪ

* ಅಧ್ಯಯನದ ಫಲಿತಗಳು
* ಅಧ್ಯಯನದ ಸಲಹೆಗಳು
* ಅನುಬಂಧಗಳು
* ಕ್ಷೇತ್ರ ಕಾರ್ಯ ಅಧ್ಯಯನಕ್ಕೆ ಬಳಸಿಕೊಂಡ ಪ್ರಶ್ನಾವಳಿಗಳು
* ಕಲಿಕಾರ್ಥಿಗಳ ಬರವಣಿಗೆ ಮಾದರಿ
* ಬೋಧಕರ ಬರವಣಿಗೆ ಮಾದರಿ
* ೮, ೯, ೧೦ನೇ ತರಗತಿಯ ಸಂಕಲನಾತ್ಮಕ ಪ್ರಶ್ನೆ ಸಹಿತ ಉತ್ತರ ಪತ್ರಿಕೆಗಳು
* ಎಸ್.ಎಸ್.ಎಲ್.ಸಿ. ಬೋರ್ಡಿನ ಮಾದರಿ ಉತ್ತರ ಪತ್ರಿಕೆ

ಅಧ್ಯಾಯ : ಏಳು

ಸಮಾರೋಪ

ಈ ರೀತಿಯಾಗಿ ನನ್ನ ಅಧ್ಯಯನವು ಬೋಧಕ-ಪಠ್ಯಪುಸ್ತಕ-ಕಲಿಕಾರ್ಥಿಗಳ ನಡುವಿನ ಕನ್ನಡ ಭಾಷಾ ಬೋಧನೆ ಬೋಧನೆಯಲ್ಲಿರುವ ಸಮಸ್ಯೆ, ಸಮಸ್ಯೆ ಎದುರಿಸುವಂತಹ ಬೋಧಕರು ಮತ್ತು ಕಲಿಕಾರ್ಥಿಗಳು, ಇವರಿಬ್ಬರ ಮಧ್ಯೆ ಕೊಂಡಿಯಂತೆ ಕಾರ್ಯನಿರ್ವಹಿಸುತ್ತಿರುವ ಪಠ್ಯಪುಸ್ತಕ. ಈ ಮೂರು ಅಂಶಗಳನ್ನು ಕುರಿತು ಈ ಅಧ್ಯಯನ ತಿಳಿಸುತ್ತದೆ. ಈ ಅಧ್ಯಯನದ ಕೆಲವೊಂದು ಕಡೆ ಭಾಷಿಕ ಹಿನ್ನೆಲೆಯಿಂದಾಗಿ ಡಿ.ಎನ್.ಶಂಕರ ಬಟ್‌ರ ಬರವಣಿಗೆಯನ್ನು ನೋಡಲಾಗಿದೆ ಹೊರತು ಅಧ್ಯಯನದ ಹಿನ್ನೆಲೆಯಾಗಿಲ್ಲ. ಏಕೆಂದರೆ ಸರಕಾರದಿಂದ ಒಪ್ಪಿಕೊಂಡ ಭಾಷಾ ಪಠ್ಯಪುಸ್ತಕವೆ ನನ್ನ ಅಧ್ಯಯನಕ್ಕೆ ಪ್ರಮುಖವಾದದ್ದು.

ಹೀಗೆ ಈ ಅಧ್ಯಯನವು ಬೋಧಕ-ಪಠ್ಯಪುಸ್ತಕ-ಕಲಿಕಾರ್ಥಿ ಮತ್ತು ಕೆಲವೊಂದು ಸರಕಾರದ ನಿಯಮಗಳ ಚೌಕಟ್ಟಿನಲ್ಲಿ ಸಾಗಿರುವುದನ್ನು ಗಮನಿಸಬಹುದು.

ಕನ್ನಡ ಭಾಷಾ ಬೋಧನೆ ಒಂದು ಸಂಕೀರ್ಣ ಕೌಶಲ್ಯ. ಸಂವಹನ ಸಾಧನವೆನಿಸಿದ ಭಾಷೆಯ ಬೋಧನೆ-ಕಲಿಕೆ ಒಂದು ಶಾಸ್ತ್ರವಾಗಿ ಬೆಳೆದಿದೆ. ಭಾಷೆಯನ್ನು ಬೋಧಿಸುವ ಬೋಧಕರಿಗೆ ತಮ್ಮ ತಪ್ಪಿನ ಅರಿವು ಇರುವುದಿಲ್ಲ. ಭಾಷೆಯನ್ನು ಕಲಿಸುವ ಭಾಷಾ ಬೋಧಕರು ಭಾಷೆಯನ್ನು ವ್ಯವಸ್ಥಿತವಾಗಿ ಪರಿಗಣಿಸಬೇಕು. ಭಾಷೆಯ ಹಿನ್ನೆಲೆ, ಆ ಭಾಷೆಯ ಜಾಯಮಾನ, ಅದರ ವಿಶಿಷ್ಟತೆ ಚೆನ್ನಾಗಿ ತಿಳಿದಿರಬೇಕು. ಜೊತೆಗೆ ಭಾಷಾ ಕಲಿಕಾರ್ಥಿಗಳ, ಕೌಟುಂಬಿಕ, ಆರ್ಥಿಕ, ಶೈಕ್ಷಣಿಕ ಹಿನ್ನೆಲೆ ಅವರು ಭಾಷೆಯನ್ನು ಕಲಿಯುವಾಗ ಎದುರಿಸುವ ಸಮಸ್ಯೆಗಳು ಮತ್ತು ಬೋಧನೆಯ ತತ್ವಗಳನ್ನು ಅರಿತಿರಬೇಕು. ಆದ್ದರಿಂದ ಶಾಲಾ ಪರಿಸರದಲ್ಲಿ ಕನ್ನಡ ಭಾಷೆಯ ಬೋಧನೆ ಮತ್ತು ಕಲಿಕೆಯ ಪಾತ್ರ ಮಹತ್ವದ್ದಾಗಿದೆ.

ಪ್ರಸ್ತುತ ಮಹಾಪ್ರಬಂಧದಲ್ಲಿ "ಪ್ರೌಢ ಶಾಲೆಯಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು" ಕುರಿತ ಅಧ್ಯಯನವನ್ನು ವಿವಿಧ ನೆಲೆಗಳಲ್ಲಿ ಸಮಾಜೋಭಾಷಿಕ

ಹಿನ್ನೆಲೆಯಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಒಟ್ಟು ಏಳು ಅಧ್ಯಾಯಗಳಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಪ್ರತಿ ಅಧ್ಯಯವು ಸತ್ಯಾಂಶವನ್ನು ಒಳಗೊಂಡಿವೆ.

ಶೀರ್ಷಿಕೆಯಡಿಯಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಕುರಿತು ಚರ್ಚಿಸುವಾಗ ಪ್ರಸ್ತುತ ಅಧ್ಯಯನದ ಉದ್ದೇಶವನ್ನು ನಿದರ್ಶನಗಳ ಮೂಲಕ ವಿಶ್ಲೇಷಿಸಲಾಗಿದೆ. ಇಂತಹ ಉದ್ದೇಶವನ್ನು ಇಟ್ಟುಕೊಂಡು ಆಗಿರುವ ಕೆಲಸಗಳ ವಿವರಗಳೊಂದಿಗೆ ಒಂದು ಅಧ್ಯಯನ ಸಮೀಕ್ಷೆಯನ್ನು ಸಹ ಮಾಡಲಾಗಿದೆ. ಈ ಸಮೀಕ್ಷೆಯಲ್ಲಿ ಪಿಎಚ್.ಡಿ. ಮಹಾಪ್ರಬಂಧಗಳು, ಎಂ.ಫಿಲ್. ಸಂಪ್ರಬಂಧಗಳು, ಎಂ.ಇಡಿ ಕಿರು ಪ್ರಬಂಧಗಳು, ಸಂಶೋಧನಾ ಲೇಖನಗಳು, ಕೃತಿಗಳು, ನಿಯತಕಾಲಿಕೆಗಳು ಶಿಕ್ಷಣ ಇಲಾಖೆಯ ಸಂಚಿಕೆಗಳು ಹೀಗೆ ವರ್ಗೀಕರಿಸುವುದರ ಮೂಲಕ ನಡೆದ ಅಧ್ಯಯನಗಳ ಆಶಯವನ್ನು ಕುರಿತು ಚರ್ಚೆ ಮಾಡಲಾಗಿದೆ. ಇದರಿಂದ ಪ್ರಸ್ತುತ ಅಧ್ಯಯನ ಹೇಗೆ ಭಿನ್ನವಾಗಿದೆ ಎಂಬುದು ತಿಳಿದು ಬರುವುದರ ಜೊತೆಗೆ ಮುಂದೆ ಕೈಗೊಳ್ಳಬಹುದಾದ ಯೋಜನೆಗಳ ಬಗ್ಗೆ ಮಾಹಿತಿ ಒದಗಿಸುವ ವಿಧಾನವೂ ಆಗಿದೆ.

ಕನ್ನಡ ಭಾಷಾ ಬೋಧನೆಯು ಒಂದು ವೈಶಿಷ್ಟ್ಯದಿಂದ ಕೂಡಿದೆ. ವೇದಗಳ ಕಾಲದಿಂದ ಬ್ರಿಟಿಷರ ಕಾಲದವರೆಗೆ ಇರುವ ಬೋಧನೆಯ ವೈಶಿಷ್ಟ್ಯತೆಯನ್ನು ಅಧ್ಯಯನ ಸಮೀಕ್ಷೆಯಲ್ಲಿ ವಿವರಿಸಲಾಗಿದೆ. ಅಧ್ಯಾಯ ಮೂರರಲ್ಲಿ ಕನ್ನಡ ಭಾಷಾ ಬೋಧನೆಯ ಸ್ವರೂಪವನ್ನು ಭಾಷಾ ವ್ಯಾಖ್ಯಾನಕಾರ ಹೇಳಿಕೆ ಮೂಲಕ ವಿವರಿಸಲಾಗಿದೆ. ರವೀಂದ್ರನಾಥ ಠಾಗೋರ್‌ರವರು "ಸ್ವತಃ ಜ್ವಾಲೆಯಿಂದ ಉರಿಯದ ದೀಪ ಮತ್ತೊಂದು ದೀಪವನ್ನು ಯಾವ ರೀತಿ ಹತ್ತಿಸಲಾರದೋ, ಸ್ವತಃ ಕಲಿಯದೇ ಇರುವ ಬೋಧಕ ಏನನ್ನು ಬೋಧಿಸಲಾರ" ಎಂದಿದ್ದಾರೆ. ಇದು ಭಾಷಾ ಬೋಧಕರ ಜ್ಞಾನವನ್ನು ತಿಳಿಯುವಂತಿದೆ. ಭಾಷಾ ಬೋಧಕರಿಗೆ ಸೇವಾನಿರತ ತರಬೇತಿಗಳು ನಿರಂತರವಾಗಿ ನೀಡುತ್ತಾ ಬಂದಾಗ ಬೋಧಕರು ಹೊಸ ಚೈತನ್ಯದೊಂದಿಗೆ ಭಿನ್ನವಾಗಿ ಬೋಧಿಸುವ ಜ್ಞಾನ ಪಡೆಯುತ್ತಾರೆ. ನೂತನ ಪಠ್ಯಕ್ರಮಗಳಲ್ಲಿನ ಸಮಸ್ಯೆಗೆ ಪರಿಹಾರ ಕಾಣುತ್ತಾರೆ. ಬದಲಾಗುರುತ್ತಿರುವ ಬೋಧನಾ ಪದ್ಧತಿಯ ಅನುಕೂಲ ಮತ್ತು ಅನಾನುಕೂಲ ಎರಡನ್ನು ಗ್ರಹಿಸುತ್ತಾರೆ. ಈ ಅಂಶಗಳ ಕುರಿತ ಮಾಹಿತಿಯನ್ನು ಅಧ್ಯಾಯ ಮೂರರಲ್ಲಿ ವಿವರಿಸಲಾಗಿದೆ.

ಈ ಎಲ್ಲಾ ಬೋಧನೆಯ ವೈಶಿಷ್ಟ್ಯಗಳೊಂದಿಗೆ ಕನ್ನಡ ಭಾಷಾ ಬೋಧಕರಿಗೆ ನೀಡುವ ತರಬೇತಿಗಳ ಪ್ರಮುಖ ಉದ್ದೇಶ ಕನ್ನಡ ಭಾಷಾ ಬೋಧಕರಿಗೆ ಯಾವುದೇ ಸಮಸ್ಯೆಗಳ ತೋಡಕಾಗಬಾರದೆಂದು. ಆದರೂ ಕೆಲವೊಂದು ಸಮಸ್ಯೆಗಳನ್ನು ಬೋಧಕರಿಗೆ ಸವಾಲಾಗಿ ಎದುರಿಸುತ್ತಿರುವುದನ್ನು ಗಮನಿಸಲಾಗಿದೆ. ಬೋಧಕರಲ್ಲಿಯು ಉಚ್ಚರಣೆಯ ಸಮಸ್ಯೆ ಇದೆ. ಉದಾಹರಣೆಗೆ 'ಹ' ಕಾರಕ್ಕೆ ಅ, ವ, ಕಾರಗಳನ್ನು ಉಚ್ಚರಿಸುವುದು. 'ಶ' ಕಾರಕ್ಕೆ 'ಸ' ಕಾರ, ಮಹಾಪ್ರಾಣಗಳಿಗೆ, ಅಲ್ಪಪ್ರಾಣ, ಇದೇ ರೀತಿಯಲ್ಲಿ ಬರವಣಿಗೆಯಲ್ಲೂ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇಂತಹ

ಸಮಸ್ಯೆಗಳು ಕನ್ನಡ ಭಾಷಾ ಕಲಿಕಾರ್ಥಿಗಳಲ್ಲಿ ಕಂಡುಬಂದಾಗ ಬೋಧಕರಿಗೆ ಈ ಸಮಸ್ಯೆ ಸವಾಲಾಗಿ ಎದುರಾಗುತ್ತದೆ. ಹಾಗೂ ಭಾಷಾ ಕೌಶಲ ಕಲಿಕಾರ್ಥಿಯ ಶೈಕ್ಷಣಿಕ ಬೆಳವಣಿಗೆಯ ಮುಖ್ಯ ಹಂತ ಆದರೆ ಈಗಿನ ಕಲಿಕಾರ್ಥಿಗಳಿಗೆ ಸರಿಯಾಗಿ ಬರೆಯಲು ಬರುವುದಿಲ್ಲ. ಓದುವ ಹವ್ಯಾಸವೂ ಇಲ್ಲ ಎಂಬ ಟೀಕೆ ಸರ್ವೇಸಾಮನ್ಯ. ಇದರ ಹೊಣೆಯನ್ನು ಬೋಧಕರು ಹೊರಬೇಕಾಗಿದೆ. ಇಂದಿನ ಕಲಿಕಾರ್ಥಿಗಳಲ್ಲಿ ಕನ್ನಡ ಪದ ಸಂಪತ್ತಿನ ಕೊರತೆ, ಪತ್ರಲೇಖನ, ಪ್ರಬಂಧ ಮಾದರಿಯ ಹತ್ತಾರು ವಾಕ್ಯಗಳನ್ನು ರಚಿಸುವ ಕೌಶಲವಿಲ್ಲ. ಈ ಕೌಶಲವನ್ನು ಪ್ರೌಢ ಶಾಲೆಗಳಲ್ಲಿ ಬೆಳೆಸಿದರೆ ಕಾಲೇಜು ಹಂತಕ್ಕೆ ಪ್ರಬುದ್ಧವಾಗುತ್ತದೆ. ಈ ಪ್ರಬುದ್ಧತೆಯನ್ನು ಬೆಳೆಸಬೇಕು ಎಂದರೆ ಬೋಧಕರಿಗೆ ಬೋಧನೆಯ ಜೊತೆಗೆ ಬೇರೆ ಯಾವ ಕಾರ್ಯವನ್ನು ವಹಿಸಬಾರದು ಆದರೆ ಇಂದಿನ ದಿನಗಳಲ್ಲಿ ಬೋಧಕರು ಆ ತರಬೇತಿ ಈ ತರಬೇತಿಗಳೆಂದು ಕೆಲವು ದಿನ ಬೋಧನೆಯಿಂದ ದೂರ ಉಳಿಯಬೇಕಾಗುತ್ತದೆ. ಅಷ್ಟೆ ಅಲ್ಲದೆ ಆ ದಿನಾಚರಣೆ, ಈ ದಿನಾಚರಣೆ, ಇವುಗಳ ಮಧ್ಯೆ ಬೋಧಿಸುವುದಕ್ಕೆ ಆಗುವುದಿಲ್ಲ. ಹೀಗಾಗಿ ಬೋಧಕರಿಗೆ ತಮ್ಮ ಸಮಸ್ಯೆಗಳನ್ನು ತಾವು ಅರ್ಥಮಾಡಿಕೊಳ್ಳಲಾರದಷ್ಟು ಒತ್ತಡದಲ್ಲಿ ಸಿಲುಕಿ ಸಮಸ್ಯೆಯನ್ನು ಎದುರಿಸುತ್ತಾರೆ. ಇಂತಹ ಕೆಲವು ಬೋಧಕ ಕೇಂದ್ರಿತ ಸಮಸ್ಯೆಗಳನ್ನು ಸಂಗ್ರಹಿಸಿ ಅಧ್ಯಾಯ ನಾಲ್ಕುರಲ್ಲಿ ವಿಶ್ಲೇಷಣೆ ಒಳಪಡಿಸಲಾಗಿದೆ.

ಕನ್ನಡಿಗರ ಮಾತೃಭಾಷೆಯ ಮೇಲೆ ಅನ್ಯ ಭಾಷೆಯ ಪ್ರಭಾವದಿಂದ ಪ್ರದೇಶದಿಂದ ಪ್ರದೇಶಕ್ಕೆ ಕನ್ನಡ ಭಾಷೆಯಲ್ಲಿ ಏಕರೂಪತೆ ಇಲ್ಲದಂತಾಗಿದೆ. ಈ ಏಕರೂಪವಿರದ ಕನ್ನಡ ಭಾಷೆಯು ಅನೇಕ ಉಪಭಾಷೆಗಳನ್ನು ಒಳಗೊಂಡಿದೆ. ಆ ಉಪಭಾಷೆಗಳಲ್ಲಿ ಕಲಬುರಗಿ ಕನ್ನಡವು ಒಂದು. ಕಲಬುರಗಿ ಕನ್ನಡ ಭಾಷೆಯ ಮೇಲೆ ಉರ್ದು ಮತ್ತು ಮರಾಠಿ ಭಾಷೆಗಳ ಪ್ರಭಾವವಿದೆ. ಹೀಗಾಗಿ ಇಲ್ಲಿ ಮಾತೃಭಾಷೆ ಕನ್ನಡವಿರುವ ಕಲಿಕಾರ್ಥಿಗಳು ಸಹ ಕನ್ನಡ ಭಾಷಾ ಕಲಿಕಾ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇಂತಹ ಭಾಷಾ ಸಮಸ್ಯೆಯನ್ನು ಸವಾಲಾಗಿ ತೆಗೆದುಕೊಂಡು ಬೋಧಕರು ಕಲಿಕಾರ್ಥಿಗಳಲ್ಲಿರುವ ಓದುಗಾರಿಕೆ, ಬರವಣಿಗೆ, ಆಲಿಸುವಿಕೆಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಾಣಬೇಕಿದೆ. ಓದುಗಾರಿಕೆಯ ಸಮಸ್ಯೆ. ಬರವಣಿಗೆಯ ಸಮಸ್ಯೆ, ಆಲಿಸುವಿಕೆಯ ಸಮಸ್ಯೆಗಳನ್ನು ಲಿಖಿತ ಮತ್ತು ಧ್ವನಿಸುರಳಿಯ ಮೂಲಕ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಸಂಗ್ರಹಿಸಿದಂತಹ ಮಾಹಿತಿಯನ್ನು ಅಂಕಿ ಸಂಖ್ಯೆಗಳ ಮೂಲಕ ಗುರುತಿಸಿಕೊಂಡು, ಸಮಸ್ಯೆಗಳಿಗೆ ಸೂಕ್ತ ಕಾರಣಗಳನ್ನು ನಿದರ್ಶನಗಳ ಮೂಲಕ ತಿಳಿಸಿ ಅಧ್ಯಾಯ ಐದರಲ್ಲಿ ಲಭ್ಯವಾದ ಮಾಹಿತಿಯನ್ನು ವಿಶ್ಲೇಷಣೆಯ ಮೂಲಕ ಚರ್ಚಿಸಲಾಗಿದೆ.

ಕನ್ನಡ ಭಾಷಾ ಬೋಧನೆಗೂ ಮತ್ತು ಕಲಿಕೆಗೂ ಮಧ್ಯ ಕೊಂಡಿಯಂತೆ ಕಾರ್ಯನಿರ್ವಹಿಸುವುದು ಕನ್ನಡ ಭಾಷಾ ಪಠ್ಯಪುಸ್ತಕಗಳು. ಹಾಗಾದರೆ ಪಠ್ಯಪುಸ್ತಕಗಳು ಎಂದರೇನು, ಪಠ್ಯಪುಸ್ತಕದ ಲಕ್ಷಣ ಮತ್ತು ಪ್ರಾಮುಖ್ಯತೆ, ಪಠ್ಯಪುಸ್ತಕದಲ್ಲಿರುವ ವ್ಯಾಕರಣ ಕಲಿಕೆಯಿಂದ ಕನ್ನಡ ಭಾಷೆಯನ್ನು ಹೇಗೆ ಬೋಧಿಸಬೇಕು. ಪ್ರಾದೇಶಿಕ ಭಾಷೆಗಳನ್ನು ಪಠ್ಯಪುಸ್ತಕಗಳು ಹೇಗೆ ಪರಿಚಯಿಸುತ್ತವೆ. ಹಾಗೂ ಪ್ರಸ್ತುತ

ಪಠ್ಯಗಳ ಭಾಷೆಯ ಸ್ಥೂಲ ನೋಟ ಮತ್ತು ಪಠ್ಯ ಪುಸ್ತಕ ರಚನೆಯಲ್ಲಿರುವ ಸಮಸ್ಯೆಗಳ ಕುರಿತು ಅಧ್ಯಾಯ 'ಆರು' ಇದರಲ್ಲಿ ಪ್ರತಿಯೊಂದು ಮಾಹಿತಿಯನ್ನು ಉದಾಹರಣೆ ಸಹಿತವಾಗಿ ಚರ್ಚಿಸಲಾಗಿದೆ.

ಹೀಗೆ ರೂಪಿಸಲಾದ ಅಧ್ಯಯನದಿಂದ ಹಲವಾರು ಪ್ರಾಯೋಜನಗಳಿವೆ. ಕೇವಲ ಕಲಿಕಾರ್ಥಿಗಳಲ್ಲಿಯೆ ಭಾಷೆಯ ಕಲಿಕೆಯ ಸಮಸ್ಯೆ ಇದೆಯೆ ಅಥವಾ ಬೋಧಕರಲ್ಲಿಯೂ ಭಾಷೆಯ ಸಮಸ್ಯೆ ಇದೆಯೆ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ ಪ್ರಸ್ತುತ ಅಧ್ಯಯನವು ಒಟ್ಟು ಏಳು ಅಧ್ಯಾಯಗಳಲ್ಲಿ "ಪ್ರೌಢ ಶಾಲೆಯಲ್ಲಿ ಕನ್ನಡ ಭಾಷಾ ಬೋಧನೆ ಹಾಗೂ ಭಾಷಾ ಕಲಿಕೆಯ ಸಮಸ್ಯೆ ಮತ್ತು ಸವಾಲುಗಳು" ಶೀರ್ಷಿಕೆಯ ವಿಷಯ ವಸ್ತು ಸಮಾಜೋಭಾಷಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಟ್ಟಿದೆ.

೬. ಅಧ್ಯಯನದ ಫಲಿತಗಳು

* ಪ್ರಚಲಿತ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಬೋಧನೆ ಮತ್ತು ಕಲಿಕೆಯನ್ನು ಕುರಿತು ಕೆಲವು ಅಧ್ಯನಗಳು ನಡೆದರೂ ಆ ಎಲ್ಲಾ ಅಧ್ಯಯನಗಳಿಗಿಂತ ಈ ಅಧ್ಯನವು ಭಿನ್ನವಾದದ್ದು ಎಂಬುದು ಅಧ್ಯಯನದ ಸಮೀಕ್ಷೆಯಿಂದ ತಿಳಿದು ಬಂದಿದೆ.

* ಪ್ರಾಚೀನ ಕಾಲದಿಂದ ಇಂದಿನವರೆಗೂ ಬೋಧನೆ ಮತ್ತು ಕಲಿಕೆಯು ಬದಲಾವಣೆ ಹೊಂದುತ್ತಾ ಸಾಗಿದ್ದಲ್ಲದೆ. ಬೋಧನೆಯು ವೈಶಿಷ್ಟ್ಯತೆಯನ್ನು ಒಳಗೊಂಡಿದೆ ಎಂಬುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

* ಪ್ರಸ್ತುತವಾಗಿ ಬೋಧಕರಿಗೆ ನೀಡುವ ಬೋಧನಾ ತರಬೇತಿಗಳು ಕೇವಲ ಕಡತಗಳಿಗೆ ಸೀಮಿತವಾಗಿದ್ದು, ಕೇಲವೊಬ್ಬ ಬೋಧಕರು ಮಾತ್ರ ತರಬೇತಿಗಳಲ್ಲಿ ನೂತನ ಬೋಧನಾ ಕ್ರಮ ಅಳವಡಿಸುತ್ತಿರುವುದು ಅಧ್ಯಯನ ಮೂಲಕ ತಿಳಿದು ಬಂದಿದೆ.

* ಕಲಿಕೆ ಮತ್ತು ಬೋಧನೆಯಲ್ಲಿ ತಾತ್ವಿಕ ಮತ್ತು ಪ್ರಾಯೋಗಿಕ ತೊಡಕುಗಳಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

* ಪ್ರಸ್ತುತದಲ್ಲಿ ಮೌಲ್ಯಮಾಪನ ಮಾಡುವ ವಿಧಾನದಲ್ಲಿ ಮೌಲ್ಯ ಮಾಪಕರು ತಮ್ಮದೆಯಾದ ವಿಧಾನವನ್ನು ಕೈಗೊಳ್ಳುತ್ತಿದ್ದಾರೆ. ಮೌಲ್ಯಮಾಪನ ಮಾಡುವಾಗ ಗಮನಿಸಬೇಕಾದ ವಾಕ್ಯರಚನಾ ನಿಯಮ, ಭಾಷಾಶೈಲಿ ಮತ್ತು ಪದಬಳಕೆ ಈ ಯಾವುದನ್ನು ಗಮನಿಸದೆ ಮೌಲ್ಯಮಾಪನ ಮಾಡುತ್ತಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

* ಕಲಿಕಾರ್ಥಿಗಳೂ ಓದುವಾಗ ತಮ್ಮ ಪರಿಸರದಲ್ಲಿ ಹೇಗೆ ಮಾತನಾಡುವರೋ ಅದೇ ರೀತಿ ಧ್ವನಿ ವ್ಯತ್ಯಾಸಗಳ ಮೂಲಕ ಪಠ್ಯಪುಸ್ತಕವನ್ನು ಓದುವುದನ್ನು ಗಮನಿಸಲಾಗಿದೆ.

* ನಗರ ಪ್ರದೇಶದ ಕಲಿಕಾರ್ಥಿಗಳಿಗಿಂತ ಗ್ರಾಮೀಣ ಮಟ್ಟದ ಕಲಿಕಾರ್ಥಿಗಳಲ್ಲಿ ಕನ್ನಡ ಭಾಷಾ ಸಮಸ್ಯೆ ಹೆಚ್ಚಾಗಿರುವುದು ಕ್ಷೇತ್ರ ಕಾರ್ಯ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

* ಕನ್ನಡದ ವರ್ಣಗಳನ್ನು (ಧ್ವನಿಗಳನ್ನು) 'ಅ' ದಿಂದ 'ಳ' ವರೆಗಿನ ಅಕ್ಷರಗಳನ್ನು ಕಲಿಸುವುದು ಸಾಂಪ್ರದಾಯಕ ವಿಧಾನವಾಗಿದ್ದು, ಭಾಷಾ ವೈಜ್ಞಾನಿಕ ವಿಧಾನದಿಂದ ರ, ಗ, ಸ, ದ, ಅ ಎಂಬ ವಿಧಾನದಲ್ಲಿ ಕಲಿಸುತ್ತಿರುವುದು, ಈ ವಿಧಾನದಿಂದ ಮಕ್ಕಳ ಕಲಿಕೆ ಸ್ಪಷ್ಟವಾಗದೆ ಇರುವುದು ಇದರಿಂದ ಭಾಷಾ ಕಲಿಕೆಯಲ್ಲಿ ಸಮಸ್ಯೆ ಎದುರಿಸುತ್ತಿರುವುದು ಕಂಡುಬರುತ್ತದೆ.

* ಪ್ರಚಲಿತ ಕನ್ನಡಭಾಷಾ ಪಠ್ಯಗಳು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಒಳಗೊಂಡಿದು ಚಟುವಟಿಕೆಯ ಮೂಲಕ ಬೋಧನೆ ನಡೆಯುತ್ತಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.

* ಪ್ರಚಲಿತ ಪ್ರೌಢಶಾಲೆಯ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ನೂತನವಾದ ಹೊಸ ಹೊಸ ಚಟುವಟಿಕೆಗಳು ಸೇರ್ಪಡೆಯಾಗಿವೆ. ಆದರೆ ಕನ್ನಡ ಕಲಿಕೆ ಸಮರ್ಪಕವಾಗಿ ಆಗುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

